ಬುಧವಾರ, ಏಪ್ರಿಲ್ 1, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರಿಯಾ ಸಿಮೆಂಟ್™
ಪ್ರಚಂಡ ಬಲವಾದ ಘರ್ಜನೆ
ಪರಿಚಯಿಸುತ್ತಿದ್ದೇವೆ
MAXLOAD
Engineered for Maximum Load



ಯುಸಿಸಿ ಜಾರಿ, ಸ್ಥಳೀಯರ ಭೂಮಿ ರಕ್ಷಣೆ

ಅಸ್ಸಾಂ ವಿಧಾನಸಭಾ ಚುನಾವಣೆ ಬಿಜೆಪಿ ಪ್ರಣಾಳಿಕೆಯಲ್ಲಿ 31 ಭರವಸೆ

ಗುವಾಹಟಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಅಸ್ಸಾಂ ವಿಧಾನಸಭಾ ಚುನಾವಣೆಗೆ ಬಿಜೆಪಿ ಪ್ರಣಾಳಿಕೆಯನ್ನು ಮಂಗಳವಾರ ಬಿಡುಗಡೆ ಮಾಡಿದ್ದು, ಸ್ಥಳೀಯರ ಭೂಮಿ, ಪರಂಪರೆ ಮತ್ತು ಘನತೆಯನ್ನು ರಕ್ಷಿಸುವ ಹಾಗೂ ಮೂಲಸೌಕರ್ಯ ಕ್ಷೇತ್ರದಲ್ಲಿ ₹5 ಲಕ್ಷ ಕೋಟಿ ಹೂಡಿಕೆಯ ಘೋಷಣೆ ಮಾಡಿದ್ದಾರೆ.

ಅಸ್ಸಾಂನಲ್ಲಿ ಮತ್ತೆ ಅಧಿಕಾರಕ್ಕೇರುವ ಪ್ರಯತ್ನದಲ್ಲಿರುವ ಬಿಜೆಪಿಯು ತನ್ನ 'ಸಂಕಲ್ಪ ಪತ್ರ'ದಲ್ಲಿ ರಾಜ್ಯದ ಮತದಾರರಿಗೆ 31 ಭರವಸೆಗಳನ್ನು ನೀಡಿದೆ.

'ಬಾಂಗ್ಲಾದೇಶಿ ಮಿಯಾ'ಗಳು ಅತಿಕ್ರಮಿಸಿರುವ ಭೂಮಿಯನ್ನು ವಶಪಡಿಸಿಕೊಳ್ಳುವುದು, ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿ ಮತ್ತು ಯುವಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಭರವಸೆಗಳು ಪ್ರಣಾಳಿಕೆಯಲ್ಲಿ ಪ್ರಮುಖವಾಗಿವೆ.

ಅಕ್ರಮ ವಲಸಿಗರನ್ನು ಪತ್ತೆಹಚ್ಚುವ ಮತ್ತು ಅವರನ್ನು ರಾಜ್ಯದಿಂದ ಹೊರಹಾಕುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು 1950ರ ವಲಸಿಗರ (ಅಸ್ಸಾಂನಿಂದ ಹೊರಹಾಕುವ) ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ಸ್ಥಳೀಯ ನಿವಾಸಿಗಳ ಭೂಮಿಯನ್ನು ರಕ್ಷಿಸುವ ಪ್ರತಿಜ್ಞೆಯನ್ನು ಮಾಡಲಾಗಿದೆ.

ಅಸ್ಸಾಂ ರಾಜ್ಯವನ್ನು ಪೂರ್ವ ಭಾರತದ ಹೆಬ್ಬಾಗಿಲು ಆಗಿ ಪರಿವರ್ತಿಸಲು 'ಅಸ್ಸಾಂ ಗತಿ ಶಕ್ತಿ ಮಾಸ್ಟರ್ ಪ್ಲಾನ್' ಯೋಜನೆಯಡಿ ₹5 ಲಕ್ಷ ಕೋಟಿ ಹೂಡಿಕೆ ಮಾಡುವ ಭರವಸೆಯನ್ನು ನೀಡಲಾಗಿದೆ.

'ಕಾಂಗ್ರೆಸ್‌ಗೆ 60 ವರ್ಷಗಳಲ್ಲಿ ಸಾಧಿಸಲು ಆಗದ್ದನ್ನು ಬಿಜೆಪಿಯು ಒಂದು ದಶಕದಲ್ಲಿ ಮಾಡಿ ತೋರಿಸಿದೆ. ರಾಜ್ಯದ ಒಂದು ದಶಕದ ಪರಿವರ್ತನೆಯ ಆಧಾರದ ಮೇಲೆ ಈ ಪ್ರಣಾಳಿಕೆ ಸಿದ್ಧಪಡಿಸಲಾಗಿದೆ' ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

> **ಅಸ್ಸಾಂನಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಮೂರು ತಿಂಗಳೊಳಗೆ ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡಲಾಗುವುದು**
> **ಹಿಮಂತ ಬಿಸ್ವಾ ಶರ್ಮಾ,** ಮುಖ್ಯಮಂತ್ರಿ

ಪ್ರಮುಖ ಘೋಷಣೆಗಳು

- ಅಕ್ರಮ ವಲಸಿಗರು ಒತ್ತುವರಿ ಮಾಡಿಕೊಂಡಿರುವ ಪ್ರತಿ ಇಂಚು ಭೂಮಿಯನ್ನು 'ಮಿಷನ್ ವಸುಂಧರಾ' ಯೋಜನೆಯಡಿಯಲ್ಲಿ ತೆರವುಗೊಳಿಸುವುದು
- ರಾಜ್ಯವನ್ನು ಪ್ರವಾಹ ಮುಕ್ತಗೊಳಿಸಲು ₹18,000 ಕೋಟಿಗೂ ಹೆಚ್ಚು ಹೂಡಿಕೆಯೊಂದಿಗೆ 'ಬಾಢ್ ಮುಕ್ತ್ ಅಸ್ಸಾಂ ಮಿಷನ್' ಪ್ರಾರಂಭಿಸುವುದು
- 2 ಲಕ್ಷ ಸರ್ಕಾರಿ ಉದ್ಯೋಗಗಳು ಮತ್ತು ವಿವಿಧ ಯೋಜನೆಗಳ ಮೂಲಕ ಹೆಚ್ಚಿನ ಉದ್ಯಮಶೀಲತಾ ಅವಕಾಶಗಳ ಸೃಷ್ಟಿ
- 'ಲವ್ ಜಿಹಾದ್' ಮತ್ತು 'ಭೂ ಜಿಹಾದ್' ನಿಭಾಯಿಸಲು ಪರಿಣಾಮಕಾರಿ ಕಾನೂನು ಜಾರಿ
- ಸತ್ರಾ, ನಾಮಗರ್, ದೇವಾಲಯಗಳು ಮತ್ತು ಇತರ ಪೂಜಾ ಸ್ಥಳಗಳ ಅತಿಕ್ರಮಣಗೊಂಡ ಭೂಮಿಯನ್ನು ವಾಪಸ್ ಪಡೆಯುವುದು



ಬಿಜೆಪಿ ಪ್ರಣಾಳಿಕೆ ಬಿಡುಗಡೆ ಸಮಾರಂಭದಲ್ಲಿ ನಿರ್ಮಲಾ ಸೀತಾರಾಮನ್ ಮತ್ತು ಹಿಮಂತ ಬಿಸ್ವಾ ಶರ್ಮಾ ಸಮಾಲೋಚನೆ ನಡೆಸಿದರು ಪಿಟಿಐ ಚಿತ್ರ

ಪಾಕ್, ಲಂಡನ್‌ನ ಆಸ್ತಿ ವಿವರ ಗೊಗೊಯ್ ಬಹಿರಂಗಪಡಿಸಲಿ: ಹಿಮಂತ

ಕಾಂಗ್ರೆಸ್ ಅಸ್ಸಾಂ ಘಟಕದ ಅಧ್ಯಕ್ಷ ಗೌರವ್ ಗೊಗೊಯ್ ಅವರು ಪಾಕಿಸ್ತಾನ ಮತ್ತು ಬ್ರಿಟನ್‌ನಲ್ಲಿರುವ ತಮ್ಮ ಆಸ್ತಿ ವಿವರಗಳನ್ನು ಬಹಿರಂಗಪಡಿಸಲಿ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಸವಾಲು ಹಾಕಿದರು.

ಗೊಗೊಯ್ ಅವರು ವಿದೇಶದಲ್ಲಿರುವ ತಮ್ಮ ಆಸ್ತಿಯ ವಿವರಗಳನ್ನು ಚುನಾವಣಾ ಆಯೋಗಕ್ಕೆ ನೀಡಬೇಕು. ಅವರ ಪತ್ನಿ ಪಾಕಿಸ್ತಾನದಲ್ಲಿ ಗಳಿಸುತ್ತಿರುವ ಆದಾಯದ ವಿವರ ಮತ್ತು ಅಲ್ಲಿ ಹೊಂದಿರುವ ಬ್ಯಾಂಕ್ ಖಾತೆಯ ವಿವರಗಳನ್ನೂ ನೀಡಬೇಕು ಎಂದರು.

'ಗೊಗೊಯ್ ಅವರು ಪಾಕಿಸ್ತಾನ ಮತ್ತು ಲಂಡನ್‌ನಲ್ಲಿ ತಮ್ಮ ಪತ್ನಿಯ ಹೆಸರಿನಲ್ಲಿ ಆಸ್ತಿಗಳನ್ನು ಹೊಂದಿದ್ದು, ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಅವುಗಳನ್ನು ತೋರಿಸಿಲ್ಲ' ಎಂದರು.

'ಗೊಗೊಯ್ ವಿರುದ್ಧ ಇನ್ನಷ್ಟು 'ಗಂಭೀರ ಆರೋಪ'ಗಳು ಇವೆ. ಚುನಾವಣಾ ವಾತಾವರಣವನ್ನು ಹಾಳು ಮಾಡುವುದು ಬೇಡ ಎಂದು ಅವುಗಳನ್ನು ಈಗ ಬಹಿರಂಗಪಡಿಸುತ್ತಿಲ್ಲ. ಚುನಾವಣೆಯ ಬಳಿಕ ಎಲ್ಲವನ್ನೂ ಹೇಳುವೆ' ಎಂದು ತಿಳಿಸಿದರು.

ಗೊಗೊಯ್ ಮತ್ತು ಅವರ ಪತ್ನಿ ಎಲಿಜಬೆತ್ ಅವರಿಗೆ ಪಾಕಿಸ್ತಾನದ ನಂಟು ಇಂದೆ ಎಂದು ಹಿಮಂತ ಅವರು ಈ ಹಿಂದೆಯೂ ಹಲವು ಸಲ ಆರೋಪಿಸಿದ್ದರು.

ಕಾಂಗ್ರೆಸ್ ಪಾಪ ಕೃತ್ಯ: ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಗಾಯಕ ಜುಬಿನ್ ಗರ್ಗ್ ಅವರ ಸಾವಿನ ವಿಷಯವನ್ನು ಸೇರಿಸುವ ಮೂಲಕ 'ಪಾಪ ಕೃತ್ಯ' ಎಸಗಿದೆ ಎಂದು ಹಿಮಂತ ಟೀಕಿಸಿದ್ದಾರೆ.

ಅಧಿಕಾರಕ್ಕೆ ಬಂದ 100 ದಿನಗಳ ಒಳಗೆ ಗಾಯಕ ಜುಬಿನ್ ಸಾವಿನ ಪ್ರಕರಣದಲ್ಲಿ ನ್ಯಾಯದಾನ ಒದಗಿಸಲಾಗುವುದು ಎಂದು ಕಾಂಗ್ರೆಸ್ ಘೋಷಿಸಿತ್ತು.

ಸುದ್ದಿ 2 ನಿಮಿಷ

ಉಪ ಚುನಾವಣೆ ಬಳಿಕ ಒಳ ಮೀಸಲಾತಿ ಜಾರಿ

ಚಿತ್ರದುರ್ಗ: 'ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಳ ಮೀಸಲಾತಿ ಜಾರಿಗೆ ಸರ್ಕಾರ ಬದ್ಧವಾಗಿದೆ. ಉಪ ಚುನಾವಣೆ ಬಳಿಕ ಜಾರಿಗೊಳಿಸಲಾಗುತ್ತದೆ' ಎಂದು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

'ಒಳ ಮೀಸಲಾತಿ ಜಾರಿಗೊಳಿಸಿಯೇ ನೇಮಕಾತಿ ಪ್ರಕ್ರಿಯೆ ನಡೆಸಲಾಗುತ್ತದೆ. ಈ ಕುರಿತು ಯಾವುದೇ ಆತಂಕ ಬೇಡ' ಎಂದು ಅವರು ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಈ ವಿಚಾರದಲ್ಲೂ ಸರ್ವರಿಗೂ ನ್ಯಾಯ ಕಲ್ಪಿಸುವ ವಿಶ್ವಾಸ ವ್ಯಕ್ತಪಡಿಸಿದರು.



'ಕೇಂದ್ರ ಸರ್ಕಾರ ಮೀಸಲಾತಿ ಪ್ರಮಾಣ ಹೆಚ್ಚಿಸಿದ್ದರೂ ನ್ಯಾಯಾಲಯದ ನಿರ್ದೇಶನದಂತೆ ನಡೆಯಬೇಕಿದೆ. ಈ ಕಾರಣದಿಂದ ಎಲ್ಲ ಸಮುದಾಯಗಳ ಮುಖಂಡರ ಜೊತೆ ಚರ್ಚಿಸುತ್ತೇವೆ' ಎಂದರು

'ವಿಶೇಷ ಅಧಿವೇಶನದಲ್ಲಿ ಜಾರಿಗೆ ತರುವ ಯತ್ನ ನಡೆದರೂ, ಉಪಚುನಾವಣೆ ನೀತಿ ಸಂಹಿತೆ ಕಾರಣಕ್ಕೆ ಮುಂದೂಡಲಾಗಿದೆ' ಎಂದು ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯ, ಡಿಕೆಶಿ ಕುಂಟೆತ್ತುಗಳು: ಅಶೋಕ

ಚಿತ್ರದುರ್ಗ: 'ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೋಡೆತ್ತುಗಳಲ್ಲ, ಕುಂಟೆತ್ತುಗಳು' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಇಲ್ಲಿ ಟೀಕಿಸಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇಬ್ಬರೂ ಒಬ್ಬರೊಂದಿಗೆ ಮತ್ತೊಬ್ಬರು ಬರುವುದಿಲ್ಲ. ಅಧಿಕಾರಕ್ಕಾಗಿ ಡಿ.ಕೆ.ಶಿವಕುಮಾರ್ ಬಕಪಕ್ಷಿಯಂತೆ ಕಾಯುತ್ತಿದ್ದಾರೆ. ಈ ಬೆಳವಣಿಗೆಗಳನ್ನು ನೋಡುತ್ತಿರುವ ಜನರು ಕುಂಟೆತ್ತುಗಳು ಬೇಡವೆಂದು ತೀರ್ಮಾನಿಸಿದ್ದಾರೆ' ಎಂದರು.

'ಸರ್ಕಾರ ಶೇ 60ರಷ್ಟು ಕಮಿಷನ್‌ನಲ್ಲಿ ಮುಳುಗಿದ್ದು, ಅಭಿವೃದ್ಧಿ ಮರೀಚಿಕೆಯಾಗಿದೆ. ಸರ್ಕಾರ ದುರಾಡಳಿತ ಮತ್ತು ಭ್ರಷ್ಟಾಚಾರದ ಕೇಂದ್ರವಾಗಿದೆ. ₹1.32 ಲಕ್ಷ ಕೋಟಿ ಸಾಲದಲ್ಲಿ ರಾಜ್ಯವನ್ನು ಮುಳುಗಿಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಲದರಾಮಯ್ಯ ಆಗಿದ್ದಾರೆ' ಎಂದೂ ವ್ಯಂಗ್ಯವಾಡಿದರು.

'ಬಿಜೆಪಿ ಅಧಿಕಾರದಲ್ಲಿದ್ದಾಗ ಹೆಚ್ಚು ಸಾಲ ಮಾಡದೇ ಅಭಿವೃದ್ಧಿಗೆ ಒತ್ತು ನೀಡಿತ್ತು. ಈ ಸರ್ಕಾರ ಮೂರು ವರ್ಷಗಳಿಂದ ಅಭಿವೃದ್ಧಿ ಮಾಡಿಲ್ಲ. ಈಗ ಉದ್ಘಾಟನೆ ಮಾಡುತ್ತಿವ ಎಲ್ಲವೂ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಪ್ರಾರಂಭವಾದ ಕಾಮಗಾರಿಗಳು' ಎಂದರು.

'ಹೊರಗಿನವರನ್ನು ಮತದಾರರನ್ನಾಗಿಸಲು ಬಿಜೆಪಿ ಯತ್ನ'

ಕೋಲ್ಕತ್ತ/ನವದೆಹಲಿ (ಪಿಟಿಐ): 'ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯಲ್ಲಿ ಬಿಹಾರ, ರಾಜಸ್ಥಾನ, ಹರಿಯಾಣ ಮತ್ತು ಉತ್ತರ ಪ್ರದೇಶದ ಜನರನ್ನು ಅಕ್ರಮವಾಗಿ ಸೇರಿಸಲು ಬಿಜೆಪಿ ಯತ್ನಿಸುತ್ತಿದೆ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದರು.

ಪಶ್ಚಿಮ ಮೇದಿನಿಪುರದಲ್ಲಿ ಪ್ರಚಾರ ಸಭೆಯಲ್ಲಿ ಮಾತನಾಡಿ, 'ನಮ್ಮ ಅಭಿಷೇಕ್ (ಬ್ಯಾನರ್ಜಿ, ಟಿಎಂಸಿ ಸಂಸದ) ಪ್ರಚಾರದಲ್ಲಿ ಇದ್ದ. ಪ್ರಚಾರವನ್ನು ಮಧ್ಯೆಯಲ್ಲಿಯೇ ನಿಲ್ಲಿಸಿ, ಅವನು ಚುನಾವಣಾ ಕಚೇರಿಗೆ ಓಡಬೇಕಾಯಿತು. ಯಾಕೆಂದರೆ, ಮತದಾರರ ಪಟ್ಟಿಗೆ ಸೇರಿಸಲು ಒಂದೇ ದಿನ 30 ಸಾವಿರ ಅರ್ಜಿಗಳು ಆಯೋಗಕ್ಕೆ ಸಲ್ಲಿಕೆಯಾಗಿದ್ದರ ಬಗ್ಗೆ ಅವನಿಗೆ ಮಾಹಿತಿ ಬಂದಿತ್ತು' ಎಂದು ವಿವರಿಸಿದರು.

'ಬಿಜೆಪಿ ನಾಯಕರೊಬ್ಬರ ಆಪ್ತರೊಬ್ಬರು 30 ಸಾವಿರ ಅರ್ಜಿಗಳನ್ನು ಆಯೋಗಕ್ಕೆ ತಂದುಕೊಟ್ಟಿದ್ದಾರೆ' ಎಂದು ಟಿಎಂಸಿ ಆರೋಪಿಸಿದೆ.

'ಬಿಹಾರದಲ್ಲಿಯೂ ಬಿಜೆಪಿ ಇದೇ ಕೆಲಸ ಮಾಡಿತ್ತು. ಇತರೆ ರಾಜ್ಯಗಳ ಮತದಾರರನ್ನು ಬಿಹಾರದ ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿತ್ತು. ಬೇರೆ ರಾಜ್ಯದವರನ್ನು ಬಿಹಾರಕ್ಕೆ ರೈಲುಗಳ ಮೂಲಕ ಕರೆತರಲಾಗಿತ್ತು. ಬಿಜೆಪಿ, ಇಲ್ಲಿಯೂ ಇದನ್ನೇ ಮಾಡಲು ಹೊರಟಿದೆ' ಎಂದು ಆರೋಪಿಸಿದರು.

'ಬಿಜೆಪಿ ಚುನಾವಣಾ ಆಯೋಗದೊಂದಿಗೆ ಸೇರಿಕೊಂಡಿದೆ. ಮಹಿಳೆಯರು ಮತ್ತು ಅಲ್ಪಸಂಖ್ಯಾತ ಮತದಾರರ ಹೆಸರುಗಳನ್ನು ಎಸ್‌ಐಆರ್ ಪ್ರಕ್ರಿಯೆ ಮೂಲಕ ಮತದಾರರ ಪಟ್ಟಿಯಿಂದ ಅಳಿಸಿದೆ. ಬಿಜೆಪಿಯವರು ಅಧಿಕಾರಕ್ಕೆ ಬಂದರೆ, ಮಾಂಸಾಹಾರವನ್ನು ನಿಷೇಧ ಮಾಡುತ್ತಾರೆ' ಎಂದರು.

ಬಿಜೆಪಿ ಸೇರಿದ ಟೆನಿಸ್ ದಿಗ್ಗಜ ಲಿಯಾಂಡರ್ ಪೇಸ್

ಪಶ್ಚಿಮ ಬಂಗಾಳ ಚುನಾವಣೆ ಘೋಷಣೆಯಾಗಿರುವ ಈ ಹೊತ್ತಿನಲ್ಲಿ ಟಿಎಂಸಿಯಲ್ಲಿದ್ದ ಟೆನಿಸ್ ತಾರೆ ಲಿಯಾಂಡರ್ ಪೇಸ್ ಅವರು ಮಂಗಳವಾರ ಬಿಜೆಪಿ ಸೇರಿದ್ದಾರೆ.

ಕೇಂದ್ರ ಸಚಿವ ಕಿರಣ್ ರಿಜಿಜು ಸೇರಿ ಪಕ್ಷದ ಹಿರಿಯ ನಾಯಕರ ಸಮ್ಮುಖದಲ್ಲಿ ಪೇಸ್ ಅವರು ಪಕ್ಷದ ನವದೆಹಲಿ ಕಚೇರಿಯಲ್ಲಿ ಬಿಜೆಪಿಗೆ ಸೇರಿದರು. ಇತ್ತೀಚೆಗೆ ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಅವರನ್ನು ಕೋಲ್ಕತ್ತದಲ್ಲಿ ಪೇಸ್ ಅವರು ಭೇಟಿಯಾಗಿದ್ದರು. ಆ ಬಳಿಕ, ಅವರು ಬಿಜೆಪಿ ಸೇರುವುದು ಬಹುತೇಕ ಖಚಿತವಾಗಿತ್ತು.

ಪೇಸ್ ಅವರು 2021ರಲ್ಲಿ ಟಿಎಂಸಿಗೆ ಸೇರಿದ್ದರು. ಗೋವಾ ಚುನಾವಣೆಯಲ್ಲಿ ಟಿಎಂಸಿ ಪರ ಪ್ರಚಾರವನ್ನೂ ನಡೆಸಿದ್ದರು. ಆದರೆ, ಚುನಾವಣೆಯಲ್ಲಿ ಪಕ್ಷ ಟಿಕೆಟ್ ನೀಡಿರಲಿಲ್ಲ. ಪೇಸ್ ಅವರ ತಂದೆಯ ಹುಟ್ಟೂರು ಗೋವಾ. ಅವರ ಕುಟುಂಬಸ್ಥರು ಗೋವಾದಲ್ಲಿದ್ದಾರೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪೇಸ್ ಅವರನ್ನು ತಮ್ಮ 'ಕಿರಿಯ ಸಹೋದರ' ಎಂದು ಕರೆಯುತ್ತಿದ್ದರು.

ಇತ್ತೀಚೆಗೆ ಬಂಗಾಳ ಟೆನಿಸ್ ಅಸೋಸಿಯೇಷನ್ (ಬಿಟಿಎ) ಅಧ್ಯಕ್ಷರಾಗಿ ಪೇಸ್ ಆಯ್ಕೆಯಾಗಿದ್ದಾರೆ.

> **ನಿಮ್ಮ ಕ್ಷೇತ್ರದಲ್ಲಿ ಟಿಎಂಸಿಯ ಯಾವ ಅಭ್ಯರ್ಥಿ ಇದ್ದಾರೆ ಎನ್ನುವ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಎಲ್ಲ 294 ವಿಧಾನಸಭಾ ಕ್ಷೇತ್ರಗಳಲ್ಲಿಯೂ ನನ್ನನ್ನೇ ಅಭ್ಯರ್ಥಿ ಎಂದುಕೊಳ್ಳಿ**
> **ಮಮತಾ ಬ್ಯಾನರ್ಜಿ**
> ಮುಖ್ಯಮಂತ್ರಿ

> **ಪೇಸ್ ಬಿಜೆಪಿ ಸೇರ್ಪಡೆಗೊಂಡಿದ್ದಾರೆ. ಶುಭಾಶಯಗಳು. ನಿಮಗೆ (ಬಿಜೆಪಿ) ಗೋವಾದ ಮುಖ್ಯಮಂತ್ರಿ ಅಭ್ಯರ್ಥಿ ಸಿಕ್ಕಿದ್ದಾರೆ. ಹೊರ ರಾಜ್ಯದ ಮತ್ತೊಬ್ಬರನ್ನು ಬಿಜೆಪಿ ನಮ್ಮ ರಾಜ್ಯಕ್ಕೆ ತಂದು ಹಾಕಿದೆ**
> **ಟಿಎಂಸಿ**

> **ಪ್ರಧಾನಿ ಮೋದಿ ಅವರ ನಾಯಕತ್ವದ ಜಗತ್ತಿನ ಅತ್ಯಂತ ದೊಡ್ಡ ಪಕ್ಷವೊಂದಕ್ಕೆ ಸೇರ್ಪಡೆಗೊಳ್ಳುತ್ತಿರುವುದಕ್ಕೆ ನನಗೆ ಹೆಮ್ಮೆ ಎನಿಸುತ್ತಿದೆ. ನನಗೆ ನೀಡುವ ಎಲ್ಲ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆ**
> **ಲಿಯಾಂಡರ್ ಪೇಸ್,** ಟೆನಿಸ್ ತಾರೆ

'ಕೇರಳದಲ್ಲಿ ಎಲ್‌ಡಿಎಫ್– ಬಿಜೆಪಿ ಮೈತ್ರಿ'

ಕಣ್ಣೂರು: 'ಕೇರಳ ವಿಧಾನಸಭಾ ಚುನಾವಣೆಯಲ್ಲಿ ಎಲ್‌ಡಿಎಫ್ ಜತೆಗೆ ಬಿಜೆಪಿ ಪಾಲುದಾರಿಕೆ ಮಾಡಿಕೊಂಡಿದೆ. ಎಲ್‌ಡಿಎಫ್ ಗೆಲ್ಲಬೇಕೆಂದು ಪ್ರಧಾನಿ ನರೇಂದ್ರ ಮೋದಿ ಅವರು ಬಯಸುತ್ತಿದ್ದಾರೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು.

ಮಂಗಳವಾರ ಇಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ರಾಹುಲ್, 'ಕೇರಳದಲ್ಲಿ ಮೈತ್ರಿ ಪಕ್ಷಗಳಾದ ಬಿಜೆಪಿ ಮತ್ತು ಎಲ್‌ಡಿಎಫ್ ವಿರುದ್ಧ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಹೋರಾಟ ನಡೆಸಲಿದೆ' ಎಂದರು.

ಯುಡಿಎಫ್ ಬೆಂಬಲದೊಂದಿಗೆ ಸ್ಪರ್ಧಿಸುತ್ತಿರುವ ಇಬ್ಬರು ಮಾಜಿ ಸಿಪಿಎಂ ಮುಖಂಡರಾದ ವಿ.ಕುಞಿಕೃಷ್ಣನ್ ಮತ್ತು ಟಿ.ಕೆ ಗೋವಿಂದನ್ ಸಹ ರಾಹುಲ್ ಅವರೊಂದಿಗೆ ವೇದಿಕೆ ಹಂಚಿಕೊಂಡಿದ್ದರು.

'ಆಶ್ಚರ್ಯವೆಂದರೆ, ಇದೇ ಮೊದಲ ಬಾರಿಗೆ ಕೇರಳದಲ್ಲಿ ಸಂಪೂರ್ಣ ಭಿನ್ನ ಸಿದ್ಧಾಂತಗಳ ಬಿಜೆಪಿ ಮತ್ತು ಎಲ್‌ಡಿಎಫ್ ನಡುವೆ ಒಪ್ಪಂದ ಆಗಿದೆ. ಪ್ರಧಾನಿ ಮೋದಿ ಅವರು ಚುನಾವಣಾ ಭಾಷಣದಲ್ಲಿ ಧರ್ಮ, ದೇವರ ಬಗ್ಗೆ ಮಾತನಾಡುತ್ತಾರೆ. ಆದರೆ, ಕೇರಳಕ್ಕೆ ಬಂದಾಗ ಎಲ್ಲಿಯೂ ಅವರು ಶಬರಿಮಲೆ ಚಿನ್ನ ಕಳವು ಪ್ರಕರಣವನ್ನು ಪ್ರಸ್ತಾಪಿಸಿಲ್ಲ, ಏಕೆಂದರೆ, ಎಲ್‌ಡಿಎಫ್ ಮುಖಂಡರು ಚಿನ್ನ ಕಳವು ಪ್ರಕರಣದಲ್ಲಿ ಭಾಗಿಯಾಗಿದ್ದಾರೆ, ಬಿಜೆಪಿ ಇದರ ಬಗ್ಗೆ ಮೌನ ವಹಿಸಿದೆ' ಎಂದು ದೂರಿದರು.

'ಹಿಂದೂ ಧರ್ಮದ ಸ್ವಯಂಘೋಷಿತ ರಕ್ಷಕರು' ಕೇರಳಕ್ಕೆ ಬಂದಾಗ ಯಾಕೆ ಶಬರಿಮಲೆ ಚಿನ್ನ ಕಳವು ಪ್ರಕರಣದ ಬಗ್ಗೆ ಮಾತನಾಡಿಲ್ಲ' ಎಂದು ರಾಹುಲ್ ಪ್ರಶ್ನಿಸಿದರು.

ನೀತಿ ಸಂಹಿತೆ ನಟ ವಿಜಯ್ ವಿರುದ್ಧ ಪ್ರಕರಣ

ಚೆನ್ನೈ (ಪಿಟಿಐ): ನಗರದಲ್ಲಿ ನಡೆದ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಟಿವಿಕೆ ಮುಖ್ಯಸ್ಥ ವಿಜಯ್ ಸೇರಿದಂತೆ ಪಕ್ಷದ ಹಲವು ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.



ವಿಜಯ್

ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ಮಂಗಳವಾರ ತಿಳಿಸಿವೆ.

'ಅಧಿಕಾರಿಗಳಿಂದ ಅನುಮತಿ ಪಡೆದ ಸಮಯಕ್ಕೂ ಮೊದಲೇ ಪ್ರಚಾರ ಸ್ಥಳಕ್ಕೆ ಬಂದು ಸಾರ್ವಜನಿಕರಿಗೆ ಅನನುಕೂಲ ಉಂಟುಮಾಡಲಾಗಿದೆ ಮತ್ತು ವಿಜಯ್ ಅವರ ರೋಡ್ ಷೋ ವೇಳೆ ಸುಮಾರು 30 ಧ್ವನಿವರ್ಧಕಗಳನ್ನು ಬಳಸಲಾಗಿದೆ' ಎಂಬ ಆರೋಪ ದೂರಿನಲ್ಲಿದೆ ಎಂದು ತಿಳಿಸಿವೆ.

ಮತದಾರರ ಸೆಳೆಯಲು ಪಕ್ಷಗಳ ಕಸರತ್ತು

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ: ಪ್ರಚಾರದ ಭರಾಟೆ, ರಂಗೇರಿದ ಕಣ

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣಾ ಕಣದಲ್ಲಿ ಪ್ರಚಾರದ ಭರಾಟೆ ಜೋರಾಗಿದೆ. ಕಾಂಗ್ರೆಸ್, ಬಿಜೆಪಿಯ ಮುಖಂಡರ ದಂಡು ಆಗಮಿಸಿದ್ದು, ಮತದಾರರ ಸೆಳೆಯಲು ಕಸರತ್ತು ನಡೆಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ನೇತೃತ್ವದಲ್ಲಿ ಸಚಿವರು, ಶಾಸಕರು ಪಕ್ಷದ ಅಭ್ಯರ್ಥಿ ಪರವಾಗಿ ಅಖಾಡಕ್ಕೆ ಇಳಿದಿದ್ದಾರೆ.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮತ್ತು ವಿರೋಧ ಪಕ್ಷದ ನಾಯಕ ಆರ್. ಅಶೋಕ ಸಾರಥ್ಯದಲ್ಲಿ ಎನ್‌ಡಿಎ ಅಭ್ಯರ್ಥಿ ಗೆಲುವಿಗೆ ಶಾಸಕರು, ಮಾಜಿ ಸಚಿವರು ಬೆವರು ಸುರಿಸುತ್ತಿದ್ದಾರೆ.

ಸರಣಿ ಸಭೆ, ರೋಡ್ ಶೋಗಳು ನಡೆದಿವೆ.

ಬೂತ್ ತೊರೆಯದಂತೆ ತಾಕೀತು: ಗೆಲುವಿಗೆ ಕಾರ್ಯತಂತ್ರ ರೂಪಿಸಲು ಡಿ.ಕೆ. ಶಿವಕುಮಾರ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಸೋಮವಾರ ಸರಣಿ ಸಭೆ ನಡೆಸಿದರು. ಬಾಪೂಜಿ ಎಂಬಿಎ ಕಾಲೇಜು ಆವರಣದಲ್ಲಿ ತೆರೆದಿರುವ ಕೆಪಿಸಿಸಿ ಕ್ಯಾಂಪ್ ಕಚೇರಿ ಇಡೀ ದಿನ ಚಟುವಟಿಕೆಯಿಂದ ಕೂಡಿತ್ತು.

ಪ್ರಚಾರಕ್ಕೆ ಪಕ್ಷ ನಿಯೋಜಿಸಿದ ಸಚಿವರು, ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರೊಂದಿಗೆ ಇಬ್ಬರೂ ಸಭೆ ನಡೆಸಿದರು. ಕೆಪಿಸಿಸಿ ವೀಕ್ಷಕರು, ಗ್ಯಾರಂಟಿ ಅನುಷ್ಠಾನ ಸಮಿತಿ ಪದಾಧಿಕಾರಿಗಳು, ಜಿಲ್ಲಾ ಮುಖಂಡರೊಂದಿಗೆ ಚರ್ಚಿಸಿದರು. ಏ.7ರವರೆಗೆ ಜವಾಬ್ದಾರಿ ನೀಡಿದ ಬೂತ್‌ಗಳನ್ನು ತೊರೆಯದಂತೆ ತಾಕೀತು ಮಾಡಿದರು.

ಕ್ಷೇತ್ರ ವ್ಯಾಪ್ತಿಯ 284 ಮತಗಟ್ಟೆಗಳನ್ನು ವಿಂಗಡಿಸಿ ಸಚಿವರು, ಶಾಸಕರು ಹಾಗೂ ನಿಗಮ– ಮಂಡಳಿಗಳ ಅಧ್ಯಕ್ಷರಿಗೆ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ.

ಬಿಜೆಪಿ ಪ್ರಣಾಳಿಕೆ ಬಿಡುಗಡೆ: ದಕ್ಷಿಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಿಜೆಪಿಯ ಪ್ರಣಾಳಿಕೆಯನ್ನು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ್ ಬಿಡುಗಡೆ ಮಾಡಿದರು. 12 ಪ್ರಮುಖ ಅಂಶಗಳ ಪ್ರಣಾಳಿಕೆಯಲ್ಲಿ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದೆ.

ಬಿ.ಎಸ್.ಯಡಿಯೂರಪ್ಪ, ಸಂಸದ ಬಸವರಾಜ ಬೊಮ್ಮಾಯಿ ಅವರೂ ಅಭ್ಯರ್ಥಿ ಪರವಾಗಿ ಮತಯಾಚನೆ ಮಾಡಿದರು. ಶಾಸಕ ಸುನಿಲ್‌ಕುಮಾರ್ ಅವರು ಕಾರ್ಯಕರ್ತರ ಸಭೆ ನಡೆಸಿ ಕಾರ್ಯತಂತ್ರ ರೂಪಿಸಿದರು.



ದಾವಣಗೆರೆಯ ಬಿಜೆಪಿ ಕಚೇರಿಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಉಪಚುನಾವಣೆ ಪ್ರಣಾಳಿಕೆಯನ್ನು ಮಂಗಳವಾರ ಬಿಡುಗಡೆಗೊಳಿಸಿದರು. ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ರಾಜಶೇಖರ ನಾಗಪ್ಪ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕರಾದ ಎ.ಎಚ್. ಶಿವಯೋಗಿಸ್ವಾಮಿ, ಬಸವರಾಜ ನಾಯ್ಕ, ನಾರಾಯಣಸ್ವಾಮಿ ಇದ್ದಾರೆ ಪ್ರಜಾವಾಣಿ ಚಿತ್ರ

ಸರ್ಕಾರದ ಅಧಃಪತನ ಶುರು: ಬಿ.ಎಸ್. ಯಡಿಯೂರಪ್ಪ

'ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಸೋಲಿನ ಮೂಲಕವೇ ಕಾಂಗ್ರೆಸ್ ಸರ್ಕಾರದ ಅಧಃಪತನ ಶುರುವಾಗಲಿದೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

'ಎದುರಾಳಿ ಬಣದಲ್ಲಿ (ಕಾಂಗ್ರೆಸ್) ಹಣಬಲವಿದ್ದರೂ, ಸಂಘಟನೆಯ ಬಲದಿಂದ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಗೆಲುವು ಸಾಧಿಸಲಿದ್ದಾರೆ' ಎಂದು ಮಂಗಳವಾರ ವಿಶ್ವಾಸ ವ್ಯಕ್ತಪಡಿಸಿದರು.

'ರಾಜ್ಯದಲ್ಲಿ ತುಘಲಕ್ ದರ್ಬಾರ್ ನಡೆಯುತ್ತಿದೆ. ಗ್ಯಾರಂಟಿ ಯೋಜನೆಯ ಹೆಸರಲ್ಲಿ ಸರ್ಕಾರ ರಾಜ್ಯವನ್ನು ದಿವಾಳಿಯನ್ನಾಗಿಸಿದೆ. ರಾಜ್ಯದ ಜನ ಸಂಕಷ್ಟದಲ್ಲಿದ್ದಾರೆ' ಎಂದು ದೂರಿದರು.

> **ತಂದೆ ಜಿಲ್ಲಾ ಉಸ್ತುವಾರಿ ಸಚಿವ, ತಾಯಿ ಸಂಸದೆ, ಇದೀಗ ಪುತ್ರ ಅಭ್ಯರ್ಥಿಯಾಗಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಗೆದ್ದರೆ, ಅಧಿಕಾರದ ದರ್ಪ, ದೌರ್ಜನ್ಯ ಮತ್ತಷ್ಟು ಜಾಸ್ತಿ ಆಗಲಿದೆ**
> **ಆರ್.ಅಶೋಕ**
> ವಿಧಾನಸಭೆ ವಿರೋಧಪಕ್ಷದ ನಾಯಕ

> **ಅಲ್ಪಸಂಖ್ಯಾತ ಸಮುದಾಯಕ್ಕೆ ಕಾಂಗ್ರೆಸ್ ಹಲವು ಕೊಡುಗೆ ನೀಡಿದೆ. ಇದನ್ನು ಅಲ್ಪಸಂಖ್ಯಾತರು ಅರ್ಥ ಮಾಡಿಕೊಳ್ಳಬೇಕು**
> **ಡಿ.ಕೆ.ಶಿವಕುಮಾರ್**
> ಉಪಮುಖ್ಯಮಂತ್ರಿ

'ಬಿಜೆಪಿಗಿಲ್ಲ ಬದ್ಧತೆ'

'ಒಳಮೀಸಲಾತಿ ಅನುಷ್ಠಾನಕ್ಕೆ ಶ್ರಮಿಸುತ್ತಿರುವ ರಾಜ್ಯ ಸರ್ಕಾರ ಹಂಚಿಕೆಯ ಸೂತ್ರ ರೂಪಿಸಿದೆ. ಈ ಮೂಲಕ ಎಡಗೈ ಸಮುದಾಯದ ಕನಸು ಈಡೇರಿಸಲಿದೆ. ಈ ಬದ್ಧತೆಯನ್ನು ಬಿಜೆಪಿ ಪ್ರದರ್ಶಿಸಿಲ್ಲ' ಎಂದು ಡಿ.ಕೆ. ಶಿವಕುಮಾರ್ ದೂರಿದರು.

'ಒಳಮೀಸಲಾತಿಗೆ ಸಂಬಂಧಿಸಿ ಕಾಂಗ್ರೆಸ್ ಕೊಟ್ಟ ಮಾತು ಉಳಿಸಿಕೊಳ್ಳುತ್ತದೆ. ಮತದಾನ ಪ್ರಕ್ರಿಯೆ ಬಳಿಕ ಸಚಿವ ಸಂಪುಟ ಸಭೆ ಕರೆದು ತೀರ್ಮಾನಿಸುತ್ತೇವೆ. ಗೊಂದಲ ಸೃಷ್ಟಿಸುವುದು ಬೇಡ' ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು.

ಸಿ.ಎಂ ತಂದ ಸೂಟ್‌ಕೇಸ್ ಕೆಲಸ ಮಾಡಲ್ಲ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಗ್ಯಾರಂಟಿ ಯೋಜನೆಗಳ ಬಗ್ಗೆ ವಿಶ್ವಾಸ ಇದ್ದರೆ, ಸೂಟ್‌ಕೇಸ್ ಸಮೇತ ಏಕೆ ಠಿಕಾಣಿ ಹೂಡಿದ್ದೀರಿ' ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ ವಿಜಯೇಂದ್ರ, ಮುಖ್ಯಮಂತ್ರಿ ಅವರನ್ನು ಪ್ರಶ್ನಿಸಿದರು

ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ ಪರ ಮತಯಾಚಿಸಿ ಮಾತನಾಡಿದರು.

'ಉಪಚುನಾವಣೆಯಲ್ಲಿ ಸೋಲುವ ಭೀತಿಯಿಂದ ಸಿದ್ದರಾಮಯ್ಯ ಅವರು 10–15 15 ಸಚಿವರೊಂದಿಗೆ ಬಂದಿದ್ದಾರೆ. ಗೆಲ್ಲಲು ಕಾಂಗ್ರೆಸ್‌ನ ಕುತಂತ್ರಗಳು ಯಶಸ್ವಿ ಆಗುವುದಿಲ್ಲ. ಸೂಟಕೇಸ್ ಕೆಲಸ ಮಾಡಲ್ಲ' ಎಂದರು.

'ಮುಳುಗಡೆ ಪ್ರದೇಶದ ರೈತರಿಗೆ ಪರಿಹಾರ ಕೊಡುತ್ತೇವೆ ಎಂದು ಪೊಳ್ಳು ಭರವಸೆ ನೀಡಿ, ಇಲ್ಲಿವರೆಗೆ ಎಷ್ಟು ಸಾವಿರ ಕೋಟಿ ಬಿಡುಗಡೆ ಮಾಡಿದ್ದೀರಿ? ನಮ್ಮ ನಡೆ ಕೃಷ್ಣೆಯ ಕಡೆ ಏನಾಯಿತು?' ಎಂದು ಪ್ರಶ್ನಿಸಿದ್ದಾರೆ.

'ಗ್ಯಾರಂಟಿ ಸ್ಥಗಿತಗೊಳಿಸುವ ಬೆದರಿಕೆ'

'ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲಿಸಿದರೆ, ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸುವುದಾಗಿ ಮುಖ್ಯಮಂತ್ರಿ ಮತ್ತು ಸಚಿವರು ಜನರಿಗೆ ಬೆದರಿಕೆ ಒಡ್ಡುತ್ತಿದ್ದಾರೆ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿದರು.

'ಗ್ಯಾರಂಟಿ ಯೋಜನೆಗಳನ್ನು ಎರಡೇ ಕ್ಷೇತ್ರಕ್ಕೆ ಅಥವಾ ರಾಜ್ಯದಾದ್ಯಂತ ಸ್ಥಗಿತಗೊಳಿಸಲಾಗುವುದೇ ಎಂಬ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಬೇಕು' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಸದನದಲ್ಲಿ ರಾಜ್ಯದ ಅಭಿವೃದ್ಧಿ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿಲ್ಲ. ಮುಸ್ಲಿಮರು, ದಲಿತರಿಗೆ ಅನ್ಯಾಯ ಮಾಡಲಾಗಿದೆ. ಈ ಬಗ್ಗೆ ಬಾಗಲಕೋಟೆಯಲ್ಲಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಬಹಿರಂಗ ಚರ್ಚೆಗೆ ಬರಲಿ. ಅವರು ಸರಿಯಾದ ಉತ್ತರ ನೀಡಿದರೆ, ನಿಮಗೆ ಶರಣಾಗಿ ರಾಜಕೀಯ ನಿವೃತ್ತಿ ಪಡೆಯುತ್ತೇನೆ. ಇಲ್ಲದಿದ್ದರೆ, ನೀವು ರಾಜಕೀಯವಾಗಿ ನಿವೃತ್ತಿಯಾಗುತ್ತೀರಾ' ಎಂದು ಎಂದು ಪ್ರಶ್ನಿಸಿದರು.

'ದಾವಣಗೆರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ಮತದಾರರು ಇದ್ದಾರೆ. ಆದರೆ, ಕುಟುಂಬ ರಾಜಕಾರಣಕ್ಕೆ ಜೊತು ಬಿದ್ದು ಶಾಮನೂರು ಅವರ ಮೊಮ್ಮಗನಿಗೆ ಟಿಕೆಟ್ ನೀಡಲಾಗಿದೆ. ಸ್ವಾಭಿಮಾನ ಪ್ರದರ್ಶಿಸುವ ಮೂಲಕ ಎರಡೂ ಕ್ಷೇತ್ರಗಳಲ್ಲಿ ಮುಸ್ಲಿಮರು ಕಾಂಗ್ರೆಸ್‌ಗೆ ಸೋಲಿಸಬೇಕು' ಎಂದರು.

ಒಳಮೀಸಲಾತಿಯಲ್ಲಿ ಬಂಜಾರರಿಗೆ ಅನ್ಯಾಯ: ಕುಮಾರ ಮಹಾರಾಜ

ಅನ್ಯಾಯವಾಗಲು ಬಿಡಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಬಂಜಾರ ಸಮುದಾಯದಲ್ಲಿ ಹಲವು ಸಮಸ್ಯೆಗಳು ಇರುವಾಗ ಒಳಮೀಸಲಾತಿ ಜಾರಿ ನ್ಯಾಯವಲ್ಲ. ನ್ಯಾ.ನಾಗಮೋಹನದಾಸ ವರದಿಯಿಂದ ಸಮುದಾಯಕ್ಕೆ ಅನ್ಯಾಯವಾಗಿದೆ' ಎಂದು ಬಂಜಾರ ಶಕ್ತಿ ಪೀಠದ ಕುಮಾರ ಮಹಾರಾಜ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲೇ ದೂರಿದರು.

ತಾಲ್ಲೂಕಿನ ನೀಲಾನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ನಮ್ಮನ್ನು ತುಳಿದವರನ್ನು ನಾವೂ ತುಳಿಯುತ್ತೇವೆ' ಎಂದೂ ಎಚ್ಚರಿಸಿದರು. 'ಬಂಜಾರ ಜನಾಂಗಕ್ಕೆ ನೀವು ಮೀಸಲಾತಿ ಜೀವ ಕೊಡಿ. ನಾವು ನಿಮಗೆ ಜೀವವನ್ನೇ ಕೊಡಲು ಸಿದ್ಧರಿದ್ದೇವೆ' ಎಂದು ಹೇಳಿದರು.

'ಬಂಜಾರ ಸ್ವಾಭಿಮಾನದ ಸಮುದಾಯ. ಯಾರು ನಮಗೆ ಗೌರವಿಸುತ್ತಾರೆ, ಸಮುದಾಯದ ಬೆನ್ನಿಗೆ ನಿಲ್ಲುತ್ತಾರೆ, ಅಂತಹವರನ್ನು ನಾವು ತಲೆ ಮೇಲೆ ಹೊತ್ತು ಮೆರವಣಿಗೆ ಮಾಡುತ್ತೇವೆ' ಎಂದರು.

ನಂತರ ಈ ವಿಷಯ ಪ್ರಸ್ತಾಪಿಸಿದ ಸಿದ್ದರಾಮಯ್ಯ, 'ಕಾಂಗ್ರೆಸ್ ಯಾವಾಗಲೂ ಸಾಮಾಜಿಕ ನ್ಯಾಯ ಪಾಲಿಸಲಿದೆ. ಯಾರಿಗೂ ಅನ್ಯಾಯ ಮಾಡಲು ಬಿಡುವುದಿಲ್ಲ. ನಿಮ್ಮ ಸಮುದಾಯಕ್ಕೆ ನ್ಯಾಯ ಒದಗಿಸುವುದು ಹಾಗೂ ರಕ್ಷಣೆ ಮಾಡುವ ಹೊಣೆ ನಮ್ಮದು' ಎಂದು ಭರವಸೆ ನೀಡಿದರು.

'ಒಳಮೀಸಲಾತಿ ಕುರಿತು ಚುನಾವಣೆ ನಂತರ ಚರ್ಚಿಸಿ, ಯಾರಿಗೂ ಅನ್ಯಾಯ ಆಗದಂತೆ ನೋಡಿಕೊಳ್ಳುತ್ತೇವೆ. ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟುಕೊಂಡಿರುವ ಯಾರಿಗೂ ಅನ್ಯಾಯವಾಗಬಾರದು' ಎಂದರು.

'ಬಿಜೆಪಿಯವರು ಏಕೆ ಮಾಡಲಿಲ್ಲ. ಬಿಜೆಪಿಯವರು ಬಣ್ಣಬಣ್ಣದ ಮಾತನಾಡುತ್ತಾರೆ, ಕೆಲಸ ಮಾಡುವುದಿಲ್ಲ. ನಮಗೆ ಬಣ್ಣದ ಮಾತು ಆಡಲು ಬರುವುದಿಲ್ಲ, ಕೆಲಸ ಮಾಡುತ್ತೇವೆ' ಎಂದು ಹೇಳಿದರು.



ಬಾಗಲಕೋಟೆ ತಾಲ್ಲೂಕಿನ ಮುಗಳೊಳ್ಳಿಯಲ್ಲಿ ಮಂಗಳವಾರ ನಡೆದ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಟಗರು ನೀಡಲಾಯಿತು

'ಎರಡು ವರ್ಷ ನಾನೇ ಮುಖ್ಯಮಂತ್ರಿ'

'ರಾಜ್ಯದಲ್ಲಿ ಇನ್ನೂ ಎರಡು ವರ್ಷ ನಾವೇ ಅಧಿಕಾರದಲ್ಲಿ ಇರುತ್ತೇವೆ. ನಾನೇ ಮುಖ್ಯಮಂತ್ರಿ ಆಗಿರುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಾಗಲಕೋಟೆ ಉಪ ಚುನಾವಣೆ ಪ್ರಚಾರಾರ್ಥವಾಗಿ ಮಂಗಳವಾರ ಐಹೊಳೆಯಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿದೆ. ಕ್ಷೇತ್ರದಲ್ಲಿ ಎಚ್.ವೈ.ಮೇಟಿ ಅವರ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಮುಂದುವರೆಸಲು ಪಕ್ಷ ಅಭ್ಯರ್ಥಿ ಉಮೇಶ ಮೇಟಿ ಅವರನ್ನು ಗೆಲ್ಲಿಸಿ' ಎಂದು ಕೋರಿದರು.

ಕೇಂದ್ರದ ಆರ್ಥಿಕತೆಯೇ ದಿವಾಳಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಲು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿರುವುದು ಆರ್ಥಿಕ ಕ್ಷೇತ್ರದ ಬಗೆಗಿನ ಅವರ ಅಜ್ಞಾನ, ಆಡಳಿತದ ಅನುಭವದ ಕೊರತೆ ಮತ್ತು ರಾಜಕೀಯ ಹತಾಶೆ ತೋರಿಸುತ್ತದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಈ ಕುರಿತು ಪ್ರಕಟಣೆಯಲ್ಲಿ ಅವರು, 'ಕಳೆದ ತಿಂಗಳಷ್ಟೇ ಈ ವರ್ಷದ ಬಜೆಟ್ ಮಂಡಿಸಿದ್ದೇನೆ. ಅದು ಅಂಕಿ-ಅಂಶಗಳ ಕಾಗದದ ಕಂತೆ ಅಲ್ಲ. ಏಳು ಕೋಟಿ ಕನ್ನಡಿಗರಿಗೆ ಒಪ್ಪಿಸಿದ ಪ್ರಾಮಾಣಿಕ ಲೆಕ್ಕಪತ್ರ. ಆ ಬಜೆಟ್ ಅನ್ನು ಉಭಯ ಸದನಗಳೂ ಅಂಗೀಕರಿಸಿವೆ. ಇದೇ ನಮ್ಮ ಶ್ವೇತಪತ್ರ' ಎಂದು ತಿರುಗೇಟು ನೀಡಿದ್ದಾರೆ.

'ವಿಜಯೇಂದ್ರ ಅವರ ಪಕ್ಷದವರೂ ಸೇರಿ 21 ಶಾಸಕರು ಎತ್ತಿದ್ದ ಪ್ರಶ್ನೆಗಳಿಗೆ ಉತ್ತರ ನೀಡಿದ್ದೇನೆ. ಇದರ ಬಗ್ಗೆ ಇನ್ನೂ ಅನುಮಾನಗಳಿದ್ದರೆ ವಿವರಣೆ ಕೊಡಲು ಸಿದ್ಧ. ಉಪ ಚುನಾವಣೆಯ ಅಖಾಡದಲ್ಲೇ ಈ ಕುರಿತು ನಿಮ್ಮ ಜೊತೆ ಬಹಿರಂಗ ಚರ್ಚೆಗೂ ಸಿದ್ಧನಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

'ಕರ್ನಾಟಕದ ಆರ್ಥಿಕ ಸ್ಥಿತಿ ನಿಮ್ಮ ಪಕ್ಷದ ಆಡಳಿತ ಇರುವ ಕೇಂದ್ರ ಸರ್ಕಾರಕ್ಕಿಂತಲೂ ಉತ್ತಮ ಸ್ಥಿತಿಯಲ್ಲಿದೆ. ಬಜೆಟ್ ಗಾತ್ರದಲ್ಲಿ ಶೇ 9.4ರಷ್ಟು ಬೆಳವಣಿಗೆ ಆಗಿದ್ದರೆ, ಕೇಂದ್ರದ್ದು ಶೇ 5.6ರಷ್ಟು ಬೆಳವಣಿಗೆ ಸಾಧಿಸಿದೆ. ದೇಶದ ಜಿಡಿಪಿ ಬೆಳವಣಿಗೆ ಶೇ.7.4ರಷ್ಟಿದ್ದರೆ, ರಾಜ್ಯದ್ದು ಶೇ.8.1ರಷ್ಟು ಬೆಳವಣಿಗೆ ದಾಖಲಿಸಿದೆ' ಎಂದಿದ್ದಾರೆ.

'ದಯವಿಟ್ಟು ಒಮ್ಮೆ ನಿಮ್ಮ ಪಕ್ಷದ ಆಡಳಿತವುಳ್ಳ ರಾಜ್ಯಗಳ ಆರ್ಥಿಕತೆ ಮೇಲೆ ಕಣ್ಣಾಡಿಸಿ ಬನ್ನಿ. ಮಹಾರಾಷ್ಟ್ರದ ಸಾಲ ಬಾಕಿ ₹11.02 ಲಕ್ಷ ಕೋಟಿ, ಬಿಹಾರದ ವಿತ್ತೀಯ ಕೊರತೆ ಜಿಎಸ್‌ಡಿಪಿ ಶೇ11.8ರಷ್ಟಿದೆ. ರಾಜಸ್ಥಾನ, ಮಧ್ಯಪ್ರದೇಶದ ವಿತ್ತೀಯ ಕೊರತೆ ಜಿಎಸ್‌ಡಿಪಿಯ ಶೇ 3.7ರಷ್ಟಿದೆ. ಆರ್ಥಿಕ ದಿವಾಳಿತನವೇ ಬಿಜೆಪಿ ಆಡಳಿತದ ಮುಖ್ಯ ಗುರುತಾಗಿದೆ' ಎಂದು ವಾಗ್ದಾಳಿ ನಡೆಸಿದ್ದಾರೆ.

'ಬಿಜೆಪಿ ಅಧಿಕಾರದಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕತೆಯನ್ನು ಅವಲೋಕಿಸಿದರೆ ಯಾರು ಆರ್ಥಿಕತೆಯನ್ನು ದಿವಾಳಿ ಸ್ಥಿತಿಗೆ ತಳ್ಳಿದವರು ಎಂದು ಸ್ಪಷ್ಟವಾಗುತ್ತದೆ. ವಿಜಯೇಂದ್ರ ಅವರೇ ಇನ್ನೊಮ್ಮೆ ಇಂತಹ ಬೇಜವಾಬ್ದಾರಿ ಹೇಳಿಕೆ ನೀಡುವ ಮೊದಲು ಹೋಂ ವರ್ಕ್ ಮಾಡಿಕೊಂಡು ಬನ್ನಿ' ಎಂದಿದ್ದಾರೆ.

prajavani.net prajavani
ಬುಧವಾರ, ಏಪ್ರಿಲ್ 1, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 90 | ಪುಟ 18
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಮಸೂದೆಗೆ ವಿರೋಧ

ಎಲ್‌ಜಿಬಿಟಿಕ್ಯೂ+ ಸಮುದಾಯದ ಬೆಂಬಲಿಗರು ‘ಲಿಂಗತ್ವ ಅಲ್ಪಸಂಖ್ಯಾತರ (ಹಕ್ಕುಗಳ ರಕ್ಷಣೆ) ತಿದ್ದುಪಡಿ ಮಸೂದೆ, 2026’ ಅನ್ನು ವಿರೋಧಿಸಿ ಡೆಹರಾಡೂನ್‌ನಲ್ಲಿ ಮಂಗಳವಾರ ಪ್ರತಿಭಟಿಸಿದರು



ಮದ್ಯಪಾನ ನಿಷೇಧ ಅಪ್ರಸ್ತುತ: ಪಾಟೀಲ 4
ಜಿಡಿಪಿ: ಶೇ 1ರಷ್ಟು ಕುಸಿತ ಸಾಧ್ಯತೆ 10

ಬರಲೇ ಇಲ್ಲ ₹15,583 ಕೋಟಿ

15ನೇ ಹಣಕಾಸು ಆಯೋಗದ ಶಿಫಾರಸಿನಲ್ಲಿ ರಾಜ್ಯಕ್ಕೆ ಬರಬೇಕಿದ್ದ ಅನುದಾನ ಖೋತಾ

ದೂರು ಪ್ರತಿದೂರು: ಚುನಾವಣೆ ನಡೆಸದಿರುವುದು, ಪ್ರಮಾಣಪತ್ರ ಸಲ್ಲಿಸದಿರುವುದು ಮತ್ತು ವಿಳಂಬವಾಗಿ ಕೆಲಸ ಮುಗಿಸಿರುವುದು ಅನುದಾನ ಖೋತಾ ಆಗಲು ಕಾರಣ ಎಂದು ಕೇಂದ್ರ ಹೇಳಿದರೆ, ಕಾಮಗಾರಿ ಪೂರ್ಣಗೊಳಿಸಿ, ಪ್ರಮಾಣಪತ್ರ ಸಲ್ಲಿಸಿದರೂ ಅನುದಾನ ಬಿಡುಗಡೆ ಮಾಡಿಲ್ಲ ಎಂದು ರಾಜ್ಯ ಸರ್ಕಾರ ದೂರುತ್ತಿದೆ.

● ಮಂಜುನಾಥ ಹೆಬ್ಬಾರ್

ನವದೆಹಲಿ: ಕೇಂದ್ರದ 15ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ ಶಿಫಾರಸು ಮಾಡಿರುವ ಅನುದಾನದ ಪೈಕಿ ₹15,583 ಕೋಟಿ ಕೊನೆಗೂ ಬಿಡುಗಡೆಯಾಗಿಲ್ಲ.

15ನೇ ಹಣಕಾಸು ಆಯೋಗದ ಶಿಫಾರಸಿನ ಅವಧಿ ಮಾರ್ಚ್ 31ಕ್ಕೆ ಕೊನೆಗೊಂಡಿದೆ. ಏಪ್ರಿಲ್ 1ರಿಂದ 16ನೇ ಹಣಕಾಸು ಆಯೋಗದ ಶಿಫಾರಸು ಜಾರಿಗೆ ಬರಲಿದೆ. ಐದು ವಿಭಾಗಗಳಲ್ಲಿ ರಾಜ್ಯಕ್ಕೆ ಬರಬೇಕಿರುವ ಅನುದಾನ ಖೋತಾ ಆಗಿದೆ.

ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ರಾಜ್ಯದ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ₹2,186 ಕೋಟಿ ಅನುದಾನ ಬರಬೇಕಿದೆ. ಕೇಂದ್ರ ಪಂಚಾಯತ್‌ರಾಜ್ ಸಚಿವಾಲಯವು 14 ರಾಜ್ಯಗಳಿಗೆ ಮಂಗಳವಾರ ₹3,946 ಕೋಟಿ ಬಿಡುಗಡೆ ಮಾಡಿದೆ. ಕಳೆದ 15 ದಿನಗಳಲ್ಲಿ ಸಚಿವಾಲಯವು ವಿವಿಧ ರಾಜ್ಯಗಳಿಗೆ ₹10,000 ಕೋಟಿಗೂ ಅಧಿಕ ಅನುದಾನ ನೀಡಿದೆ. ಆದರೆ, ಈ ಪಟ್ಟಿಯಲ್ಲಿ ರಾಜ್ಯದ ಹೆಸರು ಇರಲಿಲ್ಲ.

‘ಕೇಂದ್ರ ಸಚಿವರನ್ನು ಎರಡು ಬಾರಿ ಭೇಟಿ ಮಾಡಿ ಅನುದಾನ ಬಿಡುಗಡೆಗೆ ಒತ್ತಾಯಿಸಿದ್ದೇನೆ. ಮೂರು ಬಾರಿ ಪತ್ರ ಬರೆದಿದ್ದೇನೆ. ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದೇವೆ. ಆದರೂ, ಅನುದಾನ ಬಿಡುಗಡೆಗೆ ಸತಾಯಿಸುತ್ತಿದೆ’ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಕಿಡಿಕಾರಿದರು.

▶4

ಯಾವೆಲ್ಲ ಅನುದಾನ ಬಾಕಿ (₹ಕೋಟಿಗಳಲ್ಲಿ)

ಶಿಫಾರಸು | ಬಿಡುಗಡೆ | ಬಾಕಿ

ವಿಭಾಗ	ಶಿಫಾರಸು	ಬಿಡುಗಡೆ	ಬಾಕಿ	ಕಾರಣ
ವಿಶೇಷ ಅನುದಾನ	5,495	0	5,495	ಮಧ್ಯಂತರ ವರದಿಯಲ್ಲಷ್ಟೇ ಉಲ್ಲೇಖ– ಕೇಂದ್ರದ ವಾದ
ಬೆಂಗಳೂರು ಅಭಿವೃದ್ಧಿ	6,000	0	6,000	ಕಾರಣ ನೀಡಿಲ್ಲ. ಅನುದಾನ ಬಿಡುಗಡೆಯನ್ನೂ ಮಾಡಿಲ್ಲ
ಆರೋಗ್ಯ ಅನುದಾನ	1,683	809	874	ದಾಖಲೆ ಸಲ್ಲಿಸಿಲ್ಲ: ಕೇಂದ್ರ. ಸಲ್ಲಿಸಿದರೂ ಹಣ ಬಂದಿಲ್ಲ: ರಾಜ್ಯದ ತಕರಾರು
ಗ್ರಾಮೀಣ ಸ್ಥಳೀಯ ಸಂಸ್ಥೆ	10,547	8,361	2,186	ಸಕಾಲದಲ್ಲಿ ಕೆಲಸ ಮಾಡಿಲ್ಲ, ಪ್ರಮಾಣ ಪತ್ರ ಸಲ್ಲಿಸಿಲ್ಲ ಎನ್ನುವುದು ಕೇಂದ್ರದ ವಾದ
ನಗರ ಸ್ಥಳೀಯ ಸಂಸ್ಥೆ	5,215	4,187	1,028	ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಬಿಎಗೆ ಚುನಾವಣೆ ನಡೆಸಿಲ್ಲ

ಈ ವರ್ಷ ₹63,049 ಕೋಟಿ ತೆರಿಗೆ ಪಾಲು

16ನೇ ಹಣಕಾಸು ಆಯೋಗವು ರಾಜ್ಯಕ್ಕೆ ಶೇ 4.13 ತೆರಿಗೆ ಪಾಲನ್ನು ಶಿಫಾರಸು ಮಾಡಿದೆ. ಈ ಶಿಫಾರಸಿನ ಪ್ರಕಾರ, 2026–27ರಲ್ಲಿ ಕರ್ನಾಟಕಕ್ಕೆ ₹63,049 ಕೋಟಿ ಸಿಗಲಿದೆ. ಇದು ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ₹7,500 ಕೋಟಿಯಷ್ಟು ಹೆಚ್ಚು.

ವಿಪತ್ತು ನಿರ್ವಹಣೆಗೆ ರಾಜ್ಯಕ್ಕೆ ಐದು ವರ್ಷಗಳ ಅವಧಿಗೆ ₹8,559 ಕೋಟಿ ಹಂಚಿಕೆ ಮಾಡಲಾಗಿದೆ. ಇದರಲ್ಲಿ ಎಸ್‌ಡಿಆರ್‌ಎಫ್‌ಗೆ ₹6,847 ಕೋಟಿ ಹಾಗೂ ಎಸ್‌ಡಿಎಂಎಫ್‌ಗೆ ₹1,712 ಕೋಟಿ. ಆದರೆ, ಇಲ್ಲಿ ಎಸ್‌ಡಿಆರ್‌ಎಫ್ ಹಾಗೂ ಎಸ್‌ಡಿಎಂಎಫ್‌ಗೆ ರಾಜ್ಯದ ಪಾಲು ತಲಾ ₹1,711 ಕೋಟಿ ಹಾಗೂ ₹428 ಕೋಟಿ.



15ನೇ ಹಣಕಾಸು ಆಯೋಗದ ತೆರಿಗೆ ಹಂಚಿಕೆ ಸೂತ್ರದ ಬದಲಾವಣೆಯಿಂದಾಗಿ ರಾಜ್ಯಕ್ಕೆ ₹80,000 ಕೋಟಿ ನಷ್ಟ ಆಗಿದೆ. ಹಣಕಾಸು ಆಯೋಗದ ಶಿಫಾರಸು, ಭದ್ರಾ ಮೇಲ್ದಂಡೆ ಅನುದಾನ, ಜಲ ಜೀವನ್ ಮಿಷನ್ ಸೇರಿದಂತೆ ವಿವಿಧ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುದಾನ ಕೊಡದ ಪರಿಣಾಮ ರಾಜ್ಯಕ್ಕೆ ಐದು ವರ್ಷಗಳಲ್ಲಿ ₹1.44 ಲಕ್ಷ ಕೋಟಿ ನಷ್ಟ ಉಂಟಾಗಿದೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ



ಕರ್ನಾಟಕ ಸರ್ಕಾರದ ನಿರ್ಲಕ್ಷ್ಯ, ಧೋರಣೆ ಹಾಗೂ ಅಸಮರ್ಥತೆಯಿಂದಾಗಿ ಅನುದಾನ ಬಿಡುಗಡೆ ಆಗಿಲ್ಲ. ರಾಜ್ಯ ಸರ್ಕಾರಕ್ಕೆ ಸಕಾಲಕ್ಕೆ ಕೆಲಸ ಮಾಡಿಲ್ಲ ಹಾಗೂ ಕೇಂದ್ರ ಸರ್ಕಾರಕ್ಕೆ ಪ್ರಮಾಣಪತ್ರವನ್ನೂ ಸಲ್ಲಿಸಿಲ್ಲ. ಜಲಜೀವನ್ ಮಿಷನ್‌ನಲ್ಲಿ ಅನುದಾನ ಬಿಡುಗಡೆಯಾಗದಿರಲು ರಾಜ್ಯ ಸರ್ಕಾರದ ಲೋಪವೇ ಕಾರಣ. ಇದಕ್ಕೆ ಕೇಂದ್ರ ಸರ್ಕಾರವನ್ನು ದೂರುವುದು ಸರಿಯಲ್ಲ.

ವಿ.ಸೋಮಣ್ಣ, ರೈಲ್ವೆ ಹಾಗೂ ಜಲಶಕ್ತಿ ಖಾತೆ ರಾಜ್ಯ ಸಚಿವ



ಬಿಹಾರ ರಾಜ್ಯದ ಮಗಧಾ ಗ್ರಾಮದ ಶೀತಲಾ ಮಾತಾ ದೇಗುಲದಲ್ಲಿ ಮಂಗಳವಾರ ಸಂಭವಿಸಿದ ಕಾಲ್ತುಳಿತದಿಂದ ದೇವಾಲಯದ ಹೊರಭಾಗದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಕುರ್ಚಿ– ಟೇಬಲ್‌ಗಳು – ಪಿಟಿಐ ಚಿತ್ರ

ಕಾಲ್ತುಳಿತ: ಒಂಬತ್ತು ಸಾವು

ಬಿಹಾರದ ಶೀತಲಾ ಮಾತಾ ದೇಗುಲದಲ್ಲಿ ದುರ್ಘಟನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಪಟ್ನಾ/ಬಿಹಾರ ಶರೀಫ್: ಬಿಹಾರದ ನಳಂದಾ ಜಿಲ್ಲೆಯ ಶೀತಲಾ ಮಾತಾ ದೇಗುಲದ ಆವರಣದಲ್ಲಿ ಮಂಗಳವಾರ ಬೆಳಿಗ್ಗೆ ಸಂಭವಿಸಿದ ಕಾಲ್ತುಳಿತದಲ್ಲಿ ಎಂಟು ಮಹಿಳೆಯರು ಸೇರಿ ಒಟ್ಟು ಒಂಬತ್ತು ಮಂದಿ ಮೃತಪಟ್ಟಿದ್ದು, 12 ಜನರು ಗಾಯಗೊಂಡಿದ್ದಾರೆ.

ದೇಗುಲದ ಆವರಣದಲ್ಲೇ ಎಂಟು ಮಹಿಳೆಯರು ಮೃತಪಟ್ಟರೆ, ಚಿಕಿತ್ಸೆಗಾಗಿ ಕರೆದೊಯ್ದಿದ್ದ ವ್ಯಕ್ತಿಯೊಬ್ಬರು ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ. ಬಿಹಾರ ಶರೀಫ್‌ನಿಂದ ಈ ದೇಗುಲ ಐದು ಕಿ.ಮೀ. ದೂರದಲ್ಲಿದೆ.

▶11

ಸರ್ಕಾರದ ಕೆಟ್ಟ ಆಡಳಿತದಿಂದ ದುರ್ಘಟನೆ ನಡೆದಿದೆ. ಇದರ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಿ

ತೇಜಸ್ವಿ ಯಾದವ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಕಾಲ್ತುಳಿತ ನೋವನ್ನುಂಟು ಮಾಡಿದೆ. ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ದುಃಖ ಭರಿಸುವ ಶಕ್ತಿ ಸಿಗಲಿ

ನರೇಂದ್ರ ಮೋದಿ, ಪ್ರಧಾನಿ

ನೂಕುನುಗ್ಗಲು...

‘ಆದಷ್ಟು ಬೇಗ ದರ್ಶನ ಪಡೆಯಲಿಕ್ಕಾಗಿ ಭಕ್ತರ ನಡುವೆ ನೂಕುನುಗ್ಗಲು ಉಂಟಾಗಿ ಈ ದುರ್ಘಟನೆ ಸಂಭವಿಸಿತು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು. ಸರತಿಯಲ್ಲಿ ನಿಂತಿದ್ದವರು ಒಬ್ಬರನ್ನೊಬ್ಬರು ತಳ್ಳಾಡಿದರು. ಸರತಿ ಸಾಲನ್ನು ತೊರೆದು ದೇವಿ ದರ್ಶನಕ್ಕೆ ಮುಂದಾದರು. ಆಗ ಮಹಿಳಾ ಭಕ್ತರು ನೆಲಕ್ಕೆ ಬಿದ್ದರು. ನೆಲಕ್ಕೆ ಬಿದ್ದವರನ್ನೇ ಹಲವರು ತುಳಿದರು. ತುಳಿತದಿಂದ ಕೆಲವರು ಪ್ರಜ್ಞಾಹೀನರಾದರು ಎಂದು ಘಟನೆಯ ಚಿತ್ರಣವನ್ನು ವಿವರಿಸಿದರು.

▶11

ಇರಾನ್ ಮೇಲೆ ಬಂಕರ್ ಬಾಂಬ್

ದುಬೈ (ಎಪಿ): ಇರಾನ್‌ನ ಪ್ರಮುಖ ಪರಮಾಣು, ಸೇನಾ ನೆಲೆ ಹೊಂದಿರುವ ಇಸ್ಫಹಾನ್ ನಗರದ ಮೇಲೆ ಅಮೆರಿಕ-ಇಸ್ರೇಲ್ ಸೇನೆಗಳು ಮಂಗಳವಾರ 2 ಸಾವಿರ ಪೌಂಡ್ (907 ಕೆ.ಜಿ.) ತೂಕದ ಬಂಕರ್ ಬ್ಲಾಸ್ಟರ್ ಬಾಂಬ್ ದಾಳಿ ನಡೆಸಿವೆ. ಇದರಿಂದ, ಇಡೀ ಆಕಾಶದಲ್ಲಿ ದಟ್ಟವಾದ ಹೊಗೆ, ಬೆಂಕಿ ಕಾಣಿಸಿಕೊಂಡಿದೆ. ದಾಳಿಯ ವಿಡಿಯೊವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ‘ಟ್ರೂತ್ ಸೋಷಿಯಲ್’ನಲ್ಲಿ ಹಂಚಿಕೊಂಡಿದ್ದಾರೆ. ಆದರೆ, ಹೆಚ್ಚಿನ ವಿವರ ನೀಡಿಲ್ಲ.

ಅಮೆರಿಕ, ಇಸ್ರೇಲ್ ತಿಂಗಳ ಹಿಂದೆ ಆರಂಭಿಸಿದ ಯುದ್ಧದ ಬಳಿಕ ಇರಾನ್ ಮೇಲೆ ನಡೆದ ಭೀಕರ ದಾಳಿಯಾಗಿದೆ. ಇದಕ್ಕೆ ಪ್ರತೀಕಾರವಾಗಿ ಕುವೈತ್‌ನ ತೈಲ ಹಡಗಿನ ಮೇಲೆ ಇರಾನ್ ಪ್ರತಿ ದಾಳಿ ನಡೆಸಿದೆ.

ಟೆಹರಾನ್ ನಗರದ ದಕ್ಷಿಣ ತುದಿಯಲ್ಲಿರುವ ಪರ್ವತ ಪ್ರದೇಶದಲ್ಲಿ ಸ್ಫೋಟ ಸಂಭವಿಸಿ ಬೆಂಕಿ ಕಾಣಿಸಿಕೊಂಡಿದ್ದು, ನಾಸಾ ಉಪಗ್ರಹಗಳು ಆ ದೃಶ್ಯಾವಳಿಯ ಚಿತ್ರಗಳನ್ನು ಸೆರೆ ಹಿಡಿದಿವೆ. ದಾಳಿ ನಡೆದಿರುವುದನ್ನು ಇರಾನ್‌ನ ‘ಫಾರ್ಸ್’ ಸುದ್ದಿಸಂಸ್ಥೆ ಖಚಿತಪಡಿಸಿದೆ.

▶10



ಇರಾನ್‌ನ ಇಸ್ಫಹಾನ್ ನಗರದ ಮೇಲೆ ಅಮೆರಿಕ–ಇಸ್ರೇಲ್ ವಾಯು ದಾಳಿ ನಡೆಸಿದ ನಂತರ ದಟ್ಟ ಹೊಗೆ ಆವರಿಸಿತ್ತು – ಎಎಫ್‌ಪಿ ಚಿತ್ರ

ನಮಗೆ ಒಂದು ಒಪ್ಪಂದ ಬೇಕು. ಒಂದು ವೇಳೆ ಒಪ್ಪಂದ ಆಗದಿದ್ದರೆ, ಬಾಂಬ್ ದಾಳಿ ಹಾಗೂ ಮಾತುಕತೆ ಒಟ್ಟಿಗೆ ಸಾಗಲಿವೆ

ಪೀಟ್ ಹೆಗ್ಸೆತ್, ಅಮೆರಿಕದ ರಕ್ಷಣಾ ಕಾರ್ಯದರ್ಶಿ

‘ಜಲಸಂಧಿ ಮುಚ್ಚಿದ್ದರೂ ಯುದ್ಧ ಅಂತ್ಯಕ್ಕೆ ಉತ್ಸುಕ’

ಹೊರ್ಮುಜ್ ಜಲಸಂಧಿಯು ಬಹುತೇಕ ಮುಚ್ಚಿದರೂ ಇರಾನ್ ವಿರುದ್ಧ ಅಮೆರಿಕದ ಸೇನಾ ಕಾರ್ಯಾಚರಣೆಯನ್ನು ಕೊನೆಗೊಳಿಸಲು ನಾನು ಮುಕ್ತನಾಗಿದ್ದೇನೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎಂದು ‘ವಾಲ್‌ಸ್ಟ್ರೀಟ್ ಜರ್ನಲ್’ ವರದಿ ಮಾಡಿದೆ.

▶10

ಎಶಾಫಿ ಹತ್ಯೆ

ಅಮೆರಿಕ-ಇಸ್ರೇಲ್ ಸೇನೆ ನಡೆಸಿದ ದಾಳಿಯಲ್ಲಿ ಇರಾನ್ ಸಶಸ್ತ್ರ ಪಡೆಗಳ ಮೇಜರ್ ಜನರಲ್ ಹಾಗೂ ಸೇನೆಯ ಪ್ರಧಾನ ಸಿಬ್ಬಂದಿ ಮುಖ್ಯಸ್ಥ ಜಮ್‌ಶಿದ್ ಎಶಾಫಿ ಮೃತಪಟ್ಟಿದ್ದಾರೆ ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ ಖಚಿತಪಡಿಸಿದೆ.

▶10

ಅಕ್ರಮ ಆಸ್ತಿ: ₹4.50 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತಿನ ಮಾಜಿ ಎಂ.ಡಿಗೆ ಮೂರು ವರ್ಷ ಜೈಲು
- ಘೋಷಿತ ಆದಾಯಕ್ಕಿಂತ ₹3.31 ಕೋಟಿ (ಶೇ 77.8) ಹೆಚ್ಚು ಆಸ್ತಿ ಹೊಂದಿದ ಪ್ರಕರಣ
- ತನಿಖೆ ಮತ್ತು ತಪಾಸಣೆಯಲ್ಲಿ ನಿರ್ಲಕ್ಷ್ಯ: ಮೂವರು ಅಧಿಕಾರಿಗಳಿಗೆ ತರಾಟೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣದಲ್ಲಿ ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತಿನ ಮಾಜಿ ವ್ಯವಸ್ಥಾಪಕ ನಿರ್ದೇಶಕ ವಿ. ಮುನಿಯಪ್ಪಗೆ ಲೋಕಾಯುಕ್ತ ನ್ಯಾಯಾಲಯವು 3 ವರ್ಷ ಜೈಲು ಮತ್ತು ₹4.50 ಕೋಟಿ ದಂಡ ವಿಧಿಸಿದೆ.

ವಿ.ಮುನಿಯಪ್ಪ ವಿರುದ್ಧ ಬಂದಿದ್ದ ದೂರುಗಳ ಆಧಾರದಲ್ಲಿ ಲೋಕಾಯುಕ್ತ ಸಂಸ್ಥೆಯು 2014ರಲ್ಲಿ ಪ್ರಕರಣ ದಾಖಲಿಸಿ, ದಾಳಿ ನಡೆಸಿತ್ತು. ಆ ವೇಳೆ ಅವರಿಗೆ ಸೇರಿದ ₹3.31 ಕೋಟಿ ಮೊತ್ತದಷ್ಟು ಅಕ್ರಮ ಆಸ್ತಿ ಪತ್ತೆಯಾಗಿತ್ತು. ಆರೋಪಿತರು ತಮ್ಮ ಘೋಷಿತ ಆದಾಯಕ್ಕಿಂತ ಶೇ 77.8ರಷ್ಟು ಹೆಚ್ಚು ಆಸ್ತಿ ಹೊಂದಿದ್ದಾರೆ ಎಂದು ತನಿಖಾಧಿಕಾರಿಗಳು ಲೋಕಾಯುಕ್ತ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

ನ್ಯಾಯಾಧೀಶ ಕೆ.ಎಂ.ರಾಧಾಕೃಷ್ಣ ಅವರು, ಮುನಿಯಪ್ಪ ತಪ್ಪಿತಸ್ಥ ಎಂದು ತೀರ್ಪು ನೀಡಿದ್ದಾರೆ. ಮೂರು ವರ್ಷ ಜೈಲು ಮತ್ತು ದಂಡ ವಿಧಿಸಿ ಶಿಕ್ಷೆ ಪ್ರಕಟಿಸಿದ್ದಾರೆ. ದಂಡ ಪಾವತಿ ಮಾಡದೇ ಇದ್ದರೆ ಹೆಚ್ಚುವರಿ ಆರು ತಿಂಗಳು ಸೆರೆವಾಸ ಅನುಭವಿಸಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಅಧಿಕಾರಿಗಳಿಗೆ ತರಾಟೆ: ಈ ಪ್ರಕರಣದ ತನಿಖೆ ಮತ್ತು ತಪಾಸಣಾ ವರದಿ ಸಲ್ಲಿಸುವಲ್ಲಿ ಲೋಪ ಎಸಗಿದ ಮೂವರು ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಏಕೆ ತೆಗೆದುಕೊಳ್ಳಬಾರದು ಎಂದು ನ್ಯಾಯಾಧೀಶರು ತರಾಟೆಗೆ ತೆಗೆದುಕೊಂಡಿದ್ದಾರೆ.

ಪ್ರಕರಣದಲ್ಲಿ ತನಿಖಾಧಿಕಾರಿಯಾಗಿದ್ದ ಪಿಐ ಟಿ.ವಿ.ಮಂಜುನಾಥ್, ತೋಟಗಾರಿಕಾ ಇಲಾಖೆಯ ಅಧಿಕಾರಿಗಳಾದ ನಾಗರಾಜ ಎಸ್., ಮತ್ತು ನಾರಾಯಣಸ್ವಾಮಿ ಅವರು ಮುನಿಯಪ್ಪ ಅವರ ಕೃಷಿ ಜಮೀನುಗಳಿಗೆ ಭೇಟಿ ನೀಡಿ ವರದಿ ಸಲ್ಲಿಸುವಲ್ಲಿ ಲೋಪ ಎಸಗಿದ್ದಾರೆ. ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸದೆಯೇ ವರದಿ ನೀಡಿದ್ದಾರೆ. ಕೃಷಿ ಮತ್ತು ತೋಟಗಾರಿಕಾ ವೆಚ್ಚದ ವಿವರವನ್ನು ಸರಿಯಾಗಿ ಒದಗಿಸಿಲ್ಲ. ಜೊತೆಗೆ, ಮುನಿಯಪ್ಪ ಅವರಿಗೆ ಅನುಕೂಲವಾಗುವಂತೆ ತಪಾಸಣಾ ವರದಿಯನ್ನು ಸಿದ್ಧಪಡಿಸಿದ್ದಾರೆ. ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ್ದಾರೆ ಎಂದು ನ್ಯಾಯಾಧೀಶರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ವಿವರಣೆ ನೀಡುವಂತೆ ಸೂಚಿಸಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ವರ್ಗಾವಣೆ: ಸ್ಥಳ ನಿಯುಕ್ತಿ ಕಡ್ಡಾಯ

ಪ್ರಜಾವಾಣಿ ವಾರ್ತೆ



ಶಾಲಿನಿ

ಮುಖ್ಯ ಕಾರ್ಯದರ್ಶಿ ಸೂಚನೆ

ಬೆಂಗಳೂರು: ‘ಯಾವುದೇ ಸರ್ಕಾರಿ ನೌಕರನನ್ನು ವರ್ಗಾವಣೆ ಮಾಡಿದ ಬಳಿಕ, ಸ್ಥಳ ನಿಯುಕ್ತಿಗಾಗಿ ಕಾಯುವಂತೆ ಮಾಡದೆ ಕಡ್ಡಾಯವಾಗಿ ಹುದ್ದೆ ನೀಡಬೇಕು’ ಎಂದು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚಿಸಿದ್ದಾರೆ.

ಈ ಕುರಿತು ಸುತ್ತೋಲೆ ಹೊರಡಿಸಿರುವ ಅವರು, ‘ಈ ಸೂಚನೆಯನ್ನು ಉಲ್ಲಂಘಿಸಿ ಸ್ಥಳ ನಿಯುಕ್ತಿ ನೀಡದೆ ಕಡ್ಡಾಯ ನಿರೀಕ್ಷಣೆಯಲ್ಲಿ ಇರಿಸಿದರೆ ಇತ್ತೀಚೆಗೆ ಹೈಕೋರ್ಟ್ ನೀಡಿರುವ ನಿರ್ದೇಶನದಂತೆ, ಅಂತಹ ಅಧಿಕಾರಿ, ನೌಕರರಿಗೆ ನಿರೀಕ್ಷಣೆಯ ಅವಧಿಗೆ ಪಾವತಿಸಿದ ವೇತನ ಮತ್ತು ಭತ್ಯೆಯನ್ನು ಸಂಬಂಧಿತ ಸಕ್ಷಮ ಪ್ರಾಧಿಕಾರಗಳಿಂದ ವಸೂಲಿ ಮಾಡಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ.

ಸ್ಥಳ ನಿಯುಕ್ತಿಗೊಳಿಸದೆ ತಮ್ಮನ್ನು ವರ್ಗಾವಣೆ ಮಾಡಿರುವುದನ್ನು ಪ್ರಶ್ನಿಸಿ ಅಬಕಾರಿ ಉಪ ಆಯುಕ್ತ ಕೆ. ಅರುಣ್ ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ‘ಯಾವುದೇ ನೌಕರರನ್ನು ಸ್ಥಳ ನಿಯುಕ್ತಿ ನೀಡದೆ ವರ್ಗಾವಣೆ ಮಾಡುವಂತೆ ಇಲ್ಲ. ಒಂದೊಮ್ಮೆ ಸ್ಥಳ ನಿಯುಕ್ತಿ ನೀಡದೇ ವರ್ಗಾವಣೆ ಮಾಡಿ ಕಡ್ಡಾಯ ನಿರೀಕ್ಷಣೆಯಲ್ಲಿ ಇರಿಸಿದರೆ ಆ ಅವಧಿಗೆ ಪಾವತಿಸಲಾದ ವೇತನ ಮತ್ತು ಭತ್ಯೆಯನ್ನು ಸಂಬಂಧಿತ ಸಕ್ಷಮ ಪ್ರಾಧಿಕಾರಗಳಿಂದ ವಸೂಲಿ ಮಾಡಬೇಕು’ ಎಂದು ತೀರ್ಪು ನೀಡಿತ್ತು.

ಹೈಕೋರ್ಟ್‌ನ ಈ ತೀರ್ಪನ್ನು ಸುತ್ತೋಲೆಯಲ್ಲಿ ಉಲ್ಲೇಖಿಸಿರುವ ಶಾಲಿನಿ ರಜನೀಶ್, ‘ಯಾವುದೇ ಸರ್ಕಾರಿ ನೌಕರರ ವರ್ಗಾವಣೆಯಾದ ಸಂದರ್ಭಗಳಲ್ಲಿ ತಕ್ಷಣವೇ ಕಡ್ಡಾಯವಾಗಿ ಸ್ಥಳ ನಿಯುಕ್ತಿ ನೀಡಬೇಕೆಂದು ಈ ಹಿಂದೆಯೇ ಸ್ಪಷ್ಟವಾದ ಸೂಚನೆ ನೀಡಲಾಗಿದೆ’ ಎಂದಿದ್ದಾರೆ.

▶4

30 ವರ್ಷಗಳಿಂದ 15 ವರ್ಷಗಳಿಗೆ ಇಳಿಸಲು ಕ್ರಮ ● ಸರ್ಕಾರದಿಂದ ಕರಡು ಅಧಿಸೂಚನೆ

ಖಾಸಗಿ ಶಾಲೆ: ಭೋಗ್ಯದ ಅವಧಿ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಶಿಕ್ಷಣ ಸಂಸ್ಥೆಗಳು ಹೊಸದಾಗಿ ಖಾಸಗಿ ಶಾಲೆ ಆರಂಭಿಸಲು ಸ್ವಂತ ಜಾಗ ಇಲ್ಲದಿದ್ದರೆ ಜಮೀನನ್ನು ಭೋಗ್ಯಕ್ಕೆ ಪಡೆಯಬೇಕಾದ ಕನಿಷ್ಠ ಅವಧಿಯನ್ನು 30 ವರ್ಷಗಳಿಂದ 15 ವರ್ಷಗಳಿಗೆ ಇಳಿಸಲು ಸರ್ಕಾರ ಮುಂದಾಗಿದೆ.

ಈ ಕುರಿತು ರಾಜ್ಯ ಸರ್ಕಾರವು ‘ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಪಠ್ಯಕ್ರಮದ ವರ್ಗೀಕರಣ, ನಿಯಂತ್ರಣ, ಶಿಫಾರಸು ಇತ್ಯಾದಿ) (ತಿದ್ದುಪಡಿ) ನಿಯಮಗಳು– 2026’ರ ಕರಡು ಅಧಿಸೂಚನೆ ಹೊರಡಿಸಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳು ಹೊಸದಾಗಿ ಖಾಸಗಿ ಶಾಲೆಗಳನ್ನು ಆರಂಭಿಸಬೇಕಾದರೆ ಸ್ವಂತ ಜಾಗ ಹೊಂದಿರಬೇಕು ಎಂಬ ನಿಯಮ ಜಾರಿಯಲ್ಲಿದೆ.

▶4

ಸ್ಥಳಾಂತರ ಶುಲ್ಕ ಹೆಚ್ಚಳ

ಹಳೆಯ ಮತ್ತು ಚಿಕ್ಕ ಕಟ್ಟಡಗಳಲ್ಲಿ ಇರುವ ಖಾಸಗಿ ಶಾಲೆಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಮತ್ತು ಆಡಳಿತ ಮಂಡಳಿ ಬದಲಾವಣೆಗೆ ಇದ್ದ ಶುಲ್ಕವನ್ನು ಹೆಚ್ಚಳ ಮಾಡಲೂ ಸರ್ಕಾರವು ಮುಂದಾಗಿದೆ.


ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಆಡಳಿತ ಮಂಡಳಿಯಲ್ಲಿ ಬದಲಾವಣೆ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗಳ ಸ್ಥಳದಲ್ಲಿ ಬದಲಾವಣೆ) (ತಿದ್ದುಪಡಿ) ನಿಯಮಗಳು, 2026ರ ಕರಡು ಅಧಿಸೂಚನೆ ಹೊರಡಿಸಲಾಗಿದೆ.

ಶಾಲೆ ವಿವರ	ಸ್ಥಳಾಂತರ ಶುಲ್ಕ	ಆಡಳಿತ ಮಂಡಳಿ ಬದಲಾವಣೆಗೆ ಶುಲ್ಕ
ಪ್ರಾಥಮಿಕ ಶಾಲೆ	₹50,000	₹1 ಲಕ್ಷ
ಪ್ರೌಢಶಾಲೆ	₹75,000	₹1.50 ಲಕ್ಷ
ಪದವಿಪೂರ್ವ ಕಾಲೇಜು	₹1 ಲಕ್ಷ	₹2 ಲಕ್ಷ

‘ಅನುಕೂಲವಾಗಲಿದೆ’

‘ಜಾಗವನ್ನು ಕನಿಷ್ಠ 30 ವರ್ಷಗಳವರೆಗೆ ಭೋಗ್ಯಕ್ಕೆ ಪಡೆಯಬೇಕು ಎಂಬ ನಿಯಮದಿಂದ ಹೊರೆಯಾಗುತ್ತಿತ್ತು. ಅದನ್ನು ಕಡಿಮೆ ಮಾಡಿ ಎಂದು ಸರ್ಕಾರಕ್ಕೆ ಮನವಿ ಮಾಡಿದ್ದೆವು. ಸರ್ಕಾರ ಅದಕ್ಕೆ ಸ್ಪಂದಿಸಿದ್ದು, ಇದರಿಂದ ಅನುಕೂಲವಾಗಲಿದೆ. ಆದರೆ, ಹಳೆಯ, ಚಿಕ್ಕ ಕಟ್ಟಡಗಳಲ್ಲಿ ಇರುವ ಶಾಲೆಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಇದ್ದ ಶುಲ್ಕವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಲಾಗಿದೆ. ಇದರಿಂದಾಗಿ ತೊಂದರೆಯಾಗಲಿದೆ. ಈ ಬಗ್ಗೆ ಆಕ್ಷೇಪ ಸಲ್ಲಿಸುತ್ತೇವೆ’ ಎಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘಟನೆ (ಕ್ಯಾಂಪ್ಸ್) ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ



ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಆಯೋಜಿಸಿರುವ 88ನೇ ಶ್ರೀರಾಮನವಮಿ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಮಲ್ಲಾಡಿ ಸಹೋದರರಾದ ಶ್ರೀರಾಮಪ್ರಸಾದ್ ಹಾಗೂ ರವಿಕುಮಾರ್ ಅವರು ಮಂಗಳವಾರ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ನಡೆಸಿಕೊಟ್ಟರು — ಪ್ರಜಾವಾಣಿ ಚಿತ್ರ

ಪುಸ್ತಕ ಖರೀದಿ: ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನದ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಏಪ್ರಿಲ್ ತಿಂಗಳು ಪೂರ್ತಿ ಪುಸ್ತಕಗಳ ಖರೀದಿ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಪ್ರಾಧಿಕಾರ ಕಚೇರಿ ಹೊಂದಿದೆ. ಆಸಕ್ತರು kuvempubhashabharathi.karnataka.gov.in ಮೂಲಕವೂ ಶೇ 50ರಷ್ಟು ರಿಯಾಯಿತಿಯಲ್ಲಿ ಪುಸ್ತಕಗಳನ್ನು ಖರೀದಿಸಬಹುದು ಎಂದು ರಿಜಿಸ್ಟ್ರಾರ್ ದತ್ತಪ್ಪ ಸಾಗನೂರ ತಿಳಿಸಿದ್ದಾರೆ.

‘ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಒದಗಿಸಿ’

ಬೆಂಗಳೂರು: ‘ಕೇಟರಿಂಗ್ ಮಾಡುವವರಿಗೂ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಸರಬರಾಜು ಮಾಡಬೇಕು’ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರೂ ಆಗಿರುವ ಎಸ್.ಎಸ್. ಕೇಟರಿಂಗ್‌ನ ಮಾಲೀಕ ರಥಯಾತ್ರೆ ಸುರೇಶ್ ಅವರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

‘ನಗರದಲ್ಲಿ ಸಾವಿರಾರು ಜನರು ಕೇಟರಿಂಗ್ ವ್ಯವಹಾರ ಮಾಡುತ್ತಿದ್ದು, ಲಕ್ಷಾಂತರ ಮಂದಿ ಅಡುಗೆ ಕೆಲಸದಲ್ಲಿ ತೊಡಗಿದ್ದಾರೆ. ಹೆಚ್ಚಿನ ಶುಭ ಸಮಾರಂಭಗಳಲ್ಲಿ ಊಟ–ತಿಂಡಿಯನ್ನು ಕೇಟರಿಂಗ್‌ನವರಿಗೆ ನೀಡಲಾಗುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಹೆಚ್ಚಾಗಿ ಮದುವೆ, ಉಪನಯನ, ಗೃಹಪ್ರವೇಶ ಕಾರ್ಯಕ್ರಮಗಳು ನಡೆಯಲಿವೆ. ಆದರೆ, ಅಡುಗೆ ತಯಾರಿಸಲು ಅಗತ್ಯದಷ್ಟು ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದೊರೆಯುತ್ತಿಲ್ಲ. ಇದರಿಂದ ಕೆಲ ಸಮಾರಂಭಗಳು ರದ್ದಾಗಿವೆ. ಹೋಟೆಲ್‌ಗಳಿಗೆ ಸರಬರಾಜು ಮಾಡಿದ ರೀತಿಯಲ್ಲೇ, ಕೇಟರಿಂಗ್‌ನವರಿಗೂ ಸರಬರಾಜು ಮಾಡಿ’ ಎಂದು ಒತ್ತಾಯಿಸಿದ್ದಾರೆ.

ಆಟೊರಿಕ್ಷಾ ಚಾಲಕರ ಪರದಾಟ

ಎಲ್‌ಪಿಜಿ ಕೊರತೆ: ಕೆಲ ಘಟಕಗಳಲ್ಲಿ ‘ದಾಸ್ತಾನು ಇಲ್ಲ’ ಫಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಆಟೊ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಘಟಕಗಳಲ್ಲಿ ಎಲ್‌ಪಿಜಿ ಕೊರತೆಯಿಂದಾಗಿ, ಆಟೊ ರಿಕ್ಷಾಗಳ ಸಂಚಾರದಲ್ಲಿ ಮಂಗಳವಾರ ಗಣನೀಯ ಇಳಿಕೆ ಕಂಡುಬಂದಿತು.

ಕೆಲ ಘಟಕಗಳಲ್ಲಿ ‘ದಾಸ್ತಾನು ಇಲ್ಲ’ ಎಂಬ ಫಲಕಗಳನ್ನು ಹಾಕಿದ ಪರಿಣಾಮ, ಆಟೊ ರಿಕ್ಷಾ ಚಾಲಕರು ಎಲ್‌ಪಿಜಿ ಇಂಧನಕ್ಕಾಗಿ 10 ಕಿ.ಮೀ.ಗಿಂತ ಅಧಿಕ ದೂರ ಸಂಚರಿಸಬೇಕಾಯಿತು. ಶೇಷಾದ್ರಿಪುರ, ಬಸವೇಶ್ವರ ನಗರ ಸೇರಿ ವಿವಿಧೆಡೆ ಇರುವ ಪ್ರಮುಖ ಆಟೊ ಎಲ್‌ಪಿಜಿ ಘಟಕಗಳಲ್ಲಿ ದಾಸ್ತಾನು ಖಾಲಿಯಾಗಿತ್ತು. ಇದರಿಂದಾಗಿ ಎಲ್‌ಪಿಜಿಯನ್ನು ಇಂಧನವಾಗಿ ಬಳಸುವ ಆಟೊ ರಿಕ್ಷಾ ಚಾಲಕರು ಸಮಸ್ಯೆ ಎದುರಿಸಿದರು.

‘ಒಂದು ತಿಂಗಳ ಹಿಂದೆ ಆಟೊ ಎಲ್‌ಪಿಜಿ ಬೆಲೆ ಲೀಟರ್‌ಗೆ ₹ 59 ರಷ್ಟಿತ್ತು. ಖಾಸಗಿ ಬಂಕ್‌ಗಳಲ್ಲಿ ಈಗ ಆ ದರ ₹ 85 ರಿಂದ ₹100ಕ್ಕೆ ಏರಿಕೆಯಾಗಿದೆ. ಕೆಲ ಖಾಸಗಿ ನಿರ್ವಾಹಕರು ₹ 115ರವರೆಗೆ ಶುಲ್ಕ ವಿಧಿಸುತ್ತಿದ್ದಾರೆ’ ಎಂದು ಆಟೊ ರಿಕ್ಷಾ ಚಾಲಕರು ತಿಳಿಸಿದರು.

‘ಆಟೊ ಎಲ್‌ಪಿಜಿ ಕೊರತೆ ಯಾವುದೇ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿಲ್ಲ. ಎಂಜಿ ರಸ್ತೆ, ಜೆ.ಸಿ. ನಗರ, ಹಲಸೂರು, ಆಡುಗೋಡಿ, ಇಂದಿರಾನಗರ ಸೇರಿ ನಗರದ ವಿವಿಧೆಡೆ ಇರುವ ಬಂಕ್‌ಗಳಲ್ಲಿ ಎಲ್‌ಪಿಜಿ ಸಿಗುತ್ತಿಲ್ಲ’ ಎಂದು ಚಾಲಕರು ಬೇಸರ ವ್ಯಕ್ತಪಡಿಸಿದರು.

ಎಲ್‌ಪಿಜಿ ಕೊರತೆಯಿಂದಾಗಿ, ಅನೇಕ ಬಂಕ್‌ಗಳ ಮುಂಭಾಗ ಆಟೊ ರಿಕ್ಷಾಗಳು ಸಾಲುಗಟ್ಟಿ ನಿಂತ ದೃಶ್ಯ ಮಂಗಳವಾರ ಕಂಡುಬಂದಿತು.

‘ಎಲ್‌ಪಿಜಿ ಕೊರತೆಯು ನಗರದ ಖಾಸಗಿ ವಿತರಣಾ ಕೇಂದ್ರಗಳಿಗೆ ಮಾತ್ರ ಸೀಮಿತವಾಗಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್, ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್‌ನ ಎಲ್‌ಪಿಜಿ ಕೇಂದ್ರಗಳಲ್ಲಿ ಇಂಧನ ಪೂರೈಕೆ ಆಗುತ್ತಿದೆ. ಬೆಂಗಳೂರಿನಲ್ಲಿ ಸುಮಾರು 40 ಬಂಕ್‌ಗಳಿದ್ದು, ಅಲ್ಲಿ ಎಲ್‌ಪಿಜಿ ಲಭ್ಯತೆಯು ಸಮಸ್ಯೆಯಾಗಿಲ್ಲ’ ಎಂದು ಅಧಿಕಾರಿಯೊಬ್ಬರು ಹೇಳಿದರು.



ಮೈಸೂರು ರಸ್ತೆಯಲ್ಲಿರುವ ಎಲ್‌ಪಿಜಿ ಘಟಕವೊಂದರ ಮುಂಭಾಗ ಆಟೊ ರಿಕ್ಷಾಗಳು ಸಾಲುಗಟ್ಟಿ ನಿಂತಿರುವ ದೃಶ್ಯ ಮಂಗಳವಾರ ಕಂಡುಬಂತು — ಪ್ರಜಾವಾಣಿ ಚಿತ್ರ

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ (ಕ್ಯೂಎ/ಕ್ಯೂಸಿ), ವಲಯ–1, 4ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 30ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜಯನಗರ 4ನೇ ಬ್ಲಾಕ್, ಬೆಂಗಳೂರು – 560011.

ಸಂಖ್ಯೆ:ಕಾಅ(ಕ್ಯೂಎ/ಕ್ಯೂಸಿ)/ವ-1/ಬೆಂದನಪಾ/ಟೆಂಡರ್/04/2025-26/ಕರೆ-2 ದಿನಾಂಕ: 31-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರೆ–2)

(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗ, ವಲಯ–1, ಬೆಂದನಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನಾ ನಿರ್ವಹಣೆಗೆ ಸಮಾಲೋಚನಾ ಸೇವೆಗಳಿಗಾಗಿ ಇದೇ ವಿಧದ ಕಾಮಗಾರಿಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಮನವಿ ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ವಾರ್ಡ್ ಸಂಖ್ಯೆ. 182, ಪದ್ಮನಾಭನಗರದಲ್ಲಿ ಅಸ್ತಿತ್ವದಲ್ಲಿರುವ ರಸ್ತೆಗಳಲ್ಲಿ ಕಾಂಕ್ರೀಟ್ ರಸ್ತೆ ಮರು ನಿರ್ಮಾಣ / ಒದಗಿಸುವುದು. ಚರಂಡಿಗಳು ಮತ್ತು ಪಾದಚಾರಿ ಮಾರ್ಗದ ಸುಧಾರಣೆಗಳ ಕಾಮಗಾರಿಗೆ ಮೇಲ್ವಿಚಾರಣೆ ಹಾಗೂ ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. (ಕರೆ–2) – ಯೋಜನೆಯ ಮೊತ್ತ (ರೂ. ಲಕ್ಷಗಳಲ್ಲಿ): 500.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 14,800/–

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **01–04–2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **06–04–2026 ರಂದು ಬೆಳಿಗ್ಗೆ 11.30 ಗಂಟೆಗೆ ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ಕಛೇರಿ, ಬೆಂದನಪಾ, 4ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 30ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜಯನಗರ 4ನೇ ಬ್ಲಾಕ್, ಬೆಂಗಳೂರು – 560011** ಇಲ್ಲಿ ನಡೆಯುವುದು. 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **08–04–2026 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **09–04–2026 ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ), ವಲಯ–1, ಬೆಂದನಪಾ.

ಪಿ.ಎಂ ಪೋಷಣ್ (ಮ.ಉ.ಯೋ) ಯೋಜನೆ, ಜಿಲ್ಲಾ ಪಂಚಾಯತ್, ಕೋಲಾರ

ದೂರವಾಣಿ ಸಂಖ್ಯೆ: 08152–241477, ಇ–ಮೇಲ್: eokolmms@ya hoo.co.in

ಸಂಖ್ಯೆ:ಜಿ.ಪಂ.ಕೋ/ಪಿ.ಎಂ.ಪೋಷಣ್/ಆ.ಧಾ.ಸಾ.ಟೆ/2025–26

ದಿನಾಂಕ:24.03.2026

ಇ–ಟೆಂಡರ್ ಪ್ರಕಟಣೆ – 2ನೇ ಕರೆ (ಇ–ಪ್ರೊಕ್ಯೂರ್‌ಮೆಂಟ್–KPPP ಪ್ಲಾಟ್‌ಫಾರಂ ಮೂಲಕ)

ಪಿ.ಎಂ ಪೋಷಣ್ ಯೋಜನೆಯಡಿ ಕೋಲಾರ ಜಿಲ್ಲೆಯ 06 ತಾಲ್ಲೂಕುಗಳ ಕೆ.ಎಫ್.ಸಿ.ಎಸ್.ಸಿ ಸಗಟು ಮಳಿಗೆಗಳಿಂದ ಆಯಾ ತಾಲ್ಲೂಕಿನ ಶಾಲಾ ಅಡುಗೆ ಕೇಂದ್ರಗಳಿಗೆ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲು, ಸಾಗಾಣಿಕಾ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಆಯಾ ತಾಲ್ಲೂಕುವಾರು ಪ್ರತ್ಯೇಕ 2ನೇ ಕರೆ ಇ–ಟೆಂಡರ್‌ಗಳನ್ನು **(RDPR/2025-26/SE3436/ CALL-2=** ಕೋಲಾರ ತಾಲ್ಲೂಕು, **RDPR/2025-26/SE3439/ CALL-2=** ಬಂಗಾರಪೇಟೆ ತಾಲ್ಲೂಕು, **RDPR/2025-26/SE3440/ CALL-2=** ಮಾಲೂರು ತಾಲ್ಲೂಕು, **RDPR/2025-26/SE3441/ CALL-2 =** ಮುಳಬಾಗಿಲು ತಾಲ್ಲೂಕು & **RDPR/2025-26/SE3442/ CALL-2 =** ಶ್ರೀನಿವಾಸಪುರ ತಾಲ್ಲೂಕು) ಈ ಕಛೇರಿ ಪತ್ರ ಸಂಖ್ಯೆ: ಜಿ.ಪಂ.ಕೋ/ ಪಿ.ಎಂ.ಪೋಷಣ್/ ಆ.ಧಾ.ಸಾ.ಟೆ/ 2025–26 ದಿನಾಂಕ: 12.03.2026 ರಂತೆ ಕರೆಯಲಾಗಿರುತ್ತದೆ ಟೆಂಡರ್ **ಅಂದಾಜು ಮೌಲ್ಯ ರೂ. 49.56 ಲಕ್ಷಗಳು** ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 10.04.2026 ಸಂಜೆ 04:30 ಗಂಟೆ.** ಹೆಚ್ಚಿನ ವಿವರಗಳಿಗಾಗಿ ಶಿಕ್ಷಣಾಧಿಕಾರಿಗಳು, ಪಿ.ಎಂ ಪೋಷಣ್ ಯೋಜನೆ, ಜಿಲ್ಲಾ ಪಂಚಾಯತ್ ಕೋಲಾರ **08152–241477 / 6360297404** ಗೆ ಕಛೇರಿ ಕೆಲಸದ ಅವಧಿಯಲ್ಲಿ ಸಂಪರ್ಕಿಸಬಹುದು.

ಸಹಿ/– ಶಿಕ್ಷಣಾಧಿಕಾರಿಗಳು, ಪಿ.ಎಂ ಪೋಷಣ್ ಯೋಜನೆ
ಜಿಲ್ಲಾ ಪಂಚಾಯತ್, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:557/ಕೆಎಸ್‌ಎಂಸಿಎ/2026–27

ಕೆಆರ್.ಪುರಂನಲ್ಲಿ ಮಲಬಾರ್‌ನ ನೂತನ ಶೋರೂಂ ಉದ್ಘಾಟನೆ

ವಿಶೇಷ ಕೊಡುಗೆಗಳೊಂದಿಗೆ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ನೂತನ ಮಳಿಗೆಗೆ ಚಾಲನೆ, ಚಿತ್ರನಟಿ ಶ್ರೀನಿಧಿಶೆಟ್ಟಿ ಉದ್ಘಾಟನೆ

ಬೆಂಗಳೂರು: ಜಾಗತಿಕ ಮಟ್ಟದ ಜ್ಯುವೆಲ್ಲರಿ ಕ್ಷೇತ್ರದಲ್ಲಿ ಪ್ರಮುಖ ಸ್ಥಾನ ಪಡೆದಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬೆಂಗಳೂರಿನ ಕೆಆರ್.ಪುರಂನಲ್ಲಿ ತನ್ನ ನೂತನ ಶೋರೂಂ ಆರಂಭಿಸಿದೆ. ಆ ಮೂಲಕ ಬೆಂಗಳೂರಿನಲ್ಲಿ ಮಲಬಾರ್ ಸಂಸ್ಥೆಯ ಮಳಿಗೆಗಳ ಸಂಖ್ಯೆ 24ಕ್ಕೆ ಏರಿಕೆಯಾಗಿದ್ದು, ಕರ್ನಾಟಕ ಮತ್ತು ಗೋವಾ ವಲಯದಲ್ಲಿ ಒಟ್ಟು 46 ಶೋರೂಂಗಳು ಕಾರ್ಯನಿರ್ವಹಿಸುತ್ತಿವೆ. ಸಮಾರಂಭದಲ್ಲಿ ಖ್ಯಾತ ಚಲನಚಿತ್ರ ನಟಿ ಶ್ರೀನಿಧಿ ಶೆಟ್ಟಿ ಶೋರೂಂ ಉದ್ಘಾಟಿಸಿದ್ದು, ಈ ಸಂದರ್ಭದಲ್ಲಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು ಸೇರಿದಂತೆ ಗಣ್ಯರು ಪಾಲ್ಗೊಂಡಿದ್ದರು.

ವಿಶೇಷ ಸಂಗ್ರಹಗಳು ಮತ್ತು ಗ್ರಾಹಕ ಸ್ನೇಹಿ ಪರಿಸರ: ಜಾಗತಿಕ ಗುಣಮಟ್ಟಕ್ಕೆ ಅನುಗುಣವಾಗಿ ವಿನ್ಯಾಸಗೊಳಿಸಲಾದ ಈ ಶೋರೂಂನಲ್ಲಿ ಚಿನ್ನ, ವಜ್ರ, ಪ್ಲಾಟಿನಂ ಮತ್ತು ಅಮೂಲ್ಯ ರತ್ನಗಳ ವಿಶಿಷ್ಟ ವಿನ್ಯಾಸದ ಆಭರಣಗಳು ಲಭ್ಯವಿವೆ. ಮದುವೆಯ ಆಭರಣಗಳು, ಹಬ್ಬದ ವಿಶೇಷ ಸಂಗ್ರಹಗಳು ಹಾಗೂ ದೈನಂದಿನ ಬಳಕೆಯ ಆಧುನಿಕ ಶೈಲಿಯ ಆಭರಣಗಳು ಇಲ್ಲಿನ ಪ್ರಮುಖ ಆಕರ್ಷಣೆಯಾಗಿದೆ.

ಗ್ರಾಹಕರಿಗೆ ವಿಶೇಷ ಕೊಡುಗೆಗಳು: ನೂತನ ಶೋರೂಂ ಉದ್ಘಾಟನೆಯ ಅಂಗವಾಗಿ ಗ್ರಾಹಕರಿಗೆ ಆಕರ್ಷಕ ರಿಯಾಯಿತಿಗಳನ್ನು ಘೋಷಿಸಲಾಗಿದೆ. ಚಿನ್ನ, ಅನ್‌ಕಟ್ ಮತ್ತು ರತ್ನದ ಆಭರಣಗಳ ತಯಾರಿಕಾ ವೆಚ್ಚದ ಮೇಲೆ 40% ವರೆಗೆ ರಿಯಾಯಿತಿ, ವಜ್ರದ ಮೌಲ್ಯದ ಮೇಲೆ 30% ವರೆಗೆ ರಿಯಾಯಿತಿ, ಅಕ್ಷಯ ತೃತೀಯ ನಿಮಿತ್ತ 10% ಮುಂಗಡ ಕಾಯ್ದಿರಿಸುವಿಕೆಯೊಂದಿಗೆ ಉಚಿತ ಬೆಳ್ಳಿ ನಾಣ್ಯ ಹಳೆಯ ಚಿನ್ನದ ವಿನಿಮಯದ ಮೇಲೆ 0% ಕಡಿತ ಹಾಗೂ ಗರಿಷ್ಠ ನಗದು ಮೌಲ್ಯದೊಂದಿಗೆ ಅದೇ ದಿನ ಹಣ ಪಾವತಿಯ ಭರವಸೆಯನ್ನು ನೀಡಲಾಗಿದೆ.

ಪಾರದರ್ಶಕತೆ ಮತ್ತು ಗುಣಮಟ್ಟ: 'ಬೆಂಗಳೂರು ಮಾರುಕಟ್ಟೆಯಲ್ಲಿ ಗುಣಮಟ್ಟ ಮತ್ತು ವಿನ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಕೆಆರ್.ಪುರಂನ ವಸತಿ ಪ್ರದೇಶದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ಗ್ರಾಹಕರಿಗೆ ಸುಲಭವಾಗಿ ತಲುಪುವ ಉದ್ದೇಶದಿಂದ ಈ ಶೋರೂಂ ತೆರೆಯಲಾಗಿದೆ. ಇಲ್ಲಿನ ಎಲ್ಲಾ ಆಭರಣಗಳು ಎಚ್‌ಯುಐಡಿ ಪ್ರಮಾಣೀಕೃತವಾಗಿದ್ದು, 'ಒನ್ ಇಂಡಿಯಾ ಒನ್ ಗೋಲ್ಡ್ ರೇಟ್" ನೀತಿಯಡಿ ದೇಶಾದ್ಯಂತ ಏಕರೂಪದ ದರವನ್ನು ಹೊಂದಿವೆ' ಎಂದು ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂ.ಪಿ.ಅಹಮ್ಮದ್ ತಿಳಿಸಿದ್ದಾರೆ.

ಮಲಬಾರ್ ಗೋಲ್ಡ್ ಹಿನ್ನೆಲೆ: 1993 ರಲ್ಲಿ ಸ್ಥಾಪಿತವಾದ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಇಂದು ವಿಶ್ವದ 5ನೇ ಅತಿದೊಡ್ಡ ಜ್ಯುವೆಲ್ಲರಿ ರಿಟೇಲರ್ ಆಗಿ ಬೆಳೆದಿದೆ. 14 ದೇಶಗಳಲ್ಲಿ 425ಕ್ಕೂ ಹೆಚ್ಚು ಶೋರೂಂಗಳನ್ನು ಹೊಂದಿರುವ ಈ ಸಂಸ್ಥೆಯು ತನ್ನ ಲಾಭದ 5% ರಷ್ಟನ್ನು ಸಮಾಜ ಸೇವಾ ಚಟುವಟಿಕೆಗಳಿಗೆ ಮೀಸಲಿಡುತ್ತಿದೆ.



ಬೆಂಗಳೂರಿನ ಕೆಆರ್.ಪುರಂನಲ್ಲಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ನೂತನ ಮಳಿಗೆಯನ್ನು ಖ್ಯಾತ ಚಲನಚಿತ್ರ ನಟಿ ಶ್ರೀನಿಧಿ ಶೆಟ್ಟಿ ಉದ್ಘಾಟಿಸಿದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT

PUBLIC NOTICE

IN THE HIGH COURT OF KARNATAKA AT BANGALORE ORIGINAL JURISDICTION

In the matter of the assets of the deceased Shreyance Cebastian Shaw (Died Intestate)
PROBATE C.P NO. 10 OF 2024

BETWEEN:
1. Mr. Sujay Kumar Shaw, Son of Sunil Kumar Shaw, Aged about 69 Years, Residing at Villa No.41, Heritage County, Thindlu Village Road Sarjapura, Bangalore-562125
2. Mrs. Adeline Shaw, Wife of Mr. Sujay Kumar Shaw, Aged about 76 Years, Residing at Villa No.41, Heritage County, Thindlu Village Road, Sarjapura, Bangalore-562125
3. Shradha Silvia Shaw, Daughter of Mr. Sujay Kumar Shaw, Wife of Mr. Cyril Shelke, Aged about 33 Years, Residing at 678, Choctaw, Dr San Jose 95123, California represented by her GPA holder Mr. Sujay Kumar Shaw — PETITIONERS

VS
NIL — RESPONDENT

Whereas the Petitioners above named have made the Petition under Section 278 Part IX Chapter IV of the Indian Succession Act, 1925 for grant of Letters of Administration of the properties of the deceased Late Mr. Shreyance Cebastian Shaw (hereinafter referred to as the ‘deceased’), who died intestate on 01.05.2021, the Deceased was aged 33 years and he was residing at Villa No.41, Heritage County, Thindlu Village Road, Sarjapura, Bangalore-562125, which falls within the jurisdiction of this Hon'ble Court.

BE IT KNOWN that no Caveat has been entered and that the said Petition is posted for hearing on **21.04.2026** and all persons claiming to have any interest in the estate of the Deceased may come and see the proceedings before the grant of Letters of Administration.

Given under my hand and Seal of this Court, this the **11th day of March 2026**

By Order of the Hon'ble High Court of Karnataka
Assistant Registrar
High Court of Karnataka, Bengaluru

ADVOCATE FOR PETITIONERS
Tia Law Chambers,
Smt. Reena Monica, Advocate,
No. 11, Charles Campbell Road
Cox Town, Bengaluru-560005

CONVENTION CENTRE

A management contractor is needed to a well-constructed and equipped Sidhartha Convention Centre (Sidhartha Kalyana Mantapa) located in C.A Site No. 17, 26th Main, 25th ‘A’ Cross, HSR Layout, 2nd Sector, Bangalore - 560102.
Interested persons / firms / companies with sufficient experience in managing such Centre successfully may contact the Manager within Thirty days of this advertisement to collect copy of the tender papers, and to resubmit the tender on or before 5 pm on Thursday the 30th April 2026. Manager: Mob: 6361983274

GREENCITY HOSPITAL
No.726, 17th Cross, 6th Phase J.P. Nagar, Bangalore- 560078
Mob: 9900255222/ 9008414947
DISPOSAL OF HOSPITAL MEDICAL RECORDS
Hospital Medical Records of IN-PATIENTS pertaining to the period 1.1.2018 to 31.12.2020 will be disposed
For retrieval of any specific record, may kindly approach the undersigned within 30 days from the date of this notice.
NOTE: These records will not be available after that
Management
Greencity Hospital, Bangalore

ADITYA PUBLIC HIGH SCHOOL
607, 21st Cross, Laxman Rao Nagar, Koramangala, Vivekanagar (Post), B-47.
REQUIRED TEACHER'S
Teach from LKG to 10th Std for all the Subjects
Qualification: SSLC, PUC, NTT, TCH, D.Ed, Degree, B.Ed
Contact Immediately
8073093749
9481255196
9980876238

JOB OPPORTUNITIES

Teachers/ Professors

ANGELS HIGH School M.C.Layout, Vijayanagar, Bangalore. Required Experienced Nursery Teachers, Science & Maths for High School and Coordinator. 8431812577/ 9986555788.

CAMLIN ENGLISH School State Board 6th 'C' Main, 4th Cross, Hampinagar Bengaluru-560104 080-23301363 REQUIRES TEACHERS for High, Middle and Primary School. English, Kannada, Maths, Science, Social Computer, Physical Education. WALK-IN INTERVIEW or Resume to Email: camlinschool84@gmail.com

REQUIRED EXPERIENCED Primary and High School Teachers with B.A / B.Sc, B.Ed / M.A / M.Sc, M.Ed to teach Science, Social Science, Mathemetics, English, Hindi & PE Teacher. Required Librarian, Lab Assistant & Drivers. Walk-in-interview. Contact: Lalith Castle International School, Rajarajeshwari Nagar, Blore-98. Mob: 9620464800 Email: lcis.rrnagar@gmail.com

WANTED PRIMARY TEACHERS, High-School English and PE TEACHER, Economics Lecturer for PU. 'DVS INSTITUTION' Sunkadakatte, Magadi Main Raod, Bengaluru-91 Contact: 9535305299

Deccan International School
#11, 18th Main Rd, Brindavan Layout, Padmanabhanagar, Bengaluru, Karnataka 560061
JOB OPPORTUNITY
Positions open
- **Cambridge Teachers** — Primary (English, Maths & Science); Senior - IGCSE, AS & A level (Economics)
  - Bachelor's or Master's degree with BEd
- **Student Counsellor Primary School**
  - Bachelor's or Master's degree in Psychology, Counselling, / Child Development
  - Certification or diploma in School Counselling
- **High School Teacher** — History & English
  - Master's degree with BEd
- **Junior & Middle School Teacher**
  - Computer Science & Hindi : Bachelor's degree with BEd
  - Art Teacher : BFA or MFA
- **French Teacher**
  - Bachelor's or Master's degree with BEd
- **School Librarian**
  - B.Lib.Sc/ M.Lib.Sc
- **Drama Teacher:**
  - Bachelor's or Master's degree along with certification in Theatre Arts
- **Tour & Outdoor Activity Coordinator**
  - Bachelor's degree in Administration, Management, Tourism or related field.
  - Experience in Educational Tours, outdoor activities & event management.
- **Flute and Mridangam Teacher**
  - Part-time

Minimum 3 to 5 years of relevant experience is mandatory.
✓ Attractive compensation package commensurate with qualification & experience.
✓ We are equal opportunity employer.
Candidates are required to forward the CV with their photograph
work@deccan.edu.in

ST.CHARLES HIGH SCHOOL#1086 1st Block,3rd Stage Adarsha Layout Basaveshwaranagar Bangalore-79. Phone:080-23235220/ 9449150749. Invites the Applications from Trained and Experienced English Medium-Teachers for Nursery,Primary,and High School to teach all the Subjects including-Computer,CP.Ed and Drawing.Qualification required:NTT,TCH D.Ed,B.Sc B.Ed,BA B.Ed.

WANTED ENGLISH and SOCIAL STUDIES TEACHERS for High School Salary Negotiable. Walk-in-Interview on working days 'JNANADEEPTHI ENGLISH SCHOOL', #56, 6th Main, Avalahalli, BDA Layout, Girinagar, Bangalore-85. Phone: 26748056 (Near 36A Bus-stop)

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಎನ್ ಟಿ ಸಿ ಫೈನಾನ್ಸ್ (ಪ್ರೈವೇಟ್) ಲಿಮಿಟೆಡ್
NTC FINANCE(P)LTD
Regd Office : 17/790 C.D.E.F ಹೊಸ ತ್ರಿಚೂರ್ ಭವನ P.O ಕಂದಸ್ಸಂಕಡವು, ತ್ರಿಶೂರ್–680613
Email: mail@ntcfinance.in Phone: 9207704066.
CIN: U65910KL1984PTC046639 GSTIN: 29AAECA1755B1Z0

ನೋಟೀಸ್

ಕಟ್ಟಡ ಸಂಖ್ಯೆ 11, ಅಂಗಡಿ ಸಂಖ್ಯೆ 4, 1 ನೇ ಮಹಡಿ, 1 ನೇ ಮುಖ್ಯ ರಸ್ತೆ, ಉದಯನಗರ, ವಾರ್ಡ್ ಸಂಖ್ಯೆ.56, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ಕರ್ನಾಟಕ–560016ರಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಮ್ಮ ಶಾಖೆಯನ್ನು ಉತ್ತಮ ಅನುಕೂಲಕ್ಕಾಗಿ ದಿನಾಂಕ 11.05.2026 ರಂದು ಕೊಠಡಿ ಸಂಖ್ಯೆ.19, ವಾರ್ಡ್ ಸಂಖ್ಯೆ–56, ಎ.ನಾರಾಯಣಪುರ, ಉದಯ ನಗರ ಬೆಂಗಳೂರು, ಕರ್ನಾಟಕ–560016 ಇಲ್ಲಿಗೆ ಸ್ಥಳಾಂತರಿಸ ಲಾಗುವುದು ಎಂದು ಎಲ್ಲರಿಗೂ ತಿಳಿಸಲು ಬಯಸುತ್ತೇವೆ. **(ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಸಂಪರ್ಕಿಸಿ: 9633567336, 9207704066)**

Date: 16.02.2026
ಉದಯನಗರ,
ಎನ್ ಟಿ ಸಿ ಫೈನಾನ್ಸ್ (ಪ್ರೈವೇಟ್) ಲಿಮಿಟೆಡ್
ಸಹಿ/– ವ್ಯವಸ್ಥಾಪಕ ನಿರ್ದೇಶಕರು

General

HIRING EDUCATION COUNSELLOR
Experience: Minimum 6 Years (Education background preferred)
Candidates Profile: We are looking for a proactive professional with a background education. The ideal candidate must be willing to travel and represent the institution at schools, colleges, and career fairs to drive lead generation and outreach.
Contact: Please share your resume at msracademia2025@gmail.com

V&V GROUP/ BFB, Behind IIMB, Bannerghatta Road Wanted Immediatetly OFFICE MANAGER, RECEPTIONIST, TELECALLERS, SALES EXECUTIVES. Good Salary. Call: 99000-54468

Wanted

WANTED: OFFICE Executive (Male/ Female) for a Hydraulic Trading Company to take care of day to day office work (Qtn, Invoice, Eway bill making, keeping Inventory Records etc). Computer skills must. E-Mail resume to: vandec.office@gmail.com. WALK IN INTERVIEW VANDEC, 47, RAR MANSION, 1ST MAIN ROAD, ROYAN CIRCLE, CHAMRAJPET, BLR-18, PHONE: 41223132/ 9886477315

Domestic Helpers / Housekeeping

WANTED IMMEDIATELY HOUSEKEEPING STAFF 20 NO's (ONLY MALE CANDIDATE) LOCATION HORNADU ANNAPOORNESHWARI TEMPLE SALARY 15000 FOR 8 HRS, PLUS OT, ESI & PF, FREE FOOD & ACCOMODATION. CONTACT:- 6366521234 / 9620627627

Walk-in

URBAN PROPERTIES
Real Estate Developer
WANTED
GENERAL MANAGER — Salary upto 1 to 1.5 Lacs
Sr SALES MANAGER — Salary upto 35K to 70K
LEGAL ADVISOR — Salary upto 70K to 1 Lac
ADMIN-CUM ACCOUNTANT (F) — Salary upto 30K to 40K
Languages known Kannada, English
Good Communication & Experience in relevant field
3 ongoing Project
Place: JIGANI, BANGALORE
Contact : 6366941643
Email id: info@theurbanproperties.co.in

Multiple Vacancy

WANTED : Graphic Designers, Telesales Execs, Field Sales Execs, Sales Officers for HBR Layout Bangalore office. Immediate Appt. Ph: 6366367263, 9900096774. hr@papierhygiene.com

Graphic Designers

REQUIRED GRAPHIC Designer– Photoshop/ Corel Draw/ Illustrator Experience 1 Year or above in around Rajajinagar. Contact: 9902891620/ 9845579620

HRD & Admin

WANTED Female Office Assistant Any Degree Knowing Tally, Fluent In English, Kannada, Hindi Around Rajajinagar Contact: 9902891620/ 9845579620

Marketing & Sales

WANTED SALES Managers, Sales Executives, Telecallers. Opportunity to earn up to 40,000 P.M. Contact 8867627879

Drivers

WANTED PERSONAL CAR DRIVER (KIA/MG HECTOR) with valid licence. Location: Bommanahalli OR Kadubeesanahalli Contact: 9980140661

AUTOMOTIVE

Four Wheelers Selling

Benz

MERCEDES BENZ GLS450D 2025 MODEL SOLITURE BLUE 11,500 KMS, BRAND NEW CAR FOR SALE EX-SHOWROOM PRICE: 1.25 CRORES, DIRECT BUYERS ONLY. CONTACT: 9036051000/ 9035011001.

PERSONAL

Change of Name

I, SEVIYAR Joseph Kachappilly, residing at Mesemane, Bale, Narasimharajapura, Chikkamagaluru, 577134 hereby declare that my name as mentioned in my passport is Seviyar Joseph Kachappilly. I have corrected my name to Seviyar Kachappilly Joseph. Henceforth, I shall be known as Seviyar Kachappilly Joseph for all purposes. Also, my spouse name earlier mentioned as Laly should be read as Laly Joseph as per her passport.

ಹೆಸರು ಬದಲಾವಣೆ
ನಾನು, **ಕೃಷ್ಣ** S/o ಲೇಟ್ ಅನಂತ ಸಿದ್ದಿ, #ಎ10, ರಾಮನಗರ, ಗುಳ್ಳಾಪುರ, ಉತ್ತರ ಕನ್ನಡ, ಕರ್ನಾಟಕ–581337ರಲ್ಲಿ ವಾಸವಾಗಿದ್ದು, ನನ್ನ ಹೆಸರನ್ನು **ಕೃಷ್ಣ ಸಿದ್ದಿ (KRISHNA SIDDI)** ಎಂದು ಬದಲಾಯಿಸಿಕೊಂಡಿದ್ದೇನೆ. ಇದನ್ನು ದಿನಾಂಕ 28.03.2026 ರಂದು ಬೆಂಗಳೂರಿನ ಗ್ರಾಮಾಂತರ ನೋಟರಿಯವರಾದ ಸಿ.ಎಸ್. ರಾಮಮೂರ್ತಿ ರಾವ್ ಇವರ ಸಮ್ಮುಖದಲ್ಲಿ ಪ್ರಾಮಾಣೀಕರಿಸಿದ್ದೇವೆ.


ಹೆಸರು ಬದಲಾವಣೆ
ನಾನು **ಜಯಶ್ರೀ ಜಗದೀಶ್** W/o ಇ.ಎಸ್. ಪಾಂಡುರಂಗ ದಾಸ, #102, ರವಿಕಿರಣ್ ಅಪಾರ್ಟ್‌ಮೆಂಟ್ಸ್, 15ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–03 ಇಲ್ಲಿನ ನಿವಾಸಿಯಾಗಿದ್ದು, ನನ್ನ ಹೆಸರನ್ನು **ಜಯಶ್ರೀ ಪಾಂಡುರಂಗ** ಎಂದು ನಾಂಕ:03–09–2024ರಂದು ನೋಟರಿಯವರಾದ ಕೆ. ಮೋಹನ್, ಬೆಂಗಳೂರು ಅವರ ಮುಂದೆ ಪ್ರಮಾಣೀಕರಿಸಿದ್ದೇನೆ.

ಕರಗ: ವಾಹನ ಸಂಚಾರ ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ತಿಗಳರಪೇಟೆಯ ಧರ್ಮರಾಯ ಸ್ವಾಮಿ ದೇವಸ್ಥಾನದ ಕರಗ ಉತ್ಸವ ಏ.1ರಂದು ರಾತ್ರಿ 12ರಿಂದ ಏ.2ರ ಬೆಳಿಗ್ಗೆ 6ರ ವರೆಗೆ ನಡೆಯಲಿದೆ. ಕರಗ ಸಂಚರಿಸುವ ಮಾರ್ಗಗಳಲ್ಲಿ ವಾಹನಗಳ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ.

ಸಿಟಿ ಮಾರ್ಕೆಟ್ ವೃತ್ತದಿಂದ ಅವೆನ್ಯೂ ರಸ್ತೆ ಮೂಲಕ ಮೈಸೂರು ಬ್ಯಾಂಕ್ ವೃತ್ತದ ವರೆಗೆ ಎಲ್ಲಾ ಮಾದರಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.



ಹಸಿ ಕರಗದ ಮೆರವಣಿಗೆ ಸಂಪಂಗಿ ಕೆರೆಯಿಂದ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದವರೆಗೆ ಮಂಗಳವಾರ ಬೆಳಿಗ್ಗೆ ಸಾಗಿತು


ಬಸ್ ಪಾಸ್ ಅವಧಿ ವಿಸ್ತರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ವಿದ್ಯಾರ್ಥಿಗಳಿಗೆ ನೀಡಿರುವ ಬಸ್ ಪಾಸ್ ಅವಧಿ ಮಾರ್ಚ್ 31ಕ್ಕೆ ಮುಕ್ತಾಯವಾಗಿದ್ದು, ಅದನ್ನು ವಿಸ್ತರಿಸುವಂತೆ ಹಲವು ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಸರ್ಕಾರವನ್ನು ಒತ್ತಾಯಿಸಿದ್ದಾರೆ.

‘ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಏ. 10ರವರೆಗೆ ತರಗತಿಗಳು ಇವೆ. 10 ದಿನ ಹಣ ಪಾವತಿಸಿ, ಬಸ್‌ಗಳಲ್ಲಿ ಸಂಚರಿಸುವುದು ಕಷ್ಟಸಾಧ್ಯ. ಹೀಗಾಗಿ, ಬಸ್ ಪಾಸ್ ಅವಧಿಯನ್ನು ಏಪ್ರಿಲ್ ತಿಂಗಳಿಗೂ ವಿಸ್ತರಿಸಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

‘ಬಸ್ ಪಾಸ್ ಅವಧಿಯನ್ನು ವಿಸ್ತರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದರು.



ಭಾರತೀಯ ಉದ್ಯಮಿ ಮತ್ತು ವಿಮಾನ ಚಾಲಕನಿಗೆ ಗೌರವ ನಮನ!

ಕೌಶಲ ವೃದ್ಧಿ ಕಾರ್ಯಾಗಾರ

ಬೆಂಗಳೂರು: ಸಮನ್ವಿತ ಸಂಸ್ಥೆಯು 15ನೇ ವಾರ್ಷಿಕೋತ್ಸವ ಸಂಭ್ರಮದ ಅಂಗವಾಗಿ 10ರಿಂದ 16 ವರ್ಷದೊಳಗಿನವರಿಗೆ ಏ.15ರಿಂದ ಏ.30ರವರೆಗೆ ಅರೆಕೆರೆ ಮೈಕೊ ಲೇಔಟ್‌ನ ಸಮುದಾಯ ಭವನದಲ್ಲಿ ನವಪಲ್ಲವ ಕಲೆ, ಸಂಸ್ಕೃತಿ, ಕೌಶಲ ಕಾರ್ಯಾಗಾರ ಹಮ್ಮಿಕೊಂಡಿದೆ.

15 ದಿನಗಳ ಈ ಕಾರ್ಯಾಗಾರವು ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ನಡೆಯಲಿದೆ. ಶಿಬಿರಾರ್ಥಿಗಳಿಗೆ ವ್ಯಾಯಾಮ, ಯೋಗ-ಧ್ಯಾನ, ಪ್ರಾರ್ಥನೆ, ಗೀತ ಗಾಯನ, ಚಿತ್ರಕಲೆ, ಕ್ರಾಫ್ಟ್, ಪ್ರಾಣಿ-ಪಕ್ಷಿಗಳ ಅರಿವು, ನೃತ್ಯ, ಪುಸ್ತಕ ವಾಚನ, ಮೌಲ್ಯ ಶಿಕ್ಷಣ, ನಾಟಕ, ಸಂವಹನ ಕಲೆ ಸೇರಿದಂತೆ ವಿವಿಧ ಕೌಶಲಗಳ ಪರಿಚಯ ತರಬೇತಿಯನ್ನು ವಿಷಯ ತಜ್ಞರು ನೀಡಲಿದ್ದಾರೆ. ಅಗತ್ಯ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ.

ವನ ಚಾರಣ, ಪ್ರಾಣಿ ಪಕ್ಷಿಗಳ ಅರಿವು, ವಿಜ್ಞಾನ ಮತ್ತು ಗಣಿತದ ಅರಿವು ಸೇರಿದಂತೆ ವಿನೂತನ ಪರಿಕಲ್ಪನೆಯೊಂದಿಗೆ ಮಕ್ಕಳು ರಜೆಯ ಮಜಾ ಅನುಭವಿಸಲು ವೇದಿಕೆ ಕಲ್ಪಿಸಲಾಗಿದೆ. ಸೀಮಿತ ಅಭ್ಯರ್ಥಿಗಳಿಗೆ ಅವಕಾಶ ಇರಲಿದ್ದು, ಆಸಕ್ತರು ನೋಂದಣಿ ಮಾಡಿಕೊಳ್ಳಬೇಕು. ವಿವರಕ್ಕೆ ವಾಟ್ಸ್‌ಆ್ಯಪ್ ಸಂಖ್ಯೆ 98441 92952ಕ್ಕೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ರಾಧಾಕೃಷ್ಣ ಕೌಂಡಿನ್ಯ ತಿಳಿಸಿದ್ದಾರೆ.

ನಾಯಿ ಕಡಿತ: ಬೀಳದ ಕಡಿವಾಣ

ಎರಡೂವರೆ ತಿಂಗಳಲ್ಲೇ 1.33 ಲಕ್ಷ ಮಂದಿಗೆ ಶ್ವಾನ ಕಡಿತ • ರೇಬಿಸ್‌ಗೆ 17 ಮಂದಿ ಸಾವು

• ವರುಣ ಹೆಗಡೆ

ಬೆಂಗಳೂರು: ವರ್ಷಾರಂಭದ ಮೊದಲ ಎರಡೂವರೆ ತಿಂಗಳಲ್ಲಿಯೇ ರಾಜ್ಯದಲ್ಲಿ 1.33 ಲಕ್ಷ ಮಂದಿ ನಾಯಿ ಕಡಿತಕ್ಕೆ ಒಳಗಾಗಿದ್ದಾರೆ. ಅವರಲ್ಲಿ 17 ಮಂದಿ ರೇಬಿಸ್ ಕಾಯಿಲೆಯಿಂದ ಮೃತಪಟ್ಟಿದ್ದಾರೆ.

ಆರೋಗ್ಯ ಇಲಾಖೆ ಮಾಹಿತಿಯು ಇದನ್ನು ದೃಢಪಡಿಸಿದೆ.

ವರ್ಷವಾರು ನಾಯಿ ಕಡಿತ

ವರ್ಷ	ಪ್ರಕರಣಗಳು	ರೇಬಿಸ್ ಮರಣ
2022	1.63 ಲಕ್ಷ	03
2023	2.32 ಲಕ್ಷ	18
2024	3.61 ಲಕ್ಷ	42
2025	4.99 ಲಕ್ಷ	52
2026	1.33 ಲಕ್ಷ	17



ಶೈಕ್ಷಣಿಕ ಕೇಂದ್ರಗಳು ಮತ್ತು ಆಸ್ಪತ್ರೆಗಳಂತಹ ಪ್ರದೇಶಗಳಲ್ಲಿ ನಾಯಿ ಕಡಿತ ಪ್ರಕರಣಗಳ ಏರಿಕೆಗೆ ಕಳೆದ ವರ್ಷ ಕಳವಳ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್, ನಾಯಿಗಳನ್ನು ನಿಗದಿತ ಆಶ್ರಯ ತಾಣಗಳಿಗೆ ಸ್ಥಳಾಂತರಿಸುವಂತೆ ಆದೇಶಿಸಿತ್ತು. ಇಂತಹ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಭಾರಿ ಪ್ರಮಾಣದ ಪರಿಹಾರ ನೀಡಲು ರಾಜ್ಯಗಳಿಗೆ ಸೂಚಿಸುವುದಾಗಿ ಹೇಳಿತ್ತು. ಕರ್ನಾಟಕದಲ್ಲಿ 2030ರ ವೇಳೆಗೆ ರೇಬಿಸ್‌ನಿಂದಾಗುವ ಸಾವನ್ನು ಸೊನ್ನೆಗೆ ಇಳಿಸುವ ಗುರಿಯನ್ನು ಆರೋಗ್ಯ ಇಲಾಖೆ ಹಾಕಿಕೊಂಡಿದೆ.

ಬೀದಿ ನಾಯಿ ದಾಳಿಗೆ ಮಕ್ಕಳು, ವೃದ್ಧರು ಸೇರಿ ವಿವಿಧ ವಯೋಮಾನದವರು ಗಾಯಗೊಂಡು, ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದಾರೆ. ಕಳೆದ ವರ್ಷ 5 ಲಕ್ಷದಷ್ಟು ಮಂದಿ ನಾಯಿ ಕಡಿತಕ್ಕೆ ಒಳಗಾಗಿ, ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರು. ಇವು ವರ್ಷವೊಂದರಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳಾಗಿದ್ದವು. ಪ್ರತಿ ತಿಂಗಳು ಸರಾಸರಿ 40 ಸಾವಿರ ಪ್ರಕರಣಗಳು ವರದಿಯಾಗಿದ್ದವು. ಬೀದಿ ನಾಯಿಗಳ ನಿಯಂತ್ರಣ ಸಾಧ್ಯವಾಗದ ಪರಿಣಾಮ, ಈಗ ಆ ಸಂಖ್ಯೆ 50 ಸಾವಿರಕ್ಕೆ ಏರಿಕೆಯಾಗಿದೆ. ರೇಬಿಸ್‌ನಿಂದ ಮೃತಪಡುವವರ ಸಂಖ್ಯೆಯೂ ಹೆಚ್ಚುತ್ತಿದೆ.

ಕಳೆದ ವರ್ಷ 52 ಮಂದಿ ರೇಬಿಸ್‌ನಿಂದ ಮೃತಪಟ್ಟಿದ್ದರು. ಬೆಂಗಳೂರಿನಲ್ಲಿ ವಾಯುವಿಹಾರಕ್ಕೆ ತೆರಳಿದ್ದ ಮಹಿಳೆ, ಶಾಲೆಗೆ ಹೋಗುತ್ತಿದ್ದ ಮಕ್ಕಳ ಮೇಲೆ ನಾಯಿಗಳು ದಾಳಿ ನಡೆಸಿದ್ದವು. ರಾಜ್ಯದಾದ್ಯಂತ ಅನೇಕ ಪ್ರಕರಣ ವರದಿ ಯಾಗಿದ್ದು, ಕೆಲವರು ಗಂಭೀರವಾಗಿ ಅಸ್ವಸ್ಥರಾಗಿದ್ದರು.

ಕ್ರಿಯಾಯೋಜನೆ: ಅಗತ್ಯ ಚಿಕಿತ್ಸೆ ಒದಗಿಸುವ ಉದ್ದೇಶಕ್ಕಾಗಿ ನಾಯಿ ಕಡಿತವನ್ನು 2021 ರಲ್ಲಿ ‘ಘೋಷಿತ ಕಾಯಿಲೆ’ಯ ವ್ಯಾಪ್ತಿಗೆ ತರಲಾಗಿದೆ. ಇದರಿಂದಾಗಿ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು ಕಡ್ಡಾಯವಾಗಿ ನಾಯಿ ಕಡಿತ ಹಾಗೂ ಮರಣ ಪ್ರಕರಣಗಳನ್ನು ವರದಿ ಮಾಡಬೇಕಿದೆ. ಈ ಪ್ರಕರಣಗಳಲ್ಲಿ ಪ್ರಾಣಾಪಾಯದಿಂದ ಪಾರು ಮಾಡಲು, ಸಮಗ್ರ ರೋಗ ಕಣ್ಗಾವಲು ಕಾರ್ಯಕ್ರಮದಡಿ ರೇಬಿಸ್ ಮುಕ್ತ ಕರ್ನಾಟಕ ಕ್ರಿಯಾಯೋಜನೆ ರೂಪಿಸಿ ಕಳೆದ ತಿಂಗಳು ಜಾರಿ ಜಾರಿ ಮಾಡಲಾಗಿದೆ.

ಎಲ್ಲ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು ಕಡ್ಡಾಯವಾಗಿ ರೇಬಿಸ್ ನಿರೋಧಕ ಲಸಿಕೆ ಮತ್ತು ‘ರೇಬಿಸ್ ಇಮ್ಯುನೊ ಗ್ಲೋಬ್ಯುಲಿನ್’ (ಆರ್‌ಐಜಿ) ಚುಚ್ಚುಮದ್ದಿನ ದಾಸ್ತಾನು ಹೊಂದಿರಬೇಕೆಂದು ಸೂಚಿಸಿದೆ.

ನಾಯಿ ಕಡಿತಕ್ಕೆ ಒಳಗಾದವರಿಗೆ ಸರ್ಕಾರಿ, ಖಾಸಗಿ ಆಸ್ಪತ್ರೆಗಳು ತುರ್ತು ವೈದ್ಯಕೀಯ ಸೇವೆಗಳು, ಪ್ರಥಮ ಚಿಕಿತ್ಸೆ ಉಚಿತವಾಗಿ ಒದಗಿಸುವಂತೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ಒಂದು ವೇಳೆ, ಆಸ್ಪತ್ರೆಯಲ್ಲಿ ಸೌಲಭ್ಯಗಳ ಕೊರತೆ ಇದ್ದಲ್ಲಿ ರೋಗಿಗೆ ಪ್ರಾಣಾಪಾಯವಾಗದಂತೆ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚುವರಿ ಚಿಕಿತ್ಸಾ ಸೌಲಭ್ಯವಿರುವ ಆಸ್ಪತ್ರೆಗೆ ರವಾನಿಸಬೇಕಿದೆ.

‘ನಾಯಿ, ಹಾವು ಕಡಿತಕ್ಕೊಳಗಾದ ಸಂತ್ರಸ್ತರಿಗೆ ನೀಡಿದ ಚಿಕಿತ್ಸೆಗಾಗಿ ನಿಗದಿತ ಶುಲ್ಕ ವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಸರ್ಕಾರ ಮರುಪಾವತಿ ಮಾಡುತ್ತದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

> **ನಾಯಿ ಹಾಗೂ ಹಾವು ಕಡಿತಕ್ಕೆ ಆಸ್ಪತ್ರೆಗಳಲ್ಲಿ ಲಸಿಕೆ ದಾಸ್ತಾನು ಕಡ್ಡಾಯಗೊಳಿಸಲಾಗಿದೆ. ಖಾಸಗಿ ಆಸ್ಪತ್ರೆಗಳು ಮುಂಗಡ ಹಣಕ್ಕೆ ಒತ್ತಾಯಿಸದೆ ಚಿಕಿತ್ಸೆ ನೀಡಬೇಕು**
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

ಹಾವು ಕಡಿತಕ್ಕೆ 21 ಮಂದಿ ಸಾವು

ಹಾವು ಕಡಿತ ಪ್ರಕರಣವೂ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ಈ ವರ್ಷ ಎರಡೂವರೆ ತಿಂಗಳಲ್ಲಿ 2,448 ಈ ರೀತಿಯ ಪ್ರಕರಣಗಳಾಗಿದ್ದರೆ, 21 ಮಂದಿ ಕಡಿತದ ತೀವ್ರತೆಗೆ ಮೃತಪಟ್ಟಿದ್ದಾರೆ. ಕಳೆದ ವರ್ಷ 20 ಸಾವಿರಕ್ಕೂ ಅಧಿಕ ಹಾವು ಕಡಿತ ಪ್ರಕರಣಗಳ ವರದಿಯಾಗಿದ್ದವು. 157 ಮಂದಿ ಮೃತಪಟ್ಟಿದ್ದರು. ಹಾವು ಕಡಿತವನ್ನು ‘ಘೋಷಿತ ಕಾಯಿಲೆ’ಯಡಿ ತರಲಾಗಿದೆ.

ಎಲ್ಲ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾವು ಕಡಿತಕ್ಕೆ ‘ಆ್ಯಂಟಿ ಸ್ನೇಕ್ ವೆನಮ್’ ಔಷಧ ಉಚಿತವಾಗಿ ಒದಗಿಸಲಾಗುತ್ತಿದೆ. ಹಾವಿನ ನಂಜಿನ ಲಕ್ಷಣಗಳು ವ್ಯಕ್ತಿಗೆ ಕಂಡುಬಂದಲ್ಲಿ ತಕ್ಷಣ ರೋಗಿ ಅಥವಾ ಸಂಬಂಧಿಕರ ಒಪ್ಪಿಗೆ ಪತ್ರ ಪಡೆದು ಈ ಔಷಧ ನೀಡಲಾಗುತ್ತಿದೆ. ಪಶುವೈದ್ಯಕೀಯ, ಅರಣ್ಯ, ಕೃಷಿ ಸೇರಿ ವಿವಿಧ ಇಲಾಖೆಗಳ ಸಹಯೋಗದಲ್ಲಿ ಆರೋಗ್ಯ ಇಲಾಖೆ ಹಾವು ಕಡಿತ ಪ್ರಕರಣಗಳ ನಿರ್ವಹಣೆ ಮಾಡುತ್ತಿದೆ.

ಇಂಟೆಲ್ ವಿದ್ಯುತ್ ಸಮಸ್ಯೆ ಇತ್ಯರ್ಥಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಇಂಟೆಲ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೆ ಸುಗಮವಾಗಿ ವಿದ್ಯುತ್ ಸರಬರಾಜು ಮಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತ ಅವರು ಸೂಚನೆ ನೀಡಿದರು.

ಬೆಳಕು ಭವನದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಇಂಟೆಲ್ ಇಂಡಿಯಾದ ಬೆಂಗಳೂರು ಕಚೇರಿಯ ಅಧಿಕಾರಿಗಳು, ವಿದ್ಯುತ್ ಅಡಚಣೆ ಜತೆಗೆ ಅನಿಲ ಮತ್ತು ಡೀಸೆಲ್ ಪೂರೈಕೆಯಿಂದ ಆಗಿರುವ ಸಮಸ್ಯೆಗಳ ಬಗ್ಗೆ ಹೇಳಿಕೊಂಡರು. ಇಂಟೆಲ್‌ನ ವಿದ್ಯುತ್ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ನಿರ್ದರ್ಶನ ನೀಡಿದ ಗೌರವ್ ಗುಪ್ತ, ಇದಕ್ಕೆ ಪೂರಕವಾದ ಮೂಲಸೌಕರ್ಯ ಕಲ್ಪಿಸಿಕೊಳ್ಳುವಂತೆ ಇಂಟೆಲ್ ಪ್ರತಿನಿಧಿಗಳಿಗೆ ಸಲಹೆ ನೀಡಿದರು.

ಟೆಕ್ ಸಂಸ್ಥೆಯ ವಿದ್ಯುತ್ ಸಮಸ್ಯೆಗೆ ದೀರ್ಘಕಾಲೀನ ಮತ್ತು ಸುಸ್ಥಿರ ಪರಿಹಾರ ಸೂಚಿಸಿದ ಅವರು, ಗ್ರಿಡ್‌ನಿಂದ ಪಡೆಯುವ ವಿದ್ಯುತ್ ಕಂಪನಿಯ ಮೂಲ ಇಂಧನ ವ್ಯವಸ್ಥೆಯಾಗಿರಬೇಕು. ಗ್ರಿಡ್‌ನ ಶೇ 50ರಷ್ಟು ಭಾಗ ನವೀಕರಿಸಬಹುದಾದ ಇಂಧನ ಶಕ್ತಿಯಿಂದ ಚಾಲಿತವಾಗಿರುತ್ತದೆ. ಅನಿಲ ಮತ್ತು ಡೀಸೆಲ್ ಎರಡನೆಯ ಹಾಗೂ ತುರ್ತು ಆಯ್ಕೆಯಾಗಿ ಬಳಸಬೇಕು ಎಂದರು.

ಇಂಟೆಲ್ ಆವರಣದಲ್ಲಿ ಆ ಕಂಪನಿಯೇ 66 ಕೆವಿ ಸಾಮರ್ಥ್ಯದ ಉಪಕೇಂದ್ರ ಸ್ಥಾಪಿಸುವುದು ದೀರ್ಘಕಾಲೀನ ಪರಿಹಾರವಾಗಲಿದೆ. ಸದ್ಯ 66 ಕೆವಿಯ ಒಂದೇ ಮಾರ್ಗದ ಮೂಲಕ ಇಂಟೆಲ್‌ಗೆ ವಿದ್ಯುತ್ ಪೂರೈಕೆ ಆಗುತ್ತಿದ್ದು ಮುಂದಿನ ದಿನಗಳಲ್ಲಿ ಹೆಚ್ಚುವರಿ ಮೂಲಸೌಕರ್ಯ ಕಲ್ಪಿಸುವ ಪ್ರಯತ್ನಗಳು ನಡೆಯುತ್ತಿವೆ. ಇದರಿಂದ ಗುಣಮಟ್ಟದ ವಿದ್ಯುತ್ ಪೂರೈಕೆ ಸಾಧ್ಯವಾಗಲಿದೆ ಎಂದು ಕೆಪಿಟಿಸಿಎಲ್ ಅಧಿಕಾರಿಗಳು ತಿಳಿಸಿದರು.

ಅನಿಲ ಪೂರೈಕೆಯ ಕುರಿತು ಮಾಹಿತಿ ನೀಡಿದ ಗೇಲ್ ಅಧಿಕಾರಿಗಳು, ಅನಿಲ ಬಳಕೆಯ ಮೇಲೆ ಸದ್ಯ ಯಾವುದೇ ನಿರ್ಬಂಧಗಳಿಲ್ಲ ಎಂದರು.

ಸಭೆಯಲ್ಲಿ ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್, ಐಟಿ–ಬಿಟಿ ಇಲಾಖೆಯ ಕಾರ್ಯದರ್ಶಿ ಎನ್.ಮಂಜುಳಾ, ಐಟಿ– ಬಿಟಿ ಇಲಾಖೆಯ ನಿರ್ದೇಶಕ ರಾಹುಲ್ ಶರಣಪ್ಪ ಸಂಕನೂರ್, ಗೇಲ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಸಂಜಯ್ ಕುಮಾರ್ ಸಿಂಗ್, ಕೆಪಿಟಿಸಿಎಲ್‌ನ ನಿರ್ದೇಶಕ (ಕಾರ್ಯಾಚರಣೆ) ವಿಶ್ವನಾಥ ನಾಯಕ್, ಕೆಪಿಟಿಸಿಎಲ್‌ನ ನಿರ್ದೇಶಕ (ಯೋಜನೆಗಳು) ಗಿರಿಧರ್ ಕುಲಕರ್ಣಿ, ಇಂಟೆಲ್‌ನ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.





ರಾಮೋಹಳ್ಳಿ ಗೇಟ್ ಬಳಿ ನಡೆಯುತ್ತಿರುವ ಕೆಳಸೇತುವೆ ನಿರ್ಮಾಣ ಕಾಮಗಾರಿ (ಎಡಚಿತ್ರ). ರಸ್ತೆ ಬದಿ ಗುಂಡಿ ತೆಗೆದು ಬಿಡಲಾಗಿದೆ –ಪ್ರಜಾವಾಣಿ ಚಿತ್ರಗಳು: ರಂಜು ಪಿ.

ರಸ್ತೆ ಅಧ್ವಾನ: ಪ್ರಯಾಸದ ಸಂಚಾರ

ಭಾರಿ ಗಾತ್ರದ ವಾಹನಗಳಿಂದ ದಟ್ಟಣೆ 5–6 ಕಿ.ಮೀ ಕ್ರಮಿಸಲು ಒಂದು ತಾಸು

• ಕೆ.ಎಸ್.ಸುನಿಲ್

ಬೆಂಗಳೂರು: ಮೈಸೂರು ರಸ್ತೆಯ ರಾಮೋಹಳ್ಳಿ ರೈಲ್ವೆ ಕೆಳಸೇತುವೆ ಕಾಮಗಾರಿಗಾಗಿ ರಸ್ತೆ ಬಂದ್ ಮಾಡಿರುವ ಪರಿಣಾಮ ಸಾರ್ವಜನಿಕರು ಮತ್ತು ವಾಹನ ಸವಾರರು ನಿತ್ಯ ಸಂಕಷ್ಟ ಅನುಭವಿಸುವಂತಾಗಿದೆ.

ರೈಲ್ವೆ ಗೇಟ್ ರಸ್ತೆ ಬಂದ್ ಆಗಿರುವುದರಿಂದ ವಾಹನಗಳ ಸಂಚಾರಕ್ಕೆ ಪರ್ಯಾಯ ಮಾರ್ಗದ ವ್ಯವಸ್ಥೆ ಮಾಡಲಾಗಿದೆ. ಆದರೆ, ಗುಂಡಿಮಯ ರಸ್ತೆಯಲ್ಲಿ 5–6 ಕಿಲೋ ಮೀಟರ್ ಕ್ರಮಿಸಲು ಸುಮಾರು ಒಂದು ತಾಸು ಬೇಕಾಗುತ್ತದೆ. ಇದರ ನಡುವೆ ವಾಹನ ಕೆಟ್ಟು ನಿಂತರೆ, ಕಿಲೋ ಮೀಟರ್ ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ದಟ್ಟಣೆ ಜೊತೆಗೆ ದೂಳು ವಾಹನ ಸವಾರರನ್ನು ಹೈರಾಣಾಗಿಸುತ್ತಿದೆ.

ವಾಹನಗಳು ಚಲ್ಲಘಟ್ಟ ಮೂಲಕ ಭೀಮನಕುಪ್ಪೆ ಮಾರ್ಗವಾಗಿ ವಿನಾಯಕನಗರ, ರಾಮೋಹಳ್ಳಿ, ಕೇತೋಹಳ್ಳಿ, ದೊಡ್ಡಆಲದ ಮರ, ಚುಂಚನಕುಪ್ಪೆ, ಚಂದ್ರಪ್ಪ ಸರ್ಕಲ್ ತಲುಪಬೇಕು. ಐದಾರು ಕಿಲೋ ಮೀಟರ್ ಸುತ್ತು ಹಾಕಿಕೊಂಡು ಹೋಗಬೇಕಾಗಿರುವ ಕಾರಣ ಶಾಲಾ–ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗಿಗಳು ನಿಗದಿತ ಸಮಯಕ್ಕೆ ಕಚೇರಿ ತಲುಪಲು ಕಷ್ಟವಾಗಿದೆ.



ಚರಂಡಿಗಾಗಿ ಗುಂಡಿ ತೆಗೆದು ಹಾಗೆಯೇ ಬಿಡಲಾಗಿದೆ

ಪ್ರತಿದಿನ ಬಸ್, ಲಾರಿ, ಟ್ರಕ್, ಕಾರು, ದ್ವಿಚಕ್ರ ವಾಹನಗಳು ಸಂಚರಿಸುತ್ತವೆ. ಅದರಲ್ಲೂ ವಾರಾಂತ್ಯ, ರಜಾ ದಿನಗಳು ಹಾಗೂ ದಟ್ಟಣೆ ಅವಧಿಯಾದ ಬೆಳಿಗ್ಗೆ 7ರಿಂದ 11, ಸಂಜೆ 4ರಿಂದ 8ರ ವರೆಗೆ ಈ ಮಾರ್ಗದಲ್ಲಿ ವಾಹನಗಳ ಸಂಚಾರ ಹೆಚ್ಚು. ಮಧ್ಯಾಹ್ನ 12 ಗಂಟೆಯಾದರೂ ವಾಹನ ದಟ್ಟಣೆ ಕಡಿಮೆಯಾಗುವುದೇ ಇಲ್ಲ.

ದೊಡ್ಡದೊಡ್ಡ ಮೂರ್ನಾಲ್ಕು ಟ್ರಕ್‌ಗಳು ಸಾಗುವಾಗ ಅವುಗಳ ಹಿಂದೆ ಇತರೆ ವಾಹನಗಳಿಗೆ ಮುಂದಕ್ಕೆ ಸಾಗಲು ಸಾಧ್ಯವಾಗುವುದಿಲ್ಲ. ವಾರವಿಡೀ ಇದೇ ಸ್ಥಿತಿ ಇರುತ್ತದೆ. ಚಲ್ಲಘಟ್ಟದಿಂದ ಕುಂಬಳಗೋಡಿಗೆ ಗುಂಡಿ ಬಿದ್ದ ರಸ್ತೆ ಮೂಲಕ ಸಾಗಲು ಕನಿಷ್ಠ ಒಂದು ತಾಸು ಬೇಕು. ಬೇಸಿಗೆ ಧಗೆಯಲ್ಲಿ ಸಾಗುವ ವಾಹನಗಳ ಚಾಲಕರ ಸ್ಥಿತಿ ಹೇಳುವಂತಿಲ್ಲ.

ಜಲ್ಲಿ, ಮರಳು, ಎಂ.ಸ್ಯಾಂಡ್ ಹೊತ್ತು ಸಾಗುವ ಟಿಪ್ಪರ್, ಲಾರಿಗಳು ಸಂಚಾರ ವ್ಯವಸ್ಥೆಯನ್ನು ಮತ್ತಷ್ಟು ಹದಗೆಡಿಸಿವೆ. ಎಸ್.ಗೊಲ್ಲಹಳ್ಳಿ, ಕುರುಬರಪಾಳ್ಯ ಹಾಗೂ ಇತರೆ ಕಡೆಯ ಕಲ್ಲುಗಣಿಯಿಂದ ಬರುವ ಟಿಪ್ಪರ್‌ಗಳು ಈ ಹಿಂದೆ ಗೇರುಪಾಳ್ಯ ರೈಲ್ವೆ ಗೇಟ್ ಮೂಲಕ ಮೈಸೂರು ರಸ್ತೆ ಸೇರುತ್ತಿದ್ದವು.

ರೈಲ್ವೆ ಗೇಟ್ ರಸ್ತೆ ಬಂದ್ ಆಗಿರುವ ಕಾರಣ ಭೀಮನಕುಪ್ಪೆ ಕ್ರಾಸ್, ಹೊಸ ಬೈರೋಹಳ್ಳಿ ಮೂಲಕ ಕೆಂಗೇರಿ ಉಪನಗರ ಮಾರ್ಗವಾಗಿ ಮೈಸೂರು ರಸ್ತೆ ತಲುಪುತ್ತಿವೆ. ಭಾರಿ ಗಾತ್ರದ ವಾಹನಗಳು ಈ ಮಾರ್ಗದಲ್ಲಿ ಸಂಚರಿಸುತ್ತಿರುವ ಕಾರಣ ದ್ವಿಚಕ್ರ ವಾಹನ ಸವಾರರು ಸಾಗುವುದೇ ಕಷ್ಟವಾಗಿದೆ. ಇವುಗಳ ಓಡಾಟದಿಂದ ದೂಳಿನ ಸಮಸ್ಯೆಯೂ ಹೆಚ್ಚಿದೆ. ಇದರಿಂದ ರಸ್ತೆಬದಿ ಹಣ್ಣು, ತರಕಾರಿ, ಹೋಟೆಲ್ ವ್ಯಾಪಾರಕ್ಕೂ ದೊಡ್ಡ ಹೊಡೆತ ಬಿದ್ದಿದೆ.

ಅಲ್ಲದೇ ಕುಂಬಳಗೋಡು ಕೈಗಾರಿಕಾ ಪ್ರದೇಶ, ಚಿಕ್ಕಲೂರಿಗೆ ತೆರಳಲು ಸಹ ತೊಂದರೆ ಆಗುತ್ತಿದೆ. ಸುಬ್ಬರಾಯನ ಪಾಳ್ಯ, ಗೇರುಪಾಳ್ಯಕ್ಕೆ ಸರಿಯಾದ ಬಸ್ ವ್ಯವಸ್ಥೆ ಇಲ್ಲದೆ ವಿದ್ಯಾರ್ಥಿಗಳು, ಸಾರ್ವಜನಿಕರು ಪರದಾಡುತ್ತಿದ್ದಾರೆ. ಈ ಮಾರ್ಗದಲ್ಲಿ ಸರಿಯಾದ ರಸ್ತೆಯಿಲ್ಲದ ಕಾರಣ ಮಣ್ಣು ಹಾಕಿ, ವಾಹನ ಸಂಚಾರಕ್ಕೆ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ. ಮಳೆ ಬಂದರಂತೂ ಈ ರಸ್ತೆ ಕೆಸರು ಗದ್ದೆಯಂತಾಗುತ್ತದೆ. ವಾಹನ ಸವಾರರು ನಿಯಂತ್ರಣ ತಪ್ಪಿ ಬಿದ್ದು ಗಾಯಗೊಂಡಿರುವ ಉದಾಹರಣೆಗಳೂ ಇದೆ.

'ರೈಲ್ವೆ ಇಲಾಖೆ ಅಧಿಕಾರಿಗಳು ಕೆಳಸೇತುವೆ ಕಾಮಗಾರಿ ಕೈಗೊಳ್ಳುವ ಮುನ್ನ ಪರ್ಯಾಯ ಮಾರ್ಗದ ವ್ಯವಸ್ಥೆ ಕಲ್ಪಿಸಬೇಕಿತ್ತು. ಅವಸರದಲ್ಲಿ ಮಣ್ಣು ಸುರಿದು ತಾತ್ಕಾಲಿಕ ರಸ್ತೆ ಮಾಡಿದ್ದಾರೆ. ಈ ರಸ್ತೆ ತುಂಬ ಗುಂಡಿಗಳು ಹಾಗೂ ವಿಪರೀತ ದೂಳು. ಭಾರಿ ಗಾತ್ರದ ವಾಹನಗಳ ಚಕ್ರಗಳು ಮಣ್ಣಿನಲ್ಲಿ ಹೂತು ಹೋಗುತ್ತಿದ್ದು, ಸಂಚಾರಕ್ಕೂ ಅಡ್ಡಿಯಾಗುತ್ತಿದೆ. ನಿವಾಸಿಗಳು, ವಾಹನ ಸವಾರರಿಗೆ ದೂಳಿನ ಮಜ್ಜನ ವಾಗುತ್ತಿದೆ. ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.



ಕುಂಬಳಗೋಡಿಗೆ ತೆರಳುವ ಮಾರ್ಗದಲ್ಲಿ ದೂಳಿನ ನಡುವೆ ಸಾಗುವ ವಾಹನಗಳು

ಸಾರ್ವಜನಿಕರು ಏನಂತಾರೆ?



ಕುಂಬಳಗೋಡಿಗೆ ಹೋಗುವ ಮಾರ್ಗದಲ್ಲಿ ರಸ್ತೆ ವಿಸ್ತರಣೆ ಮಾಡುವುದಾಗಿ ಹೇಳಿ ಮಣ್ಣು ಸುರಿದು, ಜಲ್ಲಿ ಹಾಕಲಾಗಿದೆ. ಡಾಂಬರು ಹಾಕದ ಕಾರಣ, ವಾಹನಗಳು ಸಂಚರಿಸಿದ ಸಂದರ್ಭದಲ್ಲಿ ಜಲ್ಲಿ ರಸ್ತೆ ಮೇಲೆ ಬೀಳುತ್ತಿದೆ. ವಾಹನ ಸವಾರರು ಪರದಾಡುವಂತಾಗಿದೆ.

ಶಿವಕುಮಾರ್, ಆಟೊ ಚಾಲಕ, ಚಲ್ಲಘಟ್ಟ



ಕೆಳಸೇತುವೆ ಕಾಮಗಾರಿ ನಡೆಯುತ್ತಿರುವ ಕಾರಣ ರಸ್ತೆ ಬಂದ್ ಆಗಿದೆ. ಇದರಿಂದ 3–4 ಕಿಲೋ ಮೀಟರ್ ಸುತ್ತು ಹಾಕಿಕೊಂಡು ಚಲ್ಲಘಟ್ಟಕ್ಕೆ ಬರಬೇಕಿದೆ. ಸರಿಯಾದ ಸಮಯಕ್ಕೆ ಬಸ್‌ಗಳು ಬರುವುದಿಲ್ಲ. ನಿಗದಿತ ಸಮಯಕ್ಕೆ ಕಾಲೇಜಿಗೆ ತೆರಳಲು ಆಗುತ್ತಿಲ್ಲ.

ನಿರಂಜನ್, ಕಾಲೇಜು ವಿದ್ಯಾರ್ಥಿ



ರೈಲ್ವೆ ಕಾಮಗಾರಿಗಾಗಿ ರಸ್ತೆ ಬಂದ್ ಮಾಡಲಾಗಿದೆ. ಹಾಗಾಗಿ ಸುತ್ತು ಹಾಕಿಕೊಂಡು ಬರಬೇಕು. ಸರಿಯಾದ ಬಸ್ ವ್ಯವಸ್ಥೆ ಇಲ್ಲ, ಆಟೊದವರು ದುಪ್ಪಟ್ಟು ಹಣ ಕೇಳುತ್ತಾರೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಂಡು, ಸಾರ್ವಜನಿಕರ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು.

ಸರಸ್ವತಿ, ಸುಬ್ಬರಾಯನಪಾಳ್ಯ



ರಸ್ತೆ ಬಂದ್ ಮಾಡಿ ನಾಲ್ಕು ತಿಂಗಳು ಆಗಿದೆ. ನವೆಂಬರ್‌ಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ. ನಮ್ಮ ಊರಿಗೆ ಬಸ್ ವ್ಯವಸ್ಥೆ ಇಲ್ಲ. ಬೇರೆ ದಾರಿ ಇಲ್ಲದ ಕಾರಣ ನಾವು ಚಲ್ಲಘಟ್ಟಕ್ಕೆ ರಾಮೋಹಳ್ಳಿ ಮೂಲಕವೇ ಓಡಾಡಬೇಕು.

ಮುನಿಲಕ್ಷ್ಮೀ, ಸುಬ್ಬರಾಯನಪಾಳ್ಯ

ಮೂರು ಕೈಗಾರಿಕೆಗಳು ಬಂದ್



ಕಮಲೇಶ್ ಮೆಹತಾ

'ಕೆಳಸೇತುವೆ ಕಾಮಗಾರಿ ಕೈಗೊಂಡಿರುವುದರಿಂದ ಕುಂಬಳಗೋಡು ಕೈಗಾರಿಕಾ ಪ್ರದೇಶದಲ್ಲಿ ಮೂರು ಕೈಗಾರಿಕೆಗಳು ಬಂದ್ ಆಗಿವೆ. ಕಾರ್ಮಿಕರಿಗೆ ಬರಲು ಸರಿಯಾದ ಬಸ್ ವ್ಯವಸ್ಥೆ ಇಲ್ಲ. ಈ ಮಾರ್ಗದಲ್ಲಿ ದಿನಕ್ಕೆ ಮೂರು ಬಸ್‌ಗಳು ಸಂಚರಿಸುತ್ತವೆ. ಸಾವಿರಾರು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಐದಾರು ಕಿಲೋ ಮೀಟರ್ ಸುತ್ತು ಹಾಕಿಕೊಂಡು ಬರಬೇಕು. ರಜೆ ಮೇಲೆ ಊರಿಗೆ ಹೋದ ಕಾರ್ಮಿಕರು ವಾಪಸ್ ಬಂದಿಲ್ಲ. ಅವರು ವಾಪಸ್ ಬರುವ ಲಕ್ಷಣವೂ ಇಲ್ಲ' ಎಂದು ಕುಂಬಳಗೋಡು ಇಂಡಸ್ಟ್ರೀಸ್ ಅಸೋಸಿಯೇಷನ್ ಗೌರವ ಪ್ರಧಾನ ಕಾರ್ಯದರ್ಶಿ ಕಮಲೇಶ್ ಮೆಹ್ತಾ ಹೇಳಿದರು.

'60 ಅಡಿ ಅಗಲದ ರಸ್ತೆ ನಿರ್ಮಿಸುವ ಬದಲು, ಕೆಳಸೇತುವೆ ರಸ್ತೆಯು 32 ಅಡಿ ಅಗಲವಿದೆ. ಭಾರಿ ಗಾತ್ರದ ವಾಹನಗಳು ಸಂಚರಿಸುವ ಕಾರಣ ಇತರೆ ವಾಹನಗಳಿಗೆ ತೊಂದರೆ ಆಗುತ್ತದೆ. ರೈಲ್ವೆ ಇಲಾಖೆ, ಲೋಕೋಪಯೋಗಿ, ಕೆಐಎಡಿಬಿ, ಕುಂಬಳಗೋಡು ಗ್ರಾಮ ಪಂಚಾಯಿತಿಗೆ ಮನವಿ ಮಾಡಿದ್ದರೂ ಸ್ಪಂದಿಸಿಲ್ಲ. ಅನಾಹುತ ಸಂಭವಿಸಿದರೆ ಯಾರು ಹೊಣೆ' ಎಂದು ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ಅಮರಾವತಿಗೆ ರಾಜಧಾನಿ ಪಟ್ಟ: ಮಸೂದೆ ಮಂಡನೆ ಇಂದು

ನವದೆಹಲಿ: ಕೇಂದ್ರ ಸರ್ಕಾರವು ಆಂಧ್ರಪ್ರದೇಶ ಪುನರ್‌ರಚನೆ ತಿದ್ದುಪಡಿ ಮಸೂದೆ–2026 ಅನ್ನು ಲೋಕಸಭೆಯಲ್ಲಿ ಬುಧವಾರ ಮಂಡಿಸಲಿದೆ. ಒಂದೊಮ್ಮೆ ಈ ಮಸೂದೆ ಅಂಗೀಕಾರವಾದಲ್ಲಿ, ಅಮರಾವತಿ ನಗರವನ್ನು ಆಂಧ್ರಪ್ರದೇಶ ರಾಜಧಾನಿಯಾಗಿ ಅಧಿಕೃತವಾಗಿ ಘೋಷಿಸುವುದಕ್ಕೆ ದಾರಿ ಸುಗಮವಾಗಲಿದೆ.

ಅಮರಾವತಿಯನ್ನು ರಾಜ್ಯದ ರಾಜಧಾನಿಯಾಗಿ ಅಧಿಕೃತವಾಗಿ ಘೋಷಿಸಲು ನೆರವಾಗುವಂತೆ ಆಂಧ್ರಪ್ರದೇಶ ಪುನರ್‌ರಚನೆ ಕಾಯ್ದೆ–2014ಕ್ಕೆ ಸೂಕ್ತ ತಿದ್ದುಪಡಿ ತರುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಆಂಧ್ರಪ್ರದೇಶ ವಿಧಾನಸಭೆಯಲ್ಲಿ ಮಾರ್ಚ್ 28ರಂದು ಅಂಗೀಕರಿಸಲಾಗಿತ್ತು.

2024ರ ಜೂನ್ 2ರಿಂದ ಪೂರ್ವಾನ್ವಯವಾಗುವಂತೆ ಅಮರಾವತಿ ನಗರವನ್ನು ಆಂಧ್ರಪ್ರದೇಶ ರಾಜಧಾನಿಯಾಗಿ ಪರಿಗಣಿಸಬೇಕು ಎಂಬ ಅವಕಾಶವನ್ನು ಕೂಡ ಈ ತಿದ್ದುಪಡಿ ಮಸೂದೆ ಒಳಗೊಂಡಿದೆ.

ಆಂಧ್ರಪ್ರದೇಶ ಪುನರ್‌ರಚನೆ ಕಾಯ್ದೆ–2014 ಅನ್ವಯ, ಈ ಹಿಂದಿನ ಆಂಧ್ರಪ್ರದೇಶ ರಾಜ್ಯವನ್ನು ತೆಲಂಗಾಣ ಹಾಗೂ ಆಂಧ್ರಪ್ರದೇಶ ಎಂಬುದಾಗಿ ವಿಭಜಿಸಲಾಗಿತ್ತು. ಕಾಯ್ದೆಯ ಸೆಕ್ಷನ್ 5ರಂತೆ, ವಿಭಜನೆ ನಂತರ 10 ವರ್ಷಗಳ ವರೆಗೆ ಹೈದರಾಬಾದ್ ನಗರವು ಈ ಎರಡೂ ರಾಜ್ಯಗಳ ಜಂಟಿ ರಾಜಧಾನಿಯಾಗಿ ಮುಂದುವರಿದಿದೆ. ಈಗ, ಈ ಸೆಕ್ಷನ್ 5ಕ್ಕೆ ತಿದ್ದುಪಡಿ ತರುವ ಅವಕಾಶವನ್ನು ಮಸೂದೆ ಒಳಗೊಂಡಿದೆ.

ನಗರಕ್ಕೆ ಬಂದ ರಾಷ್ಟ್ರಪತಿ



ಬೆಂಗಳೂರು: ತುಮಕೂರಿನ ಸಿದ್ದಗಂಗಾ ಮಠದಲ್ಲಿ ಬುಧವಾರ ಆಯೋಜಿಸಿರುವ ಶಿವಕುಮಾರ ಸ್ವಾಮೀಜಿ ಅವರ ಜಯಂತ್ಯುತ್ಸವ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾರತೀಯ ವಾಯು ಪಡೆಯ ವಿಶೇಷ ವಿಮಾನದಲ್ಲಿ ಮಂಗಳವಾರ ರಾತ್ರಿ ನಗರಕ್ಕೆ ಬಂದರು.

ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರು ಹೂಗುಚ್ಛ ನೀಡಿ ದ್ರೌಪದಿ ಮುರ್ಮು ಅವರನ್ನು ಸ್ವಾಗತಿಸಿದರು.

ನಂತರ ಎಚ್.ಎ.ಎಲ್ ವಿಮಾನ ನಿಲ್ದಾಣದಿಂದ ಲೋಕ ಭವನಕ್ಕೆ ತೆರಳಿ, ವಾಸ್ತವ್ಯ ಹೂಡಿದರು.

ಸ್ಟಾರ್ಟ್ ಅಪ್ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ (ಆರ್‌ಯುಎಎಸ್) ಅಂತರ ವಿಶ್ವವಿದ್ಯಾಲಯ ಕಾರ್ಯಾಗಾರ ಏರ್ಪಡಿಸಲಾಗಿತ್ತು.

'ಸ್ಟಾರ್ಟ್ ಅಪ್ ಜರ್ನಿ–ಐಡಿಯಾ' ಎಂಬ ವಿಷಯದ ಮೇಲೆ ಕಾರ್ಯಾಗಾರ ನಡೆಯಿತು. ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಫ್ಯಾಕಲ್ಟಿ ಡೀನ್ ಶರತ್ ಕುಮಾರ್ ಮಹಾರಾಣಾ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿಯೋಗಕ್ಷೇಮದ ಅಸೋಸಿಯೇಟ್ ಡೀನ್ ಡಾ.ನಯನ ಎನ್.ಪಾಟೀಲ್, ಐಐಸಿ ಸಂಯೋಜಕ ಬಿ.ಎಂ.ಕಿರಣ್ ಕುಮಾರ್, ಸಂಯೋಜಕ ಶ್ರೀಯಾಂಕ ಸುಬ್ಬರಾಯಪ್ಪ ಮಾತನಾಡಿದರು.

ನಾವೀನ್ಯತೆಯ ಚೌಕಟ್ಟು, ಮಾರುಕಟ್ಟೆ ಸಂಶೋಧನೆ, ವ್ಯಾಪಾರ ವೃದ್ಧಿ, ಸ್ಟಾರ್ಟ್ ಅಪ್ ಹಣಕಾಸು ವ್ಯವಸ್ಥೆ ಕುರಿತು ಚರ್ಚೆ ನಡೆಯಿತು. ಉದ್ಯಮದ ವೃತ್ತಿಪರರೂ ಸೇರಿ ಬಿಗ್ ಟೆಕ್ ಪ್ರೈವೇಟ್ ಲಿಮಿಟೆಡ್‌ನ ಸುಜಿತ್ ವಿಜಯನ್ ಹಾಗೂ ರವಿಶಂಕರ್ ತಮ್ಮ ವಿಚಾರಗಳನ್ನು ಹಂಚಿಕೊಂಡರು.

'ಸ್ಟಾರ್ಟ್ ಅಪ್ ಮೇಳ' ಹಾಗೂ 'ಐಡಿಯಾಥಾನ್' ಎಂಬ ಶೀರ್ಷಿಕೆಯಡಿ ಆಯೋಜಿಸಿದ್ದ ಸ್ಪರ್ಧೆಗಳಿಗೆ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಉದಯಭಾನು ಕಲಾಸಂಘವು ವಿವಿಧ ಕೌಶಲ ತರಬೇತಿಗೆ ಅರ್ಜಿ ಆಹ್ವಾನಿಸಿದೆ.

ವಿದ್ಯಾರ್ಥಿಗಳು ಹಾಗೂ ಯುವಜನರಿಗಾಗಿ ಕಂಪ್ಯೂಟರ್ ಕೌಶಲ (ಆಫೀಸ್ ಆಟೋಮೇಷನ್, ಬೇಸಿಕ್ ಮತ್ತು ಟ್ಯಾಲಿ, ಜಿ.ಎಸ್.ಟಿ) ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿಜ್ಞಾನ ಮತ್ತು ವಾಣಿಜ್ಯ ತರಗತಿಗಳು, ಶಾಲಾ ಮಕ್ಕಳಿಗೆ ಭರತನಾಟ್ಯ ತರಬೇತಿ, ಮಹಿಳೆಯರು ಮತ್ತು ಸ್ವಯಂ ಉದ್ಯೋಗ ಆಸಕ್ತರಿಗಾಗಿ ಹೊಲಿಗೆ, ಕಸೂತಿ ತರಬೇತಿ ಆಯೋಜಿಸುತ್ತಿದೆ. ಏ. 10ರೊಳಗೆ ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ: 080-26609343, 26601831 ಸಂಪರ್ಕಿಸಿ.

ಎ.ಐ ಬಗ್ಗೆ ಆತಂಕ ಬೇಡ: ಖುಷ್ಬು ಚೌಧರಿ

ಬೆಂಗಳೂರು: 'ಕೃತಕ ಬುದ್ಧಿಮತ್ತೆ(ಎ.ಐ) ಕೇವಲ ಸಾಧನವಾಗಿರದೇ ಕೌಶಲ ಅಭಿವೃದ್ಧಿಪಡಿಸಲು ಸಹಾಯಕವಾಗುವ ತಂತ್ರಜ್ಞಾನವಾಗಿದ್ದು, ವಿದ್ಯಾರ್ಥಿಗಳಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ' ಎಂದು ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ಖುಷ್ಬು ಜಿ.ಚೌಧರಿ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ, ಕೇಂದ್ರ ಶಿಕ್ಷಣ ಸಚಿವಾಲಯ, ಕರ್ನಾಟಕ ಉನ್ನತ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ 'ಏಜೆಂಟಿಕ್ ಎ.ಐ ಸಕ್ಷಮ್' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಬದಲಾಗುತ್ತಿರುವ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಎ.ಐ ಪರಿಕರಗಳು, ಹೊಸ ತಂತ್ರಜ್ಞಾನ ಅರ್ಥ ಮಾಡಿಕೊಳ್ಳುವುದು ಅಗತ್ಯವಾಗಿದೆ. ಎ.ಐ ವಿಸ್ತಾರವಾಗುತ್ತಿದ್ದು, ವಿದ್ಯಾರ್ಥಿಗಳು ಆತಂಕಕ್ಕೊಳಗಾಗದೇ ಅದನ್ನು ಸಮರ್ಪಕವಾಗಿ, ಬಳಸಿಕೊಂಡು ಭವಿಷ್ಯ ರೂಪಿಸಿಕೊಳ್ಳಬಹುದು' ಎಂದರು.

ನಿಧನ ವಾರ್ತೆ

ವೈ.ಎಂ.ಮಾಳಿಗೆ ಗೋಪಾಲಪ್ಪ



ಬೆಂಗಳೂರು: ಯಲಹಂಕದ ಕೆಂಪೇಗೌಡ ವಾರ್ಡ್‌ನ ಗಾಂಧಿನಗರ ನಿವಾಸಿ ವೈ.ಎಂ.ಮಾಳಿಗೆ ಗೋಪಾಲಪ್ಪ ಅವರು ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಮಕ್ಕಳು, ಸಹೋದರರು ಇದ್ದಾರೆ. ಬುಧವಾರ ಮಧ್ಯಾಹ್ನ ಯಲಹಂಕದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

‘ಕುಟುಂಬ ರಾಜಕಾರಣ ಮಾಡದ ನಿಜಲಿಂಗಪ್ಪ’

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮೆಚ್ಚುಗೆ

• ‘ದೂರದರ್ಶಿ ರಾಜನೇತ ಎಸ್. ನಿಜಲಿಂಗಪ್ಪ’ ಪುಸ್ತಕ ಜನಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರು ಕರ್ನಾಟಕ ಕಂಡ ಅಪರೂಪದ ರಾಜಕಾರಣಿಯಾಗಿದ್ದು, ತಮ್ಮ ಕುಟುಂಬದ ಯಾವುದೇ ಸದಸ್ಯರನ್ನು ಅವರು ರಾಜಕೀಯದಲ್ಲಿ ಮುಂಚೂಣಿಗೆ ತರಲಿಲ್ಲ’ ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ತೇಜು ಪ್ರಕಾಶನ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆರ್. ಉಮಾ ಶರ್ಮಾ ಅವರು ಹಿಂದಿ ಭಾಷೆಗೆ ಅನುವಾದಿಸಿರುವ ‘ದೂರದರ್ಶಿ ರಾಜನೇತ ಎಸ್. ನಿಜಲಿಂಗಪ್ಪ’ ಪುಸ್ತಕವನ್ನು ಜನಾರ್ಪಣೆ ಮಾಡಿ, ಮಾತನಾಡಿದರು.

ಮುಖ್ಯಾಂಶಗಳು

- ‘ಉದಾತ್ತ ಚಿಂತನೆ ಹೊಂದಿದ್ದ ನೇತಾರ’
- ‘ನಿಜಲಿಂಗಪ್ಪ ಅವರ ಹಾದಿಯಲ್ಲಿ ರಾಜಕೀಯ ನಾಯಕರು ಸಾಗಲಿ’

‘ಸ್ವಚ್ಛ ಮತ್ತು ಪ್ರಾಮಾಣಿಕ ರಾಜಕಾರಣಿಯಾಗಿದ್ದ ನಿಜಲಿಂಗಪ್ಪ ಅವರು, ತಮ್ಮ ಮಕ್ಕಳನ್ನು ರಾಜಕೀಯಕ್ಕೆ ಕರೆತರಲಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಅವರು ಮಾದರಿಯಾಗಿದ್ದಾರೆ. ಈ ನಾಡಿಗೆ ಅವರು ಅಪಾರ ಕೊಡುಗೆ ನೀಡಿದ್ದು, ರಾಜಕೀಯದ ಮಿತಿ ಮೀರಿ ಉದಾತ್ತ ಚಿಂತನೆ ಬೆಳೆಸಿಕೊಂಡಿದ್ದರು’ ಎಂದು ಹೇಳಿದರು.

ಕೃತಿಯ ಇಂಗ್ಲಿಷ್ ಅನುವಾದಕ ಎನ್. ರಾಮನಾಥ್, ‘ನಿಜಲಿಂಗಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಅವಧಿ ಕಾಂಗ್ರೆಸ್ ಪಕ್ಷಕ್ಕೆ ಸುವರ್ಣಯುಗವಾಗಿತ್ತು. ಅವರು ಅಧಿಕಾರದಿಂದ ಕೆಳಗಿಳಿದ ಬಳಿಕ ಆಡಳಿತದಲ್ಲಿ ಭ್ರಷ್ಟಾಚಾರ ಹೆಚ್ಚಿತು. ನಿಜಲಿಂಗಪ್ಪ ಅವರು ತಮ್ಮ ತಟ್ಟೆಯಲ್ಲಿ ಅನ್ನದ ಒಂದು ಅಗಳನ್ನೂ ಬಿಡದೆ ತಿನ್ನುತ್ತಿದ್ದರು. ಆದರೆ, ಈಗಿನ ರಾಜಕಾರಣಿಗಳು ಬೇರೆಯವರ ತಟ್ಟೆಯಲ್ಲಿರುವ ಒಂದು ಅಗಳನ್ನೂ ಬಿಡದೆ ನುಂಗುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ರಾಣಿ ಸತೀಶ್ ಮತ್ತು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಮಾಲೋಚನೆ ನಡೆಸಿದರು. ಎಸ್.ಜಿ. ಸುಶೀಲಮ್ಮ ಗೀತಾ ವಿಜಯಕುಮಾರ್, ವಿ. ರೇಣುಕ ಪ್ರಸನ್ನ, ಉಮಾ ಶರ್ಮಾ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಮಾಜಿ ಸಚಿವೆ ರಾಣಿ ಸತೀಶ್, ‘ನಿಜಲಿಂಗಪ್ಪ ಅವರು ಅಪರೂಪದ ರಾಜಕಾರಣಿ. ಅವರು ಅಧಿಕಾರಕ್ಕೆ ಅಂಟಿಕೊಂಡವರಲ್ಲ. ಜನಪರ ಕಾರ್ಯಕ್ರಮಗಳನ್ನು ನೀಡಿದ್ದರು. ಅವರ ಹಾದಿಯಲ್ಲಿ ಈಗಿನ ರಾಜಕಾರಣಿಗಳು ನಡೆಯಬೇಕು’ ಎಂದು ಹೇಳಿದರು.

ಅನುವಾದಕಿ ಆರ್.ಉಮಾ ಶರ್ಮಾ, ‘ಈ ಕೃತಿಯ ಅನುವಾದದಿಂದ ನನಗೆ ನಿಜಲಿಂಗಪ್ಪ ಅವರ ಜೀವನ ಶೈಲಿಯ ಬಗ್ಗೆ ತಿಳಿಯಲು ಸಾಧ್ಯವಾಯಿತು’ ಎಂದರು.

ಸುಮಂಗಲಿ ಸೇವಾಶ್ರಮದ ಸಂಸ್ಥಾಪನಾ ಅಧ್ಯಕ್ಷೆ ಎಸ್.ಜಿ. ಸುಶೀಲಮ್ಮ ಅವರನ್ನು ಇದೇ ವೇಳೆ ಗೌರವಿಸಲಾಯಿತು.

4ರಿಂದ ‘ವೀಕೆಂಡ್’ ನಾಟಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ರಂಗ ತಂಡಗಳು ಒಂದೇ ವೇದಿಕೆಯಡಿ ಏ.4ರಿಂದ ಬಸವೇಶ್ವರ ನಗರದ ಕೆ.ಇ.ಎ. ಪ್ರಭಾತ್ ರಂಗಮಂದಿರದಲ್ಲಿ ‘ವೀಕೆಂಡ್’ ನಾಟಕೋತ್ಸವ ಹಮ್ಮಿಕೊಂಡಿವೆ.


ಈ ನಾಟಕೋತ್ಸವದ ಮೊದಲ ಆವೃತ್ತಿಯಲ್ಲಿ ಏಳು ನಾಟಕಗಳು ಪ್ರದರ್ಶನ ಕಾಣಲಿವೆ.

ಸ್ಥಳೀಯ ಜನರನ್ನು ರಂಗಮಂದಿರಗಳತ್ತ ಸೆಳೆಯುವುದು ಈ ನಾಟಕೋತ್ಸವದ ಉದ್ದೇಶವಾಗಿದೆ. ನಾಟಕಗಳು ಶನಿವಾರ, ಭಾನುವಾರ ಸಂಜೆ 6.30ಕ್ಕೆ ಪ್ರದರ್ಶನ ಕಾಣಲಿದ್ದು, ಈ ಉತ್ಸವ ‘ಪ್ರಜಾವಾಣಿ’ ಮಾಧ್ಯಮ ಸಹಯೋಗದಲ್ಲಿ ನಡೆಯಲಿದೆ.

ಏ.4ರಂದು ದೃಶ್ಯಕಾವ್ಯ ತಂಡದಿಂದ ‘ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ’ ನಾಟಕ ಪ್ರದರ್ಶನ ಕಾಣಲಿದೆ. ಸುರೇಂದ್ರ ವರ್ಮ ಅವರು ಮೂಲ ನಾಟಕಕಾರರಾಗಿದ್ದು, ಇದನ್ನು ಕನ್ನಡಕ್ಕೆ ಸಿದ್ದಲಿಂಗ ಪಟ್ಟಣಶೆಟ್ಟಿ ಅನುವಾದಿಸಿದ್ದಾರೆ. ನಂಜುಂಡೇಗೌಡ ಸಿ. ಅವರು ನಿರ್ದೇಶಿಸಿದ್ದಾರೆ.

ಏ.5ರಂದು ‘ಅಣ್ಣನ ನೆನಪು’ ನಾಟಕವನ್ನು ಪ್ರವರ ಥಿಯೇಟರ್ ಕಲಾವಿದರು ಪ್ರದರ್ಶಿಸಲಿದ್ದಾರೆ. ಈ ನಾಟಕವನ್ನು ಕರಣಂ ಪವನ್ ಪ್ರಸಾದ್ ರಂಗರೂಪಕ್ಕೆ ತಂದಿದ್ದಾರೆ. ಹನುರಾಮಸಂಜೀವ ಅವರು ನಿರ್ದೇಶಿಸಿದ್ದಾರೆ.

11ರಂದು ಧ್ವನಿ ತಂಡದಿಂದ ‘ಮಾಯಾಮೃಗ’ ನಾಟಕ ಪ್ರದರ್ಶನ ಕಾಣಲಿದ್ದು, ಪೃಥ್ವಿ ಆರಾಧ್ಯ ಅವರ ನಿರ್ದೇಶನವಿದೆ. 12ರಂದು ಅಶೋಕ್ ಬಿ. ಅವರ ನಿರ್ದೇಶನದಲ್ಲಿ ವಿಶ್ವಪಥ ಕಲಾ ಸಂಗಮ ತಂಡದಿಂದ ‘ಪಾಕ ಕ್ರಾಂತಿ’ ನಾಟಕ ಹಮ್ಮಿಕೊಳ್ಳಲಾಗಿದೆ. ಈ ಮೂರು ನಾಟಕಗಳು ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಕೃತಿ ಆಧರಿಸಿವೆ.



‘ಅಣ್ಣನ ನೆನಪು’ ನಾಟಕದ ದೃಶ್ಯ

18ರಂದು ನೆನಪು ಟ್ರಸ್ಟ್‌ನಿಂದ ‘ಮಾಯಾ ದ್ವೀಪ’ ನಾಟಕ ಪ್ರದರ್ಶನ ಏರ್ಪಡಿಸಲಾಗಿದ್ದು, ಪುನೀತ್ ರಂಗಾಯಣ ಅವರ ನಿರ್ದೇಶನದಲ್ಲಿ ಕಲಾವಿದರು ಪ್ರಸ್ತುತಪಡಿಸಲಿದ್ದಾರೆ. 25ರಂದು ದಾಟು ಥಿಯೇಟರ್‌ನಿಂದ ‘ಪರಿಸರದ ಕಥೆ’ ನಾಟಕ ಪದರ್ಶನ ಕಾಣಲಿದ್ದು, ಮನು. ಆರ್. ಅವರ ನಿರ್ದೇಶನವಿದೆ. 26ರಂದು ಅಂತರಂಗ ಬಹಿರಂಗ ತಂಡದಿಂದ ‘ಮಿಸ್ಟರ್. ರಾವ್ ಆ್ಯಂಡ್ ಅಸೋಸಿಯೇಟ್ಸ್’ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದ್ದು, ಇದನ್ನು ಭೀಷ್ಮ ರಾಮಯ್ಯ ರಚಿಸಿದ್ದಾರೆ. ಬಾಷ್ ರಾಘವೇಂದ್ರ ಅವರ ನಿರ್ದೇಶನದಲ್ಲಿ ಕಲಾವಿದರು ಪ್ರದರ್ಶಿಸಲಿದ್ದಾರೆ.

ಪ್ರತಿ ನಾಟಕಕ್ಕೆ ₹150 ನಿಗದಿಪಡಿಸಲಾಗಿದ್ದು, ಏಳು ನಾಟಕಗಳನ್ನು ವೀಕ್ಷಿಸಲು ಉತ್ಸವ ಪಾಸ್‌ಗಳನ್ನು ₹850ಕ್ಕೆ ನೀಡಲಾಗುತ್ತದೆ. ಟಿಕೆಟ್‌ಗಳು ಬುಕ್ ಮೈ ಶೊದಲ್ಲಿ ಲಭ್ಯ ಎಂದು ಆಯೋಜಕರು ತಿಳಿಸಿದ್ದಾರೆ.

ಸಂಪರ್ಕಕ್ಕೆ: 9686869676, 9972489949.



ಸಮಾರಂಭದಲ್ಲಿ ಸ್ವಾಮಿ ಸ್ಮರಣಾನಂದ ಗಿರಿ ಮಾತನಾಡಿದರು

ಕನ್ನಡದಲ್ಲಿ ವೈಎಸ್‌ಎಸ್ ಕ್ರಿಯಾ ಯೋಗದ ಪಾಠಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೋಗದ ಸತ್ಸಂಗ ಸೊಸೈಟಿ ಆಫ್ ಇಂಡಿಯಾ (ವೈಎಸ್‌ಎಸ್) ಆಯೋಜಿಸಿದ್ದ ಸಮಾರಂಭದಲ್ಲಿ ಪರಮಹಂಸ ಯೋಗಾನಂದರು ಬೋಧಿಸಿದ್ದ ವೈಜ್ಞಾನಿಕ ಧ್ಯಾನದ ತಂತ್ರಗಳು ಹಾಗೂ ಯಶಸ್ವಿ ಜೀವನದ ಪಾಠಗಳನ್ನು ಕನ್ನಡದಲ್ಲಿ ಮಂಗಳವಾರ ಬಿಡುಗೊಳಿಸಲಾಯಿತು.

ವೈಎಸ್‌ಎಸ್ ಉಪಾಧ್ಯಕ್ಷ ಸ್ವಾಮಿ ಸ್ಮರಣಾನಂದ ಗಿರಿ ಮಾತನಾಡಿ, ‘ಮಾನಸಿಕ ಒತ್ತಡ ಮತ್ತು ಅಶಾಂತಿಯ ವಾತಾವರಣ ಇರುವ ಈಗಿನ ಸಂದರ್ಭದಲ್ಲಿ ಧ್ಯಾನದ ತಂತ್ರಗಳು ಅವಶ್ಯಕವಾಗಿವೆ. ಮಕ್ಕಳು, ಹಿರಿಯರು ಪ್ರಾಚೀನ ಯೋಗದ ತಂತ್ರಗಳ ಮೂಲಕ ಮನಸ್ಸನ್ನು ನಿಯಂತ್ರಿಸಿ, ಜೀವನದಲ್ಲಿ ಶಾಂತಿ, ಸೌಹಾರ್ದ, ಸಂತೋಷ, ಏಕಾಗ್ರತೆ ಸಾಧಿಸಬಹುದು’ ಎಂದರು.

‘ಯೋಗದ ಸತ್ಸಂಗ ಪಾಠಗಳನ್ನು ಹಂತ ಹಂತವಾಗಿ ಕಲಿಸುವ ಗೃಹ ಅಧ್ಯಯನ ಕೋರ್ಸ್ ಇದು. ಪರಮಹಂಸ ಯೋಗಾನಂದರು ಬೋಧಿಸಿದ ಪ್ರಾಯೋಗಿಕ ಧ್ಯಾನ ವಿಧಾನ, ಜೀವನದ ಮಾರ್ಗಗಳನ್ನು ಎಲ್ಲರೂ ಕಲಿಯಬಹುದು. ಏಕಾಗ್ರತೆ, ಆಂತರಿಕ ಶಾಂತಿ, ತೃಪ್ತಿ, ಆತ್ಮಜಾಗೃತಿ, ಈಶ್ವರನ ಸಾನಿಧ್ಯ, ಯಶಸ್ವಿ ಜೀವನದ ಮಾರ್ಗದರ್ಶನ ಸಿಗುತ್ತದೆ. ದೈನಂದಿನ ಕರ್ತವ್ಯ ನಿರ್ವಹಿಸುವುದರ ಜೊತೆಗೆ ಈ ಪಾಠಗಳನ್ನು ಕಲಿತುಕೊಳ್ಳಬಹುದು’ ಎಂದರು.

₹30 ಕೋಟಿ ಮೌಲ್ಯದ ಜಾಗ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ಅಂದಾಜು ₹30.10 ಕೋಟಿ ಮೌಲ್ಯದ 9 ಎಕರೆ 21 ಗುಂಟೆ ಸರ್ಕಾರಿ ಜಮೀನನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿದೆ.

ನಗರ ಜಿಲ್ಲೆಯಾದ್ಯಂತ ವಿವಿಧ ತಾಲ್ಲೂಕುಗಳ ತಹಶೀಲ್ದಾರ್ ತಮ್ಮ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ಕಾಲುವೆ, ಗೋಮಾಳ, ಕುಂಟೆ, ತೋಪು, ಸ್ಮಶಾನ, ಗುಂಡುತೋಪು ಹಾಗೂ ಸರ್ಕಾರಿ ಗೋಮಾಳ ತೆರವು ಕಾರ್ಯಾಚರಣೆ ಕೈಗೊಂಡರು ಎಂದು ನಗರ ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದ್ದಾರೆ.

ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ದೊಡ್ಡಬನಹಳ್ಳಿ ಗ್ರಾಮದಲ್ಲಿ ₹60 ಲಕ್ಷ ಮೌಲ್ಯದ 4 ಗುಂಟೆ ಕಾಲುವೆ, ಬಿದರಹಳ್ಳಿ ಹೋಬಳಿ ದೊಡ್ಡಬನಹಳ್ಳಿ ಗ್ರಾಮದಲ್ಲಿ ₹2.50 ಕೋಟಿ ಮೌಲ್ಯದ 15 ಗುಂಟೆ ಗೋಮಾಳ, ಕಟ್ಟುಗೊಲ್ಲಹಳ್ಳಿಯಲ್ಲಿ ₹1 ಕೋಟಿ ಮೌಲ್ಯದ 5 ಗುಂಟೆ ಕುಂಟೆ, ಬಳಿಶಿವಾಲೆಯಲ್ಲಿ ₹1 ಕೋಟಿ ಮೌಲ್ಯದ 13 ಗುಂಟೆ ತೋಪು ವಶಪಡಿಸಿಕೊಳ್ಳಲಾಗಿದೆ.

ವರ್ತೂರು ಹೋಬಳಿಯ ವಾಲೇಪುರ ಗ್ರಾಮದಲ್ಲಿ ₹80 ಲಕ್ಷ ಮೌಲ್ಯದ 4 ಗುಂಟೆ ಸ್ಮಶಾನ, ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ದೊಡ್ಡಮಾರನಹಳ್ಳಿ ಗ್ರಾಮದಲ್ಲಿ ₹50 ಲಕ್ಷ ಮೌಲ್ಯದ 20 ಗುಂಟೆ ಸ್ಮಶಾನ, ಯಲಹಂಕ ತಾಲ್ಲೂಕಿನ ಹೆಸರುಘಟ್ಟ ಹೋಬಳಿಯ ಅರಕೆರೆ ಗ್ರಾಮದಲ್ಲಿ ₹1.20 ಕೋಟಿ ಮೌಲ್ಯದ 20 ಗುಂಟೆ ಗುಂಡುತೋಪು, ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಬೊಮ್ಮಶೆಟ್ಟಿಹಳ್ಳಿಯಲ್ಲಿ ₹22.50 ಕೋಟಿ ಮೌಲ್ಯದ 7.20 ಎಕರೆ ಸರ್ಕಾರಿ ಗೋಮಾಳ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಜಿ.ಜಗದೀಶ ತಿಳಿಸಿದ್ದಾರೆ.

ತಿಮ್ಮಬೋವಿಪಾಳ್ಯ: ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟನೆ

ಬೆಂಗಳೂರು: ಯಲಹಂಕ ಕ್ಷೇತ್ರದ ದಾಸನಪುರ ಹೋಬಳಿಯ ತಿಮ್ಮಬೋವಿಪಾಳ್ಯ ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಬೆಂಗಳೂರು ಹಾಲು ಒಕ್ಕೂಟದ (ಬಮೂಲ್) ನಿರ್ದೇಶಕ ಸತೀಶ್ ಕಡತನಮಲೆ ಸೋಮವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ‘ತಿಮ್ಮಬೋವಿಪಾಳ್ಯ ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಉದ್ಘಾಟಿಸಲಾಗಿದೆ. ಸಹಕಾರ ಸಂಘ ಕಾರ್ಯನಿರ್ವಹಿಸಲು ಬಾಡಿಗೆ ಕಟ್ಟಡದ ವ್ಯವಸ್ಥೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಗ್ರಾಮದಲ್ಲಿನ ಹಾಲಿನ ಉತ್ಪಾದನೆ, ಕಾರ್ಯಚಟುವಟಿಕೆಯನ್ನು ಗಮನಿಸಿ, ಸ್ವಂತ ಕಟ್ಟಡ ನಿರ್ಮಿಸಲಾಗುವುದು’ ಎಂದು ಭರವಸೆ ನೀಡಿದರು.

‘ಸಹಕಾರ ಸಂಘದ ವ್ಯಾಪ್ತಿಯ ಹಾಲು ಉತ್ಪಾದಕರು ಹಾಲಿನ ಉತ್ಪಾದನೆ ಹೆಚ್ಚಿಸುವುದರ ಜೊತೆಗೆ ಗುಣಮಟ್ಟಕ್ಕೆ ಆದ್ಯತೆ ನೀಡಬೇಕು’ ಎಂದರು.

ಸತೀಶ್ ಕಡತನಮಲೆ ಅವರನ್ನು ಸನ್ಮಾನಿಸ ಲಾಯಿತು. ತಿಮ್ಮಬೋವಿಪಾಳ್ಯ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಸೇರಿದಂತೆ ದಾಸನಪುರ ಗ್ರಾಮ ಪಂಚಾಯಿತಿ ಸದಸ್ಯರು, ಹಾಲು ಉತ್ಪಾದಕರು, ಗ್ರಾಮಸ್ಥರು ಇದ್ದರು.

ನಗರದಲ್ಲಿ ಇಂದು

ಕರಗ ಶಕ್ತ್ಯೋತ್ಸವ: ಬೆಳಿಗ್ಗೆ 9ಕ್ಕೆ ಕರಗದ ಕುಂಟೆ (ಕಬ್ಬನ್ ಉದ್ಯಾನ), ರಾತ್ರಿ 10ರಿಂದ ಕರಗ ಶಕ್ತ್ಯೋತ್ಸವ, ಮಹಾ ರಥೋತ್ಸವ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ ಆವರಣ, ತಿಗಳರಪೇಟೆ.

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ದತ್ತಪ್ರಸಾದ್ ಅವಧೂತ ಮತ್ತು ತಂಡ, ವಿಶೇಷ ಉಪನ್ಯಾಸ: ದುಶ್ಯಂತ್ ಶ್ರೀಧರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ಶಿವಕುಮಾರ ಸ್ವಾಮೀಜಿಯವರ ಜಯಂತಿ: ಉದ್ಘಾಟನೆ: ಕೆ.ವಿ.ನಾಗರಾಜಮೂರ್ತಿ, ಉಪನ್ಯಾಸ: ಸಿ.ಕೆ.ಜಗದೀಶ್, ಅಧ್ಯಕ್ಷತೆ: ಸಿಂ.ರಾ. ಹೊನ್ನಲಿಂಗಯ್ಯ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಪೂರ್ಣಚಂದ್ರ ತೇಜಸ್ವಿ ರಂಗಮಂದಿರ, ಅನ್ನಪೂರ್ಣೇಶ್ವರಿನಗರ, ಸಂಜೆ 6

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ರಾಮಕೃಷ್ಣನ್ ಮೂರ್ತಿ, ಪಿಟೀಲು: ಎಚ್.ಎಂ.ಸ್ಮಿತಾ, ಮೃದಂಗ: ವಿಜಯ್ ನಟೇಶನ್, ಖಂಜೀರಾ: ಸುನಾದ್ ಆನೂರ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

ದಾಸವಾಣಿ ಗಾಯನ: ಮೇಧಾ ವಿದ್ಯಾ ಭೂಷಣ, ಪಿಟೀಲು: ಪ್ರಾದೇಶಚಾರ್, ಮೃದಂಗ: ನಾಗೇಂದ್ರ ಪ್ರಸಾದ್, ಘಟ: ಬಿ.ಎಸ್. ರಘುನಂದನ್, ಆಯೋಜನೆ: ವಯ್ಯಾಲಿ ಕಾವಲ್ ಎಕ್ಸ್‌ಟೆನ್ಶನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ಒಂಬತ್ತನೇ ಮುಖ್ಯರಸ್ತೆ, ವಯ್ಯಾಲಿ ಕಾವಲ್, ಸಂಜೆ 6.30

ಮುತ್ಯಾಲಮ್ಮ ದೇವಿ ರಥೋತ್ಸವ: ಹೂವಿನ ಪಲ್ಲಕ್ಕಿ ಉತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಶ್ರದ್ಧಾಂಜಲಿ



ಮಾಳಿಗೆ ವೈ ಎಂ ಗೋಪಾಲಪ್ಪನವರು
ನಿಧನ: 31–03–2026 (ವಯಸ್ಸು 92 ವರ್ಷ)
ಯಲಹಂಕ ಕೆಂಪೇಗೌಡ ವಾರ್ಡ್ ಗಾಂಧಿನಗರ
ದುಃಖತಪ್ತರು: ಪತ್ನಿ ಶ್ರೀಮತಿ ಪಾರ್ವತಮ್ಮನವರು, ಮಕ್ಕಳು, ಸಹೋದರರರು ಮತ್ತು ಕುಟುಂಬ ವರ್ಗದವರು

PRE-OFFER ADVERTISEMENT IN ACCORDANCE WITH REGULATION 18(7) OF THE SECURITIES AND EXCHANGE BOARD OF INDIA (SUBSTANTIAL ACQUISITION OF SHARES AND TAKEOVERS) REGULATIONS, 2011, AS AMENDED, AND CORRIGENDUM TO THE PUBLIC ANNOUNCEMENT AND DETAILED PUBLIC STATEMENT FOR THE ATTENTION OF THE PUBLIC SHAREHOLDERS OF

ADC INDIA COMMUNICATIONS LIMITED

Registered Office: No. 10C, 2nd Phase, 1st Main, Peenya Industrial Area, Bengaluru, Karnataka, India, 560058

Corporate Identification Number (CIN): L32209KA1988PLC009313; **Tel:** +91-8028396102 and 28396291; **Website:** www.adckcl.com

Open offer for acquisition of up to 11,96,000 (eleven lakhs ninety six thousand) fully paid-up equity shares of face value of INR 10 (Indian Rupees Ten) each (the "Equity Shares") of ADC India Communications Limited (the "Target Company"), representing 26.00% (twenty-six per cent) of the Voting Share Capital, from the Public Shareholders of the Target Company, by Amphenol Corporation (the "Acquirer") for the purpose of the Open Offer pursuant to and in compliance with the requirements of the Securities and Exchange Board of India (Substantial Acquisition of Shares and Takeovers) Regulations, 2011, as amended (the "SEBI (SAST) Regulations") (the "Open Offer")

This pre-offer advertisement in accordance with regulation 18(7) of the SEBI (SAST) Regulations and corrigendum to the Detailed Public Statement (*as defined below*) is being issued by Kotak Mahindra Capital Company Limited, the manager to the Open Offer ("**Manager**" or "**Manager to the Open Offer**"), for and on behalf of the Acquirer, in respect of the Open Offer ("**Pre-Offer Advertisement cum Corrigendum**").

This Pre-Offer Advertisement cum Corrigendum should be read in continuation of, and in conjunction with the:

(a) public announcement dated August 6, 2025 ("**Public Announcement**" or "**PA**");

(b) detailed public statement dated January 14, 2026, published on behalf of the Acquirer on January 15, 2026 in the Newspapers, except the Ahmedabad edition of Financial Express, where it was published on January 16, 2026 on account of a regional holiday ("**Detailed Public Statement**" or "**DPS**"); and

(c) the letter of offer dated March 19, 2026 ("**Letter of Offer**" or "**LoF**").

This Pre-Offer Advertisement cum Corrigendum is being published in all such Newspapers in which the Detailed Public Statement was published.

DEFINITIONS

For the purpose of this Pre-Offer Advertisement cum Corrigendum:

a) "**Identified Date**" means March 16, 2026, being the date falling on the 10th (tenth) Working Day prior to the commencement of the Tendering Period;

b) "**Newspapers**" means Financial Express (English - all editions), Jansatta (Hindi - all editions), Navshakti (Marathi – Mumbai edition), and Prajavani (Kannada – Bengaluru edition); and

c) "**Tendering Period**" means the 10 (ten) Working Days period from April 2, 2026 to April 17, 2026 (both days inclusive), within which the Public Shareholders may tender their Equity Shares in acceptance of the Open Offer.

Capitalized terms used but not defined in this Pre-Offer Advertisement cum Corrigendum shall have the same meaning assigned to such terms in the Letter of Offer.

The Public Shareholders of the Target Company are requested to kindly note the following information related to the Open Offer:

1. **Offer Price:** The offer price is INR 1,233.59 (Indian Rupees One Thousand Two Hundred Thirty Three and Fifty Nine Paise) per Equity Share being a sum of INR 1,179.92 (Indian Rupees One Thousand One Hundred Seventy Nine and Ninety Two Paise) and an enhancement of INR 53.67 (Indian Rupees Fifty Three and Sixty Seven Paise) per Offer Share. There has been no revision in the Offer Price. For further details relating to the Offer Price, please refer to paragraph 5 of Part A (*Justification of Offer Price*) of Section VII (*Offer Price and Financial Arrangements*) on page 36 of the Letter of Offer.

2. **Recommendation of the Committee of Independent Directors** ("**IDC**"): The recommendation of the IDC was approved on March 23, 2026 and published on March 25, 2026 in the Newspapers in which the Detailed Public Statement was published. The relevant extract of the recommendation of the IDC is given below:

6	Members of the Committee of Independent Directors (IDC)	a. Mr. Nagendra Venkaswamy - Chairperson b. Ms. Vijaya Latha Reddy - Member c. Mr. Harish Hassan Visweswara - Member
11	Recommendation on the Open Offer, as to whether the Offer is fair and reasonable	The IDC has perused the Letter of Offer and other documents as released and published by the Manager, for and on behalf of the Acquirer. Grant Thornton Bharat LLP ("**Grant Thornton**"), engaged as external professional advisers, have confirmed in their report dated March 20, 2026, that the Offer Price is in accordance with Regulation 8(3) of the Takeover Code. Grant Thornton have also presented the fair value per share to the members of the IDC at its meeting held on February 26, 2026, using different methods to estimate the fair value. They have, based on their analysis, concluded that the Offer Price of INR 1,233.59 per share seems reasonable. Based on the above, the IDC is of the opinion that the Offer Price to the public shareholders of the Target Company is fair and reasonable. The public shareholders have an option to tender the Equity Shares held by them or continue to remain public shareholders in the Target Company. The public shareholders of the Target Company are advised to independently evaluate the Open Offer, the market performance of the Target Company's shares, the disclosures made in the LoF and take an informed decision about tendering the Equity Shares held by them in the Open Offer. This statement of recommendation of the IDC will be available on the website of the Target Company at www.adckcl.com.
12	Summary of reasons for recommendation	1. The IDC has reviewed the Public Announcement dated August 06, 2025, the Detailed Public Statement dated January 15, 2026, the Draft Letter of Offer dated January 22, 2026, and the Letter of Offer dated March 19, 2026, in connection with the Open Offer made by the Acquirer under the Takeover Code. 2. This is an open offer for acquisition of publicly held equity shares. The public shareholders have an option to tender their shares or continue to hold them. 3. The IDC has sought an external professional advice from Grant Thornton as to whether the Offer Price is in accordance with the Takeover Code and reflects the fair value per share. Grant Thornton have concluded that the Offer Price of INR. 1,233.59 per share proposed in the Open Offer by the Acquirer is in accordance with the Takeover Code and based on their independent analysis using multiple methods of valuation, they have opined that the Offer Price seems reasonable. 4. The IDC has also sought an external professional advice from MD&T Partners, Advocates ("**MD&T Partners**") regarding the legal compliance aspects of the Open Offer under the Takeover Code. MD&T Partners have confirmed that the framework and implementation of the Open Offer appear to be broadly in line with the requirements of the Takeover Code from a legal compliance standpoint. Based on the above, the IDC believes that the Offer Price is fair and reasonable.
13	Disclosure of Voting Pattern of IDC	The recommendations were unanimously approved by the members of the IDC at the meeting held on March 23, 2026.
14	Details of independent advisors, if any	1. <u>Grant Thornton Bharat LLP</u> 5th Floor, 65/2, Block A, Bagmane Tridib Bagmane Tech Park, CV Raman Nagar Bengaluru-560093. 2. <u>MD&T Partners, Advocates</u> No.367, 14th Cross, Sadashivanagar Bengaluru – 560080.

3. **<u>Other details of the Open Offer</u>**:

3.1 The Open Offer is a mandatory offer being made by the Acquirer under Regulations 3(1), 4 and 5(1) of the SEBI (SAST) Regulations to the Public Shareholders of the Target Company.

3.2 The Open Offer is not a competing offer in terms of Regulation 20 of the SEBI (SAST) Regulations. There was no competing offer to the Open Offer and the last date for making such competing offer has expired.

3.3 The Open Offer is not conditional upon any minimum level of acceptance in terms of Regulation 19(1) of the SEBI (SAST) Regulations.

3.4 The dispatch of the Letter of Offer to the Public Shareholders as on the Identified Date (March 16, 2026) in accordance with Regulation 18(2) of the SEBI (SAST) Regulations has been completed (either through electronic mode or physical mode) on March 24, 2026. The Identified Date was relevant only for the purpose of determining the Public Shareholders to whom the LoF was to be sent. It is clarified that all the Public Shareholders (even if they acquire Equity Shares and become shareholders of the Target Company after the Identified Date) are eligible to participate in the Open Offer during the Tendering Period. A copy of the LoF (which includes Form of Acceptance) is available on the website of SEBI (www.sebi.gov.in) from which the Public Shareholders can download/print the same. Further, a Public Shareholder who wishes to obtain a copy of the LoF may send a request to the Registrar to the Offer at the email ID mentioned at the end of this Pre-Offer Advertisement cum Corrigendum stating the name, address, number of Equity Shares held, client ID number, DP name/ID, beneficiary account number, and upon receipt of such request, a copy of the LoF shall be provided to such Public Shareholder.

3.5 **Tendering in case of non-receipt of LoF**: In case of non-receipt/non-availability of the Form of Acceptance, a Public Shareholder may participate in the Offer: (i) by using the Form of Acceptance obtained in the manner described above; or (ii) by providing their application in writing on a plain paper along with the following:

(a) In case of Public Shareholders holding Equity Shares in dematerialized form, the plain paper application must be signed by all such Public Shareholder(s), stating name, address, number of Equity Shares held, client ID number, DP name, DP ID number, number of Equity Shares being tendered, and other relevant documents as mentioned in the LoF. Public Shareholders who desire to tender their Equity Shares in dematerialized form under the Offer would have to do so through their respective Selling Broker by giving the details of Equity Shares they intend to tender in accordance with the procedure as mentioned in Section IX (*Procedure for Acceptance and Settlement of the Open Offer*) of LoF. Such Public Shareholders should tender their Equity Shares before market hours close on the last day of the Tendering Period.

(b) In case of Eligible Shareholders holding Equity Shares in physical form, the plain paper application must be signed by all such Public Shareholder(s) stating name, address, folio number, number of Equity Shares held, share certificate number, number of Equity Shares being tendered and the distinctive numbers thereof, enclosing the original share certificate(s), copy of Public Shareholders' PAN card(s), executed share transfer form and other necessary documents. Public Shareholders/Selling Broker must ensure that the Form of Acceptance, along with TRS and the requisite documents (as mentioned in Section IX (*Procedure for Acceptance and Settlement of the Open Offer*)) of the LoF, reach the Registrar to the Offer no later than the last day of the Tendering Period (i.e., April 17, 2026) by 5:00 PM.

3.6 This Open Offer will be implemented by the Acquirer, subject to applicable laws, through the Stock Exchange mechanism made available by the Stock Exchange in the form of separate window ("**Acquisition Window**") in accordance with the SEBI master circular bearing reference no. SEBI/HO/CFD/PoD-1/P/CIR/2023/31 dated February 16, 2023 ("**Master Circular**"). As per the Master Circular, a lien shall be marked against the shares of the shareholders participating in tender offers. Upon finalisation of the entitlement, only accepted quantity of Equity Shares shall be debited from the demat account of the Public Shareholders. The lien marked against unaccepted Equity Shares shall be released. The detailed procedure for tendering and settlement of Equity Shares under the revised mechanism is specified in the annexure to the said Master Circular.

3.7 The Public Shareholders are requested to refer to Section IX (*Procedure for Acceptance and Settlement of the Open Offer*) of the Letter of Offer in relation to, *inter alia*, the procedure for tendering their Equity Shares in the Open Offer and are also required to adhere to and follow the procedure outlined therein. A summary of the procedure for tendering Equity Shares in the Offer is as below:

(a) In case of Public Shareholders holding Equity Shares in dematerialized form: The Public Shareholders who are holding Equity Shares in electronic/dematerialised form and who desire to tender their Equity Shares in this Offer shall approach their respective Selling Broker indicating to their Selling Broker the details of Equity Shares that such Public Shareholder intends to tender in the Open Offer. The Public Shareholders should tender their Equity Shares before market hours close on the last day of the Tendering Period. Upon placing the bid, the Selling Broker shall provide the TRS generated by the Stock Exchange bidding system to the Public Shareholder. TRS will contain details of order/bid submitted like bid identification number, depository participant identification number, client identification number, no. of Equity Shares tendered, etc. Further, please refer to paragraph 22 of Section IX (*Procedure for Acceptance and Settlement of the Open Offer*) on page 47 of the Letter of Offer for the procedure for tendering to be followed by Public Shareholders holding Equity Shares in dematerialized form.

(b) <u>In case of Eligible Shareholders holding Equity Shares in physical form</u>: The Public Shareholders who are holding Equity Shares in physical form and intend to participate in the Offer will be required to approach their respective Selling Broker along with the complete set of documents for verification procedures to be carried out, including the (i) original share certificate(s), (ii) valid share transfer form(s), i.e., Form SH-4, duly filled and signed by the transferors (i.e., by all registered shareholders in same order and as per the specimen signatures registered with the Target Company) and duly witnessed at the appropriate place, (iii) self-attested copy of the Public Shareholder's PAN card, (iv) Form of Acceptance duly completed and signed in accordance with the instructions contained therein, by sole/joint Public Shareholders whose name(s) appears on the share certificate(s) in the same order in which they hold Equity Shares, and (v) any other relevant documents such as power of attorney, corporate authorization (including board resolution/specimen signature), notarized copy of death certificate and succession certificate or probated will, if the original shareholder has deceased, etc., as applicable. Further, please refer to paragraph 23 of Section IX (*Procedure for Acceptance and Settlement of the Open Offer*) on page 49 of the LoF for the procedure for tendering to be followed by Public Shareholders holding Equity Shares in physical form.


4. In terms of Regulation 16(1) of the SEBI (SAST) Regulations, the draft letter of offer was filed with SEBI on January 22, 2026 ("**DLoF**"). SEBI, *vide* its letter dated March 12, 2026, provided its final comments in relation to the DLoF, in accordance with Regulation 16(4) of the SEBI (SAST) Regulations ("**SEBI Observation Letter**"). These comments have been incorporated in the LoF. This Pre-Offer Advertisement cum Corrigendum also serves as a corrigendum to the DPS and PA, and as required in terms of the SEBI Observation Letter, reflects the changes made in the LoF as compared to the DPS and the PA.

5. **Material updates**: The comments specified in the SEBI Observation Letter and certain changes (occurring after the date of the Public Announcement) which may be material have been incorporated in the LoF and are more particularly disclosed in paragraphs 6,7 and 8 below.

6. **Material Updates on the Underlying Transaction**:

6.1 The Letter of Offer has been updated to include graphical representation of the Underlying Transaction with all the involved entities (including holdings, ultimate holdings). Paragraph 3 of Part A *(Background to the Open Offer)* of Section III *(Details of the Open Offer)* on page 18 of the LoF has been updated to include the following details. Paragraph 2 of Part A *(Underlying Transaction)* of Section II (Background to the Open Offer) of the DPS stands accordingly amended.

Set out below is the graphical representation of the Underlying Transaction with all the involved entities (including holdings, ultimate holdings and ultimate beneficial owners):



Notes:

1. *The Acquirer does not have any identifiable persons in control or promoters. As the securities of the Acquirer are listed on the New York Stock Exchange, the shareholding of the Acquirer is dispersed and changes frequently.*
2. *Now renamed to Vistance Networks, Inc.*

6.2 Pursuant to the Underlying Transaction, the Board, at its meeting held on February 10, 2026: (a) subject to the approval of the Shareholders of the Target Company, appointed (i) Ms. Lin Xia Smyth (DIN: 11525342); and (ii) Mr. Vineeth Chandran (DIN: 07560696), both nominees of the Acquirer, as Additional (Non-Executive Non-Independent) Directors of the Target Company; and (b) accepted the resignation of: (i) Mr. Rakesh Kishore Bhanushali (DIN: 07220290); and (ii) Mr. Jonathan Niall Murphy (DIN: 10057273), both Non-Executive Non-Independent Directors of the Target Company, each with effect from February 10, 2026. Please refer to (i) paragraphs 8 and 10 of Part A (*Background to the Open Offer*) of Section III (*Details of the Open Offer*) on pages 19 and 20 of the LoF; (ii) paragraphs 8 and 10 of Part A (*Details of Amphenol Corporation (Acquirer)*) of Section IV (*Background of the Acquirer*) on page 25 of the LoF; and (iii) paragraphs 13 and 14 of Section VI (*Background of the Target Company*) on page 32 of the LoF for further details. Paragraphs 9 and 11 of Part A (*Details of Amphenol Corporation (Acquirer)*) of Section I (*Acquirer, Seller, Target Company and Open Offer*) of the DPS stand accordingly amended.

6.3 The Letter of Offer has been updated to clarify the promoter/promoter group of the Target Company, pursuant to consummation of the Underlying Transaction. Paragraph 9 of Part A (*Background to the Open Offer*) of Section III (*Details of the Open Offer*) on page 19 and 20 of the LoF has been updated to read as follows:

CommScope Technologies LLC and CommScope Connectivity LLC, which are currently part of the 'promoter/ promoter group' of the Target Company (now direct and indirect subsidiaries of the Acquirer, respectively) shall continue to be disclosed as the 'promoter/ promoter group' of the Target Company. Pursuant to the Underlying Transaction, the Acquirer has been categorised as the promoter/ promoter group of the Target Company.

7. **Other key updates and changes**:

7.1 The disclosures in the DPS under Section VI (*Statutory and Other Approvals*) and in the DLoF under Section VIII (*Statutory and Other Approvals*) have been modified in the LoF and appear under Part C (*Statutory and Other Approvals*) of Section VIII (*Terms and Conditions of the Open Offer*) on page 42 of the LoF as follows:

The Acquirer has consummated the Underlying Transaction on January 9, 2026 with the Seller after receipt of all the applicable statutory approvals and fulfillment of the conditions precedent to the Underlying Transaction, in terms of the Purchase Agreement. In terms of Regulation 23(1) of the SEBI (SAST) Regulations, the Acquirer may withdraw the Open Offer under the following circumstances: (i) statutory or governmental approval(s) required for the Open Offer having been finally refused; or (ii) such circumstances as in the opinion of SEBI merit withdrawal. As on the date of the Letter of Offer, there are no statutory approvals required by the Acquirer to complete the Open Offer. However, in case any other statutory or government approval(s) are required or become applicable at a later date before closure of the Tendering Period, this Open Offer shall be subject to receipt of such statutory or government approval(s).

Section VI (*Statutory and Other Approvals*) of the DPS stands accordingly amended to remove the "best of knowledge" qualifier. In view of the above, the disclosures with respect to the status of statutory and other approvals have been appropriately amended in the LoF at: (i) bullet point ii under paragraph 2 (*Risks Relating to the Open Offer*) under the section dealing with Risk Factors on page 4 of the LoF; (ii) paragraph 14 of Part B (*Details of the proposed offer*) of Section III (*Details of the Open Offer*) on page 22 of the LoF.

7.2 The Letter of Offer has been updated to include details of the applicable laws and the timeline within which the Acquirer shall bring down the non-public shareholding in the Target Company to the level specified under the applicable laws in case, as a result of the acquisition of Equity Shares pursuant to the Open Offer, the public shareholding in the Target Company falls below the minimum level required. Please refer to: (i) bullet point iv under paragraph 3 (*Risks involved in associating with the Acquirer*) under the section dealing with Risk Factors on page 7 of the LoF; (ii) paragraph 21 of Part B (*Details of the proposed offer*) of Section III (*Details of the Open Offer*) on page 23 of the LoF; and (iii) paragraph 18 of Section VI (*Background of the Target Company*) on page 34 of the LoF for further details. Paragraph 15 of Part D (*Details of the Open Offer*) of Section I (*Acquirer, Seller, Target Company and Open Offer*) of the DPS stands accordingly amended.

7.3 The Letter of Offer has been updated to clarify that the Acquirer has directly purchased the connectivity and cable solutions business of the Seller. Please refer to paragraph 2 of Part A (*Background to the Open Offer*) of Section III (*Details of the Open Offer*) on page 17 of the LoF for further details. Paragraph 1 of Part A of Section II (*Background to the Open Offer*) of the DPS stands accordingly amended.

7.4 The Letter of Offer has been updated to clarify that: (i) as on the date of the LoF, there are no regulatory actions/ administrative warnings/ directions subsisting or proceedings pending against the Manager to the Offer under the SEBI Act and regulations made thereunder, or by any other regulator; (ii) since January 01, 2021, no penalty has been levied by SEBI/ RBI/ other regulator against the Manager to the Offer; and (iii) as on the date of the LoF, neither the Manager to the Open Offer nor the Target Company has received any complaints in writing in relation to the Open Offer or the valuation of the Offer Price. Please refer to paragraphs 23 - 25 of Part B (*Details of the proposed Offer*) of Section III (*Details of the Open Offer*) on page 23 of the LoF for further details.

7.5 The Letter of Offer has been updated to include the updated shareholding of the Acquirer as of December 31, 2025. Accordingly, paragraphs 5 and 6 of Part A (*Details of Amphenol Corporation (Acquirer)*) of Section IV (*Background of the Acquirer*) on page 25 of the LoF reads as follows:

5. *As of December 31, 2025, the aggregate par value of all issued shares of common stock and the additional paid-in capital of the Acquirer, as stated in its consolidated balance sheets filed with the SEC, is USD 1.2 million and USD 4,232.9 million, respectively, represented by 1,226.6 million outstanding shares of Class A common stock.*

6. *The Acquirer does not have any identifiable persons in control or promoters. As the securities of the Acquirer are listed on the New York Stock Exchange, the shareholding of the Acquirer is dispersed and changes frequently. To the Acquirer's knowledge, based on the Acquirer's review of the latest Schedule 13F-HR filings made by its shareholders with the SEC, the details of key shareholders who beneficially own more than 5% (five per cent) of the shareholding of the Acquirer, are as follows:*

S. No.	Shareholders' category	Number of shares	% of the shares*
1.	The Vanguard Group	126,553,498	10.3
2.	BlackRock, Inc.	106,137,606	8.7
3.	FMR LLC	86,420,795	7.0

***Source**: 13F-HR Filings with the SEC, made by each of the shareholders listed above with respect to their respective shareholdings.*

***Note**: As on the date hereof, to the Acquirer's knowledge, based on the Acquirer's review of Schedule 13F-HR made by the shareholders listed above, there are no other shareholders holding more than 5% in the Acquirer.*

** Calculated on the basis of 1,226.6 million outstanding shares of Class A common stock as of December 31, 2025.*

Paragraphs 5 and 6 of Part A (*Details of Amphenol Corporation (Acquirer)*) of Section I (*Acquirer, Seller, Target Company and Open Offer*) of the DPS stand accordingly amended.

7.6 The market price per share of the common stock of the Acquirer on the New York Stock Exchange has been updated as of one Working Day prior to the date of the LoF. Please refer to paragraph 14 of Part A (*Details of Amphenol Corporation (Acquirer)*) of Section I (*Acquirer, Seller, Target Company and Open Offer*) on page 28 of the LoF for further details.

7.7 The Letter of Offer has been updated to reflect the key financial information of the Acquirer based on its audited consolidated financial statements for the financial years ended December 31, 2023, December 31, 2024, and December 31, 2025. Please refer to paragraph 16 of Part A (*Details of Amphenol Corporation (Acquirer)*) of Section IV (*Background of the Acquirer*) on page 29 of the LoF for further details. Paragraph 14 of Part A (*Details of Amphenol Corporation (Acquirer)*) of Section I (*Acquirer, Seller, Target Company and Open Offer*) of the DPS stands accordingly amended.

7.8 The Letter of Offer has been updated to reflect the major contingent liabilities of the Acquirer as described in its Annual Report on Form 10-K for the period ended on December 31, 2025. Please refer to paragraph 17 of Part A (*Details of Amphenol Corporation (Acquirer)*) of Section IV (*Background of the Acquirer*) on page 30 of the LoF for further details.

7.9 The Letter of Offer has been updated to clarify that: (i) as on the date of LoF, as per the Acquirer's knowledge, the Acquirer does not have any relationship with the Public Shareholders in connection with the Underlying Transaction and/or the Open Offer; (ii) as on the date of LoF, there are no regulatory actions/ administrative warnings/ directions subsisting or proceedings pending against the Acquirer by: (a) any Indian regulator; (b) by any regulator outside of India, which, the Acquirer believes, would have a material adverse effect on the Acquirer's financial condition, results of operations, or cash flows, or its ability to fulfill its obligations with respect to the Open Offer; (iii) as on the date of LoF, there are no regulatory actions/ administrative warnings/ directions subsisting or proceedings pending against the directors/ KMPs of the Acquirer by: (a) any Indian regulator; (b) by any regulator outside of India, which would have any adverse impact on their respective ability to fulfill their respective obligations with respect to the Open Offer; (iv) since January 1, 2021, no penalty has been levied on the Acquirer by SEBI/ RBI/ any other Indian regulator; and (v) since January 1, 2021, there are no penalties levied on the directors/ KMPs of the Acquirer by: (a) SEBI/ RBI/ any other Indian regulator; or (b) by any regulator outside of India, which would have any adverse impact on their respective ability to fulfill their respective obligations with respect to the Open Offer. Please refer to paragraphs 18 – 20 of Part A (*Details of Amphenol Corporation (Acquirer)*) of Section I (*Acquirer, Seller, Target Company and Open Offer*) on page 30 of the LoF for further details.

Contd.

‘ಸರ್ಕಾರಿ ಕಟ್ಟಡ: ₹457 ಕೋಟಿ ಬಾಕಿ’

2025ರ ಆರ್ಥಿಕ ವರ್ಷದ ಅಂತ್ಯಕ್ಕೆ ಉಳಿಕೆ ಇರುವ ಸೇವಾ ತೆರಿಗೆ ವಸೂಲಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಧ್ಯಮ- ಕೆಳ ಮಧ್ಯಮ ವರ್ಗದವರ ಆಸ್ತಿಗಳನ್ನು ಹರಾಜು ಮಾಡುವ ಮೊದಲು, ಸರ್ಕಾರಿ ಕಟ್ಟಡಗಳು ಬಾಕಿ ಉಳಿಕೊಂಡಿರುವ ₹457.71 ಕೋಟಿ ಸೇವಾ ತೆರಿಗೆಯನ್ನು ವಸೂಲಿ ಮಾಡಿ’ ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಆಗ್ರಹಿಸಿದರು.

‘ವಿಧಾನಸೌಧ, ವಿಕಾಸಸೌಧ, ಕುಮಾರ ಕೃಪಾ, ಲೋಕಭವನ, ಬಹು ಮಹಡಿ ಕಟ್ಟಡ ಸೇರಿದಂತೆ ಎಂಟು ವಲಯಗಳಲ್ಲಿ ಸರ್ಕಾರಿ ಕಟ್ಟಡಗಳು ಬಾಕಿ ಉಳಿಸಿಕೊಂಡಿರುವ ಸೇವಾ ತೆರಿಗೆಯನ್ನು ವಸೂಲಿ ಮಾಡಲು ಅವುಗಳನ್ನು ಜಪ್ತಿ ಮಾಡುವ ಧೈರ್ಯ ಪ್ರದರ್ಶಿಸಬೇಕು’ ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಒತ್ತಾಯಿಸಿದರು.

ಯಾವ ಕಟ್ಟಡದಿಂದ ಎಷ್ಟು ಸೇವಾ ತೆರಿಗೆ ಬಾಕಿ ಇದೆ ಎಂಬ ವಿವರವಾದ ದಾಖಲೆಗಳನ್ನು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಸಲ್ಲಿಸಿದ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

‘ವಿಧಾನಸೌಧ, ವಿಕಾಸಸೌಧ, ಲೋಕಭವನ, ಬಹುಮಹಡಿ ಕಟ್ಟಡ ಮತ್ತು ಕುಮಾರ ಕೃಪಾ ಅತಿಥಿ ಗೃಹದಿಂದ 2008-09ರಿಂದ ₹14.94 ಕೋಟಿ ಸೇವಾ ತೆರಿಗೆ ಬಾಕಿ ಇದೆ. ವಿಧಾನ ಸೌಧದಲ್ಲಿರುವ ಕ್ಯಾಂಟೀನ್ ₹7.40 ಲಕ್ಷ, ವಿಕಾಸ ಸೌಧದ ಕ್ಯಾಂಟೀನ್‌ನಿಂದ ₹17.65 ಲಕ್ಷ ‘ಆಸ್ತಿ ತೆರಿಗೆ’ ಬಾಕಿ ಇದೆ’ ಎಂದು ಮಾಹಿತಿ ನೀಡಿದರು.

‘ಹಿಂದಿನ ಬಿಬಿಎಂಪಿ ಪೂರ್ವ ವಲಯ ಆಯುಕ್ತೆಯಾಗಿದ್ದ ಸ್ನೇಹಲ್ ಅವರು 2025ರ ಮಾರ್ಚ್ 17ರಂದು ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ‘ಡಿಮ್ಯಾಂಡ್ ನೋಟಿಸ್’ ಜಾರಿ ಮಾಡಿ, ₹8.54 ಕೋಟಿ ಸೇವಾ ತೆರಿಗೆ ಪಾವತಿಸುವಂತೆ ಸೂಚಿಸಿದ್ದರು’ ಎಂದರು.



‘ನಗರದಲ್ಲಿರುವ ಟೆಕ್ ಪಾರ್ಕ್, ಉದ್ದಿಮೆಗಳು, ಐಟಿ-ಬಿಟಿ ಕಂಪನಿಗಳು, ಮಾಲ್- ಮಲ್ಟಿಪ್ಲೆಕ್ಸ್, ತಾರಾ ಹೋಟೆಲ್, ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿಂದ ಆಸ್ತಿ ತೆರಿಗೆಯನ್ನು ಕಟ್ಟುನಿಟ್ಟಾಗಿ ವಸೂಲಿ ಮಾಡಲು ಹಿಂದೇಟು ಹಾಕುವ ಪಾಲಿಕೆ ಅಧಿಕಾರಿಗಳು, ಕೆಳ ಹಾಗೂ ಮಧ್ಯಮ ವರ್ಗದವರ ಆಸ್ತಿಗಳನ್ನು ಹರಾಜು ಹಾಕಲು/ ವಶಪಡಿಸಿಕೊಳ್ಳಲು ಆಸಕ್ತಿ ವಹಿಸಿರುವುದು ಅಮಾನವೀಯ’ ಎಂದು ಹೇಳಿದರು.

‘ಬೃಹತ್ ಪ್ರಮಾಣದ ‘ಸೇವಾ ತೆರಿಗೆ’ ಬಾಕಿ ಉಳಿಸಿಕೊಂಡಿರುವ ಸರ್ಕಾರಿ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಯಾ ಇಲಾಖೆಗಳ ಮುಖ್ಯಸ್ಥರಿಗೆ ‘ಡಿಮ್ಯಾಂಡ್ ನೋಟಿಸ್’ ಹಾಗೂ ‘ಕಾನೂನು ನೋಟಿಸ್’ಗಳನ್ನು ನೀಡಬೇಕು. ಒಂದು ದಿನವಾದರೂ ಬೀಗಮುದ್ರೆ ಹಾಕುವಂತಹ ಕೆಲಸ ಮಾಡಲಿ. ಈ ಮೂಲಕ ಎಲ್ಲರಿಗೂ ಒಂದೇ ನ್ಯಾಯ ಎಂಬುದಾಗಿ ಹೇಳಲಿ’ ಎಂದು ಆಗ್ರಹಿಸಿದರು.

ದೂರು, ದಾಖಲೆಗಳನ್ನು ಪಡೆದ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ‘ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ’ ಭರವಸೆ ನೀಡಿದರು.

ಯಾವ ವಲಯದಲ್ಲಿ ಎಷ್ಟು ಬಾಕಿ? (ಕೋಟಿ ₹ಗಳಲ್ಲಿ)

ವಲಯ	ಬಾಕಿ
ಪೂರ್ವ	246.39
ಯಲಹಂಕ	67.48
ಆರ್.ಆರ್. ನಗರ	57.52
ಮಹದೇವಪುರ	39.13
ದಕ್ಷಿಣ	33.70
ಬೊಮ್ಮನಹಳ್ಳಿ	5.68
ದಾಸರಹಳ್ಳಿ	4.17
ಪಶ್ಚಿಮ	3.61

ಕಾರ್ಯನಿರ್ವಹಿಸದ ಸಹಾಯ ಆ್ಯಪ್, ಸಹಾಯವಾಣಿ: ಆಯುಕ್ತರಿಗೆ ದೂರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕೆ.ಎನ್. ರಮೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆ
- ಪಾದಚಾರಿ ಮಾರ್ಗಗಳ ಅತಿಕ್ರಮಣ: ಆರೋಪ

ಬೆಂಗಳೂರು: ‘ಸಮಸ್ಯೆಗಳಿಗೆ ಸ್ಪಂದಿಸಲು ಆರಂಭಿಸಿರುವ ‘ಸಹಾಯ ಆ್ಯಪ್’ ಮತ್ತು ಸಹಾಯವಾಣಿ 1533 ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ದೂರುಗಳಿಗೆ ಪರಿಹಾರ ಸಿಗದೆ ಹೋದರೂ ‘ಬಗೆಹರಿಸಲಾಗಿದೆ’ ಎಂದು ತೋರಿಸಲಾಗುತ್ತಿದೆ’ ಎಂದು ನಾಗರಿಕರು ದೂರಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಆಯುಕ್ತ ಕೆ.ಎನ್. ರಮೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ, ‘ಮೂಲ ಸೌಕರ್ಯಗಳ ಕುರಿತು ನಾಗರಿಕ ಕ್ಷೇಮಾಭಿವೃದ್ಧಿ ಸಂಘಗಳೊಂದಿಗೆ ಮಾಸಿಕ ಸಭೆ’ಯಲ್ಲಿ ಸಾರ್ವಜನಿಕರು ಸಮಸ್ಯೆ ಪರಿಹಾರವಾಗದ ಬಗ್ಗೆ ಅಳಲು ತೋಡಿಕೊಂಡರು.

‘ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಕಟ್ಟಡ ನಿಯಮಗಳ ಉಲ್ಲಂಘನೆ, ರಾಜಕಾಲುವೆ ಹೂಳೆತ್ತುವ ಕಾರ್ಯ ವಿಳಂಬ ಮತ್ತು ಪೌರಕಾರ್ಮಿಕರ ಕೊರತೆ ಇದೆ. ಪಾದಚಾರಿ ಮಾರ್ಗಗಳ ಅತಿಕ್ರಮಣದಿಂದ ಸಾರ್ವಜನಿಕ ಓಡಾಟಕ್ಕೆ ತೊಂದರೆಯಾಗುತ್ತಿದೆ’ ಎಂದು ದೂರಿದರು.

‘ರಸ್ತೆ ಮಾರ್ಕಿಂಗ್ ಹಾಗೂ ಯಂತ್ರಗಳಿಂದ ಗುಡಿಸುವ ವ್ಯವಸ್ಥೆಯನ್ನು ಎಲ್ಲಾ ವಾರ್ಡ್‌ಗಳಿಗೆ ವಿಸ್ತರಿಸಬೇಕು. ಪಾಲಿಕೆ ವ್ಯಾಪ್ತಿಯ ಬಹುತೇಕ ಕಡೆ ಕಸ ಸಂಗ್ರಹಣೆಗೆ ಆಟೊ ಬರುವುದಿಲ್ಲ. ಇದರಿಂದ ಬ್ಲ್ಯಾಕ್ ಸ್ಪಾಟ್ ಹೆಚ್ಚಲು ಕಾರಣವಾಗಿದೆ’ ಎಂದು ಹೇಳಿದರು.

‘ಮೂಲದಲ್ಲೇ ಕಸ ವಿಂಗಡಣೆ ಮಾಡುವುದು ಕಡ್ಡಾಯವಾಗಿದ್ದು, ಕೋರಮಂಗಲದ ‘ಸಾಹಸ್’ ಎನ್‌ಜಿಒ ಮಾದರಿಯಲ್ಲಿ ಪ್ರತಿ ವಾರ್ಡ್‌ನಲ್ಲಿ ಸ್ವಯಂಸೇವಕರು ಘನತ್ಯಾಜ್ಯ ನಿರ್ವಹಣೆ ತಂಡದೊಂದಿಗೆ ಸಹಕರಿಸಬೇಕು’ ಎಂದು ಕೆ.ಎನ್. ರಮೇಶ್ ತಿಳಿಸಿದರು.

‘ನಾಗರಿಕ ಸಮಸ್ಯೆಗಳಿಗೆ ಸ್ಪಂದಿಸಲು ಪ್ರತಿ ಪ್ರದೇಶದಲ್ಲಿ ‘ರೂಟ್ ಮಟ್ಟದ ತಂಡ’ಗಳನ್ನು ರಚಿಸಿಕೊಳ್ಳಬೇಕು. ಸ್ಥಳೀಯ ಅಭಿವೃದ್ಧಿ ಕಾರ್ಯಗಳಲ್ಲಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯನ್ನು ಬಳಸಿಕೊಳ್ಳಲು ನಾಗರಿಕ ಕ್ಷೇಮಾಭಿವೃದ್ಧಿ ಸಂಘಗಳು ಪಾಲಿಕೆಯೊಂದಿಗೆ ಕೈಜೋಡಿಸಬೇಕು. ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನದ ವೇಗವನ್ನು ಹೆಚ್ಚಿಸಲು ಮತ್ತು ಪಾರದರ್ಶಕತೆ ಕಾಯ್ದುಕೊಳ್ಳಲು ಪಾಲಿಕೆ ಬದ್ಧವಾಗಿದೆ’ ಎಂದು ಆಯುಕ್ತರು ಭರವಸೆ ನೀಡಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಎಲ್ಲ ಸ್ಥಳೀಯ ನಿವಾಸಿಗಳ ಸಂಘಗಳು ಒಗ್ಗೂಡಿ ‘ಬೆಂಗಳೂರು ದಕ್ಷಿಣ ಮಹಾನಗರ ಪಾಲಿಕೆ ನಿವಾಸಿಗಳ ಸಂಘಗಳ ಒಕ್ಕೂಟ’ ಸ್ಥಾಪಿಸಿದ್ದಾರೆ. ಅದರ ಬ್ಯಾನರ್ ಅನ್ನು ರಮೇಶ್ ಬಿಡುಗಡೆ ಮಾಡಿದರು.

ಎಲ್ಲೂ ನೋಡಿದರೂ ಕಸದ ರಾಶಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಆರ್. ಆರ್. ನಗರ ವಿಧಾನಸಭಾ ಕ್ಷೇತ್ರದ ಸಜ್ಜೆಪಾಳ್ಯ ದಲ್ಲಿ ಎಲ್ಲೂ ನೋಡಿದರೂ ಕಸದ ರಾಶಿ. ಮತ್ತೊಂದೆಡೆ ಕಿತ್ತು ಹೋಗಿರುವ ರಸ್ತೆಗಳೇ ಕಾಣುತ್ತವೆ. ಸಂಜೆ ಮತ್ತು ಮುಂಜಾನೆ ಗಾಳಿ ಬೀಸಿದಾಗ ದುರ್ವಾಸನೆ ಜೊತೆಗೆ, ಸೊಳ್ಳೆ ನೊಣಗಳ ಹಾವಳಿ ವಿಪರೀತವಾಗಿದೆ ಎಂದು ನಾಗರಿಕರು ಆಕ್ರೋಶ ವ್ಯಕ್ತಪಡಿಸಿದರು.



ಸಜ್ಜೆ ಪಾಳ್ಯದ ರಸ್ತೆಯಲ್ಲಿ ಕಸದ ರಾಶಿ

‘ಬೆಂಗಳೂರು ಪಶ್ಚಿಮ ಜಿಲ್ಲಾ ನಗರ ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿ ಯಿಂದ ಸಮಸ್ಯೆ ಹೆಚ್ಚಾಗಿದೆ. ಮನೆ ಗಳಿಂದ ಕಸ ಸಂಗ್ರಹಿಸದ್ದರಿಂದ ರಸ್ತೆಗಳಲ್ಲಿ ತ್ಯಾಜ್ಯವನ್ನು ನಾಗರಿಕರು ಸುರಿಯುತ್ತಿದ್ದಾರೆ. ಮಾಂಸದ ಅಂಗಡಿ ಮಾಲೀಕರೂ ಎಲ್ಲೆಂದರಲ್ಲಿ ತ್ಯಾಜ್ಯ ಬಿಸಾಡುತ್ತಿದ್ದಾರೆ. ಹೀಗಾಗಿ, ಬೀದಿನಾಯಿಗಳ ಹಾವಳಿ ಹೆಚ್ಚಾಗಿದ್ದು, ಮಕ್ಕಳು, ವೃದ್ಧರ ಮೇಲೆ ದಾಳಿ ಮಾಡುತ್ತಿವೆ’ ಎಂದು ಸ್ಥಳೀಯ ನಿವಾಸಿ ಸತೀಶ್ ಹೇಳಿದರು.

ರಸ್ತೆಯಲ್ಲಿ ಕಸ: ಲೋಕಾಯುಕ್ತ ಸಮನ್ಸ್

ಬೆಂಗಳೂರು: ನಗರದ ವಿವಿಧೆಡೆ ರಸ್ತೆಗಳಲ್ಲಿ ಕಸವನ್ನು ರಾಶಿ ಹಾಕಿರುವುದರ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿರುವ ಲೋಕಾಯುಕ್ತರು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಗಮಕ್ಕೆ ಸಮನ್ಸ್ ಜಾರಿ ಮಾಡಿದ್ದಾರೆ.

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಸೋಮವಾರ ನಗರದ ಗೊಟ್ಟಿಗೆರೆ ಬಳಿಯ ಡೆಕತ್ಲಾನ್ ಮಳಿಗೆ, ನಿಮ್ಹಾನ್ಸ್‌ನಿಂದ ಮಿನರ್ವ ವೃತ್ತ, ಅಂಜನಾಪುರ, ಜೆ.ಪಿ.ನಗರ 9ನೇ ಬ್ಲಾಕ್‌ನ ಪ್ರದೇಶಗಳಿಗೆ ಸಂಸ್ಥೆಯ ಪೊಲೀಸರೊಂದಿಗೆ ಅನಿರೀಕ್ಷಿತ ಭೇಟಿ ನೀಡಿದ್ದರು ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಈ ವೇಳೆ ರಸ್ತೆಯ ಬದಿಯಲ್ಲಿ, ಖಾಲಿ ನಿವೇಶನಗಳಲ್ಲಿ ಕಸವನ್ನು ರಾಶಿ ಮಾಡಲಾಗಿದ್ದು, ವಿಲೇವಾರಿ ಮಾಡದೇ ಇರುವುದು ಪತ್ತೆಯಾಯಿತು. ಈ ಬಗ್ಗೆ ಘನತ್ಯಾಜ್ಯ ನಿರ್ವಹಣಾ ನಿಗಮದ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಉಪ ಪ್ರಧಾನ ವ್ಯವಸ್ಥಾಪಕ, ಸಹಾಯಕ ಪ್ರಧಾನ ವ್ಯವಸ್ಥಾಪಕರು ಏಪ್ರಿಲ್ 2ರಂದು ವಿಚಾರಣೆಗೆ ಹಾಜರಾಗಬೇಕು ಎಂದು ಲೋಕಾಯುಕ್ತರು ಸೂಚಿಸಿದ್ದಾರೆ ಎಂದು ತಿಳಿಸಿದೆ.

ಸುಳ್ಳು ಆಧಾರ್: ಇಬ್ಬರ ವಿರುದ್ಧ ಪ್ರಕರಣ

ರಾಮನಗರ: ಐಜೂರು ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣ ಗಳಲ್ಲಿ ನಕಲಿ ಆಧಾರ್ ಕಾರ್ಡ್ ಸೃಷ್ಟಿಸಿ, ನ್ಯಾಯಾಲಯದಲ್ಲಿ ಜಾಮೀನು ಪಡೆದ ಇಬ್ಬರು ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಾಗಿದೆ. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿ ಹೊಸಕೋಟೆ ಗ್ರಾಮದ ಬೆಟ್ಟೇಗೌಡ ಬಿನ್ ನರಸಿಂಹೇಗೌಡ ಮತ್ತು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಟಿ.ಹೊಸಹಳ್ಳಿಯ ಜಿ.ಬಿ. ಮಂಜುನಾಥ ಬಿನ್ ಭದ್ರಯ್ಯ ಈ ಪ್ರಕರಣದ ಆರೋಪಿಗಳಾಗಿದ್ದಾರೆ.

ಮಾ.13ರಂದು ರಾಮನಗರದ ಹಿರಿಯ ಶಿರಸ್ತೇದಾರರು, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿ ಕಚೇರಿ ಶ್ರೀನಿವಾಸ್ ನೀಡಿದ ದೂರಿನ ಮೇರೆಗೆ ಐಜೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಿದುಳಿನ ರಚನೆ, ಅದರ ಕಾರ್ಯಾಚರಣೆ ಬಗ್ಗೆ ರೋಗಿಗಳಿಂದ ವಿವರ ಸಂಗ್ರಹ

‘ಕಾಮ್–ಬ್ರೈನ್’ ಡಿಜಿಟಲ್ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಿದುಳು ತಜ್ಞರು, ಮನೋವೈದ್ಯರು ಮತ್ತು ನರವಿಜ್ಞಾನಿಗಳನ್ನು ಒಳಗೊಂಡ ತಂಡವೊಂದು ಮನೋವೈದ್ಯಕೀಯ ಅಸ್ವಸ್ಥತೆಗಳನ್ನು ವಿಶ್ಲೇಷಿಸಲು ‘ಕಾಮ್-ಬ್ರೈನ್’ ಡಿಜಿಟಲ್ ಮಾಹಿತಿ ಭಂಡಾರವನ್ನು ಅಭಿವೃದ್ಧಿಪಡಿಸಿದ್ದಾರೆ.

ಮಾನಸಿಕ ಅಸ್ವಸ್ಥತೆಗಳಿಂದ ಬಳಲುತ್ತಿರುವ ರೋಗಿಗಳ ಮಿದುಳಿನ ರಚನೆ ಮತ್ತು ಅದರ ಕಾರ್ಯಾಚರಣೆ ಬಗ್ಗೆ ಎಲ್ಲ ಮಾಹಿತಿಯನ್ನು ಬೃಹತ್ ಪ್ರಮಾಣದಲ್ಲಿ ಸಂಗ್ರಹಿಸುವ, ವ್ಯವಸ್ಥಿತವಾಗಿ ದಾಖಲಿಸುವ ಭಾರತದ ಮೊಟ್ಟಮೊದಲ ಪ್ರಯತ್ನ ಇದಾಗಿದೆ.

ರೋಹಿಣಿ ನಿಲೇಕಣಿ ಸೆಂಟರ್ ಫಾರ್ ಬ್ರೈನ್ ಆ್ಯಂಡ್ ಮೈಂಡ್‌ನ (ಸಿಬಿಎಂ) ಸಂಶೋಧಕರು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಹಾಗೂ ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರ (ಎನ್‌ಸಿಬಿಎಸ್)– ಟಿಐಎಫ್‌ಆರ್ ಸಹಯೋಗದಲ್ಲಿ ಹತ್ತು ವರ್ಷಗಳಿಂದ ಸಂಶೋಧನೆ ನಡೆಸಿ, ‘ಕಾಮ್-ಬ್ರೈನ್’ ಅಭಿವೃದ್ಧಿಪಡಿಸಿದ್ದಾರೆ. ನಗರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಈ ಡಿಜಿಟಲ್ ಮಾಹಿತಿ ಭಂಡಾರ ಅನಾವರಣ ಮಾಡಿದ್ದಾರೆ.

‘ನರಮನೋವೈದ್ಯಕೀಯ ಅಸ್ವಸ್ಥತೆಗಳನ್ನು ಅಧ್ಯಯನ ಮಾಡುವ ಗುರಿ ಹೊಂದಿರುವ ಭಾರತದ ಯಾವುದೇ ವೈದ್ಯರು ಮತ್ತು ಸಂಶೋಧಕರು, ಈ ಬಹುಮಾದರಿ ಡಿಜಿಟಲ್ ಭಂಡಾರದ ನೆರವು ಪಡೆಯಬಹುದಾಗಿದೆ. ಇದರಿಂದಾಗಿ ರೋಗದ ಆಕ್ರಮಣ, ಪ್ರಗತಿ ಮತ್ತು ಅದಕ್ಕೆ ಸಂಬಂಧಿಸಿರುವ ಜೈವಿಕ ಬದಲಾವಣೆಗಳು ಹಾಗೂ ರೋಗದ ಲಕ್ಷಣಗಳ ನಡುವಿನ ಪರಸ್ಪರ ಸಂಬಂಧಗಳನ್ನು ನಿಖರವಾಗಿ ಅರ್ಥ ಮಾಡಿಕೊಳ್ಳಬಹುದು’ ಎಂದು ಸಿಬಿಎಂ ಸಂಶೋಧಕರು ತಿಳಿಸಿದರು.



‘ಕಾಮ್‌ಬ್ರೈನ್’ ಡಿಜಿಟಲ್ ಮಾಹಿತಿ ಭಂಡಾರವನ್ನು ರೋಹಿಣಿ ನಿಲೇಕಣಿ ಉದ್ಘಾಟಿಸಿದರು. ನಿಮ್ಹಾನ್ಸ್ ಮಾಜಿ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ಪ್ರಾಧ್ಯಾಪಕಿ ಡಾ. ಪ್ರಭಾ ಚಂದ್ರ ಹಾಗೂ ಪ್ರೊ.ಎಲ್.ಎಸ್. ಶಶಿಧರ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

2,700 ಮಂದಿ ದತ್ತಾಂಶ

ಈ ಮಾಹಿತಿ ಭಂಡಾರಕ್ಕೆ 2016ರಿಂದ ರೋಗಿಗಳ ದತ್ತಾಂಶ ಸಂಗ್ರಹಿಸಲಾಗುತ್ತಿದೆ. ಸದ್ಯ ಈ ಭಂಡಾರವು 1,100 ಕುಟುಂಬಗಳಿಂದ, 2,700ಕ್ಕೂ ಹೆಚ್ಚು ಮಾನಸಿಕ ಅಸ್ವಸ್ಥರ ದತ್ತಾಂಶಗಳನ್ನು ಒಳಗೊಂಡಿದೆ.

‘ಕಾಮ್-ಬ್ರೈನ್ ಅಡಿ ನಡೆಸಿದ ಸಂಶೋಧನೆಗಳು ಮಾನಸಿಕ ಅಸ್ವಸ್ಥತೆಗಳ ಕುರಿತಾದ ತಿಳಿವಳಿಕೆಯನ್ನು ಅರ್ಥೈಸುವಲ್ಲಿ ಅಪಾರ ಸಾಮರ್ಥ್ಯವನ್ನು ಹೊಂದಿವೆ. ರೋಗ ನಿವಾರಣೆ ವಿಧಾನವನ್ನು ಗುರುತಿಸಲು ಮತ್ತು ವ್ಯಕ್ತಿಗತ ಚಿಕಿತ್ಸೆಗಳನ್ನು ಯೋಜಿಸುವಲ್ಲಿ ಸಹಾಯ ಮಾಡುತ್ತದೆ’ ಎಂದರು.

ಚಿಕಿತ್ಸೆಗೆ ಸಹಕಾರಿ: ‘ಕಾಮ್-ಬ್ರೈನ್ ಅಡಿ ಸಂಗ್ರಹಿಸಲಾದ ದತ್ತಾಂಶವು ಪರಿಣಾಮಕಾರಿ ಚಿಕಿತ್ಸೆಯ ಅಭಿವೃದ್ಧಿಗೆ ನಮಗೆ ಸಹಾಯ ಮಾಡುತ್ತದೆ’ ಎಂದು ಎನ್‌ಸಿಬಿಎಸ್‌ನ ನಿರ್ದೇಶಕ ಪ್ರೊ.ಎಲ್.ಎಸ್. ಶಶಿಧರ್ ಹೇಳಿದರು.

‘ಸಾಂಪ್ರದಾಯಿಕ ರೋಗನಿರ್ಣಯ ಚೌಕಟ್ಟುಗಳನ್ನು ಮೀರಿದ, ತೀವ್ರ ಮನೋವೈದ್ಯಕೀಯ ಕಾಯಿಲೆಗಳ ಜೈವಿಕ ಗುರುತುಗಳನ್ನು ಗುರುತಿಸುವುದು ಈ ಯೋಜನೆಯ ಪ್ರಾಥಮಿಕ ಗುರಿಯಾಗಿದೆ. ಇದರ ಜತೆಗೆ, ರೋಗದ ಮೂಲಭೂತ ಜೈವಿಕ ಕಾರ್ಯವಿಧಾನಗಳನ್ನು ಗುರುತಿಸಲು ನಾವು ಪ್ರಯತ್ನಿಸುತ್ತೇವೆ’ ಎಂದು ಸಿಬಿಎಂ–ನಿಮ್ಹಾನ್ಸ್‌ನ ಸಂಯೋಜಕರಾದ ಪ್ರೊ.ವೈ.ಸಿ. ಜನಾರ್ದನ ರೆಡ್ಡಿ ಮಾಹಿತಿ ನೀಡಿದರು.

‘ಮನೆಯಲ್ಲಿ ನೆಮ್ಮದಿ ಕಾಣಲು ಮಹಿಳೆ ಕಾರಣ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ನಾವು ಚಿಕ್ಕದೊ, ದೊಡ್ಡದೊ ಮನೆ ಕಟ್ಟುತ್ತೇವೆ. ಆದರೆ, ಮನೆಯಲ್ಲಿ ನೆಮ್ಮದಿಯಾಗಿ ಇರಲು ಮಹಿಳೆ ಕಾರಣ’ ಎಂದು ಹಾಸ್ಯ ಕಲಾವಿದೆ ಸುಧಾ ಬರಗೂರು ತಿಳಿಸಿದರು.

ರಾಮಯ್ಯ ಬಡಾವಣೆಯ ಅದ್ಯಾ ಫೌಂಡೇಷನ್ ಆಯೋಜಿಸಲಾದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

‘ಮಾನವ ಜನ್ಮತಾಳಿದಾಗಿಂದ ಮಗುವಿನ ಆರೈಕೆ ಜೊತೆಗೆ ಕುಟುಂಬದ ನಿರ್ವಹಣೆ ಮಾಡುವುದು ಒಂದು ಹೆಣ್ಣು. ಯಾರು ಎಷ್ಟೇ ಸಂಪಾದನೆ ಮಾಡಿದರೂ ಮನೆಯ ಎಲ್ಲಾ ಆಗುಹೋಗುಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಣ್ಣಿಗೆ ಇದೆ’ ಎಂದು ಹೇಳಿದರು.

ಮಾಜಿ ಶಾಸಕ ಆರ್. ಮಂಜುನಾಥ್ ಮಾತನಾಡಿ, ‘ಈಗ ಮಹಿಳೆಯರು ಸ್ವಾವಲಂಬನೆಯ ಬದುಕು ಕಟ್ಟಿಕೊಳ್ಳುತ್ತಾ ಎಲ್ಲಾ ಕ್ಷೇತ್ರಗಳಲ್ಲಿ ಸ್ವಾಭಿಮಾನದಿಂದ ಬದುಕುತ್ತಿದ್ದಾರೆ. ಆದರೆ, ಕೆಲವು ಕಡೆ ಇನ್ನೂ ಸಹ ಹೆಣ್ಣಿಗೆ ಬೆಂಬಲ ಸಿಗುತ್ತಿಲ್ಲ ಎಂಬ ಕೊರಗು ಇದ್ದೆ ಇದೆ’ ಎಂದರು.

ಕಾರ್ಯಕ್ರಮದಲ್ಲಿ ಮಾಹಿತಿ ಹಕ್ಕು ಆಯೋಗದ ಆಯುಕ್ತೆ ಮಮತಾ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರು ಭಾಗವಹಿಸಿದ್ದರು. ಪಾಲಿಕೆಯ ಮಾಜಿ ಸದಸ್ಯ ಕೆ. ನಾಗಭೂಷಣ್, ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಉಸ್ತುವಾರಿ ಕೆ.ಸಿ. ವೆಂಕಟೇಶ್, ಜಯ ಕರ್ನಾಟಕ ಸಂಘಟನೆ ರಾಜ್ಯಾಧ್ಯಕ್ಷ ಬಿ.ಎನ್. ಜಗದೀಶ್, ಕಾಂಗ್ರೆಸ್ ಮುಖಂಡರಾದ ಎಬಿಬಿ ಮಂಜುನಾಥ್, ಲಗ್ಗೆರೆ ಕೃಷ್ಣಮೂರ್ತಿ ಹಾಗೂ ಇತರರು ಹಾಜರಿದ್ದರು.

1000ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು. ಮಾಜಿ ಶಾಸಕ ಆರ್. ಮಂಜುನಾಥ್ ಅವರು ಎಲ್ಲರಿಗೂ ಉಡುಗೊರೆ ನೀಡಿದರು.

ರೈಲು ನಿಲ್ದಾಣದಲ್ಲಿ ಕಾಡುಪಾಪ

ಪ್ರಜಾವಾಣಿ ವಾರ್ತೆ

ಆನೇಕಲ್: ಪಟ್ಟಣಕ್ಕೆ ಸಮೀಪದ ಹಾಲ್ದೇನಹಳ್ಳಿ ರೈಲು ನಿಲ್ದಾಣದಲ್ಲಿ ಮಂಗಳವಾರ ಕಾಡುಪಾಪ (ಸ್ಲೆಂಡರ್ ಲಾರಿಸ್) ಕಾಣಿಸಿಕೊಂಡಿದೆ. ಸಾರ್ವಜನಿಕರು ಕಾಡುಪಾಪ ಸಂರಕ್ಷಿಸಿ ಅರಣ್ಯ ಇಲಾಖೆಗೆ ಹಸ್ತಾಂತರಿಸಿದರು.

ಬುಧವಾರ ಮಧ್ಯಾಹ್ನ 3ರ ಸುಮಾರಿಗೆ ಹಾಲ್ದೇನಹಳ್ಳಿ ರೈಲು ಹಳಿಯ ಸಮೀಪ ಕಾಡುಪಾಪ ಕಾಣಿಸಿಕೊಂಡಿದೆ. ಎಲ್ಲಿಂದ ಬಂತು ಎಂಬುದರ ಬಗ್ಗೆ ನಿಖರ ಮಾಹಿತಿ ದೊರೆತಿಲ್ಲ. ಜನರು ಕಾಡುಪಾಪವನ್ನು ಕುತೂಹಲದಿಂದ ವೀಕ್ಷಿಸಿದರು. ಜನರು ಗುಂಪುಗೂಡಿದ್ದರಿಂದ ಕಾಡುಪಾಪ ಗಾಬರಿಗೊಂಡಿತ್ತು. ಅತ್ತಿಂದಿತ್ತ ಓಡಾಡುತ್ತಿದ್ದ ಕಾಡುಪಾಪವನ್ನು ಸ್ಥಳೀಯರಾದ ಮಹೇಶ್ ಚಿಕ್ಕಹಾಗಡೆ ಮತ್ತು ರಘು ಹಿಡಿದು ಅರಣ್ಯ ಇಲಾಖೆಗೆ ಹಸ್ತಾಂತರಿಸಿದರು.



ಆನೇಕಲ್‌ನ ರೈಲು ನಿಲ್ದಾಣದಲ್ಲಿ ಕಂಡುಬಂದ ಕಾಡುಪಾಪ

ಮಹೇಶ್ ಮಾತನಾಡಿ, ಕಾಡುಪಾಪ ಅಪರೂಪದ ಪ್ರಾಣಿ. ಆನೇಕಲ್ ಪಟ್ಟಣಕ್ಕೆ ಕಳೆದ ಕೆಲ ತಿಂಗಳಿಂದ ಆನೆ, ಚಿರತೆ, ಕಾಡೆಮ್ಮೆ ಸೇರಿದಂತೆ ವಿವಿಧ ಪ್ರಾಣಿಗಳು ನಿರಂತರವಾಗಿ ಬರುತ್ತಿದೆ. ಈ ಪಟ್ಟಿಗೆ ಕಾಡುಪಾಪ ಸಹ ಸೇರ್ಪಡೆಯಾಗಿದೆ. ಅರಣ್ಯ ಇಲಾಖೆ ಸುಪರ್ದಿಗೆ ನೀಡಲಾಗಿದೆ ಎಂದು ತಿಳಿಸಿದರು.

‘ಬಡವರಿಗೂ ಐಪಿಎಲ್ ಟಿಕೆಟ್ ಸಿಗಲಿ’

ಮಂಡ್ಯ: ‘ಐಪಿಎಲ್ ಟಿಕೆಟ್ ಎಂಬುದು ಗ್ಯಾಂಬ್ಲಿಂಗ್ ಆಗಿದೆ. ಸ್ಟೇಡಿಯಂನಲ್ಲಿ ಮೂಲಸೌಕರ್ಯ ವಿಲ್ಲ. ಆದರೂ ಮೂಲದರಕ್ಕಿಂತ ಹತ್ತು ಪಟ್ಟು ಹೆಚ್ಚಿನ ದರಕ್ಕೆ ಟಿಕೆಟ್ ಮಾರುತ್ತಿರುವುದು ಸರಿಯಲ್ಲ. ಬಡವರ ಮಕ್ಕಳಿಗೂ ಟಿಕೆಟ್ ಸಿಗಬೇಕು’ ಎಂದು ಶಾಸಕ ಪಿ.ರವಿ ಕುಮಾರ್ ಬೇಸರ ವ್ಯಕ್ತಪಡಿಸಿದರು.

ಮಂಗಳವಾರ ಮಾಧ್ಯಮದವ ರೊಂದಿಗೆ ಮಾತನಾಡಿ, ‘ಐಪಿಎಲ್ ಬೆಂಗಳೂರಿನಲ್ಲಿ ನಡೆಯುತ್ತಿರುವುದಕ್ಕೆ ಖುಷಿ ಇದೆ. ಆದರೆ ಟಿಕೆಟ್‌ಗಳನ್ನ ಬ್ಲಾಕ್‌ನಲ್ಲಿ ಮಾರುತ್ತಿರುವುದು ಸರಿಯಲ್ಲ. ಕ್ರಿಕೆಟ್ ನೋಡಲು ಬಂದವರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಚಿನ್ನಸ್ವಾಮಿ ಸ್ಟೇಡಿಯಂ ಅನ್ನು ದುಡ್ಡು ಮಾಡುವ ಯಂತ್ರ ಮಾಡಿಕೊಂಡಿದ್ದಾರೆ. ಮೂಲ ಸೌಕರ್ಯ ಒದಗಿಸಿ, ಇನ್ನಾದರೂ ಎಚ್ಚೆತ್ತುಕೊಳ್ಳಿ’ ಎಂದು ಅಸಮಾಧಾನ ಹೊರಹಾಕಿದರು.

‘ಕಾಶಪ್ಪನವರ್ ಹೇಳಿದ ದಾಟಿ ಸರಿಯಿಲ್ಲದೇ ಇರಬಹುದು. ಆದರೆ ಅವರು ಕೇಳಿದ್ದು ಸರಿಯಿದೆ. ನನಗೆ ಸಿಕ್ಕ 2 ಟಿಕೆಟ್‌ಗಳನ್ನು ಬಡ ಹುಡುಗರಿಗೆ ಕೊಟ್ಟೆ. ಭಿಕ್ಷುಕರಿಗೆ ಕೊಟ್ಟ ಹಾಗೇ ಶಾಸಕರಿಗೆ ಟಿಕೆಟ್ ಕೊಟ್ಟಿದ್ದಾರೆ. ನಾನು ದುಡ್ಡು ಕೊಟ್ಟು, ಲೈನ್‌ನಲ್ಲಿ ನಿಂತು ಟಿಕೆಟ್ ತೆಗೆದುಕೊಳ್ತೀನಿ, ಟಿಕೆಟ್ ಎಲ್ಲಿ ಸಿಗುತ್ತೆ? ಸ್ಟೇಡಿಯಂನ ಯಾವ ಕೌಂಟರ್‌ನಲ್ಲಿ ಟಿಕೆಟ್ ಕೊಡ್ತಿದ್ದಾರೆ ತೋರ್ಸಿ ನೋಡೋಣ’ ಎಂದು ಕೇಳಿದರು. ‘ನನಗೆ ₹50 ಸಾವಿರ ಕೊಟ್ಟು ಟಿಕೆಟ್ ತೆಗೆದುಕೊಳ್ಳುವ ಶಕ್ತಿ ಇರಬಹುದು. ಬಡ ಹುಡುಗ ಮ್ಯಾಚ್ ನೋಡಬಾರದಾ? ಕ್ರಿಕೆಟ್ ಅಭಿಮಾನ, ವ್ಯಾಮೋಹವನ್ನ ದುಡ್ಡಾಗಿ ಪರಿವರ್ತಿಸಿಕೊಳ್ತಿದ್ದಾರೆ. 40 ಸಾವಿರ ಆಸನಗಳಲ್ಲಿ 20 ಸಾವಿರ ಟಿಕೆಟ್ ಕೌಂಟರ್‌ನಲ್ಲಿ ಮಾರಬೇಕು’ ಎಂದರು.

‘ಏ.1ರಿಂದ ಜನರ ಲೂಟಿಗಿಳಿದ ಕೇಂದ್ರ’

ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಕಾಂಗ್ರೆಸ್ ನಾಯಕರಿಂದ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿವಿಧ ವಸ್ತುಗಳ ಬೆಲೆ ಬುಧವಾರದಿಂದ ಏರಿಕೆಯಾಗಲಿದ್ದು, ಜನಸಾಮಾನ್ಯರನ್ನು ನೋಯಿಸುವ ಮೂಲಕ ಸಂಭ್ರಮಿಸಲು ಬಿಜೆಪಿ ಸಜ್ಜಾಗಿದೆ. ಈ ದಿನ ಕೇಂದ್ರ ಸರ್ಕಾರದ ಪಾಲಿಗೆ ಜನರನ್ನು ಲೂಟಿ, ಸುಲಿಗೆ ಮಾಡುವ ದಿನ’ ಎಂದು ಕಾಂಗ್ರೆಸ್ ಟೀಕಿಸಿದೆ.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ‘ಏ.1 ರಿಂದ ಜಾರಿಗೆ ಬರಲಿರುವ ವಿವಿಧ ಬೆಲೆ ಏರಿಕೆಗಳು ಜನಸಾಮಾನ್ಯರಿಗೆ ಶಾಪವಾಗಿ ಪರಿಣಮಿಸಲಿವೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಕೇಂದ್ರ ಬಿಜೆಪಿ ಹಾಗೂ ಮೋದಿ ಅವರ ಸರ್ಕಾರ ಕನ್ನಡಿಗರು ಹಾಗೂ ದೇಶದ ಜನರ ಮೇಲೆ ಬೆಲೆ ಏರಿಕೆಯ ದಾಳಿ ನಡೆಸಲಿದೆ. ಜನರ ಪರಿಶ್ರಮದ ಹಣವನ್ನು ವಂಚಿಸಿ, ಲೂಟಿ ಮಾಡಿ, ದೋಚುವ ಸಾಧನವಾಗಿದೆ. ಜನರ ಜೇಬಿನಿಂದ ಹಣ ಕಳವು ಮಾಡುತ್ತಿದ್ದು, ಚುನಾವಣೆಗಳಲ್ಲಿ ಮತ ಕೇಳುವ ಮುನ್ನ ಪ್ರಧಾನಿ ಹಾಗೂ ಬಿಜೆಪಿಯ ಪ್ರತಿಯೊಬ್ಬ ನಾಯಕರು ಕರ್ನಾಟಕದ ಜನರು ಹಾಗೂ ದೇಶದ ಜನರ ಮೇಲೆ ಎಳೆದಿರುವ ಬೆಲೆ ಏರಿಕೆ ಬರೆಯ ಬಗ್ಗೆ ಉತ್ತರ ನೀಡಬೇಕು’ ಎಂದು ಆಗ್ರಹಿಸಿದರು.

ಜನರ ಜೇಬಿಗೆ ಕತ್ತರಿ: ‘ಕೇಂದ್ರ ಸರ್ಕಾರವು ಟೋಲ್ ಸುಂಕ ಹೆಚ್ಚಿಸುವ ಮೂಲಕ ಜನರ ಜೇಬಿಗೆ ಕತ್ತರಿ ಹಾಕುತ್ತಿದೆ. 2019-20ರಿಂದ ಈವರೆಗೆ ರಾಜ್ಯದ ಜನತೆಯಿಂದ ಕೇಂದ್ರ ಸರ್ಕಾರ ಸುಮಾರು ₹23 ಸಾವಿರ ಕೋಟಿ ಟೋಲ್ ಶುಲ್ಕ ವಸೂಲಿ ಮಾಡಿದೆ. 2019-20ರಲ್ಲಿ ₹1,882 ಕೋಟಿ, 2020-21ರಲ್ಲಿ ₹1,866 ಕೋಟಿ, 2021-22ರಲ್ಲಿ ₹2,351 ಕೋಟಿ, 2022-23ರಲ್ಲಿ ₹3,517 ಕೋಟಿ, 2023-24ರಲ್ಲಿ ₹4,086 ಕೋಟಿ, 2024-25ರಲ್ಲಿ ₹4,320 ಕೋಟಿ, 2025-26ರಲ್ಲಿ ₹4,600 (ಅಂದಾಜು) ಕೋಟಿ ಸಂಗ್ರಹಿಸಲಾಗಿದೆ. ಟೋಲ್ ಶುಲ್ಕ ಏ. 1ರಿಂದ ಶೇ 5ರಷ್ಟು ಹೆಚ್ಚಳವಾಗಲಿದ್ದು, ಇದರಿಂದ ರಾಜ್ಯದ ಜನರ ₹250 ಕೋಟಿ ಹೆಚ್ಚುವರಿ ಹೊರೆ ಬೀಳಲಿದೆ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ ಒಂದರಿಂದಲೇ 2023ರಿಂದ ಈವರೆಗೆ ₹900 ಕೋಟಿ ಸಂಗ್ರಹಿಸಲಾಗಿದೆ’ ಎಂದು ಅಂಕಿಅಂಶಗಳ ಸಹಿತ ವಾಗ್ದಾಳಿ ನಡೆಸಿದರು.

‘ಅಗತ್ಯ ಔಷಧಗಳ ಮೇಲೆ ಕೇಂದ್ರ ಸರ್ಕಾರ ಶೇ 12ರಷ್ಟು ಜಿಎಸ್‌ಟಿ ವಿಧಿಸುತ್ತಿರುವುದು ಜನರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಲಿದೆ. ಜೊತೆಗೆ, ಕಟ್ಟಡ ನಿರ್ಮಾಣ ಮತ್ತು ದಿನಬಳಕೆಯ ವಸ್ತುಗಳ ಬೆಲೆಯೂ ಗಗನಕ್ಕೇರಿವೆ’ ಎಂದರು.

‘ಡಾಂಬರಿಗೆ ಬಳಸುವ ಬಿಟುಮಿನ್ ಪ್ರತಿ ಟನ್‌ಗೆ ₹45,000 ದಿಂದ ₹65,000ಕ್ಕೆ ಏರಿಕೆಯಾಗಿದೆ. ಏಪ್ರಿಲ್‌ನಿಂದ ಸಿಮೆಂಟ್ ಬೆಲೆ ಪ್ರತಿ ಚೀಲಕ್ಕೆ ₹50ರಿಂದ ₹100 ಏರಿಕೆ ಆಗಬಹುದೆಂದು ಅಂದಾಜಿಸಲಾಗಿದೆ. ಕಬ್ಬಿಣದ ಬೆಲೆ ಕೂಡ ಇದೇ ರೀತಿ ಏರಿಕೆಯಾಗುತ್ತಿದ್ದರೂ ಮೋದಿ ಸರ್ಕಾರ ಮಾತ್ರ ಮೂಕ ಪ್ರೇಕ್ಷಕನಾಗಿದೆ’ ಎಂದು ಟೀಕಿಸಿದರು.

‘ಪಂಚ ರಾಜ್ಯ ಚುನಾವಣೆ ಮುಗಿದ ಬಳಿಕ ಕೇಂದ್ರ ಸರ್ಕಾರ ಮತ್ತೊಮ್ಮೆ ಜನರಿಗೆ ಬೆಲೆ ಏರಿಕೆಯ ಬರೆ ಎಳೆಯಲು ಕಾಯುತ್ತಿರುವುದರ ಮುನ್ಸೂಚನೆಯಿದೆ’ ಎಂದರು.

ದರ ಏರಿಕೆ ಪಟ್ಟಿ ಕೊಟ್ಟ ಸುರ್ಜೇವಾಲಾ


ರಣದೀಪ್ ಸುರ್ಜೇವಾಲಾ

- ಮೋದಿ ಸರ್ಕಾರ ಹಾಗೂ ಎನ್‌ಪಿಪಿಎಯು 900 ಅಗತ್ಯ ಔಷಧಗಳ ದರವನ್ನು ಏರಿಕೆ ಮಾಡುತ್ತಿದೆ. ಮಧುಮೇಹ, ರಕ್ತದೊತ್ತಡ, ಸೋಂಕಿತ ರೋಗಗಳ ಔಷಧಗಳ ದರ ಹೆಚ್ಚಳವಾಗಲಿದೆ. ಐಸಿಯುನಲ್ಲಿ ಬಳಸುವ ರೋಗನಿರೋಧಕ 'ಮೆರೋಪೆನಮ್', ಹೃದ್ರೋಗಿಗಳಿಗೆ ಬೇಕಾದ 'ಕೊರೊನರಿ ಸ್ಟೆಂಟ್' ಬೆಲೆ ಹೆಚ್ಚಾಗಿದೆ.
- ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್ ಬೆಲೆ ಒಂದೇ ತಿಂಗಳಲ್ಲಿ ಎರಡು ಬಾರಿ ದರ ಏರಿಕೆ ಕಂಡಿದ್ದು, ₹913 ಆಗಿದೆ. ವಾಸ್ತವದಲ್ಲಿ ಸಿಲಿಂಡರ್ ಕೊರತೆಯಿಂದ ಜನರು ₹2,000 ಕ್ಕಿಂತ ಹೆಚ್ಚು ಪಾವತಿ ಮಾಡಬೇಕಾಗಿದೆ. ಕಳೆದ 45 ದಿನಗಳಲ್ಲಿ ವಾಣಿಜ್ಯ ಸಿಲಿಂಡರ್ ಬೆಲೆ ಮೂರು ಬಾರಿ ಏರಿಕೆಯಾಗಿದ್ದು, 19 ಕೆ.ಜಿ. ಸಿಲಿಂಡರ್ ಪ್ರಸ್ತುತ ಬೆಲೆ ₹1,958 ಆಗಿದೆ. ಸಿಲಿಂಡರ್ ಕೊರತೆಯಿಂದಾಗಿ ₹4,000ಕ್ಕಿಂತ ಹೆಚ್ಚು ಹಣ ನೀಡಬೇಕಾಗಿದೆ.
- ಪ್ಲಾಸ್ಟಿಕ್ ಸರಕುಗಳ ಬೆಲೆ ಶೇ 50ರಷ್ಟು ಏರಿಕೆಯಾಗಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಪ್ರತಿ ಟನ್ ಪಾಲಿಥಿಲೀನ್ ದರವನ್ನು ₹7,000 ಹೆಚ್ಚಳ ಮಾಡಿದೆ. ಪ್ರತಿ ಟನ್ ಪಾಲಿಪ್ರೊಪಿಲಿನ್ ದರ ₹4,000ಕ್ಕೆ, ಪ್ರತಿ ಟನ್ ಪಿವಿಸಿ ಬೆಲೆ ₹6,000 ಏರಿಕೆಯಾಗಿದೆ.
- ತ್ವರಿತ ಅಂಚೆ ದರವನ್ನು ಶೇ 34ರಷ್ಟು ಏರಿಕೆ ಮಾಡಲಾಗಿದೆ.

‘ಉಜ್ವಲ’ವಲ್ಲ, ‘ಸೌದೆ ಒಲೆ’ ಯೋಜನೆ


ಶಿವಕುಮಾರ್

‘ಕೇಂದ್ರ ಬಿಜೆಪಿ ಸರ್ಕಾರ ಜನರಿಗೆ ಉಜ್ವಲ ಯೋಜನೆ ಬದಲಾಗಿ ಸೌದೆ ಒಲೆ ಯೋಜನೆ ನೀಡಿದೆ. ಅಚ್ಛೇ ದಿನ್ ಏನಾಯ್ತು? ಈಗ ಇರುವುದನ್ನು ಕಚ್ಚಾ ದಿನ ಎಂದು ಹೇಳಬೇಕೆ’ ಎಂದು ಡಿ.ಕೆ. ಶಿವಕುಮಾರ್ ವ್ಯಂಗ್ಯವಾಗಿ ಪ್ರಶ್ನಿಸಿದರು.

‘ಹೋಟೆಲ್‌ಗಳು ಬಂದ್ ಆಗುತ್ತಿವೆ. ವಿದ್ಯುತ್ ಒಲೆ ಬಳಸುವ ಅನಿವಾರ್ಯಕ್ಕೆ ಜನರನ್ನು ಸಿಲುಕಿಸಲಾಗಿದೆ. ಕಳೆದ 15 ದಿನಗಳಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಶೇ 10ರಷ್ಟು ಏರಿಕೆಯಾಗಿದೆ. ಕೇಂದ್ರ ಸರ್ಕಾರ ಜನರಿಗೆ ಸೌದೆ ಭಾಗ್ಯ ನೀಡಿದ್ದು, ಎಲ್ಲಿಂದ ಸೌದೆ ಒದಗಿಸುವುದು’ ಎಂದು ಪ್ರಶ್ನಿಸಿದರು.

‘ಯುದ್ಧಗಳ ನೆಪ, ಕೇಂದ್ರ ಸರ್ಕಾರದ ತಪ್ಪು ನಿರ್ಧಾರ, ನೀತಿಗಳಿಂದಾಗಿ ದೇಶದ ಜನ ಬೆಲೆ ಏರಿಕೆಯಿಂದ ನರಳುವಂತಾಗಿದೆ. ಸಾಮಾನ್ಯ ಜನರ ಮೇಲೆ ಕೇಂದ್ರ ಸರ್ಕಾರ ಬೆಲೆ ಏರಿಕೆಯ ಯುದ್ಧ ಮಾಡುತ್ತಿದೆ’ ಎಂದು ಕಿಡಿ ಕಾರಿದರು.

‘ನಾವು ಗ್ಯಾರಂಟಿ ಯೋಜನೆಗಳನ್ನು ನೀಡಿದ ಕಾರಣಕ್ಕೆ ಜನ ಸ್ವಲ್ಪ ಉಸಿರಾಡುತ್ತಿದ್ದಾರೆ. ಇದೇ ರೀತಿ ಕೇಂದ್ರ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಬೇಕು. ಆದರೆ, ಬವಣೆಗೆ ಸಿಲುಕಿರುವ ಜನಸಾಮಾನ್ಯರ ಜತೆ ಕೇಂದ್ರ ನಿಲ್ಲುತ್ತಿಲ್ಲ. ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನರಿಗೆ ಕೇಂದ್ರ ಸರ್ಕಾರ ನೆರವಾಗಬೇಕು’ ಎಂದು ಆಗ್ರಹಿಸಿದರು.

ಚಿಟಿಕೆ ಸುದ್ದಿ

ಗೃಹ ಸಚಿವರ ವಿರುದ್ಧ ಆಕ್ಷೇಪಾರ್ಹ ಪೋಸ್ಟ್: ಪ್ರಕರಣ

ಬೆಂಗಳೂರು: ಗೃಹ ಸಚಿವ ಜಿ.ಪರಮೇಶ್ವರ ಅವರ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಾಕಿರುವ ವಿಚಾರವಾಗಿ ಸೈಬರ್ ಅಪರಾಧ ಠಾಣೆಯ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಹಿಂದೂ ಜಾಗೃತನಾಗು’ ಹೆಸರಿನ ‘ಎಕ್ಸ್’ ಖಾತೆಯಲ್ಲಿ ಈ ಆಕ್ಷೇಪಾರ್ಹ ಪೋಸ್ಟ್ ಹಾಕಲಾಗಿದೆ. ಆರೋಪಿಗಳ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಠಾಣೆಯ ಪೊಲೀಸರು ಹೇಳಿದರು.

ಪರಮೇಶ್ವರ ಒಡೆತನದ ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ತರಗತಿಯಲ್ಲಿ ಎಲ್ಲ ಸಹ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಪ್ರಾಧ್ಯಾಪಕ ಅಬ್ದುಲ್ ಅವರು ವಿದ್ಯಾರ್ಥಿನಿಗೆ ಪ್ರೇಮ ನಿವೇದನೆ ಮಾಡಿದ್ದರು. ಇದರಿಂದ ಆಕ್ರೋಶಗೊಂಡ ವಿದ್ಯಾರ್ಥಿಗಳು ಪ್ರಾಧ್ಯಾಪಕನಿಗೆ ಥಳಿಸಿದ್ದಾರೆ. ಅಲ್ಲದೇ ವಿದ್ಯಾರ್ಥಿನಿಯೂ ಚಪ್ಪಲಿ ಏಟು ನೀಡಿದ್ದರು. ಈ ಘಟನೆಯ ಬಳಿಕ ಪರಮೇಶ್ವರ ಅವರ ವಿರುದ್ಧ ಆಕ್ಷೇಪಾರ್ಹ ಪೋಸ್ಟ್ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಉಡುಪಿ ಜಿಲ್ಲೆಯ ಐದು ಸೇರಿ ಆರು ಗ್ರಾಪಂಗಳಿಗೆ ಪ್ರಶಸ್ತಿ

ಉಡುಪಿ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯವು ಉತ್ತಮ ಕಾರ್ಯನಿರ್ವಹಣೆಗೆ ನೀಡುವ ರಾಷ್ಟ್ರ ಮಟ್ಟದ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸತತ್ ವಿಕಾಸ್ ಪುರಸ್ಕಾರಕ್ಕೆ ರಾಜ್ಯದ ಆರು ಗ್ರಾಮ ಪಂಚಾಯಿತಿಗಳು ಆಯ್ಕೆಯಾಗಿವೆ.


ಉಡುಪಿ ಜಿಲ್ಲೆಯ ಐದು ಪಂಚಾಯಿತಿಗಳು ಆಯ್ಕೆಯಾಗಿದ್ದು, ಬಡತನ ಮುಕ್ತ ಮತ್ತು ಸುಧಾರಿತ ಜೀವನೋಪಾಯ ವಿಭಾಗದಲ್ಲಿ ಹೆಬ್ರಿಯ ಮುದ್ರಾಡಿ ಗ್ರಾ.ಪಂ. ಪ್ರಥಮ ಸ್ಥಾನ ಪಡೆದಿದೆ. (₹ 1ಕೋಟಿ ನಗದು ಬಹುಮಾನ), ಆರೋಗ್ಯಕರ ಪಂಚಾಯಿತಿ ವಿಭಾಗದಲ್ಲಿ ಕುಂದಾಪುರದ ವಂಡ್ಸೆ ಗ್ರಾ.ಪಂ. ಹಾಗೂ ಜಲ ಸಮೃದ್ಧ ವಿಭಾಗದಲ್ಲಿ ಹೆಬ್ರಿಯ ಮಡಾಮಕ್ಕಿ ಗ್ರಾ.ಪಂ. ದ್ವಿತೀಯ ಸ್ಥಾನ ಪಡೆದಿದೆ (₹75 ಲಕ್ಷ ಬಹುಮಾನ).

ಸ್ವಾವಲಂಬಿ ಮೂಲಸೌಕರ್ಯ ವಿಭಾಗದಲ್ಲಿ ಕಾರ್ಕಳದ ಸಾಣೂರು ಗ್ರಾ.ಪಂ., ಸಾಮಾಜಿಕ ನ್ಯಾಯ ಮತ್ತು ಭದ್ರತೆ ವಿಭಾಗದಲ್ಲಿ ಕುಂದಾಪುರದ ಹಕ್ಲಾಡಿ ಪಂಚಾಯಿತಿ ತೃತೀಯ ಸ್ಥಾನಪಡೆದಿದೆ (₹50 ಲಕ್ಷ ನಗದು).

ಮಕ್ಕಳ ಸ್ನೇಹಿ ಪಂಚಾಯಿತಿ ವಿಭಾಗದಲ್ಲಿ ಬೆಂಗಳೂರು ಪೂರ್ವದ ಹಾಲನಾಯಕನ ಹಳ್ಳಿ ಗ್ರಾ.ಪಂಗೆ ಪುರಸ್ಕಾರ ಲಭಿಸಿದೆ.

ಚೊಕ್ಕಾಡಿಗೆ ಬೇಂದ್ರೆ, ನರಹಳ್ಳಿಗೆ ತೀ.ನಂ.ಶ್ರೀ ಪ್ರಶಸ್ತಿ


ಸುಬ್ರಾಯ ಚೊಕ್ಕಾಡಿ


ನರಹಳ್ಳಿ ಬಾಲಸುಬ್ರಹ್ಮಣ್ಯ

ಶಿವಮೊಗ್ಗ: ಸಾಹಿತ್ಯ ಕ್ಷೇತ್ರದಲ್ಲಿ ಜೀವಮಾನ ಸಾಧನೆಗಾಗಿ ಇಲ್ಲಿನ ಕರ್ನಾಟಕ ಸಂಘ ಕೊಡುವ 2026ನೇ ಸಾಲಿನ ದ.ರಾ. ಬೇಂದ್ರೆ ಕಾವ್ಯ ಪ್ರಶಸ್ತಿಗೆ ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಾಯ ಚೊಕ್ಕಾಡಿ ಹಾಗೂ ತೀ.ನಂ.ಶ್ರೀ ಸಾಹಿತ್ಯ ವಿಮರ್ಶೆ ಪ್ರಶಸ್ತಿಗೆ ಬೆಂಗಳೂರಿನ ಪ್ರೊ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ತಲಾ ₹ 25,000 ನಗದು, ಫಲಕ ಒಳಗೊಂಡಿದೆ. ಶೀಘ್ರವೇ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಎಚ್.ಆರ್. ಶಂಕರನಾರಾಯಣ ಶಾಸ್ತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎನ್‌ಸಿ ಕಚೇರಿಗೆ ಭದ್ರತೆ ವಾಪಸ್: ಒಮರ್ ಆಶ್ಚರ್ಯ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ (63) ಹತ್ಯೆಗೆ ಯತ್ನ ನಡೆದ ಒಂದು ವಾರದಲ್ಲೇ, ಶ್ರೀನಗರದ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪ್ರಧಾನ ಕಚೇರಿಗೆ ನೀಡಿದ್ದ ಭದ್ರತೆಯನ್ನು ವಾಪಸ್ ಪಡೆದುಕೊಂಡಿರುವ ಬಗ್ಗೆ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಮಾರ್ಚ್ 11ರಂದು ನಡೆದ ಗುಂಡಿನ ದಾಳಿಯಲ್ಲಿ, ಫಾರೂಕ್ ಅಬ್ದುಲ್ಲಾ ಕೂದಲೆಳೆ ಅಂತರದಲ್ಲಿ ಪಾರಾಗಿದ್ದರು.

‘ಭದ್ರತೆಯನ್ನು ಪೂರ್ಣ ಪ್ರಮಾಣದಲ್ಲಿ ವಾಪಸ್ ಪಡೆದಿರುವುದನ್ನು ಅರಗಿಸಿಕೊಳ್ಳುವುದು ಕಷ್ಟ’ ಎಂದು ಒಮರ್ ಅಬ್ದುಲ್ಲಾ ಅವರು ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಕುಡಿಯುವ ನೀರು: ಗ್ರಾ.ಪಂ.ಗೆ ₹15.86 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿಗಳಿಗೆ ಕೇಂದ್ರ ಸರ್ಕಾರದ 15ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆ ಆಗಿಲ್ಲ. ಹೀಗಾಗಿ, ರಾಜ್ಯ ಹಣಕಾಸು ಆಯೋಗದಿಂದ ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆಯಾಗಿದ್ದ ₹1,261.03 ಕೋಟಿಯಲ್ಲಿ ಈಗಾಗಲೇ ಬಿಡುಗಡೆ ಮಾಡಿ ಉಳಿದಿರುವ ₹15.86 ಕೋಟಿಯನ್ನು 5,941 ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಈ ಅನುದಾನವನ್ನು ಗ್ರಾಮ ಪಂಚಾಯಿತಿಗಳು ಕುಡಿಯುವ ನೀರು ನಿರ್ವಹಣೆ ಚಟುವಟಿಕೆಗೆ ಮಾತ್ರ ವೆಚ್ಚ ಮಾಡಬೇಕು. ಅಲ್ಲದೆ, ಅನುದಾನದಲ್ಲಿ ಶೇ 25ರಷ್ಟನ್ನು ಎಸ್‌ಸಿ, ಎಸ್‌ಟಿ ಜನರಿಗೆ ವಿನಿಯೋಗಿಸಬೇಕು ಎಂದೂ ಷರತ್ತು ವಿಧಿಸಲಾಗಿದೆ.

ರಾಜ್ಯದಲ್ಲಿ ಒಟ್ಟು 5,946 ಗ್ರಾಮ ಪಂಚಾಯಿತಿಗಳಿವೆ. ಈ ಪೈಕಿ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಚಾಮನಹಳ್ಳಿ, ಸೋಮನಹಳ್ಳಿ, ಗೆಜ್ಜಲಗೆರೆ, ಗೊರವನಹಳ್ಳಿ ಹಾಗೂ ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ದೋರನಹಳ್ಳಿ ಪಂಚಾಯಿತಿ (ಒಟ್ಟು ಐದು ಗ್ರಾಮ ಪಂಚಾಯಿತಿಗಳು) ಪುರಸಭೆ, ನಗರಸಭೆಗೆ ಹಸ್ತಾಂತರವಾಗಿದೆ. ಹೀಗಾಗಿ ಈ ಪಂಚಾಯಿತಿಗಳನ್ನು ಹೊರತುಪಡಿಸಿ ಅನುದಾನ ಹಂಚಿಕೆ ಮಾಡಲಾಗಿದೆ ಎಂದು ವಿವರಿಸಲಾಗಿದೆ.

ಮುಂಬರುವ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ನಿರ್ವಹಣೆಗೆ ಅನುದಾನದ ಕೊರತೆ ಉಂಟಾಗಬಹುದು ಎಂಬ ಕಾರಣಕ್ಕೆ ರಾಜ್ಯ ಹಣಕಾಸು ಆಯೋಗದ ಅಡಿಯಲ್ಲಿ ಒದಗಿಸಿದ್ದ ಅನುದಾನದಲ್ಲಿ ಬಾಕಿ ಉಳಿದಿರುವ ಹಣವನ್ನು ಬಿಡುಗಡೆ ಮಾಡಲಾಗಿದೆ ಎಂದೂ ಆದೇಶದಲ್ಲಿದೆ.

ಬ್ರಹ್ಮ ರಥೋತ್ಸವ

ಪ್ರಜಾವಾಣಿ ಚಿತ್ರ: ಮಲ್ಲೇಶ


ಹಾಸನ ಜಿಲ್ಲೆಯ ಬೇಲೂರಿನ ಚನ್ನಕೇಶವ ಸ್ವಾಮಿ ಬ್ರಹ್ಮರಥೋತ್ಸವವು ಮಂಗಳವಾರ ಸಹಸ್ರಾರು ಭಕ್ತರ ಮಧ್ಯೆ ವಿಜೃಂಭಣೆಯಿಂದ ನೆರವೇರಿತು

ಸುದ್ದಿ 2 ನಿಮಿಷ

ಬಿಎಸ್‌ವೈಗೆ ಸೋಮಶೇಖರ್ ಪತ್ರ

ಬೆಂಗಳೂರು: ಬಿಜೆಪಿಯಿಂದ ಉಚ್ಚಾಟಿತ ಶಾಸಕ ಎಸ್.ಟಿ.ಸೋಮಶೇಖರ್ ಅವರು ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದು, ‘ಬೂಟ್ ನೆಕ್ಕುವ ಸಂಸ್ಕೃತಿ ನಿಮ್ಮ ಪಕ್ಷದಲ್ಲಿ ಇದೆಯೇ’ ಎಂದು ಪ್ರಶ್ನಿಸಿದ್ದಾರೆ.

‘ಬಜೆಟ್ ಅಧಿವೇಶನದ ವೇಳೆ ವಿಧಾನಸಭೆಯಲ್ಲಿ ನಾನು ನೈಸ್ ರಸ್ತೆ ಯೋಜನೆ ಸಂತ್ರಸ್ತ ರೈತರ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದೆ. ನಿಮ್ಮ ಮತ್ತು ನಿಮ್ಮ ಮಗ ಬಿ.ವೈ.ವಿಜಯೇಂದ್ರ ಅವರ ಹಿಂಬಾಲಕನಾಗಿರುವ ರುದ್ರೇಶ್ ಎಂಬಾತ ಸುದ್ದಿಗೋಷ್ಠಿ ನಡೆಸಿದ್ದಾನೆ. ‘ಬಿಜೆಪಿಯಲ್ಲಿ ಯಾರ ಬೂಟ್ ನೆಕ್ಕಲು ಬರುತ್ತೀಯಾ’ ಎಂದು ನನ್ನನ್ನು ಪ್ರಶ್ನಿಸಿದ್ದಾನೆ. ಆ ವ್ಯಕ್ತಿ ಯಾರು? ಬೂಟ್ ನೆಕ್ಕುವವರಿಗೆ ಮಾತ್ರ ನಿಮ್ಮಲ್ಲಿ ಅವಕಾಶವೇ’ ಎಂದು ಸೋಮಶೇಖರ್ ಪ್ರಶ್ನಿಸಿದ್ದಾರೆ.

‘ನನ್ನ ಕ್ಷೇತ್ರದಲ್ಲಿ ಪಕ್ಷದ ನಾಯಕರುಗಳಿಂದಾದ ಸಮಸ್ಯೆಗಳು ಮತ್ತು ಗೊಂದಲಗಳಿಂದ ಬೇಸತ್ತು, ಪಕ್ಷದ ಚಟುವಟಿಕೆಗಳಿಂದ ದೂರ ಉಳಿದಿದ್ದೆ. ವಿಜಯೇಂದ್ರ ಎಲ್ಲವನ್ನೂ ಸರಿಪಡಿಸುತ್ತಾನೆ ಎಂದು ನೀವು ಹೇಳಿದ್ದರಿಂದ ಪಕ್ಷದಲ್ಲಿ ಉಳಿದಿದ್ದೆ. ಆದರೆ ನನ್ನನ್ನು ಉಚ್ಚಾಟನೆ ಮಾಡಲಾಯಿತು’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ನನ್ನ ರಾಜಕೀಯ ಜೀವನವನ್ನು ಒತ್ತೆ ಇಟ್ಟು ನಿಮ್ಮೊಂದಿಗೆ ಬಂದೆ. ಆದರೆ ಉಪಕಾರ ಸ್ಮರಣೆ ಇಲ್ಲದೆ, ನನ್ನ ಕ್ಷೇತ್ರದಲ್ಲಿ ನನ್ನ ವಿರುದ್ಧ ರುದ್ರೇಶ್ ಎಂಬಾತನನ್ನು ಛೂಬಿಟ್ಟಿದ್ದೀರಿ. ಕ್ಷೇತ್ರದಲ್ಲಿ ಈಗಲೂ ನನ್ನ ಹಿಡಿತ ಇದೆ ಎಂಬುದು ನಿಮಗೆ ತಿಳಿದಿದ್ದರೆ ಸಾಕು’ ಎಂದಿದ್ದಾರೆ.

‘ಈ ಪತ್ರದಲ್ಲಿ ನಾನು ಎತ್ತಿರುವ ಪ್ರಶ್ನೆಗಳಿಗೆ ನೀವು ಉತ್ತರ ನೀಡಬೇಕು. ನನ್ನ ಮುಂದಿನ ನಿರ್ಣಯ ಏನಾಗಿರಬೇಕು ಎಂಬ ದೃಷ್ಟಿಯಲ್ಲಿ ನಿಮ್ಮ ಉತ್ತರ ಬಹಳ ಮುಖ್ಯವಾಗಲಿದೆ’ ಎಂದಿದ್ದಾರೆ.

ತುಂಗಭದ್ರಾ ಅಣೆಕಟ್ಟೆಗೆ ಆಂಧ್ರದ ಸಚಿವ ಭೇಟಿ



ಹೊಸಪೇಟೆ (ವಿಜಯನಗರ): ಆಂಧ್ರಪ್ರದೇಶದ ಹಣಕಾಸು ಸಚಿವ ಪಯ್ಯಾವುಲ ಕೇಶವ ಅವರು ಮಂಗಳವಾರ ತುಂಗಭದ್ರಾ ಅಣೆಕಟ್ಟೆಗೆ ಭೇಟಿ ನೀಡಿ, ಕ್ರೆಸ್ಟ್ ಗೇಟ್ ಅಳವಡಿಕೆ ಕಾಮಗಾರಿ ಪರಿಶೀಲಿಸಿದರು.

ಆಂಧ್ರ ಸರ್ಕಾರದ ಮುಖ್ಯ ಸಚೇತಕ ಕಲವ ಶ್ರೀನಿವಾಸು ಅವರೂ ಆಗಮಿಸಿದ್ದರು. ಈ ವೇಳೆ ಮಾತನಾಡಿದ ಪಯ್ಯಾವುಲ ಕೇಶವ ಅವರು, ‘ಕ್ರೆಸ್ಟ್ ಗೇಟ್ ಅಳವಡಿಕೆ ಕಾಮಗಾರಿ ಮೇ ಅಂತ್ಯಕ್ಕೆ ಮುಗಿಯಲಿದೆ. ಈ ವಿಷಯದಲ್ಲಿ ಆಂಧ್ರಪ್ರದೇಶ ಸರ್ಕಾರವೂ ಕಾಳಜಿ ವಹಿಸಿದೆ’ ಎಂದರು. ‘ಕ್ರೆಸ್ಟ್ ಗೇಟ್ ಅಳವಡಿಕೆ ತ್ವರಿತವಾಗಿ ಮುಗಿಸಲು ಕರ್ನಾಟಕ ಸರ್ಕಾರ ಸಹಕರಿಸುತ್ತಿದೆ. ಮುಂಗಾರು ವೇಳೆ ಉತ್ತಮ ಮಳೆ ಆದರೆ ಜಲಾಶಯದಲ್ಲಿ ಗರಿಷ್ಠ ಪ್ರಮಾಣದ ನೀರು ಸಂಗ್ರಹ ಸಾಧ್ಯವಾಗಲಿದೆ’ ಎಂದು ಅಭಿಪ್ರಾಯಪಟ್ಟರು..

ವರ್ಗಾವಣೆ: ಸ್ಥಳ ನಿಯುಕ್ತಿ ಕಡ್ಡಾಯ

ಒಂದನೇ ಪುಟದಿಂದ...

‘ಆದರೂ ಕೆಲವು ಇಲಾಖೆಗಳಲ್ಲಿ ಅಧಿಕಾರಿ, ನೌಕರರನ್ನು ವರ್ಗಾಯಿಸಿದಾಗ ಪರ್ಯಾಯ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸದೇ ಇರುವುದರಿಂದ ಅಂತಹ ಅಧಿಕಾರಿಗಳು, ನೌಕರರು ಕಡ್ಡಾಯ ನಿರೀಕ್ಷಣೆಗೆ ಬರುವ ಪರಿಸ್ಥಿತಿ ಉಂಟಾಗಿ, ಅವರು ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸದಿದ್ದರೂ ಅವರಿಗೆ ವೇತನ ಹಾಗೂ ಭತ್ಯೆಗಳನ್ನು ಪಾವತಿಸುವ ಅನಿವಾರ್ಯ ಉಂಟಾಗುತ್ತಿದೆ. ಇದರಿಂದ ಸರ್ಕಾರಕ್ಕೆ ಅನವಶ್ಯಕ ಆರ್ಥಿಕ ಹೊರೆಯಾಗುತ್ತಿದೆ’ ಎಂದಿದ್ದಾರೆ.

ಹುದ್ದೆ ಮುಂಬಡ್ತಿಗೆ ತರಬೇತಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನು ಮುಂದೆ ಸರ್ಕಾರಿ ನೌಕರರು ಹುದ್ದೆಯಲ್ಲಿ ಮುಂಬಡ್ತಿ ಪಡೆಯಲು ಜ್ಯೇಷ್ಠತೆ ಒಂದೇ ಮಾನದಂಡವಲ್ಲ. ಅಗತ್ಯ ತರಬೇತಿಯೂ ಕಡ್ಡಾಯ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಈ ಕಾರಣಕ್ಕೆ ‘ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಮುಂಬಡ್ತಿಗಾಗಿ ತರಬೇತಿ ಕಡ್ಡಾಯ) ನಿಯಮಗಳು–2026’ಅನ್ನು ಪ್ರಕಟಿಸಲಾಗಿದೆ.

ಪದೋನ್ನತಿ ಪಡೆಯಲು ಕಡ್ಡಾಯವಾಗಿ ತರಬೇತಿ ನೀಡಬೇಕು ಎಂದು ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2 ಕೂಡ ತನ್ನ ಒಂದನೇ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಅದರ ಅನ್ವಯ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಿರ್ಣಯ ತೆಗೆದುಕೊಂಡು ಕರಡು ನಿಯಮ ರೂಪಿಸಲಾಗಿತ್ತು. ಇದೀಗ ಅಧಿಸೂಚನೆ ಹೊರಡಿಸಲಾಗಿದೆ.

ವಿನಾಯಿತಿ: ಗ್ರೂಪ್ ‘ಸಿ’ ವೃಂದದಲ್ಲಿರುವ ವಾಹನ ಚಾಲಕರು ಮತ್ತು ಗ್ರೂಪ್ ‘ಡಿ’ ವೃಂದದ ನೌಕರರಿಗೆ ತರಬೇತಿಯಿಂದ ವಿನಾಯಿತಿ ನೀಡಲಾಗಿದೆ. ಅಲ್ಲದೆ, ಕರ್ತವ್ಯದಿಂದ ನಿವೃತ್ತಿ ಹೊಂದಲು ಕೇವಲ ಎರಡು ವರ್ಷ ಅಥವಾ ಅದಕ್ಕಿಂತ ಕಡಿಮೆ ಅವಧಿ ಬಾಕಿ ಇರುವ ನೌಕರರಿಗೆ ಈ ತರಬೇತಿಯಿಂದ ವಿನಾಯಿತಿ ಇರುತ್ತದೆ.

ಯಾರಿಗೆಲ್ಲ ಕಡ್ಡಾಯ?:

ಗ್ರೂಪ್ ‘ಎ’ ನೌಕರರು: ಹಿರಿಯ ಮಟ್ಟದ ಅಧಿಕಾರಿಗಳು ತಮ್ಮ ಆಡಳಿತಾತ್ಮಕ ಕೌಶಲಗಳನ್ನು ನವೀಕರಿಸಿಕೊಳ್ಳಲು ತರಬೇತಿ ಪಡೆಯುವುದು ಕಡ್ಡಾಯ.

ಗ್ರೂಪ್ ‘ಬಿ’ ನೌಕರರು: ಮಧ್ಯಮ ಹಂತದ ಅಧಿಕಾರಿಗಳಿಗೆ ಕ್ಷೇತ್ರ ಕಾರ್ಯ ಮತ್ತು ಕಚೇರಿ ನಿರ್ವಹಣೆಯ ಕುರಿತು ವಿಶೇಷ ತರಬೇತಿ ಇರಲಿದೆ.

ಗ್ರೂಪ್ ‘ಸಿ’ ನೌಕರರು: ಕಚೇರಿ ಸಹಾಯಕರು ಮತ್ತು ಇತರ ತಾಂತ್ರಿಕೇತರ ಸಿಬ್ಬಂದಿಗೆ ಈ ನಿಯಮ ಅನ್ವಯವಾಗುತ್ತದೆ.

ಖಾಸಗಿ ಶಾಲೆ: ಜಾಗ ಭೋಗ್ಯದ ಅವಧಿ ಇಳಿಕೆ

ಒಂದನೇ ಪುಟದಿಂದ...

ಸ್ವಂತ ಜಾಗ ಇಲ್ಲದೇ ಇದ್ದರೆ ಉದ್ದೇಶಿತ ಜಾಗವನ್ನು ಕನಿಷ್ಠ 30 ವರ್ಷಗಳವರೆಗೆ ಭೋಗ್ಯಕ್ಕೆ ಪಡೆದಿರಬೇಕು ಎಂದು ‘ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಪಠ್ಯಕ್ರಮದ ವರ್ಗೀಕರಣ, ನಿಯಂತ್ರಣ ಮತ್ತು ಶಿಫಾರಸು ಇತ್ಯಾದಿ) (ತಿದ್ದುಪಡಿ) ನಿಯಮ–2018’ರ 5(4) ಸೆಕ್ಷನ್ ಹೇಳುತ್ತದೆ.

2018ರ ಮಾರ್ಚ್‌ನಿಂದ ಜಾರಿಗೆ ಬಂದಿದ್ದ ಈ ನಿಯಮದಿಂದಾಗಿ, ಹೊಸ ಶಾಲೆ ಆರಂಭಿಸಲು ಖಾಸಗಿ ಶಿಕ್ಷಣ ಸಂಸ್ಥೆಗಳು ಭಾರಿ ಹಣ ವೆಚ್ಚ ಮಾಡಿ ಜಾಗವನ್ನು 30 ವರ್ಷಗಳವರೆಗೆ ಭೋಗ್ಯಕ್ಕೆ ಪಡೆಯಬೇಕಿತ್ತು. ಜತೆಗೆ ಭೋಗ್ಯ ಪತ್ರದ ನೋಂದಣಿಗೂ ವೆಚ್ಚ ಮಾಡಬೇಕಿತ್ತು. ಇದು ಹೊರೆಯಾಗುತ್ತಿದೆ ಎಂಬ ಆಕ್ಷೇಪವಿತ್ತು.

ಈ ಹೊರೆ ತಪ್ಪಿಸಲು ಮುಂದಾಗಿರುವ ಸರ್ಕಾರ, ಖಾಸಗಿ ಸಂಸ್ಥೆಗಳಿಗೆ ಸ್ವಂತ ಜಾಗ ಇಲ್ಲದೇ ಇದ್ದರೆ, ಉದ್ದೇಶಿತ ಜಾಗವನ್ನು ಕನಿಷ್ಠ 15 ವರ್ಷಗಳಿಗೆ ಭೋಗ್ಯಕ್ಕೆ ಪಡೆಯಬೇಕು ಎಂದು ಕರಡು ನಿಯಮ ಹೇಳಿದೆ.

ಭದ್ರತಾ ಠೇವಣಿ ನಿಯಮ ಬದಲು: ಖಾಸಗಿ ಶಿಕ್ಷಣ ಸಂಸ್ಥೆಗಳು ಶಾಲಾ ಮಾನ್ಯತೆಗಾಗಿ ಸಲ್ಲಿಸುವ ಅರ್ಜಿಯೊಂದಿಗೆ, ಶಾಲಾ ಶಿಕ್ಷಣ ಉಪ ನಿರ್ದೇಶಕರ ಹೆಸರಿನಲ್ಲಿ ಭದ್ರತಾ ಠೇವಣಿ ಇರಿಸಬೇಕು. ಆ ಭದ್ರತಾ ಠೇವಣಿಗೆ ದೊರೆಯುವ ಬಡ್ಡಿಯ ಮೊತ್ತವನ್ನು ಶಿಕ್ಷಣ ಸಂಸ್ಥೆಯು ಬಳಸಿಕೊಳ್ಳಬಹುದು. ಶಾಲೆ ಮುಚ್ಚಿದ ಸಂದರ್ಭದಲ್ಲಿ ಅಲ್ಲಿನ ಸಿಬ್ಬಂದಿಗೆ ವೇತನ ಪಾವತಿ ಮಾಡಲು ಮತ್ತು ಇಲಾಖೆಯ ಶುಲ್ಕವನ್ನು ಪಾವತಿ ಮಾಡಲು ಭದ್ರತಾ ಠೇವಣಿಯನ್ನು ಶಾಲಾ ಶಿಕ್ಷಣ ಉಪ ನಿರ್ದೇಶಕರು ಬಳಸಿಕೊಳ್ಳಬಹುದು ಎಂದು ‘ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಾನ್ಯತೆ) (ತಿದ್ದುಪಡಿ) ನಿಯಮಗಳು–2026ರ’ ಕರಡು ಅಧಿಸೂಚನೆಯಲ್ಲಿ ವಿವರಿಸಿದೆ.

ಪಟಾಕಿ ಸ್ಫೋಟ: 6 ಪೊಲೀಸರಿಗೆ ಗಾಯ

ಚಲ್ಲಪಲ್ಲಿ (ಆಂಧ್ರ ಪ್ರದೇಶ) (ಪಿಟಿಐ): ಕೃಷ್ಣಾ ಜಿಲ್ಲೆಯ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪಟಾಕಿ ವಿಲೇವಾರಿ ಮಾಡುವಾಗ ಸ್ಫೋಟ ಸಂಭವಿಸಿದ್ದು, ಆರು ಮಂದಿ ಪೊಲೀಸರು ಗಾಯಗೊಂಡಿದ್ದಾರೆ.

‘ಅನಧಿಕೃತ ಪಟಾಕಿ ಸಂಗ್ರಹ ಘಟಕಗಳ ಮೇಲೆ ದಾಳಿ ನಡೆಸಿದ್ದ ಪೊಲೀಸರು, ಅಪಾರ ಪ್ರಮಾಣದ ಪಟಾಕಿಗಳನ್ನು ವಶಪಡಿಸಿಕೊಂಡಿದ್ದರು. ಅವುಗಳನ್ನು ಪೊಲೀಸ್ ಠಾಣೆಯಲ್ಲಿ ಸುರಕ್ಷಿತವಾಗಿ ಸಂಗ್ರಹಿಸಿ ಇಡಲಾಗಿತ್ತು. ನ್ಯಾಯಾಲಯದ ಆದೇಶದ ಅನುಸಾರ ಪಟಾಕಿಗಳನ್ನು ವಿಲೇವಾರಿ ಮಾಡಲು ಹೊರಗೆ ತೆಗೆದುಕೊಂಡು ಹೋಗುವಾಗ ಸ್ಫೋಟ ಸಂಭವಿಸಿದೆ’ ಎಂದು ಎಸ್‌ಪಿ ವಿದ್ಯಾ ಸಾಗರ್ ನಾಯ್ಡು ಅವರು ಹೇಳಿದರು.

‘ಘಟನೆಯಲ್ಲಿ ಮೂವರು ಅಧಿಕಾರಿಗಳಿಗೆ ಗಂಭೀರ ಗಾಯಗಳಾಗಿದ್ದು, ಇತರ ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಘಟನೆಯ ಕುರಿತು ಹೆಚ್ಚಿನ ತನಿಖೆ ನಡೆಸಲಾಗುವುದು’ ಎಂದು ಅವರು ತಿಳಿಸಿದರು.

ಪ್ರೇಮ ವೈಫಲ್ಯ: ಬಸ್‌ಗೆ ಬೈಕ್ ಗುದ್ದಿಸಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ


ಅಭಿಷೇಕ್

ವಿಜಯಪುರ: ಸಿಂದಗಿ ತಾಲ್ಲೂಕಿನ ವಿಜಯಪುರ–ಕಲಬುರಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಕನ್ನೊಳ್ಳಿ ಟೋಲ್‌ಗೇಟ್ ಬಳಿ ಬಸ್‌ಗೆ ಬೈಕ್ ಡಿಕ್ಕಿ ಹೊಡೆಸಿ ಸವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಡಿಕ್ಕಿ ರಭಸಕ್ಕೆ ಬೈಕ್ ಸವಾರ, ಸಿಂದಗಿಯ ಅಭಿಷೇಕ್ ಸಾಹೇಬಗೌಡ ನಾಗರಹಳ್ಳಿ (19) ಬಸ್‌ನ ಮುಂಭಾಗ ಸಿಲುಕಿಕೊಂಡಿದ್ದು, ಬೆಂಕಿ ಹೊತ್ತಿಕೊಂಡು ಸಜೀವವಾಗಿ ದಹನವಾಗಿದ್ದಾರೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಬಸ್ ಮತ್ತು ಬೈಕ್ ಪೂರ್ಣ ಸುಟ್ಟು ಭಸ್ಮವಾಗಿದೆ. ಬಸ್ ಪ್ರಯಾಣಿಕರು ಪಾರಾಗಿದ್ದಾರೆ. ಸ್ಥಳಕ್ಕೆ ಸಿಂದಗಿ ಅಗ್ನಿಶಾಮಕ ಸಿಬ್ಬಂದಿ, ದೌಡಾಯಿಸಿ ಬೆಂಕಿ ನಂದಿಸಿದರು.

ಆತ್ಮಹತ್ಯೆಗೆ ಮುನ್ನ ವಿಡಿಯೊ: ಅಪಘಾತಕ್ಕೂ ಮುನ್ನಾ ಅಭಿಷೇಕ್ ನಾಗರಹಳ್ಳಿ, ‘ನಾನು ಹುಡುಗಿಯನ್ನು ಪ್ರೀತಿಸುತ್ತಿದೆ. ಆಕೆಯನ್ನು ನನ್ನಿಂದ ದೂರ ಮಾಡಿದ್ದಕ್ಕೆ ನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ’ ಎಂದು ಹೇಳಿಕೊಂಡಿದ್ದಾರೆ. ಮೂವರ ಹೆಸರು ಉಲ್ಲೇಖಿಸಿ, ನನ್ನ ಸಾವಿಗೆ ಅವರೇ ಕಾರಣ ಎಂದು ಇನ್‌ಸ್ಟಾಗ್ರಾಂನ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಎಸ್‌ಪಿ ಲಕ್ಷ್ಮಣ ನಿಂಬರಗಿ ‘ಯುವಕನ ಕುಟುಂಬದಿಂದ ದೂರು ಬಂದಿಲ್ಲ. ಸದ್ಯ ಇದನ್ನು ಅಪಘಾತ ಪ್ರಕರಣ ಎಂದು ದಾಖಲಿಸಿಕೊಳ್ಳಲಾಗುವುದು’ ಎಂದು ತಿಳಿಸಿದ್ದಾರೆ.

ಬರಲೇ ಇಲ್ಲ ₹15,583 ಕೋಟಿ

ಒಂದನೇ ಪುಟದಿಂದ...

‘ಅನುದಾನ ಬಿಡುಗಡೆ ಮಾಡದಿರುವುದು ಗ್ರಾಮೀಣ ಕರ್ನಾಟಕಕ್ಕೆ ಎಸಗುತ್ತಿರುವ ಮಹಾದ್ರೋಹವೇ ಸರಿ’ ಎಂದರು.

‘ಅನುದಾನದ ಕೊರತೆಯಿಂದಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಕರ್ನಾಟಕವು ಗ್ರಾಮೀಣ ವಿಕೇಂದ್ರೀಕರಣದಲ್ಲಿ ನಿರಂತರವಾಗಿ ಮುಂಚೂಣಿಯಲ್ಲಿದೆ ಮತ್ತು ಪಂಚಾಯತಿ ಮಟ್ಟದ ಆಡಳಿತ ಉಳಿಸಿಕೊಳ್ಳಲು ಹಾಗೂ ಅವುಗಳ ಅವಧಿ ಮುಗಿಯುವ ಮೊದಲೇ ನಿರ್ಣಾಯಕ ಯೋಜನೆಗಳನ್ನು ಪೂರ್ಣಗೊಳಿಸಲು ಕೇಂದ್ರ ಸರ್ಕಾರ ಸಕಾಲಕ್ಕೆ ಅನುದಾನಗಳನ್ನು ಬಿಡುಗಡೆ ಮಾಡಬೇಕಿತ್ತು’ ಎಂದು ಅವರು ಹೇಳಿದರು.

‘ಚುನಾವಣೆ ನಡೆಸದ ಕಾರಣಕ್ಕೆ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ 15ನೇ ಹಣಕಾಸು ಆಯೋಗದ ಅನುದಾನ ಕೊಡುವುದಿಲ್ಲ ಎಂದು ಸಚಿವಾಲಯ ಈ ಹಿಂದೆಯೇ ಸ್ಪಷ್ಟಪಡಿಸಿತ್ತು. ನಗರ ಸ್ಥಳೀಯ ಸಂಸ್ಥೆಗಳಿಗೆ ಆದಷ್ಟು ಬೇಗ ಚುನಾವಣೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿತ್ತು. ಆದರೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ), ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆ ನಡೆಸದ ಕಾರಣಕ್ಕೆ ₹1,028 ಕೋಟಿ ಅನುದಾನ ಕೈತಪ್ಪಿದೆ.

15ನೇ ಹಣಕಾಸು ಆಯೋಗ ಶಿಫಾರಸು ಮಾಡಿರುವ ₹5,495 ಕೋಟಿ ವಿಶೇಷ ಅನುದಾನವೂ ರಾಜ್ಯಕ್ಕೆ ಬಂದಿಲ್ಲ. ‘ಆಯೋಗದ ಮಧ್ಯಂತರ ವರದಿಯಲ್ಲಷ್ಟೇ ಈ ಅನುದಾನದ ಉಲ್ಲೇಖ ಇತ್ತು. ಅಂತಿಮ ವರದಿಯಲ್ಲಿ ಈ ಬಗ್ಗೆ ಪ್ರಸ್ತಾಪ ಇರಲಿಲ್ಲ’ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಈ ಹಿಂದೆ ಸ್ಪಷ್ಟಪಡಿಸಿದ್ದರು. ‘ಹಣಕಾಸು ಆಯೋಗವು ಎರಡು ವರದಿಗಳನ್ನು ಸಲ್ಲಿಸಿತ್ತು. ಈ ವಿಶೇಷ ಅನುದಾನವನ್ನು ಮೊದಲ ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು. ಕೇಂದ್ರ ಸರ್ಕಾರ ಈಗ ಸಬೂಬು ಹೇಳುತ್ತಿದೆ’ ಎಂಬುದು ರಾಜ್ಯ ಸರ್ಕಾರದ ವಾದ.

ಬೆಂಗಳೂರಿನ ಕೆರೆಗಳ ಅಭಿವೃದ್ಧಿಗೆ ಹಾಗೂ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣಕ್ಕೆ ₹6,000 ಕೋಟಿ ಅನುದಾನವನ್ನು ಆಯೋಗ ಶಿಫಾರಸು ಮಾಡಿತ್ತು. ಈ ಅನುದಾನ ಬಿಡುಗಡೆಗೆ ಒತ್ತಾಯಿಸಿ ರಾಜ್ಯ ಸರ್ಕಾರ ಹಲವು ಸಲ ಮನವಿ ಮಾಡಿತ್ತು. ಅನುದಾನ ಬಿಡುಗಡೆ ಮಾಡುವುದಾಗಿಯೂ ಕೇಂದ್ರ ಭರವಸೆ ನೀಡಿತ್ತು. ಆದರೆ, ನಯಾಪೈಸೆಯೂ ಬಿಡುಗಡೆ ಆಗಿಲ್ಲ.

ಸಂಯಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಾನೂನು ಸಚಿವರ ಅಭಿಮತ

ಮದ್ಯಪಾನ ನಿಷೇಧ ಅಪ್ರಸ್ತುತ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮದ್ಯಪಾನ ಕಡಿಮೆ ಮಾಡಬೇಕು, ನಿಷೇಧಿಸಬೇಕು ಎಂಬುದು ಇಂದಿನ ದಿನಮಾನಗಳಲ್ಲಿ ಅಪ್ರಸ್ತುತ’ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಮಂಗಳವಾರ ಆಯೋಜಿಸಿದ್ದ ಸಮಾರಂಭದಲ್ಲಿ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್. ಪಾಟೀಲ, ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರಿಗೆ ಸಂಯಮ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ರಾಜ್ಯದ ಎಲ್ಲ ಪಾನ್ ಶಾಪ್, ಕಿರಾಣಿ, ಚಹಾ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡಲಾಗುತ್ತಿದೆ. ಮದ್ಯಪಾನವು ಕಡಿಮೆ ಅಪಾಯಕಾರಿ. ಇದಕ್ಕಿಂತ ದೊಡ್ಡ ಅಪಾಯ ಎಂದರೆ ಗಾಂಜಾ, ಅಫೀಮು ಹಾಗೂ ಡ್ರಗ್ಸ್ ಸೇವನೆ ಆಗಿದೆ. ಸಾರ್ವಜನಿಕರು ಸೇರಿದಂತೆ ಗಾಂಧಿವಾದಿಗಳು ಮದ್ಯಪಾನ ಮಾಡಿದರೂ 60ರಿಂದ 65 ವರ್ಷದವರೆಗೂ ಬದುಕುತ್ತಾರೆ. ಇಂದಿನ ಯುವಕರು ಗಾಂಜಾ, ಡ್ರಗ್ಸ್ ವ್ಯಸನದಿಂದ 20–25 ವರ್ಷದೊಳಗೆ ಮೃತಪಡುತ್ತಿದ್ದಾರೆ. ಇಂತಹ ಅನಿಷ್ಟ ವ್ಯಸನಗಳನ್ನು ಸಂಪೂರ್ಣವಾಗಿ ನಿಷೇಧಿಸುವ ಕುರಿತು ಸಂಯಮ ಮಂಡಳಿ ಕಹಳೆ ಊದಬೇಕು’ ಎಂದು ಕರೆ ನೀಡಿದರು.

‘ಬೆಂಗಳೂರಿನ ಕಬ್ಬನ್ ಉದ್ಯಾನದ ಬಳಿ ಇರುವ ಮಹಾತ್ಮ ಗಾಂಧಿ ಪ್ರತಿಮೆಯ ಎದುರುಗಡೆ ಟಾನಿಕ್ ಎಂಬ ಬೃಹತ್ ಮದ್ಯದ ಅಂಗಡಿ ಇದೆ. ನಿತ್ಯ ಇಲ್ಲಿಗೆ ನೂರಾರು ಮಂದಿ ಭೇಟಿ ನೀಡಿ, ಲಕ್ಷಾಂತರ ರೂಪಾಯಿ ವ್ಯವಹಾರ ನಡೆಸುತ್ತಾರೆ. ಇದರ ಮುಂಭಾಗದಲ್ಲಿಯೇ ಇರುವ ಗಾಂಧಿ ಪ್ರತಿಮೆ ವೀಕ್ಷಿಸಲು ಯಾರೂ ಹೋಗುವುದಿಲ್ಲ. ಕೂಡಲೇ ಮಂಡಳಿಯ ಅಧ್ಯಕ್ಷರು ಈ ಮದ್ಯದ ಅಂಗಡಿ ಅಥವಾ ಗಾಂಧಿ ಪ್ರತಿಮೆಯನ್ನು ಅಲ್ಲಿಂದ ಸ್ಥಳಾಂತರ ಮಾಡುವಂತೆ ಮುಖ್ಯಮಂತ್ರಿಯವರಿಗೆ ಪತ್ರ ಬರೆಯಬೇಕು’ ಎಂದರು.

ಸಂಯಮ ಪ್ರಶಸ್ತಿ ಪಡೆದ ಮೂವರಿಗೆ ನೀಡಿದ ತಲಾ ₹1 ಲಕ್ಷವನ್ನು ಗಾಂಧಿಭವನಕ್ಕೆ ದೇಣಿಗೆಯಾಗಿ ನೀಡಿದರು. ವೂಡೇ ಪಿ. ಕೃಷ್ಣ ಹೆಚ್ಚುವರಿಯಾಗಿ ₹1 ಲಕ್ಷ ನೀಡುವುದಾಗಿ ಭರವಸೆ ನೀಡಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ, ವಾರ್ತಾ ಇಲಾಖೆಯ ಕಾರ್ಯದರ್ಶಿ ಬಿ.ಬಿ. ಕಾವೇರಿ, ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ನಾರಾಯಣಸ್ವಾಮಿ, ಮಾಜಿ ಶಾಸಕ ಎಚ್.ಎಂ. ಚಂದ್ರಶೇಖರಪ್ಪ ಉಪಸ್ಥಿತರಿದ್ದರು.


ಸಮಾರಂಭದಲ್ಲಿ ಡಿ.ಆರ್. ಪಾಟೀಲ, ವೂಡೇ ಪಿ. ಕೃಷ್ಣ ಹಾಗೂ ಬಿ.ಆರ್. ಪಾಟೀಲ ಅವರಿಗೆ ಸಂಯಮ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಚ್.ಎಂ. ಚಂದ್ರಶೇಖರಪ್ಪ, ಬಿ.ಬಿ. ಕಾವೇರಿ, ಎಚ್.ಕೆ. ಪಾಟೀಲ, ರಾಮಲಿಂಗಾರೆಡ್ಡಿ, ಶರಣಪ್ಪ ಸಲಾದಪುರ ಹಾಗೂ ನಾರಾಯಣಸ್ವಾಮಿ ಹಾಜರಿದ್ದರು. ಪ್ರಜಾವಾಣಿ ಚಿತ್ರ

> ಮದ್ಯಪಾನ ಬೇಡವೆಂಬ ಸಂಯಮ ಮಂಡಳಿ, ಗಾಂಧಿವಾದಿಗಳ ಮಾತುಗಳನ್ನು ಯಾರು ಕೇಳುತ್ತಾರೆ? ಅಕ್ರಮ ಮದ್ಯ ಮಾರಾಟದ ಕುರಿತು ಲೋಕಾಯುಕ್ತಕ್ಕೆ ದೂರು ನೀಡಿ
> **ಎಚ್.ಕೆ. ಪಾಟೀಲ,** ಕಾನೂನು ಸಚಿವ

> ಮದ್ಯಪಾನ ನಿಷೇದದ ಕೂಗನ್ನು ಸರ್ಕಾರ ಕಿವಿಗೆ ಹಾಕಿಕೊಳ್ಳುತ್ತಿಲ್ಲ. ಸರ್ಕಾರಕ್ಕೆ ಇದರಿಂದ ಪ್ರತಿವರ್ಷ ₹40 ಸಾವಿರ ಕೋಟಿ ಆದಾಯ ಬರುತ್ತದೆ
> **ಬಿ.ಆರ್. ಪಾಟೀಲ,** ರಾಜ್ಯನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ

ಐಪಿಎಲ್: ಮೊಬೈಲ್ ಕಳ್ಳರ ಸೆರೆ

₹18 ಲಕ್ಷ ಮೌಲ್ಯದ 21 ಮೊಬೈಲ್ ಫೋನ್ ಜಪ್ತಿ

• ಕಬ್ಬನ್‌ಪಾರ್ಕ್ ಠಾಣೆ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ



ಶುಭಂ ಕುಮಾರ್

ಅಪರಾಧ ಸುದ್ದಿ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್.ಸಿ.ಬಿ) ಮತ್ತು ಸನ್‌ರೈಸರ್ಸ್ ಹೈದರಾಬಾದ್ (ಎಸ್.ಆರ್.ಎಚ್) ತಂಡಗಳ ನಡುವೆ ನಗರದ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಐಪಿಎಲ್ ಪಂದ್ಯದ ವೇಳೆ, ಪ್ರೇಕ್ಷಕರ ಮೊಬೈಲ್ ಕಳ್ಳತನ ಮಾಡಿದ್ದ ಹೊರ ರಾಜ್ಯದ ಆರೋಪಿ ಹಾಗೂ ಆತನ ಕೃತ್ಯಕ್ಕೆ ನೆರವು ನೀಡಿದ್ದ ಬಾಲಕರನ್ನು ಬಂಧಿಸುವಲ್ಲಿ ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು ಯಶಸ್ವಿ ಆಗಿದ್ದಾರೆ.

ಜಾರ್ಖಂಡ್‌ನ ಶುಭಂ ಕುಮಾರ್ (26) ಬಂಧಿತ ಆರೋಪಿ. ಕಳ್ಳತನಕ್ಕೆ ನೆರವು ನೀಡಿದ್ದ ಬಾಲಕರನ್ನೂ ಬಂಧಿಸಿ ಬಾಲಮಂದಿರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬಂಧಿತರಿಂದ ವಿವಿಧ ಕಂಪನಿಯ ₹18 ಲಕ್ಷ ಮೌಲ್ಯದ 21 ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಮಾಧ್ಯಮ ಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

‘ಮಾರ್ಚ್ 28ರಂದು ಆರ್‌ಸಿಬಿ ಹಾಗೂ ಎಸ್‌ಆರ್‌ಎಚ್ ತಂಡಗಳ ನಡುವೆ ಐಪಿಎಲ್ ಟೂರ್ನಿಯ ಉದ್ಘಾಟನಾ ಪಂದ್ಯವು ನಗರದಲ್ಲಿ ನಡೆದಿತ್ತು. ಪಂದ್ಯದ ಮೊದಲ ಇನಿಂಗ್ಸ್ ಮುಕ್ತಾಯವಾದ ಮೇಲೆ ಹಲವು ಪ್ರೇಕ್ಷಕರು ನೀರು, ಆಹಾರ ಪದಾರ್ಥಗಳನ್ನು ತರಲು ಹೋಗಿದ್ದರು. ಆ ಸಂದರ್ಭವನ್ನೇ ಬಳಸಿಕೊಂಡು ನೂಕುನುಗ್ಗಲಿನಲ್ಲಿ ಕಳ್ಳರು ಕೃತ್ಯ ಎಸಗಿದ್ದರು. ಇನ್ನು ಪಂದ್ಯ ಮುಕ್ತಾಯವಾದ ಮೇಲೂ ಪ್ರೇಕ್ಷಕರು ಹೊರಕ್ಕೆ ಹೋಗುವ ಸಂದರ್ಭದಲ್ಲೂ ಮೊಬೈಲ್‌ಗಳ ಕಳ್ಳತನ ನಡೆದಿತ್ತು. ಮೆಟ್ರೊ ನಿಲ್ದಾಣಗಳಲ್ಲೂ ಕಳ್ಳರು ಕೃತ್ಯ ಎಸಗಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಬಾಲಕರಿಗೆ ಶುಭಂ ಕುಮಾರ್ ಐಪಿಎಲ್ ಟಿಕೆಟ್ ನೀಡಿ ಕ್ರೀಡಾಂಗಣಕ್ಕೆ ಕಳುಹಿಸಿದ್ದರು. ಐಪಿಎಲ್ ಪಂದ್ಯ ವೀಕ್ಷಿಸುವ ನೆಪದಲ್ಲಿ ಬಾಲಕರು ಪ್ರೇಕ್ಷಕರ ಮೊಬೈಲ್ ಕಳ್ಳತನ ಮಾಡಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಹೊರ ರಾಜ್ಯದ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದ ವೇಳೆಯೂ ಮೊಬೈಲ್ ಕಳ್ಳತನ ನಡೆದಿರುವ ಮಾಹಿತಿ ಇದೆ. ಅಲ್ಲಿನ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಹೊರ ರಾಜ್ಯಗಳಲ್ಲಿ ಕೃತ್ಯ ಎಸಗಿರುವ ತಂಡಕ್ಕೂ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಳ್ಳತನ ಮಾಡಿರುವ ತಂಡಕ್ಕೆ ಏನಾದರೂ ನಂಟು ಇದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ’ ಎಂದು ಹೇಳಿದರು.

ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ. ಹಾಕೆ ಅವರ ಮಾರ್ಗದರ್ಶನದಲ್ಲಿ ಎಸಿಪಿ ಪ್ರಿಯದರ್ಶಿನಿ ನೇತೃತ್ವದಲ್ಲಿ ಕಬ್ಬನ್ ಪಾರ್ಕ್ ಠಾಣೆಯ ಇನ್‌ಸ್ಪೆಕ್ಟರ್ ಕೆ.ಎಸ್.ದೇವೇಂದ್ರಪ್ಪ ತಂಡವು ಪ್ರಕರಣ ಭೇದಿಸುವಲ್ಲಿ ಯಶಸ್ವಿ ಆಗಿದೆ.




ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಮೊಬೈಲ್ ಫೋನ್‌ಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಹಾಗೂ ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ. ಹಾಕೆ ಪರಿಶೀಲಿಸಿದರು

ಮಾಟ–ಮಂತ್ರದ ಪಾರ್ಸೆಲ್ ಕಳುಹಿಸಿದ್ದ ಆರೋಪಿ

ಸ್ವಯಂಘೋಷಿತ ದೇವಮಾನವ ಬಂಧನ

ಪ್ರಜಾವಾಣಿ ವಾರ್ತೆ



ಸುಭಾಷ್ ಜೈ ಅಜೀಜ್

ಬೆಂಗಳೂರು: ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆಡಳಿತ ಕಚೇರಿಗೆ ಮಾಟ– ಮಂತ್ರದ ಸಾಮಗ್ರಿಗಳು ಇದ್ದ ಪೆಟ್ಟಿಗೆಯೊಂದನ್ನು ಕೊರಿಯರ್ ಮೂಲಕ ಕಳುಹಿಸಿ ಆತಂಕ ಸೃಷ್ಟಿಸಿದ್ದ ಸ್ವಯಂ ಘೋಷಿತ ದೇವಮಾನವನನ್ನು ವಿಮಾನ ನಿಲ್ದಾಣದ ಪೊಲೀಸರು ಬಂಧಿಸಿದ್ದಾರೆ.

ನೆದರ್ಲೆಂಡ್ ದೇಶದ ಪ್ರಜೆ ಸುಭಾಷ್ ಜೈ ಅಜೀಜ್ (65) ಬಂಧಿತ.

‘ಸುಭಾಷ್ ಜೈ ಅಜೀಜ್ ಅವರ ಪೂರ್ವಜರು ಭಾರತದವರು. ಹಲವು ವರ್ಷಗಳ ಹಿಂದೆಯೇ ನೆದರ್ಲೆಂಡ್‌ಗೆ ಹೋಗಿ ನೆಲಸಿದ್ದರು. ಸುಭಾಷ್ ಪೂರ್ವಜರು ಆ ದೇಶದ ಪೌರತ್ವ ಪಡೆದುಕೊಂಡಿದ್ದರು. ಸುಭಾಷ್ ಸಹ ನೆದರ್ಲೆಂಡ್ ದೇಶದ ಪ್ರಜೆ’ ಎಂದು ಪೊಲೀಸರು ತಿಳಿಸಿದರು.

ಕೆಲವು ತಿಂಗಳ ಹಿಂದೆ ಸುಭಾಷ್ ಜೈ ಅಜೀಜ್ ಅವರು ನೆದರ್ಲೆಂಡ್‌ನಿಂದ ಉತ್ತರ ಪ್ರದೇಶಕ್ಕೆ ಬಂದಿದ್ದರು. ನಂತರ ಅಲ್ಲಿಂದ ವಿಮಾನದಲ್ಲಿ ಕೆಐಎಎಲ್‌ಗೆ ಬಂದಿದ್ದರು. ಹೂವಿನ ಹಾರ, ಅರಿಶಿನ ಕುಂಕುಮ, ಕಬ್ಬು, ಕೆಲವು ದೇವರ ಫೋಟೊಗಳು, ಕಬ್ಬಿಣದ ರಾಡುಗಳನ್ನು ಪೆಟ್ಟಿಗೆಯಲ್ಲಿ ತುಂಬಿಸಿ ಅದನ್ನು ವಿಮಾನ ನಿಲ್ದಾಣದ ಬಳಿಯ ಅಂಚೆ ಕಚೇರಿಯಿಂದ ಕೆಐಎಎಲ್ ಸಿಇಒ ಹೆಸರಿಗೆ ಕೊರಿಯರ್ ಮೂಲಕ ಕಳುಹಿಸಿದ್ದರು ಎಂದು ಪೊಲೀಸರು ಹೇಳಿದರು.

ವಿಮಾನ ನಿಲ್ದಾಣದ ಸಿಬ್ಬಂದಿ, ಆ ಪೆಟ್ಟಿಗೆಯನ್ನು ಪರಿಶೀಲಿಸಿದಾಗ ಮಾಟ–ಮಂತ್ರದ ಸಾಮಗ್ರಿಗಳು ಇರುವುದು ಪತ್ತೆ ಆಗಿತ್ತು. ಅದನ್ನು ಕಂಡ ಸಿಬ್ಬಂದಿ ಆತಂಕಕ್ಕೆ ಒಳಗಾಗಿದ್ದರು. ತಕ್ಷಣವೇ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಅವರು ಪೊಲೀಸರಿಗೆ ದೂರು ನೀಡಿದ್ದರು ಎಂದು ಮೂಲಗಳು ಹೇಳಿವೆ.

ಅಂಚೆ ಕಚೇರಿಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಾವಳಿ ಪರಿಶೀಲಿಸಿದಾಗ ಆರೋಪಿಯ ಸುಳಿವು ಲಭಿಸಿತ್ತು. ಹೈದರಾಬಾದ್‌ನ ಲಾಡ್ಜ್‌ನಲ್ಲಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆ ತರಲಾಗಿದೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

ವಿಮಾನ ನಿಲ್ದಾಣದಲ್ಲಿ ಯಾವುದೇ ರೀತಿಯ ದುರಂತಗಳು ಸಂಭವಿಸದಿರಲೆಂದು ಪೂಜೆ ಮಾಡಿ ಪಾರ್ಸೆಲ್ ಕಳುಹಿಸಿದ್ದೇನೆಂದು ವಿಚಾರಣೆ ವೇಳೆ ಆರೋಪಿ ತಿಳಿಸಿದ್ದಾನೆ. ಪ್ರಕರಣದ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.



ಸುಭಾಷ್ ಜೈ ಅಜೀಜ್ ಅವರು ಕಳುಹಿಸಿದ್ದ ಪಾರ್ಸೆಲ್‌ನಲ್ಲಿದ್ದ ಸಾಮಗ್ರಿಗಳು

ಕೆಲಸದಿಂದ ವಜಾ: ವ್ಯವಸ್ಥಾಪಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸದಿಂದ ವಜಾ ಗೊಳಿಸಿದ್ದಕ್ಕೆ ಆಕ್ರೋಶಗೊಂಡಿದ್ದ ಕಾರ್ಮಿಕನೊಬ್ಬ ಕಾರ್ಖಾನೆಯ ವ್ಯವಸ್ಥಾಪಕನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಪೀಣ್ಯ ಎರಡನೇ ಹಂತದ ತಿಗಳರಪಾಳ್ಯದಲ್ಲಿ ಸೋಮವಾರ ರಾತ್ರಿ ನಡೆದಿದೆ.

ಪವರ್ ಪ್ಲಾಸ್ಟಿಕ್ ಕಾರ್ಖಾನೆಯ ವ್ಯವಸ್ಥಾಪಕ ರಾಹುಲ್ (38) ಕೊಲೆಯಾದವರು.

ಕೃತ್ಯ ಎಸಗಿದ ಆರೋಪಿ, ಯಾದಗಿರಿಯ ಹನುಮಂತಪ್ಪ ಎಂಬಾತನನ್ನು ರಾಜಗೋಪಾಲನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಕೃತ್ಯಕ್ಕೆ ಬಳಸಿದ ಚಾಕುವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಕೊಲೆಯಾದ ರಾಹುಲ್ ಸಹೋದರ ರೋಹಿತ್ ನೀಡಿದ ದೂರು ಆಧರಿಸಿ ಆರೋಪಿಯ ವಿರುದ್ಧ ಕೊಲೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಉತ್ತರಪ್ರದೇಶದ ರಾಹುಲ್ ಅವರು ಪವರ್ ಪ್ಲಾಸ್ಟಿಕ್ ಕಂಪನಿಯಲ್ಲಿ ಸೂಪರ್ ವೈಸರ್ ಆಗಿ ಕೆಲವು ವರ್ಷದಿಂದ ಕೆಲಸ ಮಾಡುತ್ತಿದ್ದರು. ಕಂಪನಿಯಲ್ಲಿ ಸುಮಾರು 30 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಆರೋಪಿ ಹನುಮಂತಪ್ಪ ಏಳು ವರ್ಷಗಳಿಂದ ವೆಲ್ಡರ್ ಆಗಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಆರೋಪಿ ಪದೇ ಪದೇ ಕೆಲಸಕ್ಕೆ ಗೈರಾಗುತ್ತಿದ್ದ. ಕೆಲಸಕ್ಕೆ ಗೈರಾಗುತ್ತಿರುವುದನ್ನು ವ್ಯವಸ್ಥಾಪಕ ರಾಹುಲ್ ಪ್ರಶ್ನಿಸಿದ್ದರು. ಅಲ್ಲದೇ ಕೆಲಸದಿಂದ ವಜಾ ಮಾಡಿದ್ದರು. ಇದರಿಂದ ಅಸಮಾಧಾನಗೊಂಡಿದ್ದ, ಆರೋಪಿ ಬೆದರಿಕೆ ಹಾಕಿ ಹೋಗಿದ್ದ ಎಂದು ಪೊಲೀಸರು ಹೇಳಿದರು.



ಹನುಮಂತಪ್ಪ

ಸೋಮವಾರ ರಾತ್ರಿ ಕಾರ್ಖಾನೆ ಆವರಣಕ್ಕೆ ಬಂದಿದ್ದ ಹನುಮಂತಪ್ಪ, ಸಮೀಪದಲ್ಲೇ ನಿಂತಿದ್ದ ರಾಹುಲ್ ಅವರ ಮೇಲೆ ಏಕಾಏಕಿ ಹಲ್ಲೆ ನಡೆಸಿದ್ದ. ಆಗ ತಪ್ಪಿಸಿಕೊಳ್ಳಲು ಯತ್ನಿಸಿದ ಅವರನ್ನು ಆರೋಪಿ ಬೆನ್ನಟ್ಟಿ ಚಾಕುವಿನಿಂದ ಇರಿದಿದ್ದಾನೆ. ಗಂಭೀರವಾಗಿ ಗಾಯಗೊಂಡಿದ್ದ ರಾಹುಲ್ ಅವರನ್ನು ಕಾರ್ಮಿಕರು ಆಸ್ಪತ್ರೆಗೆ ದಾಖಲಿಸಿದ್ದರು. ಮಂಗಳವಾರ ಬೆಳಿಗ್ಗೆ ರಾಹುಲ್ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲು

ಕಲಹ: ತೆಲಂಗಾಣದ ಟೆಕಿ ದಂಪತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಥಣಿಸಂದ್ರ ಮುಖ್ಯರಸ್ತೆಯ ‘ನಿಕೂ ಹೋಮ್ಸ್–1 ಅಪಾರ್ಟ್‌ಮೆಂಟ್’ನಲ್ಲಿ ನೆಲಸಿದ್ದ ತೆಲಂಗಾಣದ ಟೆಕಿ ದಂಪತಿ ಆತ್ಮಹತ್ಯೆ ಮಾಡಿಕೊಂಡಿದ್ದು, ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

ಭಾನು ಚಂದರ್‌ರೆಡ್ಡಿ (32) ಅವರ ಮೃತದೇಹವು ಫ್ಲ್ಯಾಟ್‌ನಲ್ಲಿ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದೆ. ಅವರ ಪತ್ನಿ ಬೀಬಿ ಶಾಜಿಯಾ ಸಿರಾಜ್ (31) ಅವರು ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.



ಚಂದರ್ ರೆಡ್ಡಿ



ಬೀಬಿ ಶಾಜಿಯಾ

‘ಕೃತ್ಯ ನಡೆದ ಸ್ಥಳದಲ್ಲಿ ಯಾವುದೇ ಮರಣಪತ್ರ ಸಿಕ್ಕಿಲ್ಲ. ಮನೆಯಲ್ಲಿ ಪತಿ ನೇಣು ಹಾಕಿಕೊಂಡ ಬಳಿಕ, ಪತ್ನಿ ಶಾಜಿಯಾ ಅವರು 17ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯಿದೆ’ ಎಂದು ಪೊಲೀಸರು ತಿಳಿಸಿದರು.

‘ಮಾನಸಿಕ ಒತ್ತಡದಿಂದ ಬಳಲುತ್ತಿದ್ದರು’

‘ತೆಲಂಗಾಣದ ಸಿದ್ದಿಪೇಟೆಯ ಭಾನು ಚಂದರ್‌ರೆಡ್ಡಿ, ಬೀಬಿ ಶಾಜಿಯಾ ಸಿರಾಜ್ ದಂಪತಿ ನಗರದ ಸಾಫ್ಟ್‌ವೇರ್ ಕಂಪನಿಗಳಲ್ಲಿ ಟೆಕಿಗಳಾಗಿ ಕೆಲಸ ಮಾಡುತ್ತಿದ್ದರು. ದಂಪತಿಯ ನಡುವೆ ಕೌಟುಂಬಿಕ ಕಲಹ ಇತ್ತು. ಇತ್ತೀಚೆಗೆ ಇಬ್ಬರ ನಡುವೆ ಜಗಳ ನಡೆದಿದ್ದು, ಮಾನಸಿಕ ಒತ್ತಡ ಹಾಗೂ ಖಿನ್ನತೆಯಿಂದ ಬಳಲುತ್ತಿದ್ದರು ಎಂಬ ಶಂಕೆ ವ್ಯಕ್ತವಾಗಿದೆ. ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಮನೆಯಲ್ಲಿ ಪತ್ನಿ ಇಲ್ಲದ ವೇಳೆ ಭಾನು ಚಂದ್ರರ್‌ರೆಡ್ಡಿ ಅವರು ಕೊಠಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಫ್ಲ್ಯಾಟ್‌ಗೆ ಬಂದಾಗ ಒಳಗಿನಿಂದ ಬಾಗಿಲು ಹಾಕಿಕೊಂಡಿರುವುದನ್ನು ಶಾಜಿಯಾ ಸಿರಾಜ್ ಅವರು ಗಮನಿಸಿದ್ದರು. ಪತಿಗೆ ಹಲವು ಬಾರಿ ಕರೆ ಮಾಡಿದ್ದರೂ ಪ್ರತಿಕ್ರಿಯೆ ನೀಡಿರಲಿಲ್ಲ. ಬಾಗಿಲು ತೆರೆಯಲು ಅಕ್ಕಪಕ್ಕದ ಫ್ಲ್ಯಾಟ್‌ನವರ ಬಳಿ ಮನವಿ ಮಾಡಿದ್ದರು. ಬಾಗಿಲು ಒಡೆದು ನೋಡಿದಾಗ ಪತಿ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಇತ್ತು. ಆಘಾತಕ್ಕೆ ಒಳಗಾದ ಶಾಜಿಯಾ ಅವರು ಅದೇ ಅಪಾರ್ಟ್‌ಮೆಂಟ್‌ನ 17ನೇ ಮಹಡಿಗೆ ತೆರಳಿ ಅಲ್ಲಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯಿದೆ ಎಂದು ಪೊಲೀಸರು ಹೇಳಿದರು.

‘ಕುಟುಂಬದವರ ದೂರಿನ ಆಧಾರದ ಮೇಲೆ ಎರಡು ಪ್ರತ್ಯೇಕ ಅಸಹಜ ಸಾವು ಪ್ರಕರಣಗಳನ್ನು ದಾಖಲಿಸಲಾಗಿದೆ. ದಂಪತಿಯ ಸಾವಿಗೆ ಕಾರಣವೇನು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹಗಳನ್ನು ಕುಟುಂಬದವರಿಗೆ ಹಸ್ತಾಂತರ ಮಾಡಲಾಗಿದೆ. ವರದಿ ಬಂದ ಮೇಲೆ ದಂಪತಿ ಸಾವಿಗೆ ಕಾರಣ ಪತ್ತೆ ಆಗಲಿದೆ’ ಎಂದು ಪೊಲೀಸರು ಹೇಳಿದರು.

ನಗರದ ಐದು ಅಂಗಡಿಗಳ ಮೇಲೆ ಸಿಸಿಬಿ ಪೊಲೀಸರ ದಾಳಿ, ಐವರ ಬಂಧನ

ಕಳಪೆ ಗುಟ್ಟಮಟ್ಟದ 670 ಕೈಗಡಿಯಾರ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಕಂಪನಿಗಳ ಹೆಸರಿನಲ್ಲಿ ಕಳಪೆ ಗುಟ್ಟಮಟ್ಟದ ಕೈಗಡಿಯಾರಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳ ಮೇಲೆ ದಾಳಿ ನಡೆಸಿರುವ ಸಿಸಿಬಿಯ ಆರ್ಥಿಕ ಅಪರಾಧ ದಳದ ಪೊಲೀಸರು, ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಹರೀಶ್‌ಕುಮಾರ್(44), ಸೈಯದ್ ಝ್ಯುದ್ ಇಕ್ಬಾಲ್ (29), ಮೊಹಮ್ಮದ್ ಅಬೀದ್ ಹುಸೇನ್ (53), ಕಲೀಂ ಉಲ್ಲಾ (70) ಹಾಗೂ ಅಬ್ದುಲ್ ರೆಹಮಾನ್ (42) ಬಂಧಿತರು.

ಬಂಧಿತರಿಂದ ಕಳಪೆ ಗುಣಮಟ್ಟದ 670 ಕೈಗಡಿಯಾರಗಳು ಹಾಗೂ ಕೈಗಡಿಯಾರದ 414 ಬಿಡಿಭಾಗಗಳನ್ನು ಜಪ್ತಿ ಮಾಡಲಾಗಿದೆ. ಇದರ ಮೌಲ್ಯ ₹25 ಲಕ್ಷವೆಂದು ಅಂದಾಜಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಮಾಧ್ಯಮ ಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಟೈಟನ್ ಕಂಪನಿಯ ಅಧಿಕೃತ ಕಾನೂನು ಪ್ರತಿನಿಧಿ ಗೌರವ್ ತಿವಾರಿ ಅವರು ನೀಡಿದ ದೂರು ಆಧರಿಸಿ ನಗರದ ಚಿಕ್ಕಪೇಟೆ, ಸುಲ್ತಾನ್‌ಪಾಳ್ಯ ಮುಖ್ಯರಸ್ತೆ, ಗಂಗಾ ನಗರ ಮತ್ತು ದಿಣ್ಣೂರು ಮುಖ್ಯರಸ್ತೆಯಲ್ಲಿ ಇರುವ ಐದು ಅಂಗಡಿಗಳ ಮೇಲೆ ದಾಳಿ ನಡೆಸಿ, ಪರಿಶೀಲನೆ ನಡೆಸಲಾಯಿತು.



ಹರೀಶ್ ಕುಮಾರ್



ಕಲೀಂ ಉಲ್ಲಾ



ಅಬ್ದುಲ್ ರೆಹಮಾನ್

ಪ್ರತಿಷ್ಠಿತ ಕಂಪನಿಗಳಾದ ಟೈಟಾನ್, ಫಾಸ್ಟ್‌ಟ್ರ್ಯಾಕ್ ಹಾಗೂ ಸೋನಾಟ ಕಂಪನಿಯ ಹೆಸರಿನಲ್ಲಿ ಕಳಪೆ ಗುಣಮಟ್ಟದ ಕೈಗಡಿಯಾರ ಹಾಗೂ ಅವುಗಳ ಬಿಡಿಭಾಗಗಳನ್ನು ಅಸಲಿಯೆಂದು ನಂಬಿಸಿ ಮೋಸದಿಂದ ಮಾರಾಟ ಮಾಡುತ್ತಿರುವುದು ಕಂಡು ಬಂತು. ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಮಾರಾಟಗಾರರು ಕಳಪೆ ಗುಣಮಟ್ಟದ ಕೈಗಡಿಯಾರಗಳನ್ನು ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

‘ಹಬ್ಬದ ಸಂದರ್ಭಗಳಲ್ಲಿ ವಿಶೇಷ ರಿಯಾಯಿತಿ ಘೋಷಿಸಿ ಈ ಕೈಗಡಿಯಾರಗಳನ್ನು ಆರೋಪಿಗಳು ಮಾರಾಟ ಮಾಡುತ್ತಿದ್ದರು’ ಎಂದು ಮೂಲಗಳು ಹೇಳಿವೆ.

‘ಸದ್ಯಕ್ಕೆ ಐವರು ಆರೋಪಿಗಳನ್ನು ಬಂಧಿಸಲಾಗಿದೆ. ಈ ಜಾಲದ ಹಿಂದೆ ಇನ್ನೂ ಹಲವರು ಇರುವ ಶಂಕೆಯಿದೆ. ಕಾರ್ಯಾಚರಣೆ ಮುಂದುವರಿಸಲಾಗಿದೆ. ಕಳಪೆ ಗುಣಮಟ್ಟದ ಬಿಡಿಭಾಗಗಳನ್ನು ಎಲ್ಲಿಂದ ತರಿಸಲಾಗುತ್ತಿತ್ತು, ಅವುಗಳನ್ನು ಎಲ್ಲಿ ಜೋಡಣೆ ಮಾಡಲಾಗುತ್ತಿತ್ತು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ ಎಂದು ಕಮಿಷನರ್ ಹೇಳಿದರು.

ಸಿಸಿಬಿಯ ಡಿಸಿಪಿ ಇಮಾಮ್ ಕಾಸಿಂ ಅವರ ಮಾರ್ಗದರ್ಶನದಲ್ಲಿ ಸಿಸಿಬಿ ಆರ್ಥಿಕ ಅಪರಾಧ ದಳದ ಎಸಿಪಿ ಎಚ್. ಕೆ.ಮಹಾನಂದ ಹಾಗೂ ಪೊಲೀಸ್ ಇನ್‌ಸ್ಪೆಕ್ಟರ್ ಆರ್.ಸಂತೋಷ್ ರಾಮ್ ಅವರ ನೇತೃತ್ವದ ತಂಡವು ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿ ಆಗಿದೆ.



ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಕಳಪೆ ಗುಟ್ಟಮಟ್ಟದ ಕೈಗಡಿಯಾರ

₹5.14 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಉಪನಗರ, ಆಡುಗೋಡಿ, ಭಾರತಿನಗರ, ಜಾಲಹಳ್ಳಿ ಹಾಗೂ ಪುಲಕೇಶಿನಗರ ಠಾಣಾ ವ್ಯಾಪ್ತಿಯಲ್ಲಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ₹5.14 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿಕೊಳ್ಳುವಲ್ಲಿ ಪೊಲೀಸರು ಯಶಸ್ವಿ ಆಗಿದ್ದಾರೆ. ಜತೆಗೆ, ವಿದೇಶದ ಇಬ್ಬರು ಡ್ರಗ್ ಪೆಡ್ಲರ್‌ಗಳೂ ಸೇರಿದಂತೆ 11 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ಎರಡು ಕೆ.ಜಿ 7 ಗ್ರಾಂ ಎಂಡಿಎಂಎ, 31 ಕೆ.ಜಿ 396 ಗ್ರಾಂ ಗಾಂಜಾ, 220 ಗ್ರಾಂ ಹೈಡ್ರೊಗಾಂಜಾ, 162 ಗ್ರಾಂ ಹೆರಾಯಿನ್ ಹಾಗೂ ಕೃತ್ಯಕ್ಕೆ ಬಳಸಿದ ಒಂದು ದ್ವಿಚಕ್ರ ವಾಹನವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಆಡುಗೋಡಿ ಠಾಣೆಯ ಪೊಲೀಸರು, ತಮ್ಮ ವ್ಯಾಪ್ತಿಯಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ, ಎಲ್.ಆರ್. ನಗರದ ನಿವಾಸಿ ಸಂತೋಷ್ (20), ಕೋರಮಂಗಲದ ರಂಜಿತ್ (23), ಅರುಣ್ (30), ನಾರಾಯಣಪುರದ ಅರ್ಜುನ್ ಜೋಶಿ (22) ಹಾಗೂ ಉತ್ತರ ಪ್ರದೇಶದ ಬಲಜಿತ್ ಸಿಂಗ್ (22) ಸೇರಿದಂತೆ 10 ಮಂದಿಯನ್ನು ಬಂಧಿಸಿದ್ದಾರೆ.

ನೈಜೀರಿಯಾ ದೇಶದ ಪ್ರಜೆ ಸೆರೆ: ಬ್ಯುಸಿನೆಸ್ ವೀಸಾದಡಿ ಭಾರತಕ್ಕೆ ಬಂದು, ನಗರದಲ್ಲಿ ಮಾದಕ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದ ನೈಜೀರಿಯಾ ದೇಶದ ಪ್ರಜೆಯನ್ನು ಯಲಹಂಕ ಉಪ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನೈಜೀರಿಯಾ ಪ್ರಜೆ ಸ್ಯಾಮ್ಯುವೆಲ್ ಇಕ್ಕೆನಾ ಬಂಧಿತ.

ಆರೋಪಿಯಿಂದ ಅಂದಾಜು ₹2 ಕೋಟಿ ಮೌಲ್ಯದ 2 ಕೆ.ಜಿ ಎಂಡಿಎಂಎ ಕ್ರಿಸ್ಟಲ್ ವಶಕ್ಕೆ ಪಡೆಯ ಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

2012ರಲ್ಲಿ ಭಾರತಕ್ಕೆ ಬಂದಿದ್ದ ಸ್ಯಾಮ್ಯುವೆಲ್, ಆರಂಭದಲ್ಲಿ ದೆಹಲಿ ಮತ್ತು ಮುಂಬೈನಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ. ಕಳೆದ ವರ್ಷ ನಗರಕ್ಕೆ ಬಂದಿದ್ದ ಆರೋಪಿ, ಬನ್ನೇರುಘಟ್ಟ ರಸ್ತೆಯಲ್ಲಿ ಬಟ್ಟೆ ಮಾರಾಟ ಮಾಡುವ ಸೋಗಿನಲ್ಲಿ ಮಾದಕ ಪದಾರ್ಥಗಳ ಮಾರಾಟ ಆರಂಭಿಸಿದ್ದ. ಆರೋಪಿಯನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ. ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಡ್ರಗ್ಸ್ ವ್ಯಾಪಾರ ಮಾಡುತ್ತಿದ್ದೆ ಎಂಬುದಾಗಿ ತಿಳಿಸಿದ್ದಾನೆ ಎಂದು ಪೊಲೀಸರು ಹೇಳಿದರು.

11 ಆರೋಪಿಗಳ ವಿರುದ್ಧ ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ. ಇದೇ ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡ ಆರೋಪಿಗಳ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂದು ಪೊಲೀಸರು ಹೇಳಿದರು.



ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಮಾದಕ ವಸ್ತುಗಳು



ಸ್ಯಾಮ್ಯುವೆಲ್ ಇಕ್ಕೆನಾ

ವೃದ್ಧೆ ಸಾವಿಗೆ ಮಿಡಿದ ಮಂಗ

ರಾಮನಗರ: ಹೃದಯಾಘಾತದಿಂದ ಮೃತಪಟ್ಟ ವೃದ್ಧೆಯೊಬ್ಬರ ಶವದ ಮೇಲೆ ಮಂಗವೊಂದು ಕೆಲ ಹೊತ್ತು ಕುಳಿತು ಅವರ ಸಾವಿಗೆ ಮಿಡಿದ ಘಟನೆ ನಗರದ ರಾಯರದೊಡ್ಡಿಯಲ್ಲಿ ಮಂಗಳವಾರ ನಡೆದಿದೆ. ಈ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಬಿ.ವಿ. ಹಳ್ಳಿ ಗ್ರಾಮದ ಪಾರ್ವತಮ್ಮ (80) ರಾಯರದೊಡ್ಡಿಯಲ್ಲಿರುವ ಪುತ್ರಿಯ ಮನೆಯಲ್ಲಿ ನೆಲೆಸಿದ್ದರು. ಇತ್ತೀಚೆಗೆ ಸ್ವಗ್ರಾಮಕ್ಕೆ ತೆರಳಿದ್ದ ಅವರು ಹೃದಯಾಘಾತದಿಂದಾಗಿ ಸೋಮವಾರ ರಾತ್ರಿ ಮೃತಪಟ್ಟಿದ್ದರು. ಶವವನ್ನು ಬೆಳಗ್ಗೆ ಪುತ್ರಿ ಮನೆಗೆ ತಂದು ದರ್ಶನಕ್ಕೆ ಇಡಲಾಗಿತ್ತು.

ಈ ವೇಳೆ, ಕೋತಿಯೊಂದು ಏಕಾಏಕಿ ಶವದತ್ತ ಓಡಿ ಬಂದಿತು. ಕೆಲ ಕ್ಷಣ ಪಾರ್ವತಮ್ಮ ಅವರ ಮುಖ ಮತ್ತು ತಲೆಗೆ ಒರಗಿ ಮರುಗಿತು. ನಂತರ ಪಕ್ಕದಲ್ಲಿದ್ದ ವೃದ್ಧೆಯೊಬ್ಬರ ತೊಡೆ ಮೇಲೆ ಬಂದು ಮೌನವಾಗಿ ಕುಳಿತುಕೊಂಡಿತು. ಮಂಗದ ಅಂತಃಕರಣ ಸ್ಥಳದಲ್ಲಿದ್ದವರಲ್ಲಿ ಆಶ್ಚರ್ಯ ಮೂಡಿಸಿತು. ಶವವನ್ನು ಅಂತ್ಯಕ್ರಿಯೆಗೆ ಕೊಂಡೊಯ್ಯುವವರೆಗೆ ಸ್ಥಳದಲ್ಲೇ ಮಂಗ ಕುಳಿತಿತ್ತು. ನಂತರ, ಅದನ್ನು ಹಿಡಿದು ಬೇರೆಡೆಗೆ ಬಿಡಲಾಯಿತು ಎಂದು ಸ್ಥಳೀಯರು ತಿಳಿಸಿದರು.

ಗಾಯಗೊಂಡರೂ ಪರೀಕ್ಷೆ ಬರೆದ ವಿದ್ಯಾರ್ಥಿನಿ

ಬೆಳ್ತಂಗಡಿ: ತಾಲ್ಲೂಕಿನ ಗೇರುಕಟ್ಟೆ ರೇಷ್ಮೆ ರೋಡ್ ಬಳಿ ಚಲಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನ ಬಾಗಿಲು ಹಠಾತ್ತನೆ ತೆರೆದುಕೊಂಡ ಪರಿಣಾಮ, ಇಬ್ಬರು ವಿದ್ಯಾರ್ಥಿನಿಯರು ರಸ್ತೆಗೆ ಬಿದ್ದು ಮಂಗಳವಾರ ಗಾಯಗೊಂಡಿದ್ದಾರೆ. ಒಬ್ಬ ವಿದ್ಯಾರ್ಥಿನಿ ಬಸ್‌ನಿಂದ ಬಿದ್ದು ಗಾಯಗೊಂಡಿದ್ದರೂ, ಪ್ರಥಮ ಚಿಕಿತ್ಸೆ ಪಡೆದು ಸಹಾಯಕರ ನೆರವಿನಿಂದ ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆ ಬರೆದಳು.

ಗೇರುಕಟ್ಟೆಯ ಸಹೋದರಿಯರಾದ ಚದ್ಮಿಕಾ (15), ಚರಿಷ್ಮಾ (17) ರಸ್ತೆಗೆ ಬಿದ್ದು ಗಾಯಗೊಂಡ ವಿದ್ಯಾರ್ಥಿನಿಯರು. ಚದ್ಮಿಕಾ ಬೆಳ್ತಂಗಡಿ ವಾಣಿ ಇಂಗ್ಲಿಷ್ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ. ಆಕೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗಲು ಬೆಳ್ತಂಗಡಿಯ ಸೇಂಟ್ ತೆರೆಸಾ ಶಾಲೆಯ ಪರೀಕ್ಷಾ ಕೇಂದ್ರಕ್ಕೆ ಹಾಗೂ ಆಕೆಯ ಅಕ್ಕ ಚರಿಷ್ಮಾ ಪ್ರಥಮ ಪಿ.ಯು. ಫಲಿತಾಂಶ ನೋಡಲು ವಾಣಿ ಪದವಿ ಪೂರ್ವ ಕಾಲೇಜಿಗೆ ತೆರಳುತ್ತಿದ್ದಾಗ ಈ ಘಟನೆ ಸಂಭವಿಸಿದೆ.

ಬೆಳ್ತಂಗಡಿ ಕಡೆಗೆ ಹೋಗುತ್ತಿದ್ದ ಬಸ್ ಅನ್ನು ವಿದ್ಯಾರ್ಥಿನಿಯರಿಬ್ಬರೂ ಗೇರುಕಟ್ಟೆಯಲ್ಲಿ ಹತ್ತಿದ್ದರು. ಪ್ರಯಾಣಿಕರಿಂದ ಬಸ್ ಭರ್ತಿ ಆಗಿತ್ತು. ಗೇರುಕಟ್ಟೆ ತಿರುವಿನ ಬಳಿ ಅನಿರೀಕ್ಷಿತವಾಗಿ ಬಸ್ಸಿನ ಬಾಗಿಲು ತೆರೆದುಕೊಂಡಿತ್ತು. ಬಾಗಿಲ ಬಳಿಯೇ ನಿಂತಿದ್ದ ಸಹೋದರಿಯರು ರಸ್ತೆಗೆ ಬಿದ್ದರು. ಸ್ಥಳದಲ್ಲಿದ್ದವರು ತಕ್ಷಣವೇ ಅವರ ರಕ್ಷಣೆಗೆ ಧಾವಿಸಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಗಾಯಗೊಂಡಿದ್ದ ಚದ್ಮಿಕಾ ಗುರುವಾಯನಕೆರೆಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಬಳಿಕ ಸಹಾಯಕರ ನೆರವಿನಿಂದ ಹಿಂದಿ ಪರೀಕ್ಷೆಗೆ ಹಾಜರಾದಳು. ಪರೀಕ್ಷೆ ಮುಗಿದ ಬಳಿಕ ಮತ್ತೆ ಚಿಕಿತ್ಸೆಗಾಗಿ ಉಜಿರೆಯ ಆಸ್ಪತ್ರೆಗೆ ದಾಖಲಾಗಿದ್ದಾಳೆ. ಆಕೆಯ ಅಕ್ಕ ಚರಿಷ್ಮಾ ಅದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ.

‘ಬಸ್‌ನಲ್ಲಿ ಕಿಕ್ಕಿರಿದು ಪ್ರಯಾಣಿಕರಿದ್ದರು. ತಿರುವಿನಲ್ಲಿ ಬಸ್‌ನ ಬಾಗಿಲು ತೆರದುಕೊಂಡಿದ್ದರಿಂದ ಈ ದುರ್ಘಟನೆ ಸಂಭವಿಸಿದೆ. ಬಿದ್ದು ಗಾಯಗೊಂಡ ವಿದ್ಯಾರ್ಥಿನಿಯರಿಗೆ ಕೆಎಸ್‌ಆರ್‌ಟಿಸಿ ವತಿಯಿಂದಲೇ ಚಿಕಿತ್ಸೆ ಕೊಡಿಸಿದ್ದೇವೆ. ಬಸ್‌ನ ಸಿಬ್ಬಂದಿ ವಿರುದ್ಧ ಸದ್ಯಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಕೆಎಸ್‌ಆರ್‌ಟಿಸಿ ಪುತ್ತೂರು ವಿಭಾಗದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಈ ಅಪಘಾತದ ಬಗ್ಗೆ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಹಾಗೂ ನಿರ್ವಾಹಕನ ವಿರುದ್ಧ ಬೆಳ್ತಂಗಡಿ ಸಂಚಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ‘ಬಸ್‌ನ ಬಾಗಿಲು ಸರಿಯಾಗಿ ಅಳವಡಿಸದಿರುವುದು ಬಸ್ ಸಿಬ್ಬಂದಿಯ ಲೋಪ’ ಎಂದು ಪೊಲೀಸರು ತಿಳಿಸಿದ್ದಾರೆ.



ಸಂಜೀವಿನಿ ನಗರದ ಶ್ರೀ ಗುಂಡಾಂಜನೇಯ ಸ್ವಾಮಿ ದೇವಾಲಯದಲ್ಲಿ ರಾಮನವಮಿ ಪ್ರಯುಕ್ತ ಸೀತಾರಾಮ ಕಲ್ಯಾಣೋತ್ಸವ ಮತ್ತು ಉಚಿತ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ 14 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟವು. ಕಾರ್ಯಕ್ರಮದಲ್ಲಿ ಶ್ರೀ ಗುಂಡಾಂಜನೇಯ ಅನ್ನದಾಸೋಹ ಸಮಿತಿ ಅಧ್ಯಕ್ಷರಾದ ಎಸ್‌.ಮಂಜುನಾಥ್, ರಾಜಣ್ಣ, ದೊಡ್ಡಕೆಂಪಯ್ಯ, ಪ್ರೇಮರಾಮಚಂದ್ರಪ್ಪ, ವಿ. ನಾರಾಯಣ ಪಾಲ್ಗೊಂಡಿದ್ದರು



ಚನ್ನಪಟ್ಟಣ ತಾಲ್ಲೂಕಿನ ಬೈರಶೆಟ್ಟಿಹಳ್ಳಿ ಗ್ರಾಮದಲ್ಲಿ ಕಾಣಿಸಿಕೊಂಡಿದ್ದ ಕರಡಿ

ಸೆರೆಯಾಗಿದ್ದ ಕರಡಿಗೆ ರೇಬಿಸ್!

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ತಾಲ್ಲೂಕಿನ ಬೈರಶೆಟ್ಟಿಹಳ್ಳಿಯ ದುಂಡು ಮಾರಮ್ಮ ದೇವಸ್ಥಾನದ ಬಳಿ ಬೈಕ್ ಸವಾರನ ಮೇಲೆ ದಾಳಿ ನಡೆಸಿ ಪುಂಡಾಡ ನಡೆಸಿದ್ದ ಕರಡಿಗೆ ಮಾರಣಾಂತಿಕ ರೇಬಿಸ್ ರೋಗ ಇರುವುದು ದೃಢಪಟ್ಟಿದೆ. ಅದರ ಬೆನ್ನಲ್ಲೇ, ಕರಡಿ ದಾಳಿಗೆ ಒಳಗಾಗಿದ್ದ ವ್ಯಕ್ತಿ ಹಾಗೂ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಸಿಬ್ಬಂದಿಗೆ ರೇಬಿಸ್ ಲಸಿಕೆ ಪಡೆಯುವಂತೆ ಅರಣ್ಯ ಇಲಾಖೆ ಸೂಚಿಸಿದೆ.

‘ಬೈಕ್ ಸವಾರನ ಮೇಲೆ ಮಾರ್ಚ್ 28ರಂದು ಬೆಳಿಗ್ಗೆ ದಾಳಿ ನಡೆಸಿದ್ದ ಹೆಣ್ಣು ಕರಡಿಯನ್ನು ಸೆರೆ ಹಿಡಿದು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಸ್ಥಳಾಂತರಿಸಲಾಗಿತ್ತು. ಬೋನಿನಲ್ಲಿ ಇಟ್ಟಿದ್ದ ಕರಡಿ ರಾತ್ರಿಯಿಡೀ ವಿಚಿತ್ರವಾಗಿ ವರ್ತಿಸಿ, ಮಾರನೇಯ ದಿನ ಬೆಳಿಗ್ಗೆ ಮೃತಪಟ್ಟಿದೆ. ಮರಣೋತ್ತರ ಪರೀಕ್ಷೆ ನಡೆಸಿದಾಗ ಕರಡಿಗೆ ರೇಬಿಸ್ ಇರುವುದು ದೃಢಪಟ್ಟಿದೆ’ ಎಂದು ಚನ್ನಪಟ್ಟಣ ಆರ್‌ಎಫ್‌ಒ ಮಲ್ಲೇಶ್ ‘ಪ್ರಜಾವಾಣಿ’ ತಿಳಿಸಿದರು.

‘ಸುಮಾರು 30 ವರ್ಷದ ಕರಡಿಯ ಮರಣೋತ್ತರ ಪರೀಕ್ಷೆಯಲ್ಲಿ ರೇಬಿಸ್ ಇರುವುದು ಗೊತ್ತಾದ ಬಳಿಕ, ಅದರ ದಾಳಿಯಿಂದ ಗಾಯಗೊಂಡಿದ್ದ ಬೈರಶೆಟ್ಟಿಹಳ್ಳಿಯ ದೊಡ್ಡಯ್ಯ ಹಾಗೂ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಸಿಬ್ಬಂದಿಗೆ ರೇಬಿಸ್ ಲಸಿಕೆ ಪಡೆಯುವಂತೆ ಸೂಚನೆ ನೀಡಲಾಗಿದೆ. ಜೊತೆಗೆ ಸ್ಥಳೀಯ ಜಾನುವಾರು ಸೇರಿದಂತೆ ಸಾಕುಪ್ರಾಣಿಗಳಿಗೂ ಮುನ್ನೆಚ್ಚರಿಕೆ ಕ್ರಮವಾಗಿ ಲಸಿಕೆ ಹಾಕಿಸುವಂತೆ ಸಲಹೆ ನೀಡಿದ್ದೇವೆ’ ಎಂದು ಹೇಳಿದರು.

‘ವನ್ಯಜೀವಿಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ರೇಬಿಸ್ ಕಾಣಿಸಿಕೊಂಡಿರುವುದು ಇದೇ ಮೊದಲು. ಈ ರೋಗ ಸಾಮಾನ್ಯವಾಗಿ ನಾಯಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಕರಡಿಗಳು ಆಹಾರ ಅರಸಿ ಗ್ರಾಮಗಳ ಅಂಚಿಗೆ ಬರುವುದು ಸಾಮಾನ್ಯವಾಗಿದೆ. ಅದರಂತೆ ಈ ಕರಡಿಯೂ ಆಹಾರಕ್ಕಾಗಿ ಬಂದಾಗ ರೇಬಿಸ್ ಸೋಂಕಿತ ನಾಯಿ ಜೊತೆ ಸೆಣಸಿದಾಗ, ಇದಕ್ಕೂ ಸೋಂಕು ತಗುಲಿರುವ ಸಾಧ್ಯತೆ ಇರಬಹುದು’ ಎಂದು ತಿಳಿಸಿದರು.

ಬ್ಯಾಸ್ಕೆಟ್‌ಬಾಲ್: ನಾಕೌಟ್‌ಗೆ ಬೀಗಲ್ಸ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹರ್ಷನ್ (25 ಅಂಕ) ಹಾಗೂ ಶ್ರೀಜನ್ (14 ಅಂಕ) ಅವರ ಆಟದ ಬಲದಿಂದ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು ಡಿ.ಎನ್.ರಾಜಣ್ಣ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ ಬಾಲಕ ಮತ್ತು ಬಾಲಕಿಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ 79–54ರಿಂದ ಚಿಕ್ಕಮಗಳೂರು ಜಿಲ್ಲಾ ತಂಡವನ್ನು ಮಣಿಸಿತು. ಅದರೊಂದಿಗೆ, ಲೀಗ್ ಕಮ್ ನಾಕೌಟ್ ಸುತ್ತಿಗೆ ಲಗ್ಗೆ ಹಾಕಿತು.

ಎಚ್‌ಬಿಆರ್ ಬ್ಯಾಸ್ಕೆಟ್‌ಬಾಲ್ ಕ್ಲಬ್, ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್, ಪಿ.ಪಿ.ಸಿ, ಎಂ.ಎನ್.ಕೆ ರಾವ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ತಂಡಗಳೂ ಮುಂದಿನ ಸುತ್ತಿಗೆ ಪ್ರವೇಶ ಪಡೆದವು. ಬಾಲಕಿಯರ ವಿಭಾಗದಲ್ಲಿ ಡಿವೈಇಎಸ್ ವಿದ್ಯಾನಗರ, ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್, ಬೆಂಗಳೂರು ವ್ಯಾನ್‌ಗಾರ್ಡ್ಸ್, ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ಹಾಗೂ ಮಂಡ್ಯ ಜಿಲ್ಲಾ ತಂಡಗಳು ರೌಂಡ್ ರಾಬಿನ್ ಲೀಗ್ ಸುತ್ತಿಗೆ ಮುನ್ನಡೆದವು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಅಂಕಣದಲ್ಲಿ ನಡೆದ ಸೂಪರ್ ಲೀಗ್ ಹಂತದ ಇತರ ಪಂದ್ಯಗಳಲ್ಲಿ ಡಿವೈಇಎಸ್ ಬೆಂಗಳೂರು ತಂಡವು 58–32ರಿಂದ ಲಕ್ಷ್ಯನ್ ಬಿ.ಸಿ ವಿರುದ್ಧ; ಪಿ.ಪಿ.ಸಿ ತಂಡವು 93–43ರಿಂದ ಹೂಪ್ಸ್ ತಂಡದ ವಿರುದ್ಧ; ಎಚ್‌ಬಿಆರ್ ಬಿ.ಸಿ ತಂಡವು 56–43ರಿಂದ ಜೆ.ಎಸ್.ಸಿ ವಿರುದ್ಧ; ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು 72–50ರಿಂದ ಮೈಸೂರು ಜಿಲ್ಲೆ ಎ ತಂಡದ ವಿರುದ್ಧ ಹಾಗೂ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡವು 75–27ರಿಂದ ಯಲಹಂಕ ಬಿ.ಸಿ ತಂಡದ ವಿರುದ್ಧ ಗೆಲುವು ಸಾಧಿಸಿದವು.

ಬಾಲಕಿಯರ ವಿಭಾಗದ ಸೂಪರ್ ಲೀಗ್ ಪಂದ್ಯಗಳಲ್ಲಿ ಬೆಂಗಳೂರು ವ್ಯಾನ್‌ಗಾರ್ಡ್ಸ್ ತಂಡವು 68–24ರಿಂದ ಪಿ.ಪಿ.ಸಿ ತಂಡದ ವಿರುದ್ಧ; ಡಿವೈಇಎಸ್ ವಿದ್ಯಾನಗರ ತಂಡವು 53–50ರಿಂದ ಮೌಂಟ್ಸ್ ಕ್ಲಬ್ ತಂಡದ ವಿರುದ್ಧ; ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 55–41ರಿಂದ ಮೈಸೂರು ಜಿಲ್ಲೆ ಎ ತಂಡದ ವಿರುದ್ಧ; ಮಂಡ್ಯ ಜಿಲ್ಲಾ ತಂಡವು 73–51ರಿಂದ ರಾಜಮಹಲ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ವಿರುದ್ಧ ಹಾಗೂ ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು 61–49ರಿಂದ ಭಾರತ್ ಸ್ಪೋರ್ಟ್ಸ್ ಯೂನಿಯನ್ ವಿರುದ್ಧ ಜಯ ಸಾಧಿಸಿದವು.

ಕೆ.ಆರ್.ಪುರ ತಂಡಕ್ಕೆ ರೋಚಕ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂದೀಪ್ ಕುಮಾರ್ ಸೈಕಿಯಾ ಕೊನೆಯ ಕ್ಷಣದಲ್ಲಿ ಗಳಿಸಿದ ಉಡುಗೊರೆ ಗೋಲಿನ ನೆರವಿನಿಂದ ಕೆ.ಆರ್.ಪುರ ತಂಡವು ಸಿ.ಎಂ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ 1–0ಯಿಂದ ಬ್ಯಾಟರಾಯನಪುರ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಸಿ ಗುಂಪಿನ ಈ ಪಂದ್ಯವು ‘ಡ್ರಾ’ದತ್ತ ಸಾಗುತ್ತಿತ್ತು. ಬ್ಯಾಟರಾಯನಪುರ ತಂಡದ ಸಂದೀಪ್ 82ನೇ ನಿಮಿಷದಲ್ಲಿ ಎದುರಾಳಿ ತಂಡಕ್ಕೆ ಗೋಲಿನ ಉಡುಗೊರೆ ನೀಡಿದರು. ಕೆ.ಆರ್.ಪುರ ತಂಡವು ಟೂರ್ನಿಯಲ್ಲಿ ಎರಡನೇ ಗೆಲುವು ದಾಖಲಿಸಿತು.


ಶ್ರೀಕಲಾ ಎನ್. ಅವರು ಹೆಚ್ಚುವರಿ ಸಮಯದಲ್ಲಿ ಗಳಿಸಿದ ಗೋಲಿನ ಬಲದಿಂದ ಜಯನಗರ ತಂಡವು ಡಿ ಗುಂಪಿನ ಪಂದ್ಯದಲ್ಲಿ ಯಲಹಂಕ ಜೊತೆಗೆ 2–2 ಡ್ರಾ ಸಾಧಿಸಿತು.

ಪ್ರಜ್ವಲ್ 5ನೇ ನಿಮಿಷದಲ್ಲಿ ಗೋಲು ಗಳಿಸಿ, ಯಲಹಂಕ ತಂಡಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಜಯನಗರ ತಂಡದ ಧವನ್ (33ನೇ ನಿ.) ಗೋಲು ಗಳಿಸಿ, ಸಮಬಲ ಸಾಧಿಸಿದರು. ಮನೋಜ್ ಕುಮಾರ್ (72ನೇ ನಿ.) ಯಲಹಂಕ ತಂಡಕ್ಕೆ 2–1 ಮುನ್ನಡೆ ತಂದುಕೊಟ್ಟರೂ, ಶ್ರೀಕಲಾ (90 + 4ನೇ ನಿ.) ಅಮೋಘ ಗೋಲು ಗಳಿಸಿ, ತಂಡವು ಡ್ರಾ ಸಾಧಿಸಲು ಕಾರಣರಾದರು.


ಧ್ಯಾನ್‌ಚಂದ್ ಕ್ಲಬ್ ತಂಡಕ್ಕೆ ಸುಲಭ ಜಯ

ಬೆಂಗಳೂರು: ಸಂಘಟಿತ ಪ್ರದರ್ಶನ ತೋರಿದ ಬೆಂಗಳೂರಿನ ಧ್ಯಾನ್‌ಚಂದ್ ಹಾಕಿ ಕ್ಲಬ್ ತಂಡವು ಕೆಎಸ್‌ಎಚ್‌ಎ ‘ಬಿ’ ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಮಂಗಳವಾರ 8–1ರಿಂದ ಧಾರವಾಡದ ಧ್ಯಾನ್‌ಚಂದ್ ಕ್ಲಬ್ ತಂಡದ ವಿರುದ್ಧ ಸುಲಭ ಗೆಲುವು ಸಾಧಿಸಿತು.

ಬೆಂಗಳೂರಿನ ಧ್ಯಾನ್‌ಚಂದ್ ಹಾಕಿ ಕ್ಲಬ್ ತಂಡದ ಶ್ರೇಯಸ್ (2ನೇ ಹಾಗೂ 3ನೇ ನಿ.), ಜೇಸನ್ (14ನೇ ಹಾಗೂ 24ನೇ ನಿ.) ಮತ್ತು ವಿವೇಕ್ (11ನೇ ಹಾಗೂ 25ನೇ ನಿ.) ತಲಾ ಎರಡು ಗೋಲು ಹೊಡೆದರು.



ಎ.ಐ. ಆಧಾರಿತ ಆಟಿಕೆಗಳನ್ನು ಮಕ್ಕಳು ನಿಜವೆಂದು ಭಾವಿಸಿ, ಅದಕ್ಕೆ ತಕ್ಕ ಹಾಗೆ ಸಂವಹನ ನಡೆಸುತ್ತಾರೆ. ಇದರಿಂದಾಗಿ ಅವರ ಸಾಮಾಜಿಕ ಸಂವಹನದ ಮಟ್ಟ ಕಡಿಮೆ ಆಗುತ್ತದೆ ಎಂಬುದನ್ನು ಸಂಶೋಧನೆಗಳು ಹೇಳಿವೆ.



ಭೂಮಿಗೆ ಒಬ್ಬನೇ ಚಂದ್ರ ಶನಿಗೆ ಇನ್ನೂರ ಎಪ್ಪತ್ನಾಲ್ಕು!

• ಎಸ್.ಎನ್.ಹೆಗಡೆ

ಚಂದ್ರನು ಭೂಮಿಯ ಏಕೈಕ ನೈಸರ್ಗಿಕ ಉಪಗ್ರಹ ಮತ್ತು ಭೂಮಿಗೆ ಬಹಳ ಹತ್ತಿರವಿರುವ ಒಂದು ಆಕಾಶಕಾಯ. ಆಗಸದಲ್ಲಿ ಇದೊಂದು ಆಕರ್ಷಕ ವಸ್ತು. ಪ್ರಾಚೀನ ಕಾಲದಿಂದಲೂ ಚಂದ್ರನು ಮಾನವರನ್ನು ಆಕರ್ಷಿಸಿದ್ದಾನೆ! ಖಗೋಳವಿಜ್ಞಾನದ ಅನ್ವೇಷಣೆಗಳು ಮಾನವದೃಷ್ಟಿಗೆ ನಿಲುಕಬಲ್ಲ ವಸ್ತುಗಳ ವೀಕ್ಷಣೆಗೆ ಮಾತ್ರ ಸೀಮಿತವಾಗಿದ್ದಾಗ ಚಂದ್ರನು ದೇವತೆಗಳಲ್ಲೊಬ್ಬ ಎಂದು ಪರಿಗಣಿಸಲಾಗುತ್ತಿತ್ತು. ದೂರದರ್ಶಕದಂತಹ ಉಪಕರಣಗಳ ಆವಿಷ್ಕಾರವಾದ ನಂತರ ವಿಜ್ಞಾನದ ಪರಿಶೋಧನೆಗಳು ಮುಂದುವರಿದು, ಚಂದ್ರನನ್ನು ಕುರಿತು ಹೆಚ್ಚು ಹೆಚ್ಚು ಮಾಹಿತಿಗಳು ಬರತೊಡಗಿದವು. ಚಂದ್ರನು ಭೂಮಿಯ ಸುತ್ತ ಸರಾಸರಿ 384,400 ಕಿಲೋಮೀಟರ್ ದೂರದಲ್ಲಿ ತನ್ನ ಕಕ್ಷೆಯಲ್ಲಿ ಸುತ್ತುತ್ತಿರುತ್ತಾನೆ, ಸುಮಾರು 29.5 ದಿನಗಳಲ್ಲಿ ಭೂಮಿಯ ಸುತ್ತ ಒಂದು ಸುತ್ತು ಹಾಕುತ್ತಾನೆ ಎಂದು ಕಂಡುಹಿಡಿಯಲಾಗಿದೆ.

ಒಮ್ಮೆ ಕೇವಲ ಕಲ್ಪನೆಯಾಗಿದ್ದ ಅಂತರಿಕ್ಷಯಾನಗಳು, ನಂತರದಲ್ಲಿ ವಾಸ್ತವವಾಗಿ ಪ್ರಾರಂಭವಾದಾಗ ಚಂದ್ರನ ಕುರಿತ ಅಧ್ಯಯನಗಳಿಗೆ ಹೊಸ ಆಯಾಮ ದೊರಕಿಸಿಕೊಟ್ಟವು. 1969ರಲ್ಲಿ, ಗಗನಯಾತ್ರಿಗಳಾದ ನೀಲ್ ಆರ್ಮ್‌ಸ್ಟ್ರಾಂಗ್ ಮತ್ತು ಎಡ್ವಿನ್ ಬಜ್ ಆಲ್ಡ್ರಿನ್ ಅಪೊಲೊ ಗಗನನೌಕೆಯ ಮೂಲಕ ಚಂದ್ರನನ್ನು ತಲುಪಿ ಅದರ ಮೇಲೆ ನಡೆದಾಡಿ ದಾಖಲೆ ನಿರ್ಮಿಸಿದರು. ಅನಂತರ ಅಭಿವೃದ್ಧಿಯಾದ ರೋಬೋಟಿಕ್ ಕಾರ್ಯಾಚರಣೆಗಳ ಮೂಲಕ ಖಗೋಳವಿಜ್ಞಾನಿಗಳು ಚಂದ್ರನ ಸಂಯೋಜನೆ, ಮೂಲ ಮತ್ತು ಇತಿಹಾಸದ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಕಲೆಹಾಕಿದರು.

ಚಂದ್ರಗ್ರಹವು ಸುಮಾರು 4.5 ಶತಕೋಟಿ ವರ್ಷಗಳ ಹಿಂದೆ ರೂಪುಗೊಂಡಿತು ಎಂದು ವಿಜ್ಞಾನಿಗಳು ಲೆಕ್ಕ ಹಾಕಿದ್ದಾರೆ. ಅವರ ಪ್ರಕಾರ ಬಹುಶಃ ಆರಂಭಿಕ ಭೂಮಿ ಹಾಗೂ ಮಂಗಳನ ಗಾತ್ರದ ಒಂದು ಆಕಾಶಕಾಯಗಳ ನಡುವೆ ಸಂಭವಿಸಿದ ಬೃಹತ್ ಡಿಕ್ಕಿಯ ಪರಿಣಾಮವಾಗಿ ಉದ್ಭವಿಸಿದ ವಸ್ತುಗಳಿಂದ ಚಂದ್ರನ ಉಗಮವಾಗಿರಬೇಕು. ಚಂದ್ರನಿಗೆ ಭೂಮಿಯ ಗುರುತ್ವಾಕರ್ಷಣೆಯ ಕೇವಲ ಆರನೆಯ ಒಂದು ಭಾಗ ಮಾತ್ರ ಇದೆ. ಅದರಿಂದ ಗಗನಯಾತ್ರಿಗಳು ಚಂದ್ರನ ಮೇಲೆ ಸುಲಭವಾಗಿ ಬಹು ಎತ್ತರಕ್ಕೆ ಜಿಗಿಯಬಲ್ಲರು ಎಂದು ಕಂಡುಹಿಡಿಯಲಾಗಿದೆ.

ಈ ಸಂಶೋಧನೆಗಳು, ಚಂದ್ರನು ಆಕಾಶದಲ್ಲಿ ರಾತ್ರಿ ವಿವಿಧ ಆಕಾರದಲ್ಲಿ ತಿಂಗಳಿನಲ್ಲಿ ಹದಿನೈದು ದಿನ ಮಾತ್ರ ಗೋಚರಿಸುವ ಒಂದು ಸುಂದರವಾದ ವಸ್ತು ಮಾತ್ರವಲ್ಲ, ಅದು ಭೂಮಿಯ ಪ್ರಮುಖ ಒಡನಾಡಿ, ಭೂಮಿಯ ಸಂಗಾತಿ ಎಂದು ತಿಳಿಸಿವೆ. ಚಂದ್ರ ಅನೇಕ ಭೂವೈಜ್ಞಾನಿಕ ಸಂಗತಿಗಳನ್ನು ಕೂಡ ನಿಯಂತ್ರಿಸುತ್ತದೆ; ಸಮುದ್ರದ ಉಬ್ಬರವಿಳಿತಗಳೂ ಸೇರಿದಂತೆ ಭೂಮಿಯ ಮೇಲಣ ಹಲವು ನೈಸರ್ಗಿಕ ಪ್ರಕ್ರಿಯೆಗಳ ಮೇಲೆ ಪ್ರಭಾವ ಬೀರುತ್ತದೆ ಎಂದು ವಿಜ್ಞಾನಿಗಳು ಈಗಾಗಲೇ ಕಂಡುಹಿಡಿದಿದ್ದಾರೆ. ಅಗಾಧವಾದ ವಿಶ್ವವನ್ನು ಹಾಗೂ ಸೌರವ್ಯೂಹವನ್ನು ಅರ್ಥಮಾಡಿಕೊಳ್ಳಲು ಈ ಸಂಶೋಧನೆಗಳು ಸಹಾಯ ಮಾಡಿದವು. ಅಂತೆಯೇ ಚಂದ್ರನ ಬಗ್ಗೆ ಹಾಗೂ ಸೂರ್ಯನ ಬಗ್ಗೆ ಇನ್ನಷ್ಟು ಕುತೂಹಲ ಮತ್ತು ಪರಿಶೋಧನೆಯನ್ನು ಪ್ರೇರೇಪಿಸುತ್ತಲೇ ಇವೆ. ಇಷ್ಟೆಲ್ಲ ಸಂಶೋಧನೆಗಳನ್ನು ನಡೆಸಿದ ಖಗೋಳವಿಜ್ಞಾನಿಗಳ ಜ್ಞಾನತೃಷೆ ಇನ್ನೂ ನಿಂತಿಲ್ಲ.

ಬಹಳ ಹಿಂದಿನಿಂದ ಈ ವಿಶಾಲ ವಿಶ್ವದಲ್ಲಿ ನಾವು ಅಂತರಿಕ್ಷದಲ್ಲಿ ಕಾಣುವ ಒಂದೇ ಸೂರ್ಯ ಹಾಗೂ ಚಂದ್ರರಿದ್ದಾರೆ ಎಂಬ ನಂಬಿಕೆ ಇತ್ತು. ಆದರೆ ಈಗ ವಿಶ್ವ ಅನಂತವಾದುದು. ಅದರಲ್ಲಿ ಹಲವಾರು ಸೌರವ್ಯೂಹಗಳಿವೆ. ಪ್ರತಿಯೊಂದು ಸೌರವ್ಯೂಹದಲ್ಲಿಯೂ ಪ್ರತ್ಯೇಕ ಸೂರ್ಯ-ಚಂದ್ರಗ್ರಹಗಳಿವೆ ಎಂದು ತಿಳಿದುಬಂದಿದೆ. ಆದರೆ ಇಂದು ಲಭ್ಯವಿರುವ ಯಾವುದೇ ಉಪಕರಣಗಳಿಗೆ ಅವುಗಳನ್ನು ಗುರುತಿಸುವ ಸಾಮರ್ಥ್ಯವಿಲ್ಲ ಅಷ್ಟೆ. ಈ ಸೌರವ್ಯೂಹದಲ್ಲಿ ಭೂಮಿಗೆ ಆತನ ಸುತ್ತ ಸುತ್ತುತ್ತಿರುವ ಒಬ್ಬನೇ ಚಂದ್ರ ಇದ್ದಾನೆ. ಅಂದರೆ ಭೂಮಿಗೆ ಚಂದ್ರ ಒಂದೇ ನೈಸರ್ಗಿಕ ಉಪಗ್ರಹ.

ಈಗ ಖಗೋಳವಿಜ್ಞಾನಿಗಳು ವಿವಿಧ ಗಗನಯಾನ, ಆಕಾಶಯಾನಗಳ ಮೂಲಕ ಹಲವು ಹೊಸ ಮಾಹಿತಿಗಳನ್ನು ಕಂಡುಹಿಡಿಯುತ್ತಿದ್ದಾರೆ. ಇತ್ತೀಚೆಗೆ ಅಮೆರಿಕದ 'ನಾಸಾ' ಅಭಿವೃದ್ಧಿ ಪಡಿಸಿದ ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ (ಜೆಡಬ್ಲೂಎಸ್‌ಟಿ) ಮೂಲಕ 2025ರಲ್ಲಿ ನಡೆಸಿದ ಶೋಧಗಳಿಂದ ಸೌರವ್ಯೂಹದಲ್ಲಿ ಭೂಮಿಗೆ ಚಂದ್ರ ಒಂದೇ ಉಪಗ್ರಹವಾದರೂ ಇನ್ನಿತರ ಗ್ರಹಗಳಿಗೆ ಹಲವಾರು ಚಂದ್ರಗಳಿವೆ ಎಂಬುದನ್ನು ದೃಢೀಕರಿಸಿದ್ದಾರೆ. ಹಲವು ಹೊಸ ಹೊಸ ಚಂದ್ರರನ್ನು ಕಂಡುಹಿಡಿದಿದ್ದಾರೆ. ಇದುವರೆಗಿನ ಸಂಶೋಧನೆಗಳ ಪ್ರಕಾರ ಶನಿ ಮತ್ತು ಗುರುಗ್ರಹಗಳು ಅತಿ ಹೆಚ್ಚು ಚಂದ್ರರನ್ನು ಒಳಗೊಂಡಿವೆ ಎಂದೂ ಈ ಸಂಶೋಧನೆಗಳು ಹೇಳುತ್ತಿವೆ.

ಇದುವರೆಗೆ ಶನಿಗ್ರಹಕ್ಕೆ 146 ಚಂದ್ರರಿದ್ದಾರೆ ಎಂದು ದಾಖಲಿಸಲಾಗಿತ್ತು. ಅವುಗಳಲ್ಲಿ 'ಟೈಟನ್' ಮತ್ತು 'ಎನ್ಸೆಲಾಡಸ್' ಎಂಬವು ದೊಡ್ಡ ಗಾತ್ರದವು; ಉಳಿದವು ಚಿಕ್ಕವು ಎಂದು ದಾಖಲಿಸಲಾಗಿದೆ. ಶನಿಗ್ರಹಕ್ಕೆ ಈ ಮೊದಲು ಕಂಡುಹಿಡಿದಿದ್ದ 146 ಚಂದ್ರರ ಜೊತೆ ಇನ್ನೂ 128 ಚಂದ್ರರನ್ನು ಕಂಡಿರುವುದಾಗಿ 2025ರ ಫೆಬ್ರುವರಿ ತಿಂಗಳಿನಲ್ಲಿ 'ನಾಸಾ' ಪ್ರಕಟಿಸಿದೆ. ಎಂದರೆ ಶನಿಗ್ರಹಕ್ಕೆ ಒಟ್ಟು 274 ಚಂದ್ರರಿದ್ದಾರೆ ಎಂದಂತಾಯಿತು! ಇದು ಸೌರವ್ಯೂಹದ ಯಾವುದೇ ಗ್ರಹಕ್ಕಿಂತ ಹೆಚ್ಚು ಚಂದ್ರರನ್ನು ಹೊಂದಿರುವ ವಿಶಿಷ್ಟವಾದ ಗ್ರಹ.

ಶನಿಗ್ರಹದ ಸುತ್ತ ಇರುವ ಚಂದ್ರರ ಮೂಲ, ಗಾತ್ರ ಮತ್ತು ಕಕ್ಷೆಯ ಲಕ್ಷಣಗಳನ್ನು ಆಧರಿಸಿ ಈ ಚಂದ್ರರನ್ನು ವರ್ಗೀಕರಿಸುವುದೂ ಸಾಧ್ಯವಾಗಿದೆ. ಅವುಗಳಲ್ಲಿ ನಿಶ್ಚಿತ ಗಾತ್ರವನ್ನು ಹೊಂದಿರುವ ಕೆಲವನ್ನು ನಿಯಮಿತ ಚಂದ್ರ ಎಂದೂ, ನಿಯಮಿತ ಗಾತ್ರವಿಲ್ಲದ ಇನ್ನುಳಿದವುಗಳನ್ನು ಅನಿಯಮಿತ ಚಂದ್ರರು ಎಂದು ವರ್ಗೀಕರಿಸಲಾಗಿದೆ. ಅವೆಲ್ಲವೂ ಶನಿಗ್ರಹದ ಸುತ್ತ ನಿರ್ದಿಷ್ಟ ಕಕ್ಷೆಯಲ್ಲಿ ನಿರ್ದಿಷ್ಟ ದಿಕ್ಕಿನಲ್ಲಿ ಸುತ್ತುತ್ತಿರುತ್ತವೆಂದೂ, ವಿವಿಧ ಬಗೆಯ ಅನಿಲ ಅಥವಾ ದೂಳಿನಿಂದ ಕೂಡಿರುವುವೆಂದೂ ವಿವರಿಸಲಾಗಿದೆ.

ಈಗ ಕಂಡುಹಿಡಿಯಲಾದ 128 ಚಂದ್ರರಲ್ಲಿ ಬಹುತೇಕವು ಚಿಕ್ಕದಾಗಿದ್ದು ಅನಿಯಮಿತ ಗಾತ್ರ ಹೊಂದಿವೆ. ಅವುಗಳ ಕಕ್ಷೆಗಳು ಕೂಡ ಅಸಾಮಾನ್ಯವಾಗಿವೆ. ಅವುಗಳಲ್ಲಿ ಕೆಲವು ಶನಿಗ್ರಹದ ತಿರುಗುವಿಕೆಗೆ ವಿರುದ್ಧವಾಗಿ ಹಿಮ್ಮುಖ ಚಲನೆಯನ್ನು ಕೂಡ ಹೊಂದಿವೆ. ಬಹುಶಃ ಈ ಸಣ್ಣ ಚಂದ್ರಗಳು ಶನಿಯ ಸುತ್ತ ಬಾಹ್ಯಾಕಾಶದಲ್ಲಿ ಉಂಟಾದ ಘರ್ಷಣೆಗಳ ಪರಿಣಾಮವಾಗಿ ಉದ್ಭವಿಸಿರಬೇಕು ಎಂದು ಊಹಿಸಲಾಗಿದೆ.

ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ ಆಗಸದಲ್ಲಿ ಹೊಸ ಹೊಸ ಆಕಾಶಕಾಯಗಳನ್ನು ನಕ್ಷತ್ರಗಳನ್ನು ಗುರುತಿಸುತ್ತಲೇ ಇದೆ. ಅವುಗಳಲ್ಲಿ ವಿವಿಧ ಗ್ರಹಗಳ ಸುತ್ತ ಸುತ್ತುತ್ತಿರುವ ಚಂದ್ರನಂತಹ ಉಪಗ್ರಹಗಳೂ ಸೇರಿವೆ. ಬುಧ ಮತ್ತು ಶುಕ್ರಗ್ರಹಗಳನ್ನು ಹೊರತುಪಡಿಸಿ ಇನ್ನಿತರ ಎಲ್ಲ ಗ್ರಹಗಳಿಗೂ ಚಂದ್ರರಿದ್ದಾರೆ ಎಂಬ ಅತ್ಯಂತ ವಿಸ್ಮಯಕರ ಸಂಗತಿಯನ್ನು ಕೂಡ ಕಂಡುಹಿಡಿಯಲಾಗಿದೆ. ಬಾಹ್ಯಾಕಾಶ ಸಂಶೋಧನೆಗಳು ಮುಂದುವರಿದಂತೆಲ್ಲ ಇನ್ನಷ್ಟು ಮಾಹಿತಿಗಳು ದೊರಕಬಹುದೇನೋ!

ಜುಗಲ್‌ಬಂದಿ ಜಾಕೆಟ್ಟು!

• ಕೊಳ್ಳೇಗಾಲ ಶರ್ಮ

ಆರ್ಕೆಸ್ಟ್ರಾ ನೋಡಿದ್ದೀರಲ್ಲ! ಗಣೇಶ ಚತುರ್ಥಿಯಲ್ಲಿ ಬೀದಿಮೂಲೆಯಲ್ಲಿ ಆರ್ಕೆಸ್ಟ್ರಾ ನಡೆಯುವಾಗ, ಆರ್ಕೆಸ್ಟ್ರಾದ ಸಿಬ್ಬಂದಿಯಲ್ಲಿ ಒಬ್ಬ ಕೈ, ಕಾಲು ಆಡಿಸುತ್ತಾ ಇರುವುದನ್ನು ಕಂಡಿರುತ್ತೀರಿ. ಸಂಗೀತದ ಟಿ.ವಿ. ಕಾರ್ಯಕ್ರಮಗಳಲ್ಲಿಯೂ ಇದನ್ನು ನೀವು ಕಾಣಬಹುದು. ಹಾಡನ್ನು ಹಾಡುವವರ ಜೊತೆಗೆ ಹಿನ್ನೆಲೆಯಲ್ಲಿ ಸಂಗೀತವನ್ನು ನುಡಿಸುವ ವಾದ್ಯವೃಂದದವರಿಗೆ ಈ 'ಕಂಡಕ್ಟರ್'ಗಳು ಅವಶ್ಯ. ವಿವಿಧ ವಾದ್ಯಗಳು ಒಂದಿನ್ನೊಂದಕ್ಕೆ ಪೂರಕವಾಗಿ ಮೇಳೈಸುವಂತೆ ಮಾಡುವುದು ಇವರ ಕೆಲಸ. ಇನ್ನು ಮುಂದೆ ಈ ದೃಶ್ಯ ಕಾಣೆಯಾಗಬಹುದು. ವಾದ್ಯವೃಂದದವರು ಧರಿಸಿರುವ ಜಾಕೆಟ್ಟೇ ಅವರ ಸಂಗೀತವನ್ನು ಮೇಳೈಸುವಂತೆ ಮಾಡಬಹುದು ಎನ್ನುವ ಸುದ್ದಿ ಬಂದಿದೆ. ತಂಡದಲ್ಲಿ ವಾದ್ಯಗಳನ್ನು ನುಡಿಸುತ್ತಿರುವವರು ಒಬ್ಬರಿನ್ನೊಬ್ಬರನ್ನು ಅಥವಾ ಕಂಡಕ್ಟರನ್ನು ನೋಡದೆಯೇ ಶೃತಿ, ತಾಳ, ರಾಗಗಳನ್ನು ಹೊಂದಿಸಿಕೊಳ್ಳಬಹುದಾದ ಜುಗಲ್‌ಬಂದಿ ಜಾಕೆಟನ್ನು ಇಟಲಿಯ ರೋಮ್ ವಿಶ್ವವಿದ್ಯಾಲಯದ ಅಡ್ವಾನ್ಸ್ಡ್ ರೋಬೋಟಿಕ್ಸ್ ಆ್ಯಂಡ್ ಹ್ಯೂಮನ್ ಸೆಂಟರ್ಡ್ ಟೆಕ್ನಾಲಜೀಸ್ ಸಂಶೋಧನಾಲಯದ ವಿಜ್ಞಾನಿ ಫ್ರಾನ್ಸೆಸ್ಕೋ ಡಿ ತಮಾಸೊ ಮತ್ತು ಸಂಗಡಿಗರು ಸಿದ್ಧ ಪಡಿಸಿದ್ದಾರಂತೆ.

ಆರ್ಕೆಸ್ಟ್ರಾವೇ ಇರಲಿ ಅಥವಾ ಕರ್ನಾಟಕ ಸಂಗೀತವೇ ಇರಲಿ, ವಿವಿಧ ವಾದ್ಯಗಳನ್ನು ನುಡಿಸುತ್ತಿರುವವರ ನಡುವೆ ಹೊಂದಾಣಿಕೆ ಇರಬೇಕು. ಅದರಲ್ಲಿಯೂ ಜಂಟಿಯಾಗಿ ವಾದ್ಯಗಳನ್ನು ನುಡಿಸುವ, ಇಲ್ಲವೇ ಹಾಡುವವರ ಶ್ರುತಿ ಮತ್ತು ತಾಳದಲ್ಲಿ ಒಂದಿಷ್ಟು ವ್ಯತ್ಯಾಸವಾದರೂ ಅಪಶ್ರುತಿ ಎನಿಸುತ್ತದೆ; ಹಾಡು ಕೇಳಲು ಕಷ್ಟವಾಗುತ್ತದೆ. ಇದೇ ಕಾರಣಕ್ಕೇ ಏಕಾಂಗಿ ಸಂಗೀತಕಾರನ ಹಾಡುಗಾರಿಕೆಯೂ, ಜೋಡಿಸಂಗೀತಗಾರರ ಜುಗಲ್‌ಬಂದಿಯೂ ವಿಭಿನ್ನ ಅನುಭವವನ್ನು ನೀಡುತ್ತವೆ. ಇಬ್ಬರೂ ಸಂಗೀತಗಾರರೂ ಪರಿಣತರಾಗಿಲ್ಲದಿದ್ದರೆ ಅಪಶ್ರುತಿಯ ಅನುಭವ ಆಗುವುದು ಖಂಡಿತ. ಜುಗಲ್‌ಬಂದಿ ಹಾಡುವ ಅಥವಾ ವಾದ್ಯಗಳನ್ನು ನುಡಿಸುವ, ಅಥವಾ ಮೇಳದಲ್ಲಿ ಒಟ್ಟಿಗೇ ವಾದ್ಯವನ್ನು ನುಡಿಸುವವರು ಒಬ್ಬರಿನ್ನೊಬ್ಬರ ಜೊತೆಗೆ ತಾಳವನ್ನು ಹೊಂದಿಸಿಕೊಳ್ಳುವುದು ಹೇಗೆ ಎನ್ನುವುದು ಕೌತುಕದ ಪ್ರಶ್ನೆ.

ಸಾಮಾನ್ಯವಾಗಿ ಇದಕ್ಕಾಗಿ ಕಂಡಕ್ಟರುಗಳು ಸೂಚನೆ ನೀಡುವುದುಂಟು. ಆದರೆ ನೂರಾರು ವಾದ್ಯಗಳನ್ನು ಒಮ್ಮೆಲೇ ನುಡಿಸುವ ಆರ್ಕೆಸ್ಟ್ರಾದಲ್ಲಿ ಇದು ಸ್ವಲ್ಪ ಕಷ್ಟವೇ. ಅಲ್ಲಿ ವಾದ್ಯಕಾರರು ಒಬ್ಬರಿನ್ನೊಬ್ಬರನ್ನು ಕಂಡು, ಇಲ್ಲವೇ ಸನಿಹದಲ್ಲಿರುವವರು ನುಡಿಸುವುದನ್ನು ಕೇಳಿ ಅದಕ್ಕೆ ತಕ್ಕಂತೆ ತಮ್ಮ ಸಂಗೀತವನ್ನು ಹೊಂದಿಸಿಕೊಳ್ಳುತ್ತಾರೆ ಎಂದು ನಂಬಲಾಗಿತ್ತು. ಹೀಗಾಗಿಯೇ ರಂಗದ ಮೇಲೆ ಸಂಗೀತಕಾರರು ಕುಳಿತುಕೊಳ್ಳುವಾಗ ಒಬ್ಬರಿನ್ನೊಬ್ಬರನ್ನು ಕಾಣುವಂತೆ ಸ್ಥಳ ಹೊಂದಿಸಿಕೊಳ್ಳುತ್ತಾರೆ. ರೀಲ್ಸ್‌ಗಳಲ್ಲಿ ಜುಗಲ್‌ಬಂದಿ ಮಾಡುವಾಗಲೂ, ಒಬ್ಬರಿನ್ನೊಬ್ಬರನ್ನು ನೋಡುವಂತೆಯೇ ಇದ್ದರಷ್ಟೆ ಸಂಗೀತ ಚೆನ್ನಾಗಿರುತ್ತದೆ. ಆದರೆ ಇಟಲಿಯ ವಿಜ್ಞಾನಿಗಳು ತಯಾರಿಸಿರುವ ಈ ರೋಬೋ ಜಾಕೆಟ್ಟು, ಕಾಣದ, ಕೇಳದ ಸಂಗೀತದ ಜೊತೆಗೂ ನಿಮ್ಮ ಹಾಡನ್ನು ಮೇಳೈಸಬಲ್ಲುದಂತೆ.

ಈ ರೋಬೋ ಜಾಕೆಟ್ಟನ್ನು 'ಎಕ್ಸ್‌ಟ್ರಾ ಅಸ್ಥಿಪಂಜರ' ಎಂದು ಕರೆಯುತ್ತಾರೆ. ನಮ್ಮ ಅಸ್ಥಿಪಂಜರದ ಕೀಲು, ಕಾಲುಗಳನ್ನು ಓಡಾಡಿಸಲು ಮಾಡುವ ಯಾಂತ್ರಿಕ ವ್ಯವಸ್ಥೆ ಇದು. ತಮಾಸೊ ತಂಡ ಪಿಟೀಲುವಾದಕರಿಗೆ ನೆರವಾಗುವಂತಹ ರೋಬೋ ಜಾಕೆಟ್ಟೊಂದನ್ನು ತಯಾರಿಸಿದೆ. ಈ ಜಾಕೆಟ್ಟಿನಲ್ಲಿ ತೊಟ್ಟವರ ಭುಜ ಹಾಗೂ ಮೊಳಕೈಗಳನ್ನು ದೂಡುವಂತಹ ಮೋಟರುಗಳನ್ನು ಅಳವಡಿಸಲಾಗಿದೆ. ಈ ಮೋಟರುಗಳು ಕೈಯ ಚಲನೆಯ ವೇಗವನ್ನು ಗಮನಿಸಿ, ಅದಕ್ಕೆ ತಕ್ಕಂತೆ ಚಲಿಸುತ್ತವೆ. ಅಂದರೆ ಮುಳ್ಳು ಚುಚ್ಚಿದ ಕೂಡಲೇ ನಮ್ಮ ಕೈ ತಟ್ಟನೆ ದೂರ ಸರಿದು ಪ್ರತಿಕ್ರಿಯಿಸುತ್ತದಲ್ಲ, ಹಾಗೆ ಈ ಭುಜ ಹಾಗೂ ಮೊಳಕೈ ಚಾಲಕಗಳು, ಕೈಯ ಚಲನೆಯ ದಿಕ್ಕು ಹಾಗೂ ಗತಿಯನ್ನು ಗುರುತಿಸಿ ಅದಕ್ಕೆ ತಕ್ಕಂತೆ ಚಲಿಸುತ್ತವೆ. ಕೈಯ ಚಲನೆಯನ್ನು ಸರಾಗಗೊಳಿಸುತ್ತವೆ.

ಈ ದಿರಿಸನ್ನು ಧರಿಸಿದ ಇಪ್ಪತ್ತೊಂದು ಜೋಡಿಗಳಿಗೆ ತಮಾಸೊ ತಂಡ ಸಂಗೀತದ ತುಣುಕೊಂದನ್ನು ನುಡಿಸಲು ಕೊಟ್ಟಿದೆ. ಈ ಸಂಗೀತವನ್ನು ನುಡಿಸಬೇಕಾದರೆ, ಪಿಟೀಲಿನ ಕುದುರೆ ಕಡ್ಡಿ ಚಲಿಸುವ ದಿಕ್ಕು ಹಾಗೂ ಗತಿ ಮತ್ತು ವಾದಕನ ಬೆರಳುಗಳ ಚಲನೆಗಳು ನಿರ್ದಿಷ್ಟವಾಗಿರುವಂತೆ ಈ ಸಂಗೀತವನ್ನು ಸಂಯೋಜಿಸಲಾಗಿತ್ತು. ಪ್ರತಿ ತುಣುಕನ್ನೂ ಎರಡು ವಿಭಿನ್ನ ಗತಿಯಲ್ಲಿ ನುಡಿಸಬಹುದಿತ್ತು. ಪರಿಣತರೂ ಹವ್ಯಾಸಿಗಳೂ ಇದನ್ನು ನುಡಿಸಲು ಸಾಧ್ಯವಾಗುವಂತೆ ಸಂಯೋಜಿಸಿದ್ದರೂ, ಜೋಡಿವಾದಕರು ನುಡಿಸಲು ತುಸು ಕಷ್ಟ ಎನ್ನಿಸುವಂತಿತ್ತು. ವಾದಕರನ್ನು ಇಪ್ಪತ್ತೊಂದು ಜೋಡಿಗಳನ್ನಾಗಿ ಮಾಡಿ ಪ್ರತಿಯೊಂದು ಜೋಡಿಗೂ ಸಂಗೀತವನ್ನು ನುಡಿಸಲು ಕೇಳಿದರು. ನುಡಿಸುವಾಗ ಕೆಲವೊಮ್ಮೆ ಒಬ್ಬರಿನ್ನೊಬ್ಬರಿಗೆ ಮುಖಾಮುಖಿಯಾಗಿಯೂ, ಇನ್ನು ಕೆಲವೊಮ್ಮೆ ಬೆನ್ನು ಹಾಕಿಯೂ ಕುಳಿತು ನುಡಿಸಬೇಕಿತ್ತು. ಎಲ್ಲರೂ ಜಾಕೆಟ್ಟನ್ನು ಧರಿಸಿಯೇ ಸಂಗೀತ ನುಡಿಸಿದರೂ, ಕೆಲವೊಮ್ಮೆ ಮಾತ್ರ ಜಾಕೆಟ್ಟು ಚಾಲನೆಯಲ್ಲಿ ಇರುತ್ತಿತ್ತು. ಹಾಗೂ ಅದು ಯಾವಾಗ ಚಾಲನೆಯಲ್ಲಿ ಇರುತ್ತದೆ ಎನ್ನುವುದು ವಾದಕರಿಗೆ ತಿಳಿಯುತ್ತಿರಲಿಲ್ಲ. ಜಾಕೆಟ್ಟು ಚಾಲನೆಯಲ್ಲಿ ಇರುವಾಗ ಅದರ ಮಾಹಿತಿ ಮತ್ತೊಬ್ಬ ವಾದಕರ ಜಾಕೆಟ್ಟಿಗೆ ಸೇರುವಂತೆ ಮಾಡಲಾಗಿತ್ತು. ಹೀಗೆ ಒಬ್ಬರ ಸಂಗೀತದ ಮಟ್ಟುಗಳನ್ನು ಮತ್ತೊಬ್ಬರಿಗೆ ತಲುಪಿಸಲಾಗುತ್ತಿತ್ತು.

ಈ ರೀತಿಯಲ್ಲಿ ನುಡಿಸಿದ ಸಂಗೀತವನ್ನು ಅನಂತರ ಪರಿಣತರು ಹಾಗೂ ಕೆಲವು ನಿರ್ದಿಷ್ಟ ಮಾನಕಗಳಿಗೆ ತಕ್ಕಂತೆ ವಿಶ್ಲೇಷಿಸಿದರು. ಹಾಗೆಯೇ ವಾದಕರಿಗೂ, ಯಾವ್ಯಾವ ಸಂದರ್ಭದಲ್ಲಿ ಜೊತೆಗಾರರ ಜೊತೆ ನುಡಿಸುವುದು ಸುಲಭವಾಗಿತ್ತು ಅಥವಾ ಕಷ್ಟವಾಗಿತ್ತು ಎಂಬುದನ್ನೂ ಪಟ್ಟಿ ಮಾಡಿಕೊಂಡರು. ಇವೆಲ್ಲವನ್ನೂ ವಿಶ್ಲೇಷಿಸಿ, ವಾದಕರು ಒಬ್ಬರಿನ್ನೊಬ್ಬರನ್ನು ನೋಡುವಾಗ, ಅಥವಾ ರೋಬೋಟು ಜಾಕೆಟ್ಟು ಚಲಿಸುವಾಗ ಜುಗಲ್‌ಬಂದಿ ಹೇಗಿರುತ್ತಿತ್ತು ಎಂದು ಅಳೆಯಲಾಯಿತು. ಇವೆಲ್ಲ ವಿಶ್ಲೇಷಣೆಗಳ ಫಲ: ವಾದಕರಿಗೆ ತಮ್ಮ ಜೊತೆಗಾರರು ಕಾಣದೇ ಇರುವಾಗಲೂ ಕೇವಲ ಜಾಕೆಟ್ಟಿನ ನೆರವಿನಿಂದ ಉತ್ತಮವಾಗಿ ಜೋಡು ಕೊಡಬಹುದಿತ್ತಂತೆ. ಆದರೆ ನೇರವಾಗಿ ಕಾಣುವಂತೆ ಕುಳಿತು, ಜಾಕೆಟ್ಟು ಧರಿಸಿ ನುಡಿಸುವಾಗ, ಇಬ್ಬರೂ ವಾದಕರೂ ಒಬ್ಬರೇ ವಾದಕರೋ ಎಂಬಂತೆ ಎರಡೂ ಮಟ್ಟುಗಳಲ್ಲಿಯೂ ಅತ್ಯುತ್ತಮವಾಗಿ ಪಿಟೀಲು ನುಡಿಸಿದರು ಎನ್ನುತ್ತಾರೆ ತಮಾಸೊ. ಅಂದರೆ ಅತಿ ಕ್ಲಿಷ್ಟವಾದ ಚಲನೆಗಳನ್ನೂ ಸಂಯೋಜಿಸಲು ಇಂತಹ ರೋಬೋ ಜಾಕೆಟ್ಟುಗಳು ನೆರವಾಗಬಹುದು ಎನ್ನುವುದು ತಮಾಸೊ ಅವರ ತರ್ಕ.



'ನೀಟ್' ದಿಕ್ಸೂಚಿ

ಪಿಯುಸಿ/ಸಿಇಟಿ ದಿಕ್ಸೂಚಿ

CHEMISTRY

8) Given below are two statements :

Statement I : A hypothetical diatomic molecule with bond order zero is quite stable.

Statement II : As bond order increases, the bond length increases.

In the light of the above statements, choose the most appropriate answer from the options given below :

a) Statement I is false but Statement II is true
b) Both Statement I and Statement II are true
c) Both Statement I and Statement II are false
d) Statement I is true but Statement II is false

Ans (c)

Expln:- • A positive bond order means a stable molecule while a negative or zero bond order means an unstable molecule.
• When bond order increases, the bond length decreases.

9) Butylated hydroxyl toluene as a food additive acts as

a) Antioxidant b) flavouring agent
c) colouring agent d) emulsifier.

Ans:- (a)

10) Which of the following is NOT a characteristic of a covalent compound?

a) Low melting point b) No definite geometry
c) Insoluble in polar solvent
d) Small difference in electronegativity between the combining atoms

Ans:- (b)

11) Conductivity of a saturated solution of a sparingly salt AB at 298 K is 1.85×10^{-5} S m^{-1}. Solubility product of the salt AB at 298 K is

Given: Λ^o_m (AB) = 140×10^{-4} S m^2 mol^{-1}

a) 5.7×10^{-12} b) 1.32×10^{-12}
c) 7.5×10^{-12} d) 1.74×10^{-12}

Ans:- (d)

Expln:-using the relationship between solubility of sparingly soluble salt and Λ^o_m,

$$K = 1.85 \times 10^{-5}\ S\ m^{-1} = 1.85 \times 10^{-7}\ S\ cm^{-1}$$

$$\Lambda^0_m = 140 \times 10^{-4}\ S\ m^2\ mol^{-1} = 140\ S\ cm^2\ mol^{-1}$$

$$s = \frac{k \times 1000}{\Lambda^0_m} = \frac{1.85 \times 10^{-7} \times 1000}{140}$$

$$= 1.32 \times 10^{-6}$$

$$K_{sp} = (s)^2 \quad \text{[For AB type of salt]}$$

$$= (1.32 \times 10^{-6})^2 = 1.74 \times 10^{-12}$$

12) An incorrect statement with respect to SN1 and S_N2 mechanism for alkyl halide is

a) A strong nucleophile the rate of favours S_N2 reaction
b) Competing reaction for an SN^2 reaction is rearrangement
c) SN^1 reactions can be catalyzed by some Lewis acids
d) A weak nucleophile and a protic solvent increase the rate of favours SN^1 reaction

Ans- (b)

Expln:- Competing reaction for an SN^2 reaction is rearrangement.

13) On heating with concentrated NaOH solution in an inert atmosphere of CO_2, white phosphorous gives a gas. Which of the following statements is incorrect about the gas?

a) It is more basic than NH_3.
b) Its solution in water decomposes in the presence of lights
c) It is less basic than NH_3.
d) It is highly poisonous and has smell like rotten fish.

Ans: (a)

14) Which one of the following is an example for homogeneous catalysis?

a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl

Ans:- d

15) Arrange the following elements in increasing order of electronegativity: N, O, F, C, Si

Choose the correct answer from the options given below:

a) Si < C < N < O < F
b) Si < C < O < N < F
c) O < F < N < C < Si
d) F < O < N < C < Si

Ans:- (a)

Expln:- Electronegativity increases across the period on moving left to right. It decreases on moving down the group. The correct option is

Si < C < N < O < F

16) Iodoform can be prepared from all, except

(a) butan-2-one (b) acetophenone
(c) propan-2-ol (d) propan-1-ol

Ans: (d) propan-1-ol

Iodoform reaction requires a $H_3C-\underset{\underset{O}{\|}}{C}-$ group, which is not present in propan-1-ol even after oxidation.

17) The complex ion having minimum magnitude of Δ_0 (CFSE) is

(a) $[Co(NH_3)_6]^{3+}$ (b) $[Cr(H_2O)_6]^{3+}$
(c) $[Cr(CN)_6]^{3-}$ (d) $[Co(Cl)_6]^{3-}$

Ans: (d) $[Co(Cl)_6]^{3-}$

Co^{3+} - d^6 low spin $\Delta_0 = 4 \times (-0.4) + 2\,(+0.6) = -0.4\ \Delta_0$

Cr^{3+} - d^3 low spin $\Delta_0 = 4 \times (-0.4) = -1.6\ \Delta_0$.

18) Select the correct statements from the following:

a) Atoms of all elements are composed of two fundamental particles.

(Contd….)

BIOLOGY

MULTIPLE CHOICE QUESTIONS:-

32) Match the hormone with its site of production

Hormone	Site of production
a. hCG and hPL	i. Ovary
b. Progesterone	ii. Placenta
c. Androgens	iii. Corpus luteum
d. Relaxin	iv. Leydig cells

(a) a-iii b-I c-iv d-ii b) a-iv, b-i, c-ii, d-iii
(c) a-i b-ii, c-iv, d-iii (d) a-ii, b-iii, c-iv, d-i

Ans:- d (KCET-2025)

33) One of the following statements is incorrect with reference to biodiversity. Identify it

(a) Biodiversity increases with higher altitudes to lower altitudes

(b) Depletion in genetic diversity of crop plants is mainly due to the introduction of better varieties with high yield, disease resistance, etc.

(c) The richest reservoirs of animal and plant life (species richness) with few or no threatened species are called 'biodiversity hotspots'

(d) Biodiversity decreases from the equator to Polar Regions

Ans:(c) Biodiversity refers to the variety and variability of living organisms on earth. Out of all the options given in the question the only inappropriate answer about 'biodiversity hotspots'is that these are the biogeographic region which are both biologically rich reservoirs and deeply threatened by habitat loss and other human activities

34. In castor and maize plants,

(a) Autogamy is prevented but not geitonogamy
(b) Both autogamy and geitonogamy are prevented
(c) Male and female flowers are borne by different plants
(d) The anthers and stigma are placed at different positions to encourage cross pollination

Ans:(a) Castor and maize are both monoecious plants which produce unisexual flowers, in which the pollen from the anthers of a flower is transferred to the stigma of the same flower. Thus, in these plants only autogamy can be prevented, but not geitonogamy (in which pollens are transferred from anither of one flower to stigma of another flower borne on same plant but different branches). Both autogamy and geitonogamy are prevented in *Carica papaya*.


35) Making two varieties of a cattle breed like Red Dane which have no common ancestors on either sides of their pedigree up to 4-6 generations is an example for

(a) Inbreeding (b) Cross breeding
(c) Out crossing (d) Inter-specific hybridization

Ans:(c):

Expl:- out crossing is the phenomenon of mating of two animals within the same breed having no common ancestors on either side of their pedigree upto 4-6 generations, while inbreeding is the crossing of closely related animals within the same breed for 4-6 generations, cross breeding is the breeding of unrelated animals either of the same breeds, but not having common ancestor for 4-6 generations. And interspecific hybridization is the mating of animals of two different species. -

36) Identify the hormones, *A*, *B* and *C* that are labeled in the given flow chart



(a) A-GnRH, B-ICSH, C-FSH
(b) A-GH, B-FSH, C-LH
(C) A-GnRH, B-PRL, C-ICSH
(d) A-GnRH, B-FSH, C-LH

Ans:(d)

Expl:- Hypothalamus is located in the basal part of diencephalon. It controls the anterior and posterior lobes of pituitary gland to secrete different hormones. For gonadotropin releasing hormone hypothalamus stimulates the anterior lobe of pituitary to secrete gonadotropins like Follicle Stimulating Hormone (FSH) and luteinizing Hormone (LH) or InterstitialCell stimulating Hormone (ICSH) by the ovary and testes respectively.

37). **Statement (A)** Photorespiration decreases photosynthetic output.

Statement (B) In photorespiratory pathway, neither ATP nor NADPH is produced.

(a) Both the statements 'A' and 'B' are correct
(b) Both the statements 'A' and 'B' are wrong
(c) Statement 'A' is correct and statement 'B' is wrong
(d) Statement 'B' is correct and statement 'A' is wrong

Ans:a

Expl:- Photorespiration is a light dependent cyclic phenomenon of Oxygenation of RuBP and release of CO_2 by the photosynthetic organs of plant.Photorespiration is considered as a Wasteful process because there is no synthesis of sugar and ATP or NADPH also the CO_2 is released with the utilisation of ATP.

It decreases the overall photosynthetic output in C_3 palnts. C_4 plants lacks the process of photorespiration thus, the productivity and yields in these plants are better than those in C_3 and other plants

(Contd……..)

ರೈಲು ಮಾರ್ಗ: ಅನುದಾನಕ್ಕೆ ಮನವಿ

ಬಳ್ಳಾರಿ– ಸಿರಗುಪ್ಪ– ಸಿಂಧನೂರು ನೂತನ ಮಾರ್ಗ ನಿರ್ಮಾಣಕ್ಕೆ ಸಚಿವರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಚಿವರನ್ನು ಭೇಟಿಯಾದ ರೈಲ್ವೆ ಕ್ರಿಯಾ ಸಮಿತಿ
- ಸಿರಗುಪ್ಪದ ಅಕ್ಕಿ ಸಾಗಣೆಗೆ ಅನುಕೂಲ

ನವದೆಹಲಿ: ಬಳ್ಳಾರಿ– ಸಿರಗುಪ್ಪ– ಸಿಂಧನೂರು ನೂತನ ರೈಲು ಮಾರ್ಗ ನಿರ್ಮಾಣಕ್ಕಾಗಿ ಈ ಸಾಲಿನ ಬಜೆಟ್‌ನಲ್ಲಿ ಮಂಜೂರಾತಿ ನೀಡುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿಯ ನಿಯೋಗ ಮನವಿ ಸಲ್ಲಿಸಿತು.

‘ಮೊದಲನೇ ಹಂತದಲ್ಲಿ ನೂತನ ರೈಲು ಮಾರ್ಗವು ಬಳ್ಳಾರಿಯಿಂದ ಸಿಂಧನೂರಿನವರೆಗೆ ನಿರ್ಮಿತವಾಗಬೇಕಿದ್ದು ಆಗ ಬಳ್ಳಾರಿ–ಸಿಂಧನೂರಿನ ಅಂತರ ಕೇವಲ 70 ಕಿ.ಮೀ. ಆಗುತ್ತದೆ. ಈ ಮಾರ್ಗದ ನಿರ್ಮಾಣದಿಂದ ಚಾಮರಾಜನಗರ–ಮೈಸೂರು–ಹಾಸನ–ಅರಸೀಕೆರೆ–ಚಿತ್ರದುರ್ಗ– ಬಳ್ಳಾರಿ– ರಾಯಚೂರು ಮೂಲಕ ಬೀದರ್‌ವರೆಗೆ 950 ಕಿ.ಮೀ. ಉದ್ದದ ರಾಜ್ಯದ ಉದ್ದನೆಯ ರೈಲು ಮಾರ್ಗವಾಗಲಿದೆ. ರೈಲು ಮಾರ್ಗ ನಿರ್ಮಾಣದಿಂದ ಸಿರಗುಪ್ಪದಲ್ಲಿ ಬೆಳೆಯುವ ಉತ್ತಮ ತಳಿಯ ಅಕ್ಕಿಯನ್ನು ರೈತರು ದೇಶದ ನಾನಾ ಭಾಗಗಳಿಗೆ ರೈಲಿನ ಮೂಲಕ ಸಾಗಣೆ ಮಾಡಲು ಅನುಕೂಲವಾಗುತ್ತದೆ’ ಎಂದು ನಿಯೋಗ ಮನವಿ ಮಾಡಿದೆ.



ನಿರ್ಮಲಾ ಸೀತಾರಾಮನ್ ಅವರಿಗೆ ನಿಯೋಗದ ಸದಸ್ಯರು ಮನವಿ ಸಲ್ಲಿಸಿದರು

ಪ್ರಯಾಣಿಕರ ಬಹುದಿನಗಳ ಬೇಡಿಕೆ ಆಗಿರುವ ಬಳ್ಳಾರಿ ಮಾರ್ಗದಲ್ಲಿ ವಂದೇ ಭಾರತ್ ಅಥವಾ ಸೂಪರ್ ಫಾಸ್ಟ್ ಜನಶತಾಬ್ದಿ ಅಥವಾ ಇಂಟರ್ ಸಿಟಿ ರೈಲನ್ನು ಬೆಂಗಳೂರಿನವರೆಗೆ ಆರಂಭಿಸಬೇಕು ಎಂದು ಒತ್ತಾಯಿಸಿದೆ.

ಬಳ್ಳಾರಿಯ ಏಕಶಿಲಾ ಬೆಟ್ಟಕ್ಕೆ ಮುಂದಿನ ಬಜೆಟ್‌ನಲ್ಲಿ ವಿದ್ಯುತ್ ಚಾಲಿತ ಕೇಬಲ್ ಕಾರ್ ಸೌಲಭ್ಯ ಒದಗಿಸುವಂತೆ ನಿಯೋಗ ಕೋರಿದೆ.

ನಿಯೋಗದಲ್ಲಿ ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿಯ ಅಧ್ಯಕ್ಷ ಕೆ.ಎಂ. ಮಹೇಶ್ವರ ಸ್ವಾಮಿ, ಸಿರಗುಪ್ಪ ರೈಸ್ ಮಿಲ್ ಮಾಲೀಕರ ಸಂಘದ ಅಧ್ಯಕ್ಷ ಎನ್. ಜಿ. ಬಸವರಾಜಪ್ಪ, ಎಪಿಎಂಸಿ ಮಾಜಿ ನಿರ್ದೇಶಕ ಪಲ್ಲೇದ್ ಯೋಗರಾಜ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಜಿಲ್ಲಾ ಕಾರ್ಯದರ್ಶಿ ಕೋಳೂರು ಚಂದ್ರಶೇಖರ ಗೌಡ, ಸಿರಗುಪ್ಪ ವಿಷ್ಣುವಿಲಾಸ ಸೌಹಾರ್ದ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ಕೊಸಗಿ ನಾಗರಾಜ್ ಶೆಟ್ಟಿ ಇದ್ದರು.

‘ಪ್ರಜಾವಾಣಿ’ಯ ಮೂವರಿಗೆ ಕೆಯುಡಬ್ಲ್ಯುಜೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ’ಯ ರಾಮನಗರ ಜಿಲ್ಲಾ ವರದಿಗಾರ ಓದೇಶ ಸಕಲೇಶಪುರ ಸೇರಿ, ಮೂವರು ವರದಿಗಾರರು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯುಜೆ) 2024ರ ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಅತ್ಯುತ್ತಮ ಸ್ಕೂಪ್ ವರದಿಗೆ ನೀಡಲಾಗುವ ‘ಬಿ.ಎಸ್. ವೆಂಕಟರಾಂ ಪ್ರಶಸ್ತಿ’ಯು ಓದೇಶ ಸಕಲೇಶಪುರ, ಬಾಗಲಕೋಟೆ ಮಹಾಲಿಂಗಪುರದ ಮಹೇಶ್ ಮುನ್ನಯ್ಯನವರ ಅವರಿಗೆ ಹಾಗೂ ‘ಕೆ. ಪ್ರಹ್ಲಾದ್‌ರಾವ್ ಪ್ರಶಸ್ತಿ’ಯು ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರದ ಕೆ.ವಿ. ನಾಗರಾಜ್ ಅವರಿಗೆ ಸಂದಿದೆ.

ಅತ್ಯುತ್ತಮ ಕ್ರೀಡಾ ವರದಿಗೆ ನೀಡಲಾಗುವ ಕೆ.ಎ. ನೆಟ್ಟಕಲ್ಲಪ್ಪ ಪ್ರಶಸ್ತಿ ಸಂಯುಕ್ತ ಕರ್ನಾಟಕದ ಹುಬ್ಬಳ್ಳಿಯ ನಾರಾಯಣರಾವ್ ದೇಶಪಾಂಡೆ, ವಿಜಯವಾಣಿ ಬೆಂಗಳೂರಿನ ಪ್ರಸಾದ್ ಶೆಟ್ಟಿಗಾರ್ ಅವರಿಗೆ ಲಭಿಸಿದೆ.



ಓದೇಶ ಸಕಲೇಶಪುರ

30 ವಿಭಾಗದ ಪ್ರಶಸ್ತಿಗಳನ್ನು 58 ಪತ್ರಕರ್ತರಿಗೆ ನೀಡಲಾಗುತ್ತಿದೆ. ವಿದ್ಯುನ್ಮಾನ (ಟಿವಿ) ವಿಭಾಗದ ಮೂರು ಪ್ರಶಸ್ತಿಯನ್ನು ಹತ್ತು ಪತ್ರಕರ್ತರಿಗೆ, ಕೆಯುಡಬ್ಲ್ಯುಜೆ ವಿಶೇಷ ಪ್ರಶಸ್ತಿಯನ್ನು ನಾಲ್ವರಿಗೆ ಪ್ರಕಟಿಸಲಾಗಿದೆ. ಬೀದರ್‌ನಲ್ಲಿ ಏಪ್ರಿಲ್ 11 ಮತ್ತು 12ರಂದು ನಡೆಯಲಿರುವ ಕೆಯುಡಬ್ಲ್ಯುಜೆಯ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ತಿಳಿಸಿದ್ದಾರೆ.

ದೇವೇಗೌಡರ ಚಿತ್ರ ನೆರವು ಕೋರಿಕೆ

ಬೆಂಗಳೂರು: ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಚಿತ್ರ ಸಂಪುಟ ರಚಿಸುತ್ತಿದ್ದು, ಅವರ ಅಪರೂಪದ ಛಾಯಾಚಿತ್ರಗಳು ಇದ್ದರೆ ಒದಗಿಸುವಂತೆ ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಎಚ್.ಎನ್. ಕೃಷ್ಣ ಕೋರಿದ್ದಾರೆ.

‘ಡಿಜಿಟಲ್ ಪ್ರತಿಗಳು ಇದ್ದರೆ ಇ–ಮೇಲ್ ಮಾಡಿ. ಮುದ್ರಿತ ಚಿತ್ರಗಳನ್ನು ಸ್ಕ್ಯಾನ್ ಮಾಡಿ ವಾಪಸ್ ಮಾಡುತ್ತೇವೆ. ನೆರವು ನೀಡಿದವರ ಹೆಸರನ್ನು ಸ್ಮರಿಸಲಾಗುವುದು’ ಎಂದಿದ್ದಾರೆ. ಸಂಪರ್ಕಕ್ಕೆ: ಇ–ಮೇಲ್:drkrishnahn@gmail.com. ಮೊಬೈಲ್:9844088832

ಪ್ರವಾಹ: 34 ಮಂದಿ ರಕ್ಷಣೆ

ಶ್ರೀನಗರ(ಪಿಟಿಐ): ಜಮ್ಮು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಮಂಗಳವಾರ ಭಾರಿ ಮಳೆಯಿಂದಾಗಿ, ವಸತಿ ನಿಲಯದಲ್ಲಿ ಸಿಲುಕಿದ್ದ 30 ವಿದ್ಯಾರ್ಥಿಗಳು ಮತ್ತು ನಾಲ್ವರು ಶಿಕ್ಷಕರನ್ನು ಸೇನಾ ಯೋಧರು ರಕ್ಷಿಸಿದ್ದಾರೆ.

‘ನಿರಂತರ ಹಾಗೂ ಭಾರಿ ಮಳೆ ಸುರಿದ ಪರಿಣಾಮ ರಫಿಯಾಬಾದ್‌ನ ವತರ್ಗಮ್ ಪ್ರದೇಶದ ತೊರೆಯೊಂದರಲ್ಲಿ ನೀರಿನ ಮಟ್ಟ ದಿಢೀರನೆ ಏರಿಕೆಯಾಯಿತು. ತೊರೆಯ ನೀರು ಸಮೀಪದಲ್ಲಿದ್ದ ಶಾಲೆಯ ವಸತಿ ನಿಲಯಕ್ಕೆ ನುಗ್ಗಿತು. ಮಕ್ಕಳು ಮತ್ತು ಶಿಕ್ಷಕರು ವಸತಿ ನಿಲಯದ ಆವರಣದಲ್ಲಿ ಸಿಲುಕಿಕೊಂಡಿದ್ದರು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯರು ಅಲ್ಲೇ ಬೀಡುಬಿಟ್ಟಿದ್ದ ಸೇನಾ ಘಟಕಕ್ಕೆ ಮಾಹಿತಿ ನೀಡಿದರು. ಸೇನೆಯವರು ತ್ವರಿತವಾಗಿ ನೆರವು ಕಾರ್ಯಾಚರಣೆ ಕೈಗೊಂಡರು. ‘ನೀರಿನ ಮಟ್ಟ ಅಪಾಯಕಾರಿ ಹಂತ ತಲುಪಿತ್ತು. ಅದರ ನಡುವೆಯೂ, ವಸತಿ ನಿಲಯದಲ್ಲಿ ಸಿಲುಕ್ಕಿದ್ದವರನ್ನು ಸುರಕ್ಷಿತವಾಗಿ ಸ್ಥಳಾಂತರಿಸುವಲ್ಲಿ ಸೇನಾ ತಂಡವು ಯಶಸ್ವಿಯಾಯಿತು’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

‘ಬೇಕಿದೆ ಬಲಿಷ್ಠ ನೌಕಾಪಡೆ’

ಪಣಜಿ (ಪಿಟಿಐ): ಇತ್ತೀಚಿನ ಜಾಗತಿಕ ಬೆಳವಣಿಗೆಗಳು ಬಲಿಷ್ಠ ನೌಕಾಪಡೆಯ ಅಗತ್ಯವನ್ನು ಸಾರಿ ಹೇಳುತ್ತಿವೆ ಎಂದು ನೌಕಾಪಡೆಯ ಉಪ ಮುಖ್ಯಸ್ಥ ವೈಸ್ ಅಡ್ಮಿರಲ್ ತರುಣ್ ಸೋಬ್ತಿ ಮಂಗಳವಾರ ಹೇಳಿದರು.

ಗೋವಾ ಶಿಪ್‌ಯಾರ್ಡ್ ಲಿಮಿಟೆಡ್ ನಿರ್ಮಿಸಿರುವ ಮುಂದಿನ ಪೀಳಿಗೆಯ ಕಡಲಾಚೆಯ ಗಸ್ತು ಹಡಗಿಗೆ (ಎನ್‌ಜಿಒಪಿವಿ) ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಭಾರತದ ಗುರುತನ್ನು ಅದರ ಭೌಗೋಳಿಕತೆ ಮತ್ತು ಇತಿಹಾಸದಿಂದ ವ್ಯಾಖ್ಯಾನಿಸಲಾಗಿದೆ. ವಿಸ್ತಾರವಾದ ಕಡಲು, ಅರಬ್ಬಿ ಸಮುದ್ರ ಮತ್ತು ಬಂಗಾಳ ಕೊಲ್ಲಿಯಲ್ಲಿನ ಅಸಂಖ್ಯಾತ ಭೂ ಗಡಿಗಳು ಹಾಗೂ ವಿಶೇಷ ಆರ್ಥಿಕ ವಲಯಗಳಿಂದ ಸುತ್ತುವರಿದಿದೆ. ಭಾರತದ ಕಡಲತಡಿಯು ಜವಾಬ್ದಾರಿ ಮತ್ತು ಅವಕಾಶಗಳ ಮೂಲವಾಗಿದೆ’ ಎಂದು ತಿಳಿಸಿದರು.

‘ನಮ್ಮ ಸುತ್ತಲಿನ ಸಮುದ್ರಗಳು ವ್ಯಾಪಾರ, ಇಂಧನ ಮತ್ತು ಸಂಪರ್ಕದ ಜೀವನಾಡಿಗಳಾಗಿವೆ. ಇವೆಲ್ಲವುಗಳ ರಕ್ಷಣೆಗೆ ಸಮರ್ಥ, ಜವಾಬ್ದಾರಿಯುತ ನೌಕಾಪಡೆಯ ಅಗತ್ಯವಿದೆ’ ಎಂದು ಹೇಳಿದರು.

ಇಂದಿನಿಂದ ರಾಜ್ಯದಲ್ಲಿ ಮಳೆ

ಬೆಂಗಳೂರು: ರಾಜ್ಯದ ಹಲವೆಡೆ ಬುಧವಾರ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ‘ಯೆಲ್ಲೋ ಅಲರ್ಟ್’ ನೀಡಿದೆ.

ಹಲವು ಜಿಲ್ಲೆಗಳಲ್ಲಿ ಗಾಳಿ ಸಹಿತ ಜೋರು ಮಳೆಯಾಗುವ ಸಾಧ್ಯತೆ ಇದೆ. ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಂಭವ ಇದೆ.

ಬೆಂಗಳೂರಿನಲ್ಲಿ ಸಂಜೆ ಮೋಡ ಕವಿದ ವಾತಾವರಣ ಇರಲಿದ್ದು, ಹಲವು ಪ್ರದೇಶಗಳಲ್ಲಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಗರಿಷ್ಠ ಉಷ್ಣಾಂಶ 34 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಇಲಾಖೆ ತಿಳಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರದಲ್ಲಿ 3 ಸೆಂ.ಮೀ, ಕೊಪ್ಪದಲ್ಲಿ 1 ಸೆಂ.ಮೀ, ಭದ್ರಾವತಿ, ಶಿವಮೊಗ್ಗದಲ್ಲಿ ತಲಾ 1 ಸೆಂ.ಮೀ. ಮಳೆ ದಾಖಲಾಗಿದೆ.

ಏಪ್ರಿಲ್‌ನಲ್ಲಿ ಮಳೆ, ಮೇ ತಿಂಗಳಲ್ಲಿ ಬಿಸಿಗಾಳಿ

ನವದೆಹಲಿ: ದೇಶದ ಹೆಚ್ಚಿನ ಭಾಗಗಳಲ್ಲಿ ಏಪ್ರಿಲ್ ತಿಂಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಹೇಳಿದೆ.

ಮೇ ತಿಂಗಳಲ್ಲಿ ದೇಶದ ವಿವಿಧೆಡೆ ಗರಿಷ್ಠ ಉಷ್ಣಾಂಶ, ಬಿಸಿಗಾಳಿ ಬೀಸುವ ಸಾಧ್ಯತೆ ಇದೆ. ರಾತ್ರಿಯ ತಾಪಮಾನವು ಸಾಮಾನ್ಯ ಸರಾಸರಿಗಿಂತಲೂ ಹೆಚ್ಚಿರುತ್ತದೆ.

ದೇಶದ ಪೂರ್ವ ಕರಾವಳಿ, ಪೂರ್ವ, ಮಧ್ಯ ಮತ್ತು ವಾಯವ್ಯ ಭಾಗಗಳಲ್ಲಿ ವಾಡಿಕೆಯ ಎರಡರಿಂದ ನಾಲ್ಕು ದಿನಗಳ ಬದಲು ಈ ಬಾರಿ ಬೇಸಿಗೆಯಲ್ಲಿ ಹೆಚ್ಚುವರಿಯಾಗಿ ಮೂರರಿಂದ ಐದು ದಿನ ಬಿಸಿಗಾಳಿ ಬೀಸುವ ಸಾಧ್ಯತೆ ಇದೆ ಎಂದು ಐಎಂಡಿ ಮುನ್ಸೂಚನೆ ಹೇಳಿದೆ.

ಸಿಡಿಲು ಬಡಿದು ಯುವಕ ಸಾವು

ಬೀದರ್: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಮಂಗಳವಾರ ಬಿರುಗಾಳಿ ಸಹಿತ ಮಳೆಯಾಗಿದೆ. ಸಿಡಿಲಿಗೆ ಔರಾದ್ ತಾಲ್ಲೂಕಿನ ಬಾದಲ್‌ಗಾಂವ್ ಗ್ರಾಮದ ರಾಹುಲ್ ರಮೇಶ್ ಬಾಸ್ಕರೆ (25) ಮೃತಪಟ್ಟಿದ್ದಾರೆ.



ರಾಹುಲ್

ಬೆಳಿಗ್ಗೆ ಬೀದರ್ ನಗರದಲ್ಲಿ ಮಳೆ ಸುರಿಯಿತು. ಜಿಲ್ಲೆಯ ಕಮಲನಗರ ತಾಲ್ಲೂಕಿನಲ್ಲಿ 4 ವಿದ್ಯುತ್ ಕಂಬಗಳು ಧರೆಗುರುಳಿವೆ. ಜೋಳದ ಬೆಳೆಗೆ ಹಾನಿಯಾಗಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಮ್ಮ ಧರ್ಮಗಳು ನಮಗೆ ಕೂಡಿ ಬಾಳಲು ಕಲಿಸದೇ ಇದ್ದರೆ ಆ ಧರ್ಮಗಳು ಏಕೆ?

–ಸಿದ್ದೇಶ್ವರ ಸ್ವಾಮೀಜಿ

ಸಂಪಾದಕೀಯ

ಪೆಟ್ರೋಲ್–ಡೀಸೆಲ್ ಸುಂಕ ಕಡಿತ ಬಜೆಟ್ ಲೆಕ್ಕಾಚಾರಗಳಿಗೆ ಹೊಡೆತ

ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ವಿಶೇಷ ಎಕ್ಸೈಸ್ ಸುಂಕದಲ್ಲಿ ಲೀಟರ್‌ಗೆ ₹10ರಷ್ಟು ಕಡಿತ ಮಾಡಿರುವ ಕೇಂದ್ರ ಸರ್ಕಾರದ ನಿರ್ಧಾರ ಸದ್ಯದ ತೈಲ ಬಿಕ್ಕಟ್ಟಿನ ಸಂದರ್ಭದಲ್ಲಿ ಅನಿವಾರ್ಯವಾದ ಕ್ರಮವಾಗಿದೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಣಾಮವಾಗಿ ತಲೆದೋರಿರುವ ಕಚ್ಚಾ ತೈಲದ ಬಿಕ್ಕಟ್ಟು ಹಾಗೂ ಹೊರ್ಮುಜ್ ಜಲಸಂಧಿಯಲ್ಲಿನ ಉಸಿರುಗಟ್ಟಿಸುವಿಕೆಯ ಪರಿಸ್ಥಿತಿಯು ಇಂಧನ ಬೆಲೆಗಳ ಮರು ಮೌಲ್ಯಮಾಪನದ ಅಗತ್ಯವನ್ನು ಸೃಷ್ಟಿಸಿದ್ದವು. ಸರ್ಕಾರದ ನಿರ್ಧಾರದಿಂದಾಗಿ ಈ ಮೊದಲು, ಪ್ರತಿ ಲೀಟರ್ ಪೆಟ್ರೋಲ್ ಮೇಲೆ ವಿಧಿಸಲಾಗುತ್ತಿದ್ದ ₹13ರ ವಿಶೇಷ ಹೆಚ್ಚುವರಿ ಎಕ್ಸೈಸ್ ಸುಂಕ ಪ್ರಸ್ತುತ ₹3ಕ್ಕೆ ಇಳಿಕೆಯಾಗಿದೆ. ಪ್ರತಿ ಲೀಟರ್ ಡೀಸೆಲ್ ಮೇಲೆ ಇದ್ದ ₹10 ಎಕ್ಸೈಸ್ ಸುಂಕ ಶೂನ್ಯಕ್ಕಿಳಿದಿದೆ. ಅಂತರರಾಷ್ಟ್ರೀಯ ಕಚ್ಚಾ ತೈಲ ಬೆಲೆಗಳು ಪ್ರತಿ ಬ್ಯಾರೆಲ್‌ಗೆ 116 ಡಾಲರ್‌ಗೆ ಏರಿಕೆಗೊಂಡು, ಜಾಗತಿಕವಾಗಿ ಕಚ್ಚಾ ತೈಲದ ಬೆಲೆ ಶೇ 30ರಿಂದ 50ರಷ್ಟು ಏರಿಕೆಯಾಗಿದೆ. ಅದರಿಂದ ಭಾರತೀಯ ತೈಲ ಮಾರುಕಟ್ಟೆ ಕಂಪನಿಗಳು (ಒಎಂಸಿ) ಅಪಾರ ಒತ್ತಡಕ್ಕೊಳಗಾಗಿದ್ದವು. ಪ್ರಸ್ತುತ ಮಾರುಕಟ್ಟೆ ಬೆಲೆಯಲ್ಲಿ ಅವು ಪ್ರತಿ ಲೀಟರ್ ಪೆಟ್ರೋಲ್‌ಗೆ ಸುಮಾರು ₹24 ಹಾಗೂ ಡೀಸೆಲ್‌ಗೆ ₹30ರಷ್ಟು ನಷ್ಟ ಅನುಭವಿಸುತ್ತಿವೆ. ಈ ಒತ್ತಡವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ವಿಶೇಷ ಎಕ್ಸೈಸ್ ಸುಂಕವನ್ನು ಕಡಿಮೆ ಮಾಡುವುದು ಸರ್ಕಾರಕ್ಕೆ ಅನಿವಾರ್ಯವಾಗಿತ್ತು.

ವಿಶೇಷ ಎಕ್ಸೈಸ್ ಸುಂಕದ ಪರಿಷ್ಕರಣೆಯ ಕ್ರಮವು 'ಒಎಂಸಿ'ಗಳಿಗೆ ಆಗುತ್ತಿರುವ ಭಾಗಶಃ ನಷ್ಟವನ್ನು ಸರಿದೂಗಿಸಿಕೊಳ್ಳಲು ನೆರವಾಗಲಿದೆ. ಆದರೆ, ನಷ್ಟ ಸಂಪೂರ್ಣವಾಗಿ ಭರ್ತಿಯಾಗದ ಕಾರಣದಿಂದಾಗಿ ಸುಂಕ ಪರಿಷ್ಕರಣೆಯ ಲಾಭವನ್ನು 'ಒಎಂಸಿ'ಗಳು ಗ್ರಾಹಕರಿಗೆ ವರ್ಗಾಯಿಸುವ ಸಾಧ್ಯತೆಯಿಲ್ಲ. ಈಗ ಈ ಹೊರೆ ಸರ್ಕಾರಕ್ಕೆ ವರ್ಗಾವಣೆಯಾಗಿದೆ. ಪೆಟ್ರೋಲಿಯಂ ವಲಯದಿಂದ ಬರುವ ಆದಾಯವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವರಮಾನದ ಗಣನೀಯ ಮೂಲವಾಗಿದೆ. ತೆರಿಗೆ, ಲಾಭಾಂಶ ಮತ್ತು ರಾಯಧನ ಸೇರಿದಂತೆ 2024–25ರ ಸಾಲಿನಲ್ಲಿ ಒಟ್ಟು ₹7.4 ಲಕ್ಷ ಕೋಟಿ ವರಮಾನ ಸರ್ಕಾರಗಳಿಗೆ ಸಂದಾಯವಾಗಿದ್ದು, ಅದರಲ್ಲಿ ಕೇಂದ್ರಕ್ಕೆ ₹4.15 ಲಕ್ಷ ಕೋಟಿ ಹಾಗೂ ರಾಜ್ಯಗಳಿಗೆ ₹3.25 ಲಕ್ಷ ಕೋಟಿ ದೊರೆತಿದೆ. ಪ್ರಸಕ್ತ ಯುದ್ಧದ ಬಿಕ್ಕಟ್ಟಿನಿಂದ ₹1 ಲಕ್ಷ ಕೋಟಿಗಿಂತಲೂ ಹೆಚ್ಚಿನ ನಿವ್ವಳ ವರಮಾನ ನಷ್ಟ ಉಂಟಾಗಲಿದೆ ಎಂದು ಅಂದಾಜಿಸಲಾಗಿದೆ. ಈಗ ಆಗಿರುವ ಸುಂಕದ ಪರಿಷ್ಕರಣೆಯು ಮುಂದುವರಿಯುವುದಿಲ್ಲ ಎನ್ನುವ ಖಚಿತತೆ ಸದ್ಯದ ಸಂದರ್ಭದಲ್ಲಿ ಇಲ್ಲ. 2026–27ರಲ್ಲಿ ಪೆಟ್ರೋಲ್ ಮತ್ತು ಹೈ-ಸ್ಪೀಡ್ ಡೀಸೆಲ್ ಮೇಲಿನ ವಿಶೇಷ ಹೆಚ್ಚುವರಿ ಸುಂಕದಿಂದ ₹1.69 ಲಕ್ಷ ಕೋಟಿ ಗಳಿಕೆಯನ್ನು ನಿರೀಕ್ಷಿಸಲಾಗಿದೆ. ಆದರೆ, ಬದಲಾದ ಸಂದರ್ಭದಲ್ಲಿ ಆದಾಯದ ಕೊರತೆ ಗಣನೀಯವಾಗಿರಲಿದೆ ಹಾಗೂ ಅದು ಬಜೆಟ್ ಲೆಕ್ಕಾಚಾರಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು.



ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ವಿಶೇಷ ಎಕ್ಸೈಸ್ ಸುಂಕ ಕಡಿತಗೊಳಿಸಿರುವ ಸರ್ಕಾರದ ನಿರ್ಧಾರದಿಂದಾಗಿ, 'ಒಎಂಸಿ'ಗಳ ಮೇಲಿನ ಭಾಗಶಃ ಹೊರೆ ಕಡಿಮೆ ಆಗಲಿದೆ.

ಯುದ್ಧ ಕೊನೆಗೊಳ್ಳುವ ಸಾಧ್ಯತೆಗಳು ಅಸ್ಪಷ್ಟವಾಗಿರುವುದರಿಂದ ಕಚ್ಚಾ ತೈಲದ ಸರಬರಾಜು ಮತ್ತು ಸಾಗಣೆಯಲ್ಲಿನ ಬಿಕ್ಕಟ್ಟು ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆಯಿದೆ. ಇದರಿಂದ ಕಚ್ಚಾ ತೈಲದ ಬೆಲೆ ಇನ್ನೂ ಹೆಚ್ಚಾಗಬಹುದು ಹಾಗೂ ಅದನ್ನು ಸರಿದೂಗಿಸಲು ಬೆಲೆ ಹೊಂದಾಣಿಕೆಯ ಮತ್ತಷ್ಟು ಕಸರತ್ತು ಅನಿವಾರ್ಯ ಆಗಬಹುದು. ರಫ್ತನ್ನು ನಿರುತ್ಸಾಹಗೊಳಿಸುವ ಹಾಗೂ ಸ್ಥಳೀಯ ಬೇಡಿಕೆಯನ್ನು ಪೂರೈಸುವ ಉದ್ದೇಶದಿಂದ ಸರ್ಕಾರ ಡೀಸೆಲ್ ರಫ್ತಿನ ಮೇಲೆ ತೆರಿಗೆ ವಿಧಿಸಿದೆ. ಆಮದಿನ ಮೇಲೆ ಹೆಚ್ಚು ಅವಲಂಬಿತವಾಗಿರುವ ಭಾರತಕ್ಕೆ, ಇಂಧನ ಬೆಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಸೀಮಿತ ಆಯ್ಕೆಗಳಿವೆ. ಕೆಲವು ದೇಶಗಳು ಈಗಾಗಲೇ ರೇಷನಿಂಗ್ ಜಾರಿಗೊಳಿಸಿವೆ ಹಾಗೂ ಕೆಲಸದ ವೇಳಾಪಟ್ಟಿಗಳಲ್ಲಿ ಬದಲಾವಣೆಗಳನ್ನು ತಂದಿವೆ. ಭಾರತದಲ್ಲಿ ಇಂಧನದ ರೇಷನಿಂಗ್ ಸಾಧ್ಯತೆಯನ್ನು ಕೇಂದ್ರ ಸರ್ಕಾರ ತಳ್ಳಿಹಾಕಿದೆ. ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಚಿಲ್ಲರೆ ಮಾರಾಟ ದರ ಬದಲಾಗದೆ ಉಳಿದಿದೆ. ಚುನಾವಣೆ ಬಳಿಕವಷ್ಟೇ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ಹೆಚ್ಚಳವಾಗುವ ಸಾಧ್ಯತೆಯಿದೆ.

ಚಾವಡಿ



ಕನ್ನಡ–ಇಂಗ್ಲಿಷ್ ಕಲಿಯಲಿ

ಕಲಿತು ಮರೆಯುವುದಕ್ಕೆ ಯಾವುದೇ ಭಾಷೆಯನ್ನು ಅಭ್ಯಾಸ ಮಾಡುವ ಅಗತ್ಯವಿಲ್ಲ. ಅಗತ್ಯ ಇದ್ದವರು ಯಾವ ಭಾಷೆಯನ್ನಾದರೂ ಕಲಿಯಲು ಇಂದು ಅವಕಾಶವಿದೆ. ಸದ್ಯ ನಮ್ಮ ಮಕ್ಕಳು ಕನ್ನಡ ಮತ್ತು ಇಂಗ್ಲಿಷ್ ಚೆನ್ನಾಗಿ ಕಲಿಯಲಿ. ಅವರ ಕಾಲುಗಳು ನೆಲದಲ್ಲಿರಲಿ; ಬಾಹುಗಳು ಆಗಸದ ಎತ್ತರಕ್ಕೆ ಚಾಚಿಕೊಳ್ಳಲಿ.

ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಶಾಲೆಗಳಲ್ಲಿ ಹಿಂದಿ ಭಾಷೆ ಕಲಿಕೆಯ ಕುರಿತಾಗಿ ರಾಜ್ಯ ಸರ್ಕಾರ ತಳೆದಿರುವ ನೀತಿಗೆ ಟೀಕೆಯ ಮಹಾಪೂರವನ್ನೇ ಹರಿಸಿರುವ ಬಿಜೆಪಿಗರು, ಮಹಾರಾಷ್ಟ್ರದಲ್ಲಿ ಅವರದೇ ಸರ್ಕಾರವು ಹಿಂದಿ ವಿಷಯದಲ್ಲಿ ತಳೆದಿರುವ ನಿಲುವಿನ ಬಗ್ಗೆ ಏನು ಹೇಳುತ್ತಾರೆ?

ಡಾ. ಎಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 1-4-2001

● **ಆಮದು ನಿರ್ಬಂಧ ರದ್ದು**

ನವದೆಹಲಿ, ಮಾರ್ಚ್ 31– ಕರವಸ್ತ್ರದಿಂದ ಕಾರಿನವರೆಗೆ, ಆಲೂಗೆಡ್ಡೆಯಿಂದ ತೆಂಗಿನಕಾಯಿವರೆಗೆ ವಿದೇಶಿ ವಸ್ತುಗಳ ಮುಕ್ತ ಪ್ರವೇಶಕ್ಕೆ ದೇಶದ ಹೆಬ್ಬಾಗಿಲು ತೆರೆಯುವ ಬಹು ನಿರೀಕ್ಷೆಯ ಆಮದು– ರಫ್ತು ನೀತಿಯನ್ನು ಕೇಂದ್ರ ಸರ್ಕಾರ ಇಂದು ಪ್ರಕಟಿಸಿದ್ದು, ಪ್ರಮುಖ ಕೃಷಿ ಉತ್ಪನ್ನಗಳು ಮತ್ತು ಬಳಕೆದಾರರ ಸಾಮಗ್ರಿಗಳು ಸೇರಿದಂತೆ 715 ವಸ್ತುಗಳು ನಿರಾಯಾಸವಾಗಿ ದೇಶದ ಮಾರುಕಟ್ಟೆ ಪ್ರವೇಶಿಸಲಿವೆ.

ಮುಕ್ತ ಆಮದಿಗೆ ಈವರೆಗೆ ಅಡ್ಡಿ ಆಗಿದ್ದ ಆಮದು ಪ್ರಮಾಣ ನಿರ್ಬಂಧವನ್ನು ವಿಶ್ವ ವ್ಯಾಪಾರ ಸಂಸ್ಥೆಯ ಷರತ್ತಿನಂತೆ ಸರ್ಕಾರ ನಾಳೆಯಿಂದ ಹಿಂತೆಗೆದುಕೊಳ್ಳಲಿದೆ. ಇದರಿಂದಾಗಿ ವಿದೇಶದಲ್ಲಿ ತಯಾರಾದ 342 ಜವಳಿ ವಸ್ತುಗಳು, ವಿದೇಶಿ ಮದ್ಯವೂ ಸೇರಿದಂತೆ 147 ಕೃಷಿ ಉತ್ಪನ್ನಗಳು, ಮೋಟಾರು ವಾಹನಗಳು ಸೇರಿದಂತೆ 226 ದಿನಬಳಕೆಯ ವಸ್ತುಗಳು ನಾಳೆಯಿಂದ ಊರ ಮುಂದಿನ ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಬರಲಿವೆ.

● **ಸಚಿನ್ ತೆಂಡೂಲ್ಕರ್: ಹತ್ತು ಸಾವಿರ ರನ್‌ಗಳ ಸರದಾರ**

ಇಂದೋರ್, ಮಾರ್ಚ್ 31– ವಿಶ್ವದ ಅಗ್ರಗಣ್ಯ ಬ್ಯಾಟ್ಸ್‌ಮನ್ ಸಚಿನ್ ರಮೇಶ್ ತೆಂಡೂಲ್ಕರ್ ಅವರು ಮೂವತ್ತು ವರ್ಷಗಳ ಇತಿಹಾಸವಿರುವ ಏಕದಿನ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಲ್ಲಿ ಹತ್ತು ಸಾವಿರ ರನ್‌ಗಳ ಗಡಿ ದಾಟಿದ ಮೊಟ್ಟಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಇಂದು ಪಾತ್ರರಾದರು.

ಸಚಿನ್ ಅವರ ಶತಕದ ನೆರವಿನಿಂದ ಭಾರತವು ಆಸ್ಟ್ರೇಲಿಯಾ ವಿರುದ್ಧ ಇಲ್ಲಿ ನಡೆದ ಮೂರನೇ ಏಕದಿನ ಅಂತರರಾಷ್ಟ್ರೀಯ ಪಂದ್ಯದಲ್ಲಿ ಜಯ ಸಾಧಿಸಿತು.

75 ವರ್ಷಗಳ ಹಿಂದೆ

ಭಾನುವಾರ, 1-4-1951

● **ಭಾರತ ವಿಷಮ ಘಟ್ಟದಲ್ಲಿದೆ: ಪಂಡಿತ್ ನೆಹರೂ**

ನವದೆಹಲಿ, ಮಾರ್ಚ್ 31– ಭಾರತ ಇಂದು ವಿಷಮ ಘಟ್ಟದಲ್ಲಿ ಇದೆ ಎಂಬುದನ್ನು ಜನತೆ ಅರಿಯಬೇಕು; ಸಾರ್ವಜನಿಕ ಹಿತಕ್ಕಾಗಿ ವ್ಯಕ್ತಿಯ ಅಥವಾ ಗುಂಪಿನ ಹಿತವನ್ನು ಅಧೀನಪಡಿಸಬೇಕು ಎಂಬುದಾಗಿ ಪ್ರಧಾನಿ ಪಂಡಿತ್ ಜವಹಾರಲಾಲ್ ನೆಹರೂರವರು ಇಂದು ಭಾರತದ ವಾಣಿಜ್ಯ ಮತ್ತು ಕೈಗಾರಿಕಾ ಸಂಘದಲ್ಲಿ ಮಾತನಾಡುತ್ತಾ ನುಡಿದರು.

ಜಗತ್ತಿನ ಎಲ್ಲಾ ವಾಣಿಜ್ಯ ಸಂಘಗಳೂ ಕಾರ್ಮಿಕ ಸಂಘಗಳೂ ನಮಗೆ ಆಜ್ಞೆಗಳನ್ನು ಕೊಡುವುದಾಗಿ ಹೇಳುವುದು ಈಗ ಸಾಧ್ಯವೂ ಇಲ್ಲ; ಸರಿಯೂ ಅಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಮಾರ್ಗಶೋಧನೆ ಮಾಡುವ ವಿಚಾರದಲ್ಲಿ ಜನ ಆಸಕ್ತಿವಹಿಸಿದರೆ ದೃಷ್ಟಿಭೇದವಿದ್ದರೂ ಫಲ ಪಡೆಯಬಹುದು ಎಂದು ವಿವರಿಸಿದರು.

ವಿನಾಶವಷ್ಟೇ ಅಲ್ಲ, ಅವಕಾಶವೂ...



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

> ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಯುದ್ಧ ಆ ದೇಶಗಳಿಗಷ್ಟೇ ಸೀಮಿತವಾಗಿಲ್ಲ. ಯುದ್ಧದಿಂದ ಇರಾನ್ ಅಪಾರ ನಷ್ಟ ಅನುಭವಿಸಿದ್ದರೂ, ಅಮೆರಿಕ–ಇಸ್ರೇಲ್ ದೇಶಗಳಿಗೂ ಹಾನಿಯಾಗಿದೆ. ಆದರೆ, ಈ ಜಗಳದಲ್ಲಿ ಲಾಭ ಮಾಡಿಕೊಳ್ಳುತ್ತಿರುವ ರಷ್ಯಾ, ಚೀನಾಗಳೆಂಬ ಮೂರನೆಯವರೂ ಇದ್ದಾರೆ!

ಇರಾನ್ ಯುದ್ಧ ಆರಂಭವಾಗಿ ತಿಂಗಳು ಕಳೆದಿದೆ! ದಿನದಿಂದ ದಿನಕ್ಕೆ ಬಿಕ್ಕಟ್ಟು ಹೆಚ್ಚಾಗುತ್ತಿದೆ. ಹೊಸ ಪಾತ್ರಧಾರಿಗಳು ರಂಗಪ್ರವೇಶ ಮಾಡುತ್ತಿದ್ದಾರೆ. ಕೆಲವು ರಾಷ್ಟ್ರಗಳ ಮೌನ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಯುದ್ಧದ ಅಂತ್ಯ ಪ್ರಶ್ನೆಯಾಗಿದೆ.

ಅಮೆರಿಕ ಮತ್ತು ಇಸ್ರೇಲ್ ಒಟ್ಟಾಗಿ ಇರಾನ್ ಮೇಲೆ ಆಕ್ರಮಣಕ್ಕೆ ಇಳಿದಾಗ, ಅವು ಆರಂಭಿಕ ಯಶಸ್ಸನ್ನು ಗಳಿಸಿದವು. ಇರಾನಿನ ಪ್ರಮುಖ ನೇತಾರರನ್ನು ಮತ್ತು ಭದ್ರತಾ ಅಧಿಕಾರಿಗಳನ್ನು ಗುರಿಯಾಗಿಸಿಕೊಂಡು ನಿಖರ ದಾಳಿಗಳು ನಡೆದವು. ಇಷ್ಟಾದರೆ ಇರಾನ್ ಮಂಡಿಯೂರುತ್ತದೆ, ನೂತನ ಆಡಳಿತ ತಾನು ವಿಧಿಸಿದ ಷರತ್ತುಗಳಿಗೆ ತಲೆಯಾಡಿಸುತ್ತದೆ ಮತ್ತು ತನಗೆ ಬೇಕಾದಂತೆ ಒಪ್ಪಂದ ಸಾಧ್ಯವಾಗುತ್ತದೆ ಎಂದು ಅಮೆರಿಕ ಭಾವಿಸಿತ್ತು. ಹಾಗಾಗಲಿಲ್ಲ. ಇರಾನ್ ಪ್ರತಿದಾಳಿಗೆ ಇಳಿಯಿತು. ತನ್ನ ಸೀಮಿತ ಸೇನಾಬಲವನ್ನೇ ಬಳಸಿ ಅಮೆರಿಕದ ಸೇನಾನೆಲೆಗಳ ಮೇಲೆ ದಾಳಿ ನಡೆಸಿತು. ನೆರೆಯ ಅರಬ್ ರಾಷ್ಟ್ರಗಳತ್ತ ಕ್ಷಿಪಣಿ ತೂರಿಬಿಟ್ಟಿತು. ಇರಾನ್ ದಾಳಿಗೆ ದುಬೈ ಬೆಚ್ಚಿತು.

ಈವರೆಗಿನ ಯುದ್ಧದಲ್ಲಿ ಇರಾನ್ ಅನುಭವಿಸಿರುವ ನಷ್ಟ ಅನೂಹ್ಯವಾದುದು. ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಯಿಂದಾಗಿ ಇರಾನ್‌ನ ನಗರಗಳು ಹೊತ್ತಿ ಉರಿದಿವೆ. ಅಲ್ಲಿನ ನಾಗರಿಕರು ಮತ್ತು ಮಕ್ಕಳು ಪ್ರಾಣ ಕಳೆದುಕೊಂಡಿದ್ದಾರೆ. ಪರಮಾಣು ಕಾರ್ಯಕ್ರಮದ ಮೂಲಸೌಕರ್ಯಕ್ಕೆ ಹಾನಿಯಾಗಿದೆ. ಆದರೂ, ಪ್ರತಿದಾಳಿಯ ಮೂಲಕ ಇರಾನ್ ಯುದ್ಧವನ್ನು ಮುಂದುವರಿಸಿದೆ!

ಇಲ್ಲಿ ಗಮನಿಸಬೇಕಾದ ಕೆಲವು ಸಂಗತಿಗಳಿವೆ. ಅಮೆರಿಕ ಸೇನೆಯ ಶಕ್ತಿ ಎಂದರೆ ವೇಗದ, ನಿಖರವಾದ ಮತ್ತು ಸಂಯೋಜಿತ ದಾಳಿ. ಹಾಗಾಗಿಯೇ ಇರಾನ್ ಆಡಳಿತದ ನಿರ್ದಿಷ್ಟ ವ್ಯಕ್ತಿಗಳನ್ನು ಕೊಲ್ಲಲು ಸಾಧ್ಯವಾಯಿತು. ಇದಕ್ಕೆ ಇಸ್ರೇಲ್‌ನ ಪ್ರಬಲ ಗೂಢಚರ ಜಾಲ ಸಹಕಾರಿಯಾಯಿತು. ಆದರೆ, ಅಮೆರಿಕ ಇರಾನ್‌ನಿಂದ ಈ ಪ್ರಮಾಣದ ಪ್ರತಿದಾಳಿಯನ್ನು ನಿರೀಕ್ಷಿಸಿರಲಿಲ್ಲ. ಇರಾನ್ ಮತ್ತೊಂದು ಹೆಜ್ಜೆ ಮುಂದಿರಿಸಿ ನೆರೆಹೊರೆಯ ಅರಬ್ ರಾಷ್ಟ್ರಗಳ ಮೇಲೆ ದಾಳಿ ಮಾಡಿತು. ಅಮೆರಿಕದ ಸೇನಾನೆಲೆಗಳ ಮೇಲೆ ದಾಳಿ ಮಾಡಲಾಗಿದೆ ಎಂದು ಇರಾನ್ ದಾಳಿಯನ್ನು ಸಮರ್ಥಿಸಿಕೊಂಡಿತು. ಅಸಲಿಗೆ ಇರಾನ್ ತನ್ನ ನೆರೆ ರಾಷ್ಟ್ರಗಳ ಆರ್ಥಿಕತೆಗೆ ಪೆಟ್ಟು ನೀಡುವ ಉದ್ದೇಶ ಹೊಂದಿತ್ತು. ಇರಾನ್ ಗುರಿಯಾಗಿಸಿಕೊಂಡ ಯಾವುದೇ ಏಕಪಕ್ಷೀಯ ದಾಳಿ, ಪ್ರಾಂತೀಯ ಶಾಂತಿಗೆ ಭಂಗ ತರುತ್ತದೆ ಮತ್ತು ಜಾಗತಿಕ ಆರ್ಥಿಕತೆಯ ಮೇಲೆ ಪರಿಣಾಮ ಬೀರಲಿದೆ ಎಂಬ ಸಂದೇಶವನ್ನು ಇರಾನ್ ರವಾನಿಸಿತು.

ನಂತರ ಇರಾನ್ ಬಳಸಿದ್ದು ಹೊರ್ಮುಜ್ ಎಂಬ ಬ್ರಹ್ಮಾಸ್ತ್ರ. ಪ್ರಪಂಚದ ಒಟ್ಟು ತೈಲ ಮತ್ತು ನೈಸರ್ಗಿಕ ಅನಿಲದ ಶೇ 20ರಷ್ಟು ಪ್ರಮಾಣವು ಹೊರ್ಮುಜ್ ಮೂಲಕ ಹಾದುಹೋಗುತ್ತದೆ. ಈ ಜಲಸಂಧಿಯ ಮೂಲಕ ಹಾದುಹೋಗುವ ಹಡಗುಗಳ ಮೇಲೆ ದಾಳಿ ಮಾಡುವುದಾಗಿ ಇರಾನ್ ಹೇಳಿದಾಗ ತೈಲ ಉತ್ಪಾದಕ ರಾಷ್ಟ್ರಗಳು ಚಿಂತೆಗೀಡಾದವು. ಸಂಗ್ರಹಿಸಲು ಸಾಧ್ಯವಾಗದ ತೈಲ ಉತ್ಪಾದನೆ ಕಡಿತಗೊಳಿಸಿದವು. ಪರಿಣಾಮವಾಗಿ, ತೈಲದ ಬೆಲೆ ಹೆಚ್ಚಿತು.

ಹೊರ್ಮುಜ್ ನಿರ್ಬಂಧ ಅಮೆರಿಕದ ಮೇಲೆ ತಕ್ಷಣಕ್ಕೆ ಪರಿಣಾಮ ಬೀರಲಿಲ್ಲ. ಏಕೆಂದರೆ, ಅಮೆರಿಕ ಪೆಟ್ರೋಲಿಯಂ ಉತ್ಪನ್ನಗಳ ನಿವ್ವಳ ರಫ್ತುದಾರ ರಾಷ್ಟ್ರ. ನಂತರ ಇರಾನ್ ಹೊರ್ಮುಜ್ ಮೂಲಕ ಆಯ್ದ ತೈಲ ಹಡಗುಗಳನ್ನು ಬಿಡುವ ನಿರ್ಧಾರ ಪ್ರಕಟಿಸಿತು. ಭಾರತ ಮತ್ತು ಚೀನಾದ ಹಡಗುಗಳಿಗೆ ವಿನಾಯಿತಿ ದೊರೆಯಿತು. ಇದು ಒಂದು ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಒಡೆಯುವ ತಂತ್ರವಾಗಿತ್ತು. ಮೊದಲನೆಯದಾಗಿ, ತೈಲ ಬಳಕೆದಾರ ರಾಷ್ಟ್ರಗಳು ಇರಾನ್ ಜೊತೆ ಮಾತುಕತೆಗೆ ಮುಂದಾದವು. ಇರಾನ್ ಈ ಮಾತುಕತೆಯ ವೇಳೆ ಅನುಕಂಪ ಗಿಟ್ಟಿಸುವ ಹಾಗೂ ತನ್ನ ಹಿತಾಸಕ್ತಿಯನ್ನು ಮುಂದು ಮಾಡುವ ಕೆಲಸ ಮಾಡಿತು. ಎರಡನೆಯದಾಗಿ, ಜಗತ್ತಿನ ಇತರ ದೇಶಗಳಿಗೆ ಯುದ್ಧದ ಬಿಸಿ ತಾಗುವಂತೆ ಮಾಡಿ ಅಮೆರಿಕದ ಮೇಲೆ ಒತ್ತಡ ಹೆಚ್ಚುವಂತೆ ಮಾಡುವುದರಲ್ಲಿ ಇರಾನ್ ಯಶಸ್ವಿಯಾಯಿತು.

ಈ ಯುದ್ಧ ಕೆಲವು ಸಂಗತಿಗಳನ್ನು ಸ್ಪಷ್ಟಗೊಳಿಸಿದೆ. ಆಧುನಿಕ ತಂತ್ರಜ್ಞಾನದ ದುಬಾರಿ ಬೆಲೆಯ ಯುದ್ಧ ವಿಮಾನಗಳನ್ನು ಹಾಗೂ ಶಸ್ತ್ರಾಸ್ತ್ರಗಳನ್ನು ಇರಾನ್ ವಿರುದ್ಧ ಅಮೆರಿಕ ಬಳಸುತ್ತಿದೆ. ಆದರೆ, ಇರಾನ್ ಕ್ಷಿಪಣಿಗಳೊಂದಿಗೆ ಕಡಿಮೆ ಬೆಲೆಯ ಡ್ರೋನ್‌ಗಳನ್ನು ಬಳಸಿ ಅಮೆರಿಕ ಮತ್ತು ಇಸ್ರೇಲಿನ ಶಸ್ತ್ರ ಪ್ರಾಬಲ್ಯಕ್ಕೆ ಸವಾಲು ಎಸೆದಿದೆ. ಅಧಿಕೃತವಾಗಿ ಒಪ್ಪಿಕೊಳ್ಳದಿದ್ದರೂ ಅಮೆರಿಕದ 16ಕ್ಕೂ ಹೆಚ್ಚು ಯುದ್ಧ ವಿಮಾನಗಳು ನಾಶವಾಗಿವೆ ಎಂಬ ವರದಿಗಳಿವೆ. ಯುದ್ಧದಲ್ಲಿ ತಂತ್ರಗಾರಿಕೆ ನಿರ್ಣಾಯಕವಾಗುತ್ತದೆಯೇ ಹೊರತು ಬರೀ ಆಧುನಿಕ ಶಸ್ತ್ರಾಸ್ತ್ರಗಳಲ್ಲ.

ಮುಖ್ಯವಾಗಿ ಅಮೆರಿಕಕ್ಕೆ ತನ್ನ ಉದ್ದೇಶದ ಕುರಿತು ಸ್ಪಷ್ಟತೆ ಇದ್ದಂತೆ ಕಾಣುತ್ತಿಲ್ಲ. ಮೊದಲಿಗೆ ಅಮೆರಿಕ, ಇರಾನ್‌ನ ಪರಮಾಣು ಶಸ್ತ್ರಾಸ್ತ್ರಗಳನ್ನು ನಾಶಗೊಳಿಸುವುದು, ಖಂಡಾಂತರ ಕ್ಷಿಪಣಿ ಸಾಮರ್ಥ್ಯವನ್ನು ದುರ್ಬಲಗೊಳಿಸುವುದು, ಪಶ್ಚಿಮ ಏಷ್ಯಾದಲ್ಲಿ ಸಕ್ರಿಯವಾಗಿರುವ ಉಗ್ರ ಸಂಘಟನೆಗಳಿಗೆ ಇರಾನ್‌ನ ಬೆಂಬಲವನ್ನು ಕೊನೆಗೊಳಿಸುವುದು ಮತ್ತು ಇರಾನ್ ಜನರನ್ನು ದೇವಪ್ರಭುತ್ವ ಆಡಳಿತದಿಂದ ಮುಕ್ತಗೊಳಿಸುವುದು ತನ್ನ ಉದ್ದೇಶ ಎಂದಿತು. 'ಅಲ್ಲಿನ ಜನ ಆಡಳಿತದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಅಮೆರಿಕ ಜನಾಂದೋಲನದ ಪರವಾಗಿದೆ' ಎನ್ನಲಾಗಿತ್ತು. ಆದರೆ, ಖಮೇನಿ ಹತ್ಯೆಯ ನಂತರದ ಒಂದು ತಿಂಗಳ ಅವಧಿಯಲ್ಲಿ ಅಮೆರಿಕದ ನಿರೀಕ್ಷೆಯಂತೆ ಇರಾನ್‌ನ ಜನರು ದಂಗೆ ಎದ್ದಿಲ್ಲ!

ಇರಾನ್ ವಿರುದ್ಧದ ಕಾರ್ಯಾಚರಣೆಯಲ್ಲಿ ನ್ಯಾಟೊ ರಾಷ್ಟ್ರಗಳು ಕೈ ಜೋಡಿಸುತ್ತವೆ ಎಂದು ಅಮೆರಿಕ ನಿರೀಕ್ಷಿಸಿತ್ತು. ಆದರೆ, ಈ ಯುದ್ಧ ಅಂತರರಾಷ್ಟ್ರೀಯ ಕಾನೂನಿಗೆ ಹೊಂದಿಕೆಯಾಗುವುದಿಲ್ಲ ಎಂದು ಫ್ರಾನ್ಸ್ ಪ್ರತಿಕ್ರಿಯಿಸಿತು. ಇತರ ನ್ಯಾಟೊ ರಾಷ್ಟ್ರಗಳ ಪ್ರತಿಕ್ರಿಯೆ ಭಿನ್ನವಾಗಿರಲಿಲ್ಲ. ಈ ನಿರ್ಧಾರ ಅಮೆರಿಕವನ್ನು ಕೆರಳಿಸಿತು. ಅಮೆರಿಕವನ್ನು ಹೊರತುಪಡಿಸಿದ ನ್ಯಾಟೊದ ಸೇನಾ ಸಾಮರ್ಥ್ಯದ ಕುರಿತು ಟ್ರಂಪ್ ಕುಹಕವಾಡಿದರು. 'ಇದು ನಮ್ಮ ಯುದ್ಧವಲ್ಲ ಎಂದು ನ್ಯಾಟೊ ಹೇಳುತ್ತದೆ, ಉಕ್ರೇನ್ ಅಮೆರಿಕದ ಯುದ್ಧವೂ ಅಲ್ಲ' ಎಂದು ಶ್ವೇತಭವನ ಕಿಡಿಕಾರಿತು.

ನ್ಯಾಟೊ ಸೇನೆಗೆ ಅಮೆರಿಕ ಹೆಚ್ಚಿನ ಶಕ್ತಿ ತುಂಬುತ್ತದೆ ಎನ್ನುವುದು ನಿಜವಾದರೂ, ಯುದ್ಧವನ್ನು ನಿರ್ವಹಿಸಲು ಸೇನಾಬಲವೊಂದೇ ಸಾಕಾಗುವುದಿಲ್ಲ. ಬೆಂಗಾವಲು ಕಾರ್ಯಾಚರಣೆ, ಗುಪ್ತಚರ ಮಾಹಿತಿ ಮತ್ತು ವಿವಿಧ ಪ್ರಾಂತ್ಯಗಳಲ್ಲಿ ಸೇನಾನೆಲೆಗಳು ಬೇಕಾಗುತ್ತವೆ. ಈ ಎಲ್ಲದರ ಹೊರತಾಗಿ ಪ್ರತ್ಯೇಕವಾಗಿ ಹೋರಾಡಿದರೆ ಅಮೆರಿಕ ಅಷ್ಟರ ಮಟ್ಟಿಗೆ ಶಕ್ತಿಹೀನವಾಗುತ್ತದೆ.


ಇಸ್ರೇಲ್ ಸೇನೆಯೂ ಒತ್ತಡಕ್ಕೆ ಒಳಗಾಗಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. ಅಕ್ಟೋಬರ್ 7, 2023ರ ಇಸ್ರೇಲ್ ಮೇಲಿನ ಹಮಾಸ್ ದಾಳಿಯ ಬಳಿಕ ಅದು ನಿರಂತರವಾಗಿ ಕಾರ್ಯಾಚರಣೆಗಳಲ್ಲಿ ತೊಡಗಿದೆ. ಪ್ರಸ್ತುತ ಸೈನಿಕರ ಕೊರತೆಯನ್ನು ಇಸ್ರೇಲ್ ಎದುರಿಸುತ್ತಿದೆ ಎಂದು 'ಟೈಮ್ಸ್ ಆಫ್ ಇಸ್ರೇಲ್' ವರದಿ ಮಾಡಿದೆ.

ಈ ಹಿಂದೆ ಇರಾಕ್ ಮತ್ತು ಅಫ್ಗಾನಿಸ್ತಾನಗಳಲ್ಲಿ ಸುದೀರ್ಘ ಸೇನಾ ಕಾರ್ಯಾಚರಣೆ ನಡೆಸಿ ಅಮೆರಿಕ ಗಳಿಸಿದ್ದು ಏನು ಎಂಬ ವಾಸ್ತವ ಟ್ರಂಪ್ ಅವರಿಗೆ ತಿಳಿದಿದೆ. ಇರಾನ್ ಜೊತೆಗೆ ಅವರು ದೀರ್ಘಕಾಲದ ಯುದ್ಧವನ್ನು ಎದುರು ನೋಡುತ್ತಿರುವಂತೆ ಕಾಣುವುದಿಲ್ಲ. ಆದರೆ, ಈ ಯುದ್ಧ ಇನ್ನೂ ಕೆಲಕಾಲ ಮುಂದುವರಿದರೆ ಉತ್ತಮ ಎಂದು ಅಪೇಕ್ಷಿಸುತ್ತಿರುವ ರಾಷ್ಟ್ರಗಳೂ ಇರುವಂತಿದೆ.

ಈ ಹಿಂದೆ ಉಕ್ರೇನ್ ಮೇಲಿನ ದಾಳಿಯ ವೇಳೆ ರಷ್ಯಾಕ್ಕೆ ಇರಾನ್ ಡ್ರೋನ್‌ಗಳನ್ನು ಪೂರೈಸಿತ್ತು. ನಂತರ ಡ್ರೋನ್ ಮೂಲಮಾದರಿಯನ್ನು ಇರಾನ್‌ನಿಂದ ಪಡೆದುಕೊಂಡ ರಷ್ಯಾ, ಅದನ್ನು ಮತ್ತಷ್ಟು ಸುಧಾರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದಿಸಲು ಪ್ರಾರಂಭಿಸಿತು. ಇದೀಗ ರಷ್ಯಾದಿಂದ ಡ್ರೋನ್ ಮತ್ತು ಗುಪ್ತಚರ ಮಾಹಿತಿಯನ್ನು ಇರಾನ್ ಪಡೆದುಕೊಳ್ಳುತ್ತಿದೆ. ರಷ್ಯಾ ಹಲವು ರೂಪಗಳಲ್ಲಿ ಈ ಯುದ್ಧದ ಫಲಾನುಭವಿಯಾಗಿದೆ. ಅಮೆರಿಕ ಮತ್ತು ಇತರ ರಾಷ್ಟ್ರಗಳ ಗಮನ ಉಕ್ರೇನ್‌ನಿಂದ ಇರಾನ್ ಕಡೆಗೆ ತಿರುಗಿದೆ. ಅಮೆರಿಕ ತನ್ನ ಶಸ್ತ್ರಾಸ್ತ್ರಗಳನ್ನು ಇರಾನ್ ಯುದ್ಧಕ್ಕೆ ಹೆಚ್ಚು ಬಳಸಿದರೆ, ಅಷ್ಟರ ಮಟ್ಟಿಗೆ ಉಕ್ರೇನ್ ಬತ್ತಳಿಕೆ ಬರಿದಾಗುತ್ತದೆ. ಹೊರ್ಮುಜ್ ಬಿಕ್ಕಟ್ಟಿನಿಂದಾಗಿ ಉಂಟಾದ ತೈಲ ಪೂರೈಕೆಯಲ್ಲಿನ ವ್ಯತ್ಯಯವನ್ನು ಸರಿದೂಗಿಸಲು ಅಮೆರಿಕ, ರಷ್ಯಾದ ತೈಲದ ಮೇಲಿನ ನಿರ್ಬಂಧಗಳನ್ನು ತಾತ್ಕಾಲಿಕವಾಗಿ ತೆಗೆದುಹಾಕಿದೆ. ಇದು ರಷ್ಯಾದ ಆರ್ಥಿಕತೆಗೆ ಇಂಬು ನೀಡಿದೆ.

ಹೊರ್ಮುಜ್ ಮೂಲಕ ಇರಾನ್ ಚೀನಾದ ಹಡಗುಗಳನ್ನು ಬಿಡುತ್ತಿದೆ. ಚೀನಾದಿಂದ ತೈಲ ಪಾವತಿಗಳನ್ನು ನಿರಂತರವಾಗಿ ಪಡೆಯುವುದು ಇರಾನ್‌ನ ಉದ್ದೇಶ. ಅಮೆರಿಕ ದೀರ್ಘಕಾಲದ ಯುದ್ಧದಲ್ಲಿ ತೊಡಗಿದರೆ ಅದು ಅಮೆರಿಕದ ಸಂಪನ್ಮೂಲಗಳನ್ನು ಮತ್ತಷ್ಟು ಬರಿದು ಮಾಡುತ್ತದೆ. ಚೀನಾ ಜೊತೆಗಿನ ವಾಣಿಜ್ಯ ಸಮರದಿಂದ ಅಮೆರಿಕ ವಿಮುಖವಾಗುತ್ತದೆ. ಹಾಗಾಗಿ, ಇರಾನ್ ಯುದ್ಧ ಚೀನಾದ ದೃಷ್ಟಿಯಿಂದ 'ಅವಕಾಶ'.

ಯುದ್ಧ ಕೊನೆಗೊಳಿಸಲು ಇರಾನ್ ಮುಂದಿಟ್ಟಿರುವ ಷರತ್ತುಗಳನ್ನು ಗಮನಿಸಿ: ಪಶ್ಚಿಮ ಏಷ್ಯಾದಲ್ಲಿರುವ ಅಮೆರಿಕದ ಸೇನಾನೆಲೆಗಳನ್ನು ತೆರವುಗೊಳಿಸಬೇಕು. ಇರಾನ್ ಮೇಲಿನ ಆರ್ಥಿಕ ನಿರ್ಬಂಧ ಹಾಗೂ ಆಸ್ತಿಗಳ ಮುಟ್ಟುಗೋಲನ್ನು ರದ್ದು ಮಾಡಬೇಕು. ಭದ್ರತಾ ಖಾತರಿಯನ್ನು ನೀಡಬೇಕು. ಯುದ್ಧದ ಹಾನಿಯನ್ನು ಆರ್ಥಿಕವಾಗಿ ಕಟ್ಟಿಕೊಡಬೇಕು. ಹೊರ್ಮುಜ್ ಜಲಸಂಧಿಯ ಮೇಲೆ ಇರಾನ್‌ನ ಸಾರ್ವಭೌಮತ್ವವನ್ನು ಪುರಸ್ಕರಿಸಬೇಕು. ಈ ಷರತ್ತುಗಳಿಗೆ ಅಮೆರಿಕ ಒಪ್ಪಲಾರದು ಎಂಬುದು ಇರಾನಿಗೆ ತಿಳಿಯದ್ದಲ್ಲ. ಒಂದು ಯುದ್ಧಕ್ಕೆ ಹಲವು ಆಯಾಮಗಳು ಇರುತ್ತವೆ. ಒಂದು ಯುದ್ಧ ಮತ್ತೊಂದು ಯುದ್ಧಕ್ಕೆ ತಳಕು ಹಾಕಿಕೊಂಡ ಉದಾಹರಣೆ ಇದು ಮೊದಲಲ್ಲ, ಕೊನೆಯದೂ ಆಗಲಿಕ್ಕಿಲ್ಲ.



ವಾಚಕರ ವಾಣಿ

ಮುಟ್ಟಿನ ರಜೆ: ಅಪಸ್ವರ ಅಸಮರ್ಥನೀಯ

ಸಹಜ ಜೈವಿಕ ಪ್ರಕ್ರಿಯೆ ಆಗಿರುವ ಋತುಚಕ್ರದ ಬಗ್ಗೆ ಅಸಹಜ ಭಾವನೆ ಇರುವುದರಿಂದಲೇ ನಾನಾ ರೀತಿಯ ಆಚರಣೆ, ಮೈಲಿಗೆ, ಕೊಳಕು ಎಂಬೆಲ್ಲಾ ನಂಬಿಕೆಗಳು ಹುಟ್ಟಿಕೊಂಡಿವೆ. ಪರಿಸರ ನಾಶ, ಜೀವನಶೈಲಿಯಲ್ಲಿ ಅಗಾಧ ಬದಲಾವಣೆಯಾಗಿದೆ. ಮೂಢನಂಬಿಕೆಗಳಿಂದಲೂ ಹೆಣ್ಣುಮಕ್ಕಳು ಋತುಚಕ್ರದ ಸಮಯದಲ್ಲಿ ಸಮಸ್ಯೆ ಎದುರಿಸುತ್ತಾರೆ. ಉದ್ಯೋಗಸ್ಥೆಯರು ಆ ಸಮಯದಲ್ಲಿ ವಿಶ್ರಾಂತಿ ಬಯಸುತ್ತಾರೆ. ಹಾಗಾಗಿ, ಸರ್ಕಾರವು ಮುಟ್ಟಿನ ರಜೆ ಕೊಡಮಾಡಿರುವುದು ಖುಷಿಪಡುವ ಸಂಗತಿ. ಬೇಡ ಎನ್ನುವವರು ಪಡೆದುಕೊಳ್ಳದಿದ್ದರೆ ಆಯಿತು. ಕೆಲವು ಇಲಾಖೆಗಳಲ್ಲಿ ಕಾನೂನಿನಡಿ ಇಲ್ಲದ ನೆಪಹೇಳಿ ತಾತ್ಕಾಲಿಕ ನಿಯಮದಡಿ ದುಡಿಯುವ ಮಹಿಳೆಯರಿಗೆ ರಜೆ ನಿರಾಕರಿಸಲಾಗುತ್ತಿದೆ. ಇದಕ್ಕೆ ಅತಿಥಿ ಉಪನ್ಯಾಸಕರು ಉದಾಹರಣೆ ಆಗಿದ್ದಾರೆ. ರಜೆಯ ಬಗ್ಗೆ ಪ್ರತ್ಯೇಕ ಉಲ್ಲೇಖವಿಲ್ಲ ಎಂದು ವಂಚಿಸಲಾಗುತ್ತಿದೆ. ಇಂಥ ಮನಃಸ್ಥಿತಿಯವರು ನಾಚಿಕೆ ಪಟ್ಟುಕೊಳ್ಳಬೇಕೇ ಹೊರತು ಮಹಿಳೆಯರಲ್ಲ.

ವೃಂದಾ ಹೆಗಡೆ, ಸಾಗರ

ಆಧುನಿಕ ಪಾಳೆಗಾರಿಕೆಯು ಶೋಭೆಯಲ್ಲ

'**ಶಾಸಕರಿಗೇಕೆ** ವಿಐಪಿ ಕೋಟಾ' ಲೇಖನವು (ಲೇ: ಎಸ್. ಸುರೇಶ್‌ಕುಮಾರ್, ಪ್ರ.ವಾ., ಮಾರ್ಚ್ 31) ಜನಪ್ರತಿನಿಧಿಗಳ ಹಪಹಪಿಯನ್ನು ತೆರೆದಿಟ್ಟಿದೆ. ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಅಭಿಮಾನಿಗಳು ಬಲಿಯಾಗಿದ್ದನ್ನು ಮರೆಯುವಂತಿಲ್ಲ. ಆಗ ಯಾವೊಬ್ಬ ಶಾಸಕನೂ ಕ್ರಿಕೆಟ್ ಹುಚ್ಚಿಗೆ ಕಡಿವಾಣ ಹಾಕಬೇಕೆಂದು ಹೇಳಲಿಲ್ಲ. ಈಗ ಐಪಿಎಲ್ ಪಂದ್ಯ ವೀಕ್ಷಿಸುವ ಆಸೆಯಿಂದ ಪುಕ್ಕಟೆಯಾಗಿ ಮೂರು ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ. ಶ್ರೀಸಾಮಾನ್ಯನಂತೆ ನಾವು ಸರದಿಯಲ್ಲಿ ನಿಲ್ಲಬೇಕೆ? ಎಂದು ಗತ್ತು ತೋರುವುದು ಆಧುನಿಕ ಪಾಳೆಗಾರಿಕೆಯಲ್ಲದೆ ಬೇರೇನಲ್ಲ. ಜನಪ್ರತಿನಿಧಿಗಳು ಜನರೊಂದಿಗೆ ಬಂಧುತ್ವ ಇಟ್ಟುಕೊಳ್ಳದೆ ದರ್ಪ ಮೆರೆಯುತ್ತಿದ್ದಾರೆ.

ಡಿ. ರಾಮನಮಲಿ, ಹರಪನಹಳ್ಳಿ

ಯುದ್ಧ ನಿಲ್ಲಿಸಲು ಪ್ರಧಾನಿ ಶಕ್ತರಲ್ಲವೆ?

ಪಶ್ಚಿಮ ಏಷ್ಯಾದ ಸಂಘರ್ಷದಿಂದಾಗಿ ಅನಿರೀಕ್ಷಿತ ಸವಾಲುಗಳು ಎದುರಾಗಲಿವೆ; ಕೋವಿಡ್ ಪರಿಸ್ಥಿತಿ ಎದುರಿಸಿದಂತೆ ನಾವೆಲ್ಲರೂ ಒಗ್ಗಟ್ಟಿನಿಂದ ಇರಬೇಕೆಂದು ಪ್ರಧಾನಿ ನರೇಂದ್ರ ಮೋದಿ ಹೇಳಿರುವುದು ಹಾಸ್ಯಾಸ್ಪದ. ಜನಸಾಮಾನ್ಯರೇ ಎಲ್ಲಾ ಸಂಕಷ್ಟ ಎದುರಿಸುವುದಾದರೆ ಸರ್ಕಾರಗಳು ಮತ್ತು ಜನಪ್ರತಿನಿಧಿಗಳ ಹೊಣೆಗಾರಿಕೆಯಾದರೂ ಏನು? ಕೋವಿಡ್ ಸಾಂಕ್ರಾಮಿಕ ರೋಗವಾಗಿತ್ತು. ಅದು ಹೇಗೆ ಹರಡುತ್ತದೆಂಬ ಬಗ್ಗೆ ಯಾರಿಗೂ ಅರಿವು ಇರಲಿಲ್ಲ. ಕೊಲ್ಲಿ ಯುದ್ಧ ನಿಲ್ಲಿಸಲು ಮೋದಿ ಅವರು ಶಕ್ತರಲ್ಲವೆ?

ಶಿವಾನಿ, ಶಿವಮೊಗ್ಗ

ಗಾಂಧಿ ಮಾತು ಮತ್ತು ಕೊಲ್ಲಿ ಯುದ್ಧಕಾಲ

ಯುದ್ಧದಲ್ಲಿ ಗೆದ್ದವನು ಸೋತ; ಸೋತವನು ಸತ್ತ ಎಂಬ ಮಾತಿದೆ. ಆದರೆ, ಕೊಲ್ಲಿ ಯುದ್ಧದಲ್ಲಿ ನಾವು ಯುದ್ಧ ಮಾಡದೆ ಸೋಲುತ್ತಿದ್ದೇವೆ ಮತ್ತು ಸಾಯುತ್ತಿದ್ದೇವೆ. ಇಂತಹ ದುರಿತ ಕಾಲದಲ್ಲಿ ಮಹಾತ್ಮ ಗಾಂಧೀಜಿಯವರು ಆಗಾಗ್ಗೆ ಹೇಳುತ್ತಿದ್ದ ಮಾತೊಂದು ನೆನಪಾಗುತ್ತಿದೆ. ಪ್ರತಿಯೊಂದು ಹಳ್ಳಿಯೂ ಸ್ವಾವಲಂಬಿಯಾಗಬೇಕು; ತನ್ನ ಅಗತ್ಯಗಳನ್ನು ತಾನೇ ಪೂರೈಸಿಕೊಳ್ಳಬೇಕು ಎನ್ನುವ ಮಾತದು. ಪ್ರಸಕ್ತ ಸನ್ನಿವೇಶದಲ್ಲಿ ಆ ಮಾತು ಎಷ್ಟೊಂದು ಅರ್ಥಪೂರ್ಣ ಎನ್ನಿಸುತ್ತಿದೆ. ಪ್ರತಿಷ್ಠೆಗಾಗಿ ನಡೆಯುತ್ತಿರುವ ಈಗಿನ ಯುದ್ಧದಲ್ಲಿ ಸಂಬಂಧವೇ ಇಲ್ಲದ ನಾವು ದಿನನಿತ್ಯದ ಅಗತ್ಯಗಳನ್ನು ಪೂರೈಸಿಕೊಳ್ಳಲು ಒದ್ದಾಡುತ್ತಿದ್ದೇವೆ. ಇದು ಎಲ್ಲರಿಗೂ ಪಾಠ ಆಗಬೇಕು. ರಾಷ್ಟ್ರಪಿತನ ಮಾತನ್ನು ಸಮಾಜ ಮತ್ತು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ನಾವು ಸಂಪೂರ್ಣ ಸ್ವಾವಲಂಬಿಗಳಾಗುವತ್ತ ಹೆಜ್ಜೆ ಇಡಬೇಕು.

ಜಗದೀಶ್ ಎಚ್.ಬಿ., ಹುಬ್ಬಳ್ಳಿ

ಅಧಿಕಾರ ಗಳಿಕೆಗಾಗಿ ಹಿಂದಿ ಮೇಲೆ ಮೋಹ

ಕನ್ನಡ ಮತ್ತು ಇಂಗ್ಲಿಷ್ ಅನ್ನು ಸ್ಪಷ್ಟವಾಗಿ ಓದಲು, ಬರೆಯಲು ಒದ್ದಾಡುತ್ತಿದ್ದ ಮಕ್ಕಳಿಗೆ ಹಿಂದಿ ಕಲಿತು ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂಬ ನಿಯಮವು ಇದುವರೆಗೂ ಇದ್ದದ್ದು, 'ನೀರಿಳಿಯದ ಗಂಟಲೊಳ್ ಕಡುಬು ತುರುಕಿದಂತೆ' ಆಗಿತ್ತು. ಇದರಿಂದಾಗಿ ಕನ್ನಡ–ಇಂಗ್ಲಿಷ್ ಮತ್ತು ಇತರೆ ಪಠ್ಯ ವಿಷಯಗಳ ಕಲಿಕೆಗೆ ತೊಂದರೆ ಉಂಟಾಗುತ್ತಿತ್ತು. ವಿದ್ಯಾರ್ಥಿಗಳ ಮೇಲಿನ ಹಿಂದಿ ಹೇರಿಕೆಯು ದಕ್ಷಿಣದ ಭಾಷಿಕರ ಮೇಲೆ ಹಿಂದಿಯ ಸವಾರಿಗೆ ಹೆಚ್ಚು ಅನುಕೂಲ ಮಾಡಿಕೊಡುತ್ತಿತ್ತು. ಸರ್ಕಾರದ ಪ್ರಸಕ್ತ ನಿರ್ಧಾರವು ಒಟ್ಟು ಶಿಕ್ಷಣದ ದೃಷ್ಟಿಯಿಂದ ಸ್ವಾಗತಾರ್ಹ. ಈ ನಿರ್ಧಾರ ವಿರೋಧಿಸುತ್ತಿರುವವರು ನಿರ್ದಿಷ್ಟ ರಾಜಕೀಯ ಪಕ್ಷವೊಂದರ ನಾಯಕರು, ಕಾರ್ಯಕರ್ತರಾಗಿದ್ದಾರೆ. ಪಕ್ಷದ ಮೇಲಿನ ಅಭಿಮಾನದಿಂದಲೋ, ಮೇಲಿನವರನ್ನು ಮೆಚ್ಚಿಸುವ ಮೂಲಕ ಅಧಿಕಾರ ಗಳಿಕೆಯ–ಉಳಿಕೆಯ ಸ್ವಾರ್ಥದಿಂದಲೋ ಹಿಂದಿ ಪರವಾಗಿ ಮಾತನಾಡುತ್ತಿರುವುದು ಅಕ್ಷಮ್ಯ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ನೇಮಕಾತಿ ವಿಳಂಬ: ಯುವಜನ ಹೈರಾಣು

'**ನೇರ ನೇಮಕಾತಿ;** ಇನ್ನಷ್ಟು ವಿಳಂಬ' ವರದಿಯು (ಪ್ರ.ವಾ., ಮಾರ್ಚ್ 31) ರಾಜ್ಯ ಸರ್ಕಾರದ ನಿರ್ಲಕ್ಷ್ಯಕ್ಕೆ ಕನ್ನಡಿ ಹಿಡಿದಿದೆ. ಒಟ್ಟು 3.86 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಉಳಿದಿವೆ. ಸರ್ಕಾರವು ಯುವಜನತೆಯ ದುಡಿಯುವ ಸಾಮರ್ಥ್ಯವನ್ನು ಕಡೆಗಣಿಸುತ್ತಿದೆ. ಸಿಬ್ಬಂದಿ ಕೊರತೆಯಿಂದ ಆಡಳಿತ ಯಂತ್ರವು ಅಧಿಕ ಕರ್ತವ್ಯ ಭಾರದ ಒತ್ತಡಕ್ಕೆ ಸಿಲುಕಿದೆ. ಇದರಿಂದ ಸಾರ್ವಜನಿಕರ ಕೆಲಸಗಳು ನಿಗದಿತ ಸಮಯದಲ್ಲಿ ಆಗುತ್ತಿಲ್ಲ. ಸಿದ್ದರಾಮಯ್ಯನವರು ಕುರ್ಚಿ ಉಳಿಸಿಕೊಳ್ಳುವಲ್ಲಿ ಮಗ್ನರಾಗಿದ್ದಾರೆ. ಡಿ.ಕೆ. ಶಿವಕುಮಾರ್ ಅವರು ಸಿಎಂ ಹುದ್ದೆಯತ್ತ ದೃಷ್ಟಿನೆಟ್ಟು ಕಾಲಹರಣ ಮಾಡುತ್ತಿದ್ದಾರೆ. ಮತ್ತೊಂದೆಡೆ ಒಳಮೀಸಲಾತಿಯ ಬಿಕ್ಕಟ್ಟು ತಾರಕಕ್ಕೇರಿದೆ. ಸದ್ಯಕ್ಕೆ ಸಮಸ್ಯೆ ಬಗೆಹರಿಯುವ ಲಕ್ಷಣ ಕಾಣಿಸುತ್ತಿಲ್ಲ. ತ್ವರಿತವಾಗಿ ಪರಿಹಾರ ಹುಡುಕಲು ಸರ್ಕಾರಕ್ಕೂ ಆಸಕ್ತಿ ಇದ್ದಂತಿಲ್ಲ.

ಎಸ್.ಎನ್. ರಮೇಶ್, ಮಂಡ್ಯ

ಚುರುಮುರಿ



ಟಿಕೆಟ್ ಮ್ಯಾಚ್

● ಮಣ್ಣೆ ರಾಜು

'ನಮ್ಮ ಶಾಸಕರು ಐಪಿಎಲ್ 'ಟಿಕೆಟ್ ಮ್ಯಾಚ್' ಗೆದ್ದರೇನ್ರೀ?' ಸುಮಿ ಕೇಳಿದಳು.

'ಗೆದ್ದರು. ಕ್ರೀಡಾಸಕ್ತ ಶಾಸಕರಿಗೆ ಮೂರು ಐಪಿಎಲ್ ಟಿಕೆಟ್ ಕೊಡ್ತಾರಂತೆ, ಮುಂದಿನ ದಿನಗಳಲ್ಲಿ ಇನ್ನಷ್ಟು ಮ್ಯಾಚ್‌ಗಳಿಗೆ ಟಿಕೆಟ್ ಕೊಟ್ಟು ಶಾಸಕರಲ್ಲಿ ಕ್ರಿಕೆಟ್ ಕ್ರೇಜ್ ಬೆಳೆಸುತ್ತಾರಂತೆ' ಎಂದ ಶಂಕ್ರಿ.

'ಆಡಳಿತ ಪಕ್ಷವನ್ನು ಎಲ್‌ಬಿಡಬ್ಲ್ಯುಗೆ ಕೆಡಹುವುದು ಹೇಗೆ, ಸರ್ಕಾರವನ್ನು ಡಿಫೆಂಡ್ ಮಾಡಿಕೊಳ್ಳಲು ಡಿಫೆನ್ಸ್ ಆಡುವುದು ಹೇಗೆ, ಬೌಂಡರಿ, ಸಿಕ್ಸರ್ ಬಾರಿಸಿ ಗಮನ ಸೆಳೆಯೋದು ಹೇಗೆ, ವೈಡ್-ನೋ ಬಾಲ್ ಹಾಕಿ ಕಳ್ಳಾಟ ಆಡುವುದು ಹೇಗೆ ಎಂಬುದನ್ನು ಅಸೆಂಬ್ಲಿ ಆಟದ ಶಾಸಕರು ಕ್ರಿಕೆಟ್‌ನಿಂದ ಕಲಿಯಬಹುದು'.

'ಏನಾದರೂ ಕಲಿಯಲಿ, ಈ ಬಾರಿಯೂ ಆರ್‌ಸಿಬಿ ಕಪ್ ಗೆಲ್ಲಬೇಕು ಕಣ್ರೀ'.

'ಗೆಲ್ತಾರೆ. ಕಪ್ ಗೆದ್ದರೆ ಕಳೆದ ಬಾರಿಯ ಸೆಲೆಬ್ರೇಷನ್ ನಂತೆ ಸರ್ಕಾರ ತಪ್ಪು ಮಾಡಬಾರದು. ಅಭಿಮಾನಿಗಳನ್ನು ಕಂಟ್ರೋಲ್ ಮಾಡೋದು ಕಷ್ಟವಾದರೆ ಆರ್‌ಸಿಬಿ ತಂಡವನ್ನು ವಿಧಾನಸೌಧಕ್ಕೆ ಆಹ್ವಾನಿಸಿ, ಸನ್ಮಾನಿಸಿ ಮಂತ್ರಿ, ಶಾಸಕರು, ಅಧಿಕಾರಿಗಳು ಆಟಗಾರರ ಜೊತೆ ತಮ್ಮ ಕುಟುಂಬದವರ ಫೋಟೊ ತೆಗೆಸಿಕೊಳ್ಳಲಿ ಸಾಕು!'

'ಕನ್ನಡಿಗರ ಅಭಿಮಾನಕ್ಕೆ ಮನಸೋತಿರುವ ವಿರಾಟ್ ಕೊಹ್ಲಿ ಕನ್ನಡ ಕಲಿಯಲು ಆಸಕ್ತಿ ತೋರಿದ್ದಾರಂತೆ. ಆರ್‌ಸಿಬಿ ತಂಡ ಕನ್ನಡ ಕಲಿತರೆ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಕನ್ನಡ ಬೆಳಗುತ್ತದೆ!'

'ನಮ್ಮಲ್ಲಿ ಈಗ ತೃತೀಯ ಭಾಷೆ ಹಿಂದಿ ಆಟಕ್ಕುಂಟು ಲೆಕ್ಕಕ್ಕಿಲ್ಲ, ಪಾಠಕ್ಕುಂಟು ಅಂಕಕ್ಕಿಲ್ಲ'.

'ಹಿಂದಿ ಭಾಷೆಗೆ ಪರೀಕ್ಷೆ ನಡೆಸಿದರೂ ಅಂಕ ಕೊಡುವುದಿಲ್ಲವಂತೆ, ಗ್ರೇಡ್ ಕೊಡ್ತಾರಂತೆ. ಇದರಿಂದ ಹಿಂದಿ ಟೀಚರ್‌ಗಳನ್ನು ಡಿ-ಗ್ರೇಡ್ ಮಾಡಿದಂತೆ ಆಗುವುದಿಲ್ಲವೆ?'

'ಹಾಗೇನೂ ಆಗೋದಿಲ್ಲ. ಪಿ.ಟಿ. ಟೀಚರ್‌ಗಳು ಮಕ್ಕಳಿಗೆ ಆಟದ ಪಾಠ ಕಲಿಸುತ್ತಾರೆ, ಆದರೂ ಪಿ.ಟಿ. ಸಬ್ಜೆಕ್ಟ್‌ಗೆ ಪರೀಕ್ಷೆ ಇರೋದಿಲ್ಲ, ಹಾಗಂತ ಪಿ.ಟಿ. ಟೀಚರ್‌ಗಳ ಕಿಮ್ಮತ್ತು ಕಮ್ಮಿಯಾಗಿದೆಯಾ? ಹಿಂದಿ ಟೀಚರ್‌ಗಳೂ ಸಮಾಧಾನ ಮಾಡಿಕೊಳ್ಳಬೇಕು...' ಎಂದ ಶಂಕ್ರಿ.

ಸಂಗತ

ರಂಜನೆಯ ಅರಿವಳಿಕೆ ತೆಕ್ಕೆಯಲ್ಲಿ ಎಲ್ಲೆಲ್ಲು ನಗು!


ನಗುವುದಕ್ಕೊಂದು ದಿನ ಎನ್ನುವ ಪರಿಕಲ್ಪನೆ ಹಳತಾಗಿದೆ. 'ಅನುಕ್ಷಣವೂ ನಗು' ಈಗಿನ ಸಿದ್ಧಾಂತ. ಇಡೀ ಲೋಕವೇ ನಮ್ಮನ್ನು ರಂಜಿಸಲು ತುದಿಗಾಲಲ್ಲಿ ನಿಂತಿದೆ.

● ಜಿ. ದೇವಿ

ದೇಶದ ಈ ಹೊತ್ತಿನ ಆಸಕ್ತಿಯ ಕೇಂದ್ರ ಯಾವುದು? ನಿಸ್ಸಂಶಯವಾಗಿ ಹೇಳಬಹುದಾದ ಉತ್ತರ– ಮನರಂಜನೆ.

ಇದು ಮಾಹಿತಿ ತಂತ್ರಜ್ಞಾನ ಯುಗ ಎಂದು ಅನೇಕರು ಹೆಮ್ಮೆಯಿಂದ ಹೇಳುವುದಿದೆ. ಇದು ಮಾನವೀಯತೆಯ ಕೊರತೆಯ ಯುಗ ಎಂದು ಕೆಲವರು ಗೊಣಗುವುದಿದೆ. ಹೌದು, ಇದು ಮಾಹಿತಿ ತಂತ್ರಜ್ಞಾನದ ಉತ್ತುಂಗದ ಕಾಲ. ಕೃತಕ ಬುದ್ಧಿಮತ್ತೆ ನಮ್ಮ ಮೈಮನಗಳನ್ನು ಆವರಿಸಿಕೊಂಡಿದೆ. ಬಾಹ್ಯಾಕಾಶ ಹಿತ್ತಲಿನಂತೆ ಭಾಸವಾಗುತ್ತಿದೆ. ಶ್ರೀಕೃಷ್ಣನು ತನ್ನ ತಾಯಿಗೆ ಬಾಯಿಯಲ್ಲಿ ತೋರಿದ ಬ್ರಹ್ಮಾಂಡ ಈಗ ಮೊಬೈಲ್ ಫೋನ್ ರೂಪದಲ್ಲಿ ನಮ್ಮ ಅಂಗೈನಲ್ಲಿ ತೆರೆದುಕೊಂಡಿದೆ. ಈ ತಂತ್ರಜ್ಞಾನದ ಆಡುಂಬೊಲದಲ್ಲಿ ಮುನ್ನೆಲೆಯಲ್ಲಿರಲು ಭಾರತವೂ ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಹೀಗೆ, ಭೂಗೋಳದ ಎಲ್ಲ ದಿಕ್ಕುಗಳನ್ನೂ ಮೂಲೆಮುಡುಕುಗಳನ್ನೂ ತಂತ್ರಜ್ಞಾನದ ಕಬಂಧಬಾಹುಗಳೇ ಆವರಿಸಿಕೊಂಡಿರುವ ಸಂದರ್ಭದಲ್ಲಿ, ನಮ್ಮ ದೇಶದ ಈ ಹೊತ್ತಿನ ಆಸಕ್ತಿಯ ಕೇಂದ್ರವಾಗಿ ತಂತ್ರಜ್ಞಾನ ಇರಬೇಕಲ್ಲವೆ?

ಯುವಶಕ್ತಿಯಿಂದ ತುಂಬಿತುಳುಕುತ್ತಿರುವ ದೇಶ ತಂತ್ರಜ್ಞಾನಮುಖಿ ಆಗಿರುವುದು ಸತ್ಯ. ಆದರೆ, ಆ ತಂತ್ರಜ್ಞಾನ ಯಾವುದಕ್ಕೆ ಬಳಕೆಯಾಗುತ್ತಿದೆ? ಒಂದು ಸಣ್ಣ ಸಮೂಹವು, ಸಮಷ್ಟಿಗೆ ಅಥವಾ ದೇಶದ ಉನ್ನತಿಗೆ ಪೂರಕವಾಗುವ ಚಟುವಟಿಕೆಗಳಲ್ಲಿ ವಿಜ್ಞಾನ- ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿರಬಹುದು. ಆದರೆ, ಈ ದೇಶದ ಬಹುತೇಕರು ತಂತ್ರಜ್ಞಾನದ ಫಲವನ್ನು ಕಾಣುತ್ತಿರುವುದು ಮನರಂಜನೆಯಲ್ಲಿ. ಹೊಸ ಚಿಗುರಿನಿಂದ ಹಳೆಬೇರಿನವರೆಗೆ, ಎಲ್ಲರೂ ಮನರಂಜನಾ ಜಗತ್ತಿನಲ್ಲಿ ವ್ಯಸ್ತರು.



ನಾಳೆಯ ಕಣ್ಮಣಿಗಳಾದ ಇಂದಿನ ಕಂದಮ್ಮಗಳ ಪರಿಸ್ಥಿತಿ ನೋಡಿ. ಅವರಿಗೆ ಜೋಗುಳದ ಪರಿಚಯವಿಲ್ಲ. ಮೊಬೈಲ್ ಫೋನಿನ ಉಲಿಯೇ ಲಾಲಿಹಾಡು. ಆಕಾಶದಲ್ಲಿನ ಚಂದಮಾಮನನ್ನು ತೋರಿಸಿ ಉಣಿಸುವ ಕಾಲವೀಗ ಹಳತು. ಮೊಬೈಲ್ ಫೋನಿನ ಬಿಂಬಗಳು ಹಾಯ್ ಎಂದರಷ್ಟೇ ಮಗು ಬಾಯ್ತೆರೆಯುವುದು. ಇದು ಹೊಸ ಚಿಗುರಿನ ಪರಿ.

ಚಿಗುರಿಗೆ ಮಾದರಿಯೂ ದಾರಿಯೂ ಆಗಬೇಕಾದ ಹಳೆಬೇರು ಹೇಗಿದೆ? ಹೇಳುವುದೇನು, ಮಣ್ಣಿನ ಹಂಗು ತೊರೆದ ಬೇರುಗಳೆಲ್ಲ ಈಗ ಮೊಬೈಲ್‌ನೊಂದಿಗೆ ತಳಕು ಹಾಕಿಕೊಂಡಿವೆ. ಸುಪ್ರಭಾತದೊಂದಿಗೆ ಬೆಳಗಾಗುವುದಿಲ್ಲ. ಮೊಬೈಲ್ ಪರದೆಯ ಮೂಲಕವೇ ಶುಭೋದಯ. ಹಾಸಿಗೆಯಿಂದ ಎದ್ದವರು ಬಚ್ಚಲಿಗೆ ಹೋದರೂ ಮೊಬೈಲು ಹಿಂಬಾಲಿಸುವುದು. ಮೊಬೈಲ್ ಜೊತೆಯಿಲ್ಲದಿದ್ದರೆ ಶೌಚಕ್ರಿಯೆ ಸರಾಗವಾಗಿ ಆಗದು!

ಊಟದ ಹೊತ್ತಿನಲ್ಲಾದರೂ ಮಾತುಕತೆಯ ಒಸಗೆ, ಮನೆವಾರ್ತೆ, ನಗೆಚಾಟಿಕೆ, ಇವೆಲ್ಲವೂ ಉಂಟೆ? ಇಲ್ಲ, ಇದೇನನ್ನೂ ಈಗ ನಿರೀಕ್ಷಿಸಲಾಗುವುದಿಲ್ಲ. ಕೈಗೂ ಕರುಳಿಗೂ ಕಣ್ಣಿಗೂ ಇದ್ದ ಸಂಬಂಧ ಬದಲಾಗಿದೆ. ಎಲ್ಲದರ ನಡುವೆಯೂ ಮೊಬೈಲ್ ಹಸ್ತಕ್ಷೇಪ. ಈಗಲೂ ಒಟ್ಟಿಗೆ ಉಣ್ಣುವವರಿದ್ದಾರೆ. ಹತ್ತಿರವಿದ್ದೂ ದೂರ ನಿಲ್ಲುವೆವು ನಮ್ಮ ಮೊಬೈಲಿನ ಕೋಟೆಯಲಿ ಎನ್ನುವುದರಲ್ಲಿ ನಮಗೀಗ ನಚ್ಚುಗೆ. ಮನೆಯೊಂದು, ಮೊಬೈಲು ಹಲವು!

ಮೊಬೈಲ್ ಕೋಟೆಯೊಳಗೆ ನಾವು ಸಿಲುಕಿರುವಾಗ ಮನೆವಾರ್ತೆಯ ಸಂಗತಿಯೇನು? ಅದಕ್ಕೆ ಮೊಬೈಲ್‌ನಲ್ಲೇ ಉತ್ತರವಿದೆ. ಮುಖಾಮುಖಿಯಲ್ಲಿ ಮಾತನಾಡಿದರೆ ಸಮಯ ಪೋಲು. ಉಭಶುಭ ವಿಚಾರಿಸಲಿಕ್ಕೆ, ಕ್ಷೇಮ ಕ್ಷಾಮದ ಸಮಾಚಾರಕ್ಕೆ, ಸಕಲಕ್ಕೂ ಒದಗುವುದು ವಾಟ್ಸ್ ಆ್ಯಪ್ ಎನ್ನುವ ಅಂತರಂಗಸಖಿ. ಹರಟೆ, ಸಲ್ಲಾಪ, ಕಾಲಕ್ಷೇಪ, ಯಾವುದಕ್ಕೂ ಒಲ್ಲೆಯೆನ್ನಲು ಈ ಇ-ಸಖಿ. ಕೆಲವರ ಪಾಲಿಗಿವಳು ವಿಶ್ವವಿದ್ಯಾಲಯ.

ಬ್ರಹ್ಮಕಪಾಲದಂತೆ ನಮಗೆ ಅಂಟಿಕೊಂಡಿರುವ ಈ ಮೊಬೈಲ್‌ನಿಂದ ನಮಗೆ ಏನೆಲ್ಲ ದೊರೆಯುತ್ತಿದ್ದರೂ, ಅದೆಲ್ಲವನ್ನೂ ಸೂತ್ರರೂಪದಲ್ಲಿ ಹೇಳಬಹುದಾದ ಒಂದೇ ಪದ– ರಂಜನೆ! ಬೋಧನೆ, ರಂಜನೆ, ಪ್ರಚೋದನೆ ಎನ್ನುವುದು ಪತ್ರಿಕಾ ಬರಹದ ಸಾರ್ಥಕತೆಗೆ ಸಂಬಂಧಿಸಿದಂತೆ ಲಂಕೇಶರ ಪ್ರಸಿದ್ಧ ಮಾತು. ಮೊಬೈಲ್ ಸಂಘದಲ್ಲಿ ಬೋಧನೆ ಗೌಣ. ಪ್ರಚೋದನೆಯೇ ಪ್ರಧಾನ. ರಂಜನೆ ಎಂದಿರೋ, ಬೋಧನೆ ಪ್ರಚೋದನೆಯೆಲ್ಲವೂ ಇಲ್ಲಿ ಅಂತಿಮವಾಗಿ ರಂಜನೆ ಆಗಿಯೇ ಪರಿಣಮಿಸುವುದು.

ನಮ್ಮನ್ನು ರಂಜಿಸಲು, ನಗಿಸಲು, ನಕ್ಕು ಹಗುರಾಗಿಸಲು ಲೋಕವೇ ತುದಿಗಾಲಲ್ಲಿ ನಿಂತಿದೆ. ರೀಲ್ಸ್‌ಗಳೆಂಬ ನಗೆಗುಳಿಗೆಗಳು, ಅನುದಿನದ ಕ್ಲೇಶದ ಅಂತರಗಂಗೆಯನ್ನು ದಾಟಲು ನಮಗೆ ದೊರೆತಿರುವ ಹಾಯಿದೋಣಿಗಳೂ ಹೌದು. ರೀಲ್ಸ್‌ಗಳಿಂದಲೇ ದಿನದ ಶುಭಾರಂಭ. ರೀಲ್ಸ್‌ಗಳೇ ಜೋಗುಳ.

ಆನ್‌ಲೈನ್ ಜಗತ್ತು ನೋವು ಶಮನಗೊಳಿಸುವ ಔಷಧವಲ್ಲ; ಅದು ಅರಿವಳಿಕೆ. ನಮ್ಮ ಸುತ್ತಮುತ್ತ ಹಸಿವು, ಅಜ್ಞಾನ, ಹಿಂಸೆ, ಅಸ್ಪೃಶ್ಯತೆ, ಮುಂತಾದ ನೋವುಗಳು ಅನುರಣಿಸುತ್ತಿದ್ದರೂ, ಅಳುವಿನ ಅಲೆಗಳು ಮರುಕಳಿಸುತ್ತಿದ್ದರೂ, ಅದೆಲ್ಲವನ್ನೂ ಕ್ಷುಲ್ಲಕವೆಂದು ಕಾಣುವ ಮಾನಸಿಕಸ್ಥಿತಿ ನಮಗೆ ದಕ್ಕಿದ್ದಾದರೂ ಎಲ್ಲಿಂದ? ಇಂಥ ಪ್ರಶ್ನೆಗೆ ಉತ್ತರಿಸುವ ವ್ಯವಧಾನವಾದರೂ ಯಾರಿಗಿದೆ; ಎಲ್ಲರೂ ಅಂತರ್ಜಾಲದ ಅಮರಾವತಿಯಲ್ಲಿ ಬಿಡುವು ಕಳೆದುಕೊಂಡಿದ್ದಾರೆ. ನಮ್ಮಿಂದ ಚುನಾಯಿತರಾದ ರಾಜಕಾರಣಿಗಳಿಗೆ ಸ್ಪಷ್ಟವಾಗಿ ಗೊತ್ತು, ಮೊಬೈಲ್ ಫೋನಿನ ತಾಕತ್ತು. ಆ ಅರಿವಿನಿಂದಲೇ ಅವರು ಅನ್ನ, ಆರೋಗ್ಯ, ಶಿಕ್ಷಣದಂಥ ಮೂಲಸೌಕರ್ಯಗಳನ್ನು ಒದಗಿಸಿಕೊಡುವ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಮೊಬೈಲ್‌ಗಳು ಸುಲಭ ಲಭ್ಯವಾಗುವಂತೆ, ಅನಿಯಮಿತ ಡೇಟಾ ಅಗ್ಗಕ್ಕೆ ದೊರಕುವಂತೆ ನೋಡಿಕೊಳ್ಳುವುದು ಅವರ ಆದ್ಯತೆ.

ಹಿಂದೆಲ್ಲಾ ಏಪ್ರಿಲ್ ತಿಂಗಳ ಮೊದಲ ದಿನವನ್ನು ಹಾಸ್ಯದ ದಿನವಾಗಿ ಆಚರಿಸಲಾಗುತ್ತಿತ್ತು. ಅಚ್ಛೇದಿನ್ ಸಾಕಾರಗೊಂಡಿರುವ ವರ್ತಮಾನದಲ್ಲಿ ಪ್ರತಿದಿನವೂ ನಗೆದಿನವೇ. ಇಲ್ಲ ಎಂದು ಯಾರಾದರೂ ಹೇಳಬಹುದೆ? ಹಾಗೆ ಹೇಳುವವರನ್ನು 'ಬದುಕುವ ಕಲೆ' ತಿಳಿಯದ ಮೂರ್ಖರು ಎನ್ನೋಣವೆ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಎಲ್‌ಪಿಜಿ ಕೊರತೆ

ಸಾಂಪ್ರದಾಯಿಕ ಇಂಧನ ಮೂಲಗಳ ಬಳಕೆಗೆ ಮುಂದು; ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ

ಪರ್ಯಾಯಗಳ ಹುಡುಕಾಟ

ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದ ಭಾರತದಲ್ಲಿ ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ವಾಣಿಜ್ಯ ಬಳಕೆದಾರರು ಮತ್ತು ಜನರು ಪರ್ಯಾಯ ಇಂಧನ ಮೂಲಗಳ ಹುಡುಕಾಟ ಆರಂಭಿಸಿದ್ದಾರೆ. ಸರ್ಕಾರಗಳೂ ಪರ್ಯಾಯ ಇಂಧನ ಬಳಸುವಂತೆ ಸೂಚಿಸಿವೆ. ಭಾರತವು ಮತ್ತೆ ಸಾಂಪ್ರದಾಯಿಕ ಇಂಧನಗಳನ್ನು ಬಳಸುವ ಸ್ಥಿತಿ ನಿರ್ಮಾಣವಾಗಿದೆ. ಆದರೆ, ಸಾಂಪ್ರದಾಯಿಕ ಇಂಧನ ಮೂಲಗಳಿಂದ ಪರಿಸರ ಮಾಲಿನ್ಯ ಮತ್ತೆ ಹೆಚ್ಚಳವಾಗುವ, ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ ಉಂಟಾಗುವ ಆತಂಕವೂ ವ್ಯಕ್ತವಾಗಿದೆ


ದಾವಣಗೆರೆ ಜಿಲ್ಲೆಯ ಬಸವಾಪಟ್ಟಣದ ಸಿದ್ಧಾರೂಢ ವೃದ್ಧಾಶ್ರಮದಲ್ಲಿ ಅಡುಗೆಗಾಗಿ ಬಾಯ್ಲರ್‌ಗಳನ್ನು ಅಳವಡಿಸಲಾಗಿದೆ

ಪ್ರಜಾವಾಣಿ ವಾರ್ತೆ

ಕೆಲವೇ ದಶಕಗಳ ಹಿಂದೆ ಭಾರತದಲ್ಲಿ ಅಡುಗೆ ಮಾಡಲು ಸಾಂಪ್ರದಾಯಿಕವಾದ ವೈವಿಧ್ಯಮಯ ಇಂಧನ ಮೂಲಗಳನ್ನು ಬಳಸಲಾಗುತ್ತಿತ್ತು. ಕಟ್ಟಿಗೆ, ಸೀಮೆಎಣ್ಣೆ, ಜೈವಿಕ ಅನಿಲ, ಇದ್ದಿಲು ಮುಂತಾದವು ಬಳಕೆಯಲ್ಲಿದ್ದವು. ದೇಶದಲ್ಲಿ ನಿಧಾನವಾಗಿ ಅಡುಗೆ ಅನಿಲ (ಎಲ್‌ಪಿಜಿ) ಬಳಕೆ ಆರಂಭವಾಯಿತು. ಸರ್ಕಾರದ ನಿರಂತರ ಪ್ರಚಾರ, ಸಬ್ಸಿಡಿ, ಒತ್ತಾಸೆಯ ಫಲದಿಂದ ಎಲ್‌ಪಿಜಿ ಬಳಕೆ ವ್ಯಾಪಕವಾಯಿತು. ಪ್ರಸ್ತುತ, ದೇಶದ ಶೇ 85ರಷ್ಟು ಕುಟುಂಬಗಳು ಎಲ್‌ಪಿಜಿ ಬಳಸುತ್ತಿವೆ. ಆದರೆ, ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವು ಎಲ್‌ಪಿಜಿ ಪೂರೈಕೆ ವ್ಯವಸ್ಥೆಯಲ್ಲಿ ವ್ಯತ್ಯಯಕ್ಕೆ ಕಾರಣವಾಗಿದ್ದು, ದೇಶದಲ್ಲಿ ಮತ್ತೆ ಸಾಂಪ್ರದಾಯಿಕ ಇಂಧನ ಮೂಲಗಳ ಹುಡುಕಾಟ ನಡೆದಿದೆ. ಕೆಲವೆಡೆ ಅನಿವಾರ್ಯವಾಗಿ ಪರ್ಯಾಯ ಇಂಧನಗಳನ್ನು ಬಳಸತೊಡಗಿದ್ದಾರೆ.

ಎಲ್‌ಪಿಜಿ ಕೊರತೆ ಇಲ್ಲ ಎಂದು ಹೇಳುತ್ತಿದ್ದರೂ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರ್ಯಾಯ ಇಂಧನಗಳ ಬಳಕೆಯನ್ನು ಪ್ರೋತ್ಸಾಹಿಸಲು ಆರಂಭಿಸಿವೆ. ಹಿಂದೆ ಸೀಮೆಎಣ್ಣೆಯನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ವಿತರಿಸಲಾಗುತ್ತಿತ್ತು. ಎಲ್‌ಪಿಜಿ ವ್ಯಾಪಕವಾಗಿ ಬಳಸತೊಡಗಿದ ನಂತರ ಸೀಮೆಎಣ್ಣೆ ಬಳಕೆಯೇ ಬಹುತೇಕ ನಿಂತುಹೋಯಿತು. ಸೀಮೆಎಣ್ಣೆ ವಿತರಣೆಯೂ ಸ್ಥಗಿತಗೊಂಡಿತು. ಇದೀಗ ಕೇಂದ್ರ ಸರ್ಕಾರವು ಸೀಮೆಎಣ್ಣೆಯನ್ನು ಮತ್ತೆ ವಿತರಿಸಲು ಮುಂದಾಗಿದೆ. ಪ್ರತಿ ರಾಜ್ಯಕ್ಕೂ ನಿಗದಿತ ಪ್ರಮಾಣಕ್ಕಿಂತ 48 ಸಾವಿರ ಕಿಲೋ ಲೀಟರ್ ಹೆಚ್ಚುವರಿಯಾಗಿ ವಿತರಿಸಲು ತಕ್ಷಣವೇ ಕ್ರಮ ಕೈಗೊಂಡಿದೆ. ಗ್ರಾಮೀಣ ಭಾಗದಲ್ಲಿ ಅಡುಗೆ ಮಾಡಲು ಸೌದೆ ಬಳಸಿ ಎಂದು ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಹೇಳಿದ್ದಾರೆ.

ಸಾಂಪ್ರದಾಯಿಕ ಇಂಧನಗಳ ಬಳಕೆಯಿಂದ ಪರಿಸರ ಮಾಲಿನ್ಯ ಉಂಟಾಗುವುದು ಸಹಜ. ಆದರೆ, ಎಲ್‌ಪಿಜಿ ಕೊರತೆಯಿಂದ ಪರ್ಯಾಯ ಇಂಧನಗಳ ಬಳಕೆ ಅನಿವಾರ್ಯ ಎನ್ನುವಂತಾಗಿದೆ. ಈ ದಿಸೆಯಲ್ಲಿ, ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ತಾತ್ಕಾಲಿಕವಾಗಿ ಕಟ್ಟಿಗೆ, ಸೆಗಣಿ, ಸೀಮೆಎಣ್ಣೆ, ಇದ್ದಿಲು ಮುಂತಾದ ಪರ್ಯಾಯಗಳನ್ನು ಬಳಸಲು ಅನುಮತಿ ನೀಡುವಂತೆ ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ಕೇಂದ್ರ ಪರಿಸರ ಸಚಿವಾಲಯವು ಸೂಚಿಸಿದೆ.

ಗ್ರಾಮೀಣ ಭಾಗಗಳಲ್ಲಿ ಎಲ್‌ಪಿಜಿ ಬಂದ ನಂತರ ಕೆಲವರು ಸೌದೆ ಒಲೆಗಳ ಬಳಕೆಯನ್ನೇ ನಿಲ್ಲಿಸಿಬಿಟ್ಟಿದ್ದರು. ಅಂಥವರು ಈಗ ಸೌದೆ ಒಲೆಗಳಿಗೆ ವಾಪಸ್ ಆಗುತ್ತಿದ್ದಾರೆ. ಜತೆಗೆ ಸೆಗಣಿ ಬೆರಣಿ, ಗೋಬರ್ ಗ್ಯಾಸ್, ಅಸ್ತ್ರದಂಥ ಒಲೆಗಳ ಮೊರೆ ಹೋಗುತ್ತಿದ್ದಾರೆ. ಕೆಲವೆಡೆ ಸೋಲಾರ್, ವಿದ್ಯುತ್ ಒಲೆಗಳನ್ನೂ ಬಳಸಲಾಗುತ್ತಿದೆ.

ಎಲ್‌ಪಿಜಿ ಕೊರತೆಯಿಂದ ಹೆಚ್ಚು ತೊಂದರೆಗೆ ಒಳಗಾಗುವವರು ನಗರ ಪ್ರದೇಶದವರು. ಇಲ್ಲಿ ಪರ್ಯಾಯ ಎಂದರೆ, ವಿದ್ಯುತ್ ಸ್ಟೌಗಳು. ಆದರೆ, ಇದರಿಂದ ವಿದ್ಯುತ್ ಬಳಕೆ ಹೆಚ್ಚಾಗಲಿದೆ.

ಪರಿವರ್ತನೆ ಕಷ್ಟ: ಎಲ್‌ಪಿಜಿ ಬಳಕೆಯಿಂದ ಬೇರೊಂದು ಇಂಧನಕ್ಕೆ ಹೊರಳುವುದು ಅಷ್ಟು ಸುಲಭವಲ್ಲ. ಮನೆಗಳಿಗಿಂತ ಹೋಟೆಲ್ ಮತ್ತಿತರ ಸ್ಥಳಗಳಲ್ಲಿ ಈ ಪರಿವರ್ತನೆ ಕಷ್ಟಕರ. ಅನಿಲದ ಪೈಪ್‌ಗಳು ಸೇರಿದಂತೆ ಅಡುಗೆ ಮನೆಯ ಇಡೀ ವ್ಯವಸ್ಥೆಯನ್ನೇ ಬದಲಿ ಇಂಧನಕ್ಕೆ ತಕ್ಕಂತೆ ಮಾರ್ಪಾಟು ಮಾಡಬೇಕಾಗುತ್ತದೆ.

ಬೇಕಿದೆ ಪರ್ಯಾಯ ಶುದ್ಧ ಇಂಧನ: ಎಲ್‌ಪಿಜಿ ಅವಲಂಬನೆ ಕಡಿಮೆ ಮಾಡಿ, ಇತರೆ ಶುದ್ಧ ಇಂಧನಗಳ ಕಡೆ ಗಮನ ಹರಿಸಲು ಇದು ಸೂಕ್ತ ಸಮಯ. ಹೋಟೆಲ್ ಸೇರಿ ಇತರ ಉದ್ಯಮಗಳು ಶುದ್ಧ ಇಂಧನ ಬಳಕೆಗೆ ಗಮನ ಹರಿಸಲು ಇದು ಸಕಾಲ. ಅದಕ್ಕೆ ಸಾಕಷ್ಟು ಸ್ಥಳ, ಸಿದ್ಧತೆ ಮತ್ತು ಸಂಪನ್ಮೂಲಗಳು ಬೇಕಾಗುತ್ತವೆ. ಜತೆಗೆ, ಸರ್ಕಾರದ ನೆರವು, ನೀತಿಗಳ ಬೆಂಬಲವೂ ಬೇಕು ಎಂದು ಉದ್ದಿಮೆದಾರರು ಅಭಿಪ್ರಾಯಪಟ್ಟಿದ್ದಾರೆ.


ಚಾಮರಾಜನಗರ ಜಿಲ್ಲೆಯ ಯಳಂದೂರಿನ ಹೋಟೆಲ್ ಒಂದರಲ್ಲಿ ಆಹಾರ ತಯಾರಿಕೆಗೆ ಸೌದೆ ಒಲೆ ಬಳಸಲಾಗುತ್ತಿದೆ

ಮಹಿಳೆಯರ ಆರೋಗ್ಯಕ್ಕೆ ಕಂಟಕ

ಸೀಮೆಎಣ್ಣೆ, ಇದ್ದಿಲು, ಸೆಗಣಿ, ಸೌದೆ ಒಲೆ ಮುಂತಾದ ಸಾಂಪ್ರದಾಯಿಕ ಇಂಧನ ಮೂಲಗಳಿಗೆ ಹಿಂದಿರುಗುವುದು ಮಹಿಳೆಯರ ಆರೋಗ್ಯದ ದೃಷ್ಟಿಯಿಂದ ಆತಂಕಕಾರಿ. ಬಹುತೇಕ ಮನೆಗಳಲ್ಲಿ ಅಡುಗೆ ಮಾಡುವುದು ಮಹಿಳೆಯರೇ. ಸಾಂಪ್ರದಾಯಿಕ ಇಂಧನಗಳನ್ನು ಉರಿಸಿದಾಗ, ಅವು ಕಾರ್ಬನ್ ಮೋನಾಕ್ಸೈಡ್, ನೈಟ್ರೋಜನ್ ಆಕ್ಸೈಡ್ಸ್ ಮತ್ತು ದೂಳಿನ ಕಣಗಳನ್ನು ಬಿಡುಗಡೆ ಮಾಡುತ್ತವೆ. ಮನೆಗಳಲ್ಲಿ ಅಡುಗೆ ಮಾಡುವಾಗ ಅವು ಮಹಿಳೆಯರ ದೇಹ ಸೇರಿ ಅವರ ಶ್ವಾಸಕೋಶ, ಹೃದಯದ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳನ್ನು ಉಂಟುಮಾಡುವ ಸಂಭವ ಹೆಚ್ಚಿರುತ್ತದೆ. ಹೊಗೆ ತುಂಬಿದ ಮನೆಗಳು, ಕಪ್ಪು ಗೋಡೆಗಳು, ದೂಳಿನ ಕಣಗಳ ನಡುವೆಯೇ ಇಡೀ ದಿನ ಮಹಿಳೆಯರು ಅಡುಗೆ ಮನೆಯಲ್ಲಿ ಕಾಲ ಕಳೆಯುತ್ತಿದ್ದರು. ಎಲ್‌ಪಿಜಿ ಬಂದ ನಂತರ ಮಹಿಳೆಯರು ಈ ಆತಂಕದಿಂದ ಮುಕ್ತರಾಗಿದ್ದರು. ಆದರೆ, ಯುದ್ಧದಿಂದಾಗಿ ಅನಿವಾರ್ಯವಾಗಿ ಸಾಂಪ್ರದಾಯಿಕ ಇಂಧನಗಳನ್ನು ಬಳಸುವವರು ತಾತ್ಕಾಲಿಕವಾಗಿಯಾದರೂ ಈ ಪರಿಸ್ಥಿತಿ ಎದುರಿಸಬೇಕಾಗಿದೆ.

ಹೊಗೆರಹಿತ 'ಅಸ್ತ್ರ' ಒಲೆ


ಬಾಯ್ಲರ್ ಅಸ್ತ್ರ ಒಲೆ, ಚಿತ್ರ:ಅಸ್ತ್ರ ಒಲೆ ಫೇಸ್‌ಬುಕ್ ಪುಟ

ರಾಜ್ಯದ ಕರಾವಳಿ ಹಾಗೂ ಮಲೆನಾಡು ಪ್ರದೇಶಗಳಲ್ಲಿ ಹೊಗೆರಹಿತವಾಗಿ ಅಡುಗೆ ಮಾಡಲು ಹಿಂದಿನ ಕಾಲದಿಂದಲೂ 'ಅಸ್ತ್ರ' ಒಲೆ ಬಳಸುವ ಪರಿಪಾಟ ಇದೆ. ಇದರಲ್ಲಿ ಎರಡು–ಮೂರು ಒಲೆಗಳನ್ನು ಸಾಲಾಗಿ ನಿರ್ಮಿಸಿ, ಅದರಲ್ಲಿ ಕಟ್ಟಿಗೆ, ಅಡಿಕೆ ಸಿಪ್ಪೆ, ತೆಂಗಿನ ಗರಿ ಇನ್ನಿತರ ಉರುವಲು ಹಾಕಲು ಪ್ರತ್ಯೇಕ ಚೆಂಬರ್ ನಿರ್ಮಿಸಲಾಗುತ್ತದೆ. ಈ ಎಲ್ಲ ಒಲೆಗಳನ್ನೂ ಏಕಕಾಲದಲ್ಲಿ ಅಡುಗೆಗೆ ಬಳಸಲಾಗುತ್ತದೆ. ಹೊಗೆ ಹೊರಗೆ ಹೋಗಲು ಈ ಒಲೆಗೆ ಪ್ರತ್ಯೇಕ ಕೊಳವೆಯನ್ನು ಜೋಡಿಸಲಾಗಿರುತ್ತದೆ.

ಕೆಲವರು ನೀರು ಬಿಸಿ ಮಾಡುವ ಹಂಡೆಯನ್ನೂ ಇದಕ್ಕೆ ಸಂಪರ್ಕ ಕಲ್ಪಿಸುತ್ತಾರೆ. ಅಡುಗೆ ಮಾಡುವಾಗಲೇ ಪ್ರತ್ಯೇಕ ಶ್ರಮವಿಲ್ಲದೇ ಸ್ನಾನಕ್ಕೆ ನೀರು ಕೂಡಾ ಬಿಸಿ ಮಾಡಲು ಇದರಲ್ಲಿ ಸಾಧ್ಯವಾಗುತ್ತದೆ. ಈಗ 'ಅಸ್ತ್ರ' ಒಲೆಗೂ ಆಧುನಿಕ ಸ್ಪರ್ಶ ನೀಡಲಾಗಿದೆ. ನೀರಿನ ಹಂಡೆ ಬದಲು ಬಾಯ್ಲರ್‌ಗಳನ್ನು ಅಳವಡಿಸಿ 'ಅಸ್ತ್ರ' ಒಲೆಯನ್ನು ಹೆಚ್ಚು ವೈಜ್ಞಾನಿಕವಾಗಿ ತಯಾರಿಸಿಕೊಡುವ ಸಂಸ್ಥೆಗಳೂ ಇವೆ. ಬಾಯ್ಲರ್‌ಗಳಲ್ಲಿಯ ನೀರು 24 ತಾಸುಗಳಿಗೂ ಅಧಿಕ ಕಾಲ ಬಿಸಿಯಾಗಿರುವಂತೆ ಅದಕ್ಕೆ ಕೋಟಿಂಗ್ ಮಾಡಲಾಗಿರುತ್ತದೆ.

ಎಲ್ಲೆಲ್ಲಿ, ಏನೇನು ಬದಲಿ ವ್ಯವಸ್ಥೆ?

- ಗ್ರಾಮೀಣ ಪ್ರದೇಶಗಳಲ್ಲಿ ಹಸು ಸಾಕುವವರು ಗೋಬರ್ ಗ್ಯಾಸ್ ತಯಾರಿಸುವ ವ್ಯವಸ್ಥೆಯನ್ನು ಹೊಂದಿದ್ದಾರೆ. ಎಲ್‌ಪಿಜಿ ಬಳಕೆ ಹೆಚ್ಚಿದ್ದರಿಂದ, ಸೆಗಣಿ ಬಳಸಿ ಅನಿಲ ಉತ್ಪಾದನೆ ಕಡಿಮೆಯಾಗಿತ್ತು. ಈಗ ಮತ್ತೆ ಅದನ್ನು ದುರಸ್ತಿ ಮಾಡುವುದಕ್ಕೆ ಮುಂದಾಗಿದ್ದಾರೆ. ಉದಾಹರಣೆಗೆ, ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ನಿಚ್ಚಣಕಿ ಗ್ರಾಮ ಮಡಿವಾಳಪ್ಪ ಬಸವಣ್ಣೆಪ್ಪ ವರಗಣ್ಣವರ ಅವರ ಕುಟುಂಬದವರು 30 ವರ್ಷಗಳಿಂದ ಇದನ್ನು ಸಮರ್ಥವಾಗಿ ಬಳಸುತ್ತಿದ್ದಾರೆ
- ಉಡುಪಿಯ ಕೃಷ್ಣಮಠ ಸೇರಿದಂತೆ ದಕ್ಷಿಣ ಕನ್ನಡ– ಉಡುಪಿ ಜಿಲ್ಲೆಗಳ ಹಲವು ದೇವಾಲಯಗಳಲ್ಲಿ ಅಡುಗೆಗೆ ಕಟ್ಟಿಗೆಯನ್ನೇ ಬಳಸಲಾಗುತ್ತಿದೆ
- ಶೃಂಗೇರಿ ಮತ್ತು ಹೊರನಾಡು ದೇಗುಲಗಳಲ್ಲಿ ಅನ್ನದಾನಕ್ಕೆ ಅಡುಗೆ ತಯಾರಿಸಲು ಉರುವಲಾಗಿ ಸೌದೆ ಹೊಟ್ಟು, ಕಾಫಿ ಪೆಲೆಟ್ಸ್ ಬಳಕೆ ಆಗುತ್ತಿದೆ. ಈ ಉರುವಲುಗಳ ಮೂಲಕ ಬಾಯ್ಲರ್‌ಗಳಲ್ಲಿ ಹಬೆ ಉತ್ಪಾದಿಸಿ, ನಂತರ ಅಡುಗೆ ಮಾಡಲಾಗುತ್ತಿದೆ. ಧರ್ಮಸ್ಥಳದ ಮಂಜುನಾಥೇಶ್ವರ ದೇವಸ್ಥಾನದ 'ಅನ್ನಪೂರ್ಣ' ಭೋಜನಾಲಯದಲ್ಲಿ ಅಡುಗೆ ತಯಾರಿಸಲು ಹಬೆ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಹಬೆ ತಯಾರಿಸಲು ಡೀಸೆಲ್ ಚಾಲಿತ ಯಂತ್ರವನ್ನು ಉಪಯೋಗಿಸಲಾಗುತ್ತದೆ
- ಮೈಸೂರು, ಚಾಮರಾಜನಗರ ವ್ಯಾಪ್ತಿಯಲ್ಲಿ ಹೋಟೆಲ್‌ಗಳ ಮಾಲೀಕರು ಹೆಚ್ಚು ಹೊಗೆ ಸೂಸದ, ಗಾಳಿಯಂತ್ರದ ಸಹಾಯದಿಂದ ಹೆಚ್ಚು ಬೆಂಕಿ ಹೊರಸೂಸುವ ಆಧುನಿಕ ಮಾದರಿಯ ಸೌದೆ ಒಲೆಗಳನ್ನು ತಮಿಳುನಾಡಿನಿಂದ ಖರೀದಿಸಿ ತರುತ್ತಿದ್ದಾರೆ
- ಹೋಟೆಲ್‌ಗಳಲ್ಲಿ ಸೌದೆ ಒಲೆಯ ಜೊತೆಗೆ ಇದ್ದಿಲು, ಗೇರು ಬೀಜದ ಹೊಟ್ಟು, ಮರದ ಹೊಟ್ಟು, ಭತ್ತದ ಹೊಟ್ಟು, ಸಸ್ಯ ತ್ಯಾಜ್ಯಗಳಿಂದ ತಯಾರಿಸಿದ 'ಬ್ರಿಕೇಡ್ಸ್' ಅನ್ನು ಉರುವಲಿನ ರೂಪದಲ್ಲಿ ಬಳಸಲಾಗುತ್ತಿದೆ. ಹೆಚ್ಚು ಶಾಖ ಕೊಡುವ, ಕಡಿಮೆ ಹೊಗೆಯಲ್ಲಿ ಅಡುಗೆ ಮಾಡಬಹುದಾದ ನವೀನ ಮಾದರಿಯ ಒಲೆಗಳ ಬಳಕೆ ಹೆಚ್ಚಿದೆ. ಇಂಡಕ್ಷನ್ ಸ್ಟೌ ಸೇರಿದಂತೆ ವಿದ್ಯುತ್ ಒಲೆಗಳನ್ನೂ ಬಳಸುತ್ತಿದ್ದಾರೆ
- ಕೊಡಗಿನ ಕೆಲವು ರೆಸಾರ್ಟ್‌ಗಳಲ್ಲಿ ಕಡಿಮೆ ಹೊಗೆ ಸೂಸುವ, ಕಡಿಮೆ ಸೌದೆ ಬಯಸುವ ಬ್ಲೋವರ್ ಸೌದೆ ಒಲೆ ಬಳಸಲಾಗುತ್ತಿದೆ


ಕಾಫಿ ಪೆಲೆಟ್ಸ್

ಪರಿಹಾರವಾಗಬಲ್ಲದೇ ಬಯೋಗ್ಯಾಸ್?

ಎಲ್‌ಪಿಜಿ ಬಿಕ್ಕಟ್ಟು ತೀವ್ರವಾಗುತ್ತಿರುವ ನಡುವೆಯೇ ಅದಕ್ಕೆ ಪರ್ಯಾಯವಾದ ಪರಿಸರಸ್ನೇಹಿ ಇಂಧನ ಮೂಲಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಜೈವಿಕ ತ್ಯಾಜ್ಯ ಮತ್ತು ಅದನ್ನು ಬಳಸಿ ಉತ್ಪಾದಿಸಲಾಗುವ ಅನಿಲ (ಬಯೋಗ್ಯಾಸ್) ಪರ್ಯಾಯವಾಗಬಹುದು ಎಂಬ ಚರ್ಚೆ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ ಅಡುಗೆಗೆ ಜೈವಿಕ ಇಂಧನವನ್ನು ಬಳಸುತ್ತಿರುವ ಉದಾಹರಣೆಗಳಿವೆ.

ತೇಜಸ್ವಿನಿ ಅನಂತಕುಮಾರ್ ನೇತೃತ್ವದ ಅದಮ್ಯ ಚೇತನ ಸ್ವಯಂಸೇವಾ ಸಂಸ್ಥೆಯು ಜೈವಿಕ ತ್ಯಾಜ್ಯವನ್ನು ಬಳಸಿ ಹಬೆ ತಯಾರಿಸಿ ಅದರಿಂದ ಮಧ್ಯಾಹ್ನದ ಬಿಸಿಯೂಟ ತಯಾರಿಸುವ ವ್ಯವಸ್ಥೆಯನ್ನು 2009ರಿಂದಲೇ ಅಳವಡಿಸಿಕೊಂಡಿದೆ.


ಬೆಂಗಳೂರಿನ ಕೋರಮಂಗಲದಲ್ಲಿರುವ ಬಯೋಗ್ಯಾಸ್ ಉತ್ಪಾದನಾ ಘಟಕ

ಎಲ್‌ಪಿಜಿ ಬಿಕ್ಕಟ್ಟು ಆರಂಭವಾದ ತಕ್ಷಣ ಈ ಬಗ್ಗೆ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿರುವ ತೇಜಸ್ವಿನಿ ಅನಂತಕುಮಾರ್ ಅವರು, 'ಅದಮ್ಯ ಚೇತನದ ಅಡುಗೆ ಕೋಣೆಗಳು ಪ್ರತಿ ದಿನ 120 ಎಲ್‌ಪಿಜಿ ಸಿಲಿಂಡರ್‌ಗಳನ್ನು ಉಳಿಸುತ್ತಿದೆ' ಎಂದು ಹೇಳಿದ್ದಾರೆ.

ಕೋರಮಂಗಲದ ಎಂಪೈರ್ ರೆಸ್ಟೋರೆಂಟ್, ಹಸಿ ತ್ಯಾಜ್ಯದಿಂದ ಉತ್ಪಾದಿಸಿದ ಅನಿಲವನ್ನು ಅಡುಗೆಗೆ ಬಳಸುತ್ತಿದೆ. ಎಲ್‌ಪಿಜಿ ಸಿಲಿಂಡರ್‌ಗಳು ಕೊರತೆಯಾಗಿರುವ ಸಂದರ್ಭದಲ್ಲಿ ಈ ಹೋಟೆಲ್‌ನಲ್ಲಿ ಯಾವ ಅಡೆತಡೆ ಇಲ್ಲದೆ ಆಹಾರ ಪದಾರ್ಥಗಳು ತಯಾರಾಗುತ್ತಿವೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ, ಕೋರಮಂಗಲ ನಿವಾಸಿಗಳ ಒಕ್ಕೂಟ, ಸ್ವಯಂ ಸೇವಾ ಸಂಸ್ಥೆಗಳಾದ ಸಾಹಸ್ ಮತ್ತು ಕಾರ್ಬನ್ ಮಾಸ್ಟರ್ಸ್ ಜಂಟಿ ಸಹಭಾಗಿತ್ವದಲ್ಲಿ ಸ್ಥಾಪನೆಗೊಂಡಿರುವ ಬಯೋಗ್ಯಾಸ್ ಉತ್ಪಾದನಾ ಘಟಕದಿಂದ ಪೂರೈಕೆಯಾಗುವ ಅನಿಲವನ್ನು ಬಳಸಿ ಇಲ್ಲಿ ಅಡುಗೆ ತಯಾರಿಸಲಾಗುತ್ತಿದೆ. ಬೆಂಗಳೂರಿನ ಮತ್ತೊಂದು ಪ್ರಸಿದ್ಧ ಕೊನಾರ್ಕ್ ಹೋಟೆಲ್ ಕೂಡ ಜೈವಿಕ ಅನಿಲವನ್ನೇ ಹಲವು ವರ್ಷಗಳಿಂದ ಅಡುಗೆಗೆ ಬಳಸುತ್ತಿದೆ.

ಕರ್ನಾಟಕ ಸೇರಿದಂತೆ ದೇಶದಾದ್ಯಂತ ದೊಡ್ಡ ಪ್ರಮಾಣದಲ್ಲಿ ಜೈವಿಕ ತ್ಯಾಜ್ಯ ಉತ್ಪಾದನೆಯಾಗುತ್ತದೆ. ಕೇಂದ್ರ ಸರ್ಕಾರದ ಅಂಕಿ ಅಂಶಗಳ ಪ್ರಕಾರ, ದೇಶದಲ್ಲಿ ವಾರ್ಷಿಕವಾಗಿ ಅಂದಾಜು 74 ಕೋಟಿ ಟನ್‌ಗಳಷ್ಟು ಜೈವಿಕ ತ್ಯಾಜ್ಯ ಉತ್ಪಾದನೆಯಾಗುತ್ತದೆ. ಮಧ್ಯಪ್ರದೇಶ ಸೇರಿದಂತೆ ದೇಶದ ವಿವಿಧ ಕಡೆಗಳಲ್ಲಿ ಬೆರಳೆಣಿಕೆಯಷ್ಟು ಸಂಪೀಡಿತ ಜೈವಿಕ ಅನಿಲ (ಸಿಬಿಜಿ–ಕಂಪ್ರೆಸ್ಡ್ ಬಯೋಗ್ಯಾಸ್) ಉತ್ಪಾದನಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಆದರೆ, ಸದ್ಯಕ್ಕೆ ಇವು ವಿದ್ಯುತ್ ಉತ್ಪಾದನೆಗೆ ಹೆಚ್ಚು ಗಮನ ಕೊಡುತ್ತಿವೆ.


ಹೋಟೆಲ್‌ಗೆ ಬಯೋಗ್ಯಾಸ್ ಸಿಲಿಂಡರ್‌ಗಳ ಸಂಪರ್ಕ

ಈ ಘಟಕಗಳು ಜಾನುವಾರುಗಳ ಸೆಗಣಿ, ಕೃಷಿ ತ್ಯಾಜ್ಯ, ಆಹಾರ ತ್ಯಾಜ್ಯ, ಕೊಳಚೆ ನೀರನ್ನು ಬಳಸಿ ಅನಿಲ ಉತ್ಪಾದಿಸುತ್ತವೆ. ಕೇಂದ್ರ ಹೊಸ ಮತ್ತು ನವೀಕೃತ ಇಂಧನ ಸಚಿವಾಲಯವು ಬಯೋ ಸಿಎನ್‌ಜಿ (ಜೈವಿಕ ಸಂಪೀಡಿತ ನೈಸರ್ಗಿಕ ಅನಿಲ) ಮತ್ತು ಸಿಬಿಜಿ ಉತ್ಪಾದನೆಗೆ ಪ್ರೋತ್ಸಾಹ ನೀಡುವುದಕ್ಕಾಗಿ ರಾಷ್ಟ್ರೀಯ ಜೈವಿಕ ಇಂಧನ ಕಾರ್ಯಕ್ರಮ (ಎನ್‌ಬಿಪಿ) ರೂಪಿಸಿದ್ದು, ಅದರದಲ್ಲಿ ತ್ಯಾಜ್ಯದಿಂದ ಇಂಧನ ಕಾರ್ಯಕ್ರಮ ಅನುಷ್ಠಾನಗೊಳಿಸಿದೆ. ಅದರ ಅಡಿಯಲ್ಲಿ ಐದು ಬಯೊ ಸಿಎನ್‌ಜಿ ಉತ್ಪಾದನಾ ಘಟಕಗಳು ಸ್ಥಾಪನೆಯಾಗಿವೆ ಎಂದು ಕಳೆದ ವರ್ಷದ ಆಗಸ್ಟ್‌ನಲ್ಲಿ ಸರ್ಕಾರ ಸಂಸತ್‌ಗೆ ಮಾಹಿತಿ ನೀಡಿತ್ತು. ನಾಲ್ಕು ಘಟಕಗಳು ಸ್ಥಾಪನೆಯ ಹಂತದಲ್ಲಿವೆ ಎಂದೂ ಹೇಳಿತ್ತು. ಆದರೆ, ಈ ಯೋಜನೆ ನಿರೀಕ್ಷಿತ ಪ್ರಮಾಣದಲ್ಲಿ ವಿಸ್ತಾರಗೊಂಡಿಲ್ಲ.

ಬೆಂಗಳೂರು ಸೇರಿದಂತೆ ದೇಶದ ಮಹಾನಗರಗಳಲ್ಲಿ ಭಾರಿ ಪ್ರಮಾಣದಲ್ಲಿ ಹಸಿ ತ್ಯಾಜ್ಯ ಸಂಗ್ರಹವಾಗುತ್ತಿದ್ದು, ಅವುಗಳೆಲ್ಲವನ್ನೂ ಸಂಸ್ಕರಿಸಿ ಅನಿಲ ಉತ್ಪಾದಿಸಿ ಪೈಪ್‌ಲೈನ್ ಮೂಲಕ ಇಲ್ಲವೇ ಸಿಲಿಂಡರ್‌ಗಳ ಮೂಲಕ ನಗರದಲ್ಲಿನ ಹೋಟೆಲ್‌ಗಳಿಗೆ, ಹಾಸ್ಟೆಲ್‌ಗಳು, ಪಿಜಿಗಳಿಗೆ ಪೂರೈಸಲು ಸಾಧ್ಯವಾದರೆ ಎಲ್‌ಪಿಜಿ ಸಿಲಿಂಡರ್‌ಗಳ ಅವಲಂಬನೆಯನ್ನು ಗಣನೀಯ ಪ್ರಮಾಣದಲ್ಲಿ ತಪ್ಪಿಸಬಹುದು ಎಂಬುದು ತಜ್ಞರ ಸಲಹೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಜಾರ್ಖಂಡ್‌ನ ಜಮ್‌ಶೆಡ್‌ಪುರದ ಮೃಗಾಲಯದಲ್ಲಿ ಮಹಿಳೆಯೊಬ್ಬರು ಸಿಂಹವಿದ್ದ ಆವರಣದೊಳಕ್ಕೆ ಆಕಸ್ಮಿಕವಾಗಿ ಬಿದ್ದಿರುವ ವಿಡಿಯೊ ತುಣುಕೊಂದನ್ನು ಸೋನಾಲಿ ಅಭಿ ಶರ್ಮಾ ಎಂಬ ಇನ್‌ಸ್ಟಾಗ್ರಾಂ ಬಳಕೆದಾರರೊಬ್ಬರು ಕೆಲವು ದಿನಗಳ ಹಿಂದೆ ಹಂಚಿಕೊಂಡಿದ್ದರು. ಸಿಂಹವು ಮಹಿಳೆಯ ಹತ್ತಿರ ಬರುವ, ಆಕೆ ಭಯಬಿದ್ದಿರುವ ದೃಶ್ಯವೂ ಅದರಲ್ಲಿದೆ. ನಂತರ ರಕ್ಷಣಾ ತಂಡವು ಮಹಿಳೆಯನ್ನು ರಕ್ಷಿಸಿದೆ ಎಂಬ ಮಾಹಿತಿಯೂ ಪೋಸ್ಟ್‌ನಲ್ಲಿದೆ. ಆದರೆ, ಇದು ಸುಳ್ಳು.



ವಿಡಿಯೊದ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಾಟ ನಡೆಸಿದಾಗ ಇದೇ ಪೋಸ್ಟ್ ಅನ್ನು ಹಲವರು ಹಂಚಿಕೊಂಡಿರುವುದು ಕಂಡು ಬಂತು. ಇನ್ನಷ್ಟು ಹುಡುಕಿದಾಗ, ಮತ್ತೊಬ್ಬ ಇನ್‌ಸ್ಟಾಗ್ರಾಂ ಬಳಕೆದಾರ ಶಾನ್ ಅರ್ರನ್ನಾ ಎಂಬವರು ಈ ವರ್ಷದ ಜನವರಿ 1ರಂದು ಇದೇ ವಿಡಿಯೊವನ್ನು ಹಂಚಿಕೊಂಡಿದ್ದರು. ಆದರೆ, ಅದರಲ್ಲಿ ಇದು ಎಐ ವಿಡಿಯೊ ಎಂಬುದನ್ನು ಉಲ್ಲೇಖಿಸಿದ್ದರು. ಸೋರಾ ಎಂಬ ಎಐ ವೇದಿಕೆ ಬಳಸಿ ಸೃಷ್ಟಿಸಲಾಗಿದೆ ಎಂದೂ ಅವರು ಹೇಳಿದ್ದರು. ಆ ಖಾತೆಯನ್ನು ಪರಿಶೀಲಿಸಿದಾಗ ಅವರು ಎಐ ವಿಡಿಯೊಗಳನ್ನು ಹಂಚಿಕೊಂಡಿರುವುದು ಕಂಡು ಬಂತು. ವಿಡಿಯೊವನ್ನು ಹೈವ್ ಮಾಡರೇಷನ್ ಎಂಬ ಎಐ ಪತ್ತೆ ಟೂಲ್ ಬಳಸಿ ಪರಿಶೀಲನೆಗೆ ಒಳಪಡಿಸಿದಾಗ ಅದು ಎಐ ವಿಡಿಯೊ ಎಂಬುದು ಖಚಿತವಾಯಿತು. ಡೀಪ್‌ಫೇಕ್ ವಿಡಿಯೊವನ್ನು ನೈಜ ಘಟನೆ ಎಂಬಂತೆ ಬಿಂಬಿಸಿ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6360


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅತ್ಯಂತ ಸರಾಗವಾದ ಹಂಚಿಕೆ (5)
4.ವಿಪುಲವಾಗಿ ಆಗಿರುವ ಕ್ಷೋಭೆ (3)
5.ಬಳೆಗಳನ್ನು ಒಟ್ಟಾಗಿ ಕಟ್ಟಿದ ಗೊಂಚಲು (3)
6.ಹರನಲ್ಲಿರುವ ಆಯುಧ ಕಾಣುತ್ತಿದೆಯೇ? (3)
8.ಯಜಮಾನ ಇಲ್ಲಿದ್ದಾನೆ (3)
9.ಬಾಕುವಿನಿಂದ ಕತ್ತರಿಸಿರುವ ಹೊಗೆಸೊಪ್ಪು (3)
13.ಜವನಿಕೆ ಹತ್ತಿರವಿರುವ ಸ್ತ್ರೀ (3)
15.ಮನವನ್ನು ಸೆಳೆದ ಲಕ್ಷ್ಯ (3)
16.ಬೆಂದ ಅಕ್ಕಿಯ ಕಾಳು (3)
17.ಹಳೆಯದನ್ನು ಹೊಸದು ಮಾಡುವಿಕೆ (5)

ಮೇಲಿಂದ ಕೆಳಕ್ಕೆ

1.ಮೋಹಕವಾದ ನಗೆಯುಳ್ಳವಳು (4)
2.ಊಟದ ಮನೆಯಿದು (5)
3.ಈತ ನರಕಾಧಿಪತಿಯ ಆಳು (4)
4.ಪ್ರೇಮಿಗಳ ಅಗಲಿಕೆಯ ನೋವು (3)
7.ತಾರೀಫು ಮಾಡಿದವನು ತೋರಿಸಿದ ದಿನಾಂಕ (3)
8.ಗಂಡನ ಅಥವಾ ಹೆಂಡತಿಯ ಸಹೋದರಿ (3)
10.ಲಾಂಗೂಲ ಹಿಡಿದು ಆಗಮಿಸಿದ ಹಿಂಬಾಲಕ (5)
11.ಗಣಪತಿಯ ಇನ್ನೊಂದು ಹೆಸರು (4)
12.ಅತೀ ಬುದ್ಧಿವಂತನಿವನು (4)
14.ಹೊಗಳು ಪದದ ವಿರುದ್ಧ ಪದ (3)



6359ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಯೋಧಿಕ 3.ಶತಪದ
5.ನಸುಕು 6.ತಿಲೋದಕ
8.ನಮ್ಮಾಸು 10.ಮರ್ಕಟ
12.ನಸುನಗು 15.ಮಾಸರ
16.ಮಡಿವಾಳ 17.ಕಡುಗಲಿ

ಮೇಲಿಂದ ಕೆಳಕ್ಕೆ:
1.ವರ್ಧಂತಿ 2.ಕನಕ
3.ಶಕುನ 4.ದಟ್ಟಿ
7.ಲೋಕಾಭಿರಾಮ
9.ಸುಪ್ತಚೇತನ 11.ಟಮಾಳ
12.ನರಕ 13.ಗುದ್ದಲಿ
14.ಸುಮ

ಸುಡೊಕು 6744

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7		5	9				2	8
					2			
2		9	3				6	
9		4						2
			4		9	1		
	3					9		6
4					8		7	
		1	7			2		3
8		2		5			1	

6743 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

ಕಂಡೂ ಕಂಡೂ ಕೇಳುವುದು

ನುಡಿ ಬೆಳಗು — ವಾಸುದೇವ ನಾಡಿಗ್



ಅಕ್ಬರ್ ಕೇಳಿದ್ದ ಪ್ರಶ್ನೆಗೆ ಉತ್ತರ ಹುಡುಕಲು ಬೀರಬಲ್ ಹತ್ತಾರು ದಿನ ಕಾಣೆಯಾದ ಕತೆ ಎಲ್ಲರೂ ಬಲ್ಲರು. ಅಕ್ಬರ್ ನೀಡಿದ್ದ ಸವಾಲು ಇಷ್ಟೇ; ಸದ್ಯ ವಾಸವಿರುವ ಜಾಗದಲ್ಲಿ ಮೂರ್ಖರ ಸಂಖ್ಯೆಯನ್ನು ಲೆಕ್ಕ ಹಾಕಬೇಕಿತ್ತು. ಅದಕ್ಕೆ ಬೀರಬಲ್ ಒಪ್ಪಿಕೊಂಡು ಹೊರನಡೆದ ಮೇಲೆ ಹತ್ತಾರು ದಿನ ಸಭೆಗೆ ಬರಲೇ ಇಲ್ಲ. ಎಲ್ಲರಿಗೂ ಅಚ್ಚರಿ. ಅವನು ಊರು ಬಿಟ್ಟು ಹೋಗೇ ಇರಲಿಲ್ಲ. ಮನೆಯ ಮುಂದೆ ಅಂಗಳದಲ್ಲಿ ಹಗ್ಗದ ಮಂಚವನ್ನು ಹೆಣೆಯುತ್ತಾ ನಿಂತಿದ್ದ.

ಈ ವಿಷಯ ಗೊತ್ತಾಗಿ ಅನೇಕರು ವಿಚಾರಿಸಲು ಬಂದುಹೋದರು. ಎಲ್ಲರ ಪ್ರಶ್ನೆ ಒಂದೇ: 'ಬೀರಬಲ್, ಏನು ಮಾಡ್ತಾ ಇದ್ದೀಯ?' ಬಂದವರೆಲ್ಲ ಹೀಗೆ ಇದೇ ಪ್ರಶ್ನೆ ಕೇಳುತ್ತ ಹೋದ ಹಾಗೆ ಬೀರಬಲ್ ಏನೊಂದೂ ಉತ್ತರ ನೀಡದೆ, ಪಕ್ಕದ ಒಂದು ಖಾಲಿ ಪುಸ್ತಕದಲ್ಲಿ ಸಂಖ್ಯೆಯನ್ನು ಬರೆದುಕೊಳ್ಳುತ್ತ ಹೋದ. ಏನೂ ಮಾತನಾಡದೆ ಹಗ್ಗದಿಂದ ಮಂಚವನ್ನು ಕಟ್ಟುತ್ತಿದ್ದ ಬೀರಬಲ್ಲನಿಗೆ ಹುಚ್ಚೇ ಹಿಡಿದಿದೆ ಅಥವಾ ಮಂತ್ರಿ ಕೆಲಸವನ್ನು ಬಿಟ್ಟಿರಬೇಕು ಎಂದು ಮಾತಾನಾಡುತ್ತ ಹೊರಡುತ್ತಿದ್ದರು. ಈ ಸುದ್ದಿ ರಾಜನವರೆಗೂ ತಲುಪಿ, ಜನರ ಮಾತಿನ ಚರ್ಚೆಯ ಬಗ್ಗೆ ಕುತೂಹಲಗೊಂಡು ಅಕ್ಬರ್ ಕೂಡಾ ಬೀರಬಲ್ ಮನೆ ಮುಂದೆ ಬಂದು ನಿಂತು ಇದೇ ಪ್ರಶ್ನೆ ಕೇಳಿದ: 'ಬೀರಬಲ್, ಏನು ಮಾಡ್ತಾ ಇದ್ದೀಯ?' ಬೀರಬಲ್ ಏನೂ ಮಾತನಾಡದೆ ಮುಗುಳ್ನಗುತ್ತಾ ಪುಸ್ತಕದಲ್ಲಿ ಮತ್ತೊಂದು ಸಂಖ್ಯೆಯನ್ನು ಬರೆದುಕೊಂಡ. ಅಕ್ಬರ್ ಮರುಮಾತನಾಡದೆ ಹೊರಟ.

ಮರುದಿನ ರಾಜಸಭೆಗೆ ದಿಢೀರ್ ಅಂತ ಬೀರಬಲ್‌ನ ಆಗಮನ. ಎಲ್ಲರಿಗೂ ಆತಂಕ ಮತ್ತು ಅಚ್ಚರಿ; ಬೀರಬಲ್‌ಗೆ ಹುಚ್ಚು ಹಿಡಿದಿರಬಹುದಾ ಅಂತ. ಬೀರಬಲ್ ಒಂದು ದೊಡ್ಡ ಹಾಳೆಯಲ್ಲಿ ಅನೇಕ ಸಂಖ್ಯೆಗಳನ್ನು ಬರೆದುಕೊಂಡು ಬಂದಿದ್ದ. ಅದು ಸದ್ಯ ವಾಸವಿರುವ ಜಾಗದ ಮೂರ್ಖರ ಸಂಖ್ಯೆ. ಅಕ್ಬರನನ್ನೂ ಒಳಗೊಂಡಂತೆ ಆ ಸಂಖ್ಯೆ ಸಾವಿರವನ್ನು ದಾಟಿತ್ತು. ಮತ್ತು ಪರಿಚಿತರೆಲ್ಲ ಆ ಮೂರ್ಖರ ಪಟ್ಟಿಯಲ್ಲಿ ಸೇರಿದ್ದರು. ತಾನು ಹಗ್ಗದಿಂದ ಮಂಚವನ್ನು ಹೆಣೆಯುತ್ತಿದ್ದರೂ ಕಣ್ಣಿಗೆ ಕಾಣಿಸುತ್ತಿದ್ದರೂ ರಾಜನೂ ಸೇರಿ ಎಲ್ಲರೂ ಕೇಳಿದ ಪ್ರಶ್ನೆ: 'ಬೀರಬಲ್, ಏನು ಮಾಡ್ತಾ ಇದ್ದೀಯ?' ಇಲ್ಲಿ ಅಕ್ಬರನೂ ಮೂರ್ಖನಾಗಿದ್ದ!

ಬಾಳೇ ಹೀಗೆ. ಅನೇಕ ಸಲ ಮೂರ್ಖರನ್ನಾಗಿ ಮಾಡುತ್ತದೆ. ಕಂಡೂ ಗೊತ್ತಿದ್ದೂ ಪ್ರಶ್ನೆ ಕೇಳುತ್ತೇವೆ. ಸಿನಿಮಾ ಥಿಯೇಟರಿಗೆ ಬಂದವರನ್ನು ಸಿನಿಮಾ ನೋಡೋದಕ್ಕೆ ಬಂದ್ರಾ?; ಬಸ್ಸಲ್ಲಿ ಕೂತವರನ್ನು ಊರಿಗೆ ಹೊರಟಿದ್ದೀರ?; ಹೋಟೆಲ್ಲಿಗೆ ಬಂದವರನ್ನು ಕಾಫಿ ಕುಡಿಯೋಕೆ ಬಂದ್ರಾ?; ಅಡುಗೆ ಮನೆಯಲ್ಲಿ ಕುಕ್ಕರ್ ಅನ್ನು ಒಲೆ ಮೇಲೆ ಇಟ್ಟವರನ್ನು ಅಡುಗೆ ಮಾಡ್ತಾ ಇದ್ದೀರ?– ಹೀಗೆ ಕೇಳುವ ಹಾಗೆ. ಬೀರಬಲ್ಲನಾದರೂ ಏನು ಉತ್ತರ ಕೊಡಬಲ್ಲ? ಪಾಪ.

ಇದು ಸಹಜ ಕೂಡಾ. ಇದನ್ನು ಮೂರ್ಖತನ ಅಂತ ಸಾರಾಸಗಟಾಗಿ ಒರಟುತನದಿಂದ ಹೇಳಲು ಬರುವುದಿಲ್ಲ, ಹೇಳಬಾರದು ಕೂಡ. ಅಲ್ಲಿ ಒಂದು ಸಣ್ಣ ಕಾಳಜಿ, ಒಂದು ಆಸಕ್ತಿ, ಒಂದು ಸಲುಗೆ ಕೆಲಸ ಮಾಡಿರುತ್ತದೆ. ಆದರೂ ಅದು ಅಭಾಸ ಆಗಿರುತ್ತದೆ.

ಜನರನ್ನು ಮೂರ್ಖರನ್ನಾಗಿ ಮಾಡಿ ಹಣ ದೋಚಿಕೊಳ್ಳುವುದನ್ನೇ ಕಸುಬು ಮಾಡಿಕೊಂಡಿರುವ ಜಾಲಗಳು ಈ ಕಾಲಮಾನದಲ್ಲಿ ಅಸಂಖ್ಯಾತ. ಜೀವಮಾನದ ಹಣವನ್ನೆಲ್ಲ ಸುರಿದು ನೆಲವನ್ನು ಕೊಂಡುಕೊಳ್ಳುವ, ಮನೆ ಕಟ್ಟಲು ಹವಣಿಸುವ ಜನ ಮೂರ್ಖರಾಗುತ್ತಾರೆ; ಅನೇಕ ಉದಾಹರಣೆಗಳಿವೆ. ಇನ್ನು ಹಣದ ಆಮಿಷಕ್ಕಾಗೋ ಭಯಕ್ಕೋ ಒಳಗಾಗಿ ಸೈಬರ್ ಕಳ್ಳರ ಜಾಲದಲ್ಲಿ ಹಣ ಕಳೆದುಕೊಂಡು ಮೂರ್ಖರಾದವರ ಸಂಖ್ಯೆ ಲೆಕ್ಕಕ್ಕೆ ಸಿಗದು. ಮೂರ್ಖತನಕ್ಕೆ ನಾನಾ ರೂಪ. ಆದರೆ ಬುದ್ಧಿವಂತಿಕೆಗೆ ಒಂದೇ ರೂಪ, ಅಲ್ಲವೆ? ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

01 ಏಪ್ರಿಲ್ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಚತುರ್ದಶಿ ಗಂ. 7-07 ನಕ್ಷತ್ರ: ಉತ್ತರಫಲ್ಗುನಿ ಗಂ. 16-18 ಯೋಗ: ವೃದ್ಧಿ ಗಂ. 14-51 ಕರಣ: ವಣಿಜ ಗಂ 7-07 ಮೀನ ಮಾಸದ 17 ನೇ ದಿನ. ಮಳೆ ನಕ್ಷತ್ರ : ರೇವತಿ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-30 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 12 ಶವ್ವಾಲ್, ಅದೃಷ್ಟ ಸಂಖ್ಯೆ : 3, 9

ಮೇಷ: ಯೋಜನೆಗಳು ಕಾರ್ಯಗತಗೊಳ್ಳಲು ಶನಿ ದೇವರಲ್ಲಿ ಪ್ರಾರ್ಥನೆ ನಡೆಸಿ. ಅಕ್ಕಪಕ್ಕದವರೊಂದಿಗೆ ಇದ್ದ ವಿವಾದಗಳು ಹಂತ ಹಂತವಾಗಿ ಸರಿಯಾಗಲಿವೆ. ಗುತ್ತಿಗೆ ಆಧಾರಿತ ಉತ್ತಮ ಉದ್ಯೋಗ ಸಿಗಲಿದೆ.

ವೃಷಭ: ಕಾರ್ಯಕ್ಷೇತ್ರದಲ್ಲಿ ದೂರ ಸಂಚಾರ ಹೆಚ್ಚಾಗಿದ್ದರೂ ಎಣಿಕೆಗೆ ಮೀರಿ ಧನಾಗಮನ ಇರಲಿದೆ. ಎಲ್ಲಾ ಕಾರ್ಯಗಳು ಸಿದ್ಧಿಸಲಿವೆ. ಆಸ್ತಿ ವ್ಯಾಜ್ಯ ಬಗೆಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ.

ಮಿಥುನ: ಅಧಿಕಾರಿ ಹಾಗೂ ಹಿರಿಯರಿಂದ ಸಹಕಾರಗಳನ್ನು ಅಪೇಕ್ಷಿಸುವಂಥ ದಿನವಾಗಲಿದೆ. ಏಕಾಂಗಿ ಹೋರಾಟ ಸರಿಯಲ್ಲ. ಸಹಕಾರಿ ರಂಗದಲ್ಲಿನ ವ್ಯಕ್ತಿಗಳಿಗೆ ಶುಭ ದಿನ. ಸಂತಾನದ ಸುದ್ದಿ ಆನಂದ ತರಲಿದೆ.

ಕರ್ಕಾಟಕ: ಪೀಠೋಪಕರಣಗಳ ವ್ಯಾಪಾರಸ್ಥರು ಪ್ರದರ್ಶನ ಮಾರಾಟದಂತಹ ಯೋಜನೆಯಿಂದ ಅಥವಾ ಜಾಹಿರಾತುಗಳ ಮೂಲಕ ಬೆಳಕಿಗೆ ಬರುವ ಪ್ರಯತ್ನ ಮಾಡಬಹುದು. ವರಿಷ್ಠ ಜನರ ಜೊತೆ ಸಂಪರ್ಕ ಬೆಳೆಯಲಿದೆ.

ಸಿಂಹ: ಕರ ಕುಶಲ ವಸ್ತು ತಯಾರಕರು ಉತ್ತಮ ಕೆಲಸಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಕುಟುಂಬದಲ್ಲಿ ಸಂತೋಷದ ವಾತಾವರಣ ಸೃಷ್ಟಿಯಾಗಲಿದೆ. ನಿಮ್ಮಲ್ಲಿ ಸಾಮಾಜಿಕವಾದ ಕಳಕಳಿ ಹೆಚ್ಚಲಿದೆ.

ಕನ್ಯಾ: ನೂತನ ಕಾರ್ಯ ಅಥವಾ ಗೃಹ ನಿರ್ಮಾಣದಂತಹ ಕೆಲಸಗಳಿಗೆ ಕುಟುಂಬದಲ್ಲಿ ಚರ್ಚೆ ನಡೆಯುವುದು ಹಾಗೂ ಅದಕ್ಕಾಗಿ ಹೆಚ್ಚು ಸಮಯ ವಿನಿಯೋಗಿಸುವಿರಿ. ಮಕ್ಕಳ ಓದಿನ ಕಡೆ ನಿಗಾವಹಿಸಿ.

ತುಲಾ: ವ್ಯವಹಾರಗಳನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಲು ಪ್ರಯತ್ನ ಪಡುವುದು ಒಳ್ಳೆಯದು. ಶ್ರಮದ ದುಡಿಮೆಗೆ ಉತ್ತಮ ಫಲ ದೊರಕುವುದು. ಮಾತಿನಲ್ಲಿ ನಯ ವಿನಯಗಳು ಇರಲಿ.

ವೃಶ್ಚಿಕ: ದೇವತಾನುಗ್ರಹ ಸಂಪೂರ್ಣವಿದ್ದು, ತೊಂದರೆಗಳನ್ನು ನಿವಾರಿಸಿ ವೃತ್ತಿರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಿರಿ. ರೈತರಿಗೆ ತರಕಾರಿಯಿಂದ ನಿರೀಕ್ಷೆ ಪೂರ್ಣವಾಗಿ ಸಂತೋಷಕ್ಕೆ ಕಾರಣವಾಗುವುದು.

ಧನು: ಪ್ರವೃತ್ತಿಯಲ್ಲಿ ಅಪಾದನೆಗಳು ಎದುರಾಗಿ ಮಾನಸಿಕವಾಗಿ ಕಿರಿಕಿರಿ ಎನಿಸಲಿವೆ. ನಿಧಾನಗತಿಯಲ್ಲಿ ನಡೆಯುತ್ತಿದ್ದ ಕಾರ್ಯಗಳು ಮಹಾಗಣಪತಿಯ ಆಶೀರ್ವಾದದಿಂದ ಶೀಘ್ರಗತಿಯನ್ನು ಹೊಂದಿ ಪ್ರಗತಿಯನ್ನು ಹೊಂದುತ್ತದೆ.

ಮಕರ: ಅವಿವಾಹಿತರಿಗೆ ವಿವಾಹ ಸಂಬಂಧಗಳು ಕಂಕಣಬಲಕ್ಕೆ ಪೂರಕ ವಾತಾವರಣವನ್ನು ಸೃಷ್ಟಿಸಲಿದೆ. ವಿಪರೀತ ಪ್ರಸಂಗದಲ್ಲಿ ತಾಳ್ಮೆಯನ್ನು ಕಳೆದುಕೊಳ್ಳಬೇಡಿ. ಇಷ್ಟ ವಸ್ತುಗಳ ಖರೀದಿಯಿಂದ ಹಣ ವ್ಯಯವಾಗುವುದು.

ಕುಂಭ: ಅಸಹಾಯಕ ಸ್ಥಿತಿಯಿಂದಾಗಿ ಯಾರಲ್ಲೂ ನಂಬಿಕೆ ಇಡದಂತಹ ಪರಿಸ್ಥಿತಿ ತೋರಿಬರುವುದು. ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ. ಆಧ್ಯಾತ್ಮಿಕ ವಿಚಾರಗಳತ್ತ ಗಮನ ಹರಿಸುವಿರಿ.

ಮೀನ: ಮುಂದಾಲೋಚನೆ ಇಲ್ಲದೇ ಯಾರಿಗೂ ಭರವಸೆಯನ್ನೂ ನೀಡಬೇಡಿ. ವ್ಯಾಪಾರ ವ್ಯವಹಾರದಲ್ಲಿ ಮಗನ ಸಹಾಯದಿಂದ ಅಭಿವೃದ್ಧಿಯನ್ನು ಕಾಣುವಿರಿ. ಕುಟುಂಬದಲ್ಲಿ ಎಲ್ಲರ ಆರೋಗ್ಯವೂ ಉತ್ತಮವಾಗಿರುವುದು.

ಗುಂಡಣ್ಣ



ಜಿಡಿಪಿ: ಶೇ 1ರಷ್ಟು ಕುಸಿತ ಸಾಧ್ಯತೆ

ಪಶ್ಚಿಮ ಏಷ್ಯಾದ ಸಂಘರ್ಷದಿಂದ ದೇಶದ ಆರ್ಥಿಕತೆಯ ಮೇಲೆ ಪರಿಣಾಮ: ಇ.ವೈ ಎಕಾನಮಿ ವಾಚ್ ವರದಿ



ಮುಖ್ಯಾಂಶಗಳು

- ಹಣದುಬ್ಬರ ಶೇ 1.5ರಷ್ಟು ಹೆಚ್ಚಳ ನಿರೀಕ್ಷೆ
- ಫೆ.28ರಿಂದ ಇದುವರೆಗೆ ಕಚ್ಚಾ ತೈಲ ಬೆಲೆ ಶೇ 50ರವರೆಗೆ ಏರಿಕೆ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷವು 2026–27ರ ಆರ್ಥಿಕ ವರ್ಷದುದ್ದಕ್ಕೂ ಮುಂದುವರಿದರೆ ದೇಶದ ಜಿಡಿಪಿ ಬೆಳವಣಿಗೆಯು ಶೇಕಡ 1ರಷ್ಟು ಇಳಿಕೆ ಆಗಬಹುದು. ಜೊತೆಗೆ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಶೇ 1.5ರಷ್ಟು ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದು 'ಇ.ವೈ ಎಕಾನಮಿ ವಾಚ್' ವರದಿ ಮಂಗಳವಾರ ತಿಳಿಸಿದೆ.

ಮುಂದಿನ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.8ರಿಂದ ಶೇ 7.2ರ ನಡುವೆ ಇರುವುದು ಎಂದು ಫೆಬ್ರುವರಿಯಲ್ಲಿ ಪ್ರಕಟವಾದ ವರದಿಯಲ್ಲಿ ಹೇಳಿತ್ತು.

ಜವಳಿ, ಪೇಂಟ್, ರಾಸಾಯನಿಕಗಳು, ರಸಗೊಬ್ಬರ, ಸಿಮೆಂಟ್ ಮತ್ತು ಟೈರ್ ಸೇರಿದಂತೆ ಕಾರ್ಮಿಕ ಆಧಾರಿತ ಉದ್ಯಮಗಳ ಮೇಲೆ ಸಂಘರ್ಷವು ನೇರ ಪರಿಣಾಮ ಬೀರಬಹುದು. ತೈಲ ಪೂರೈಕೆಯಲ್ಲಿನ ಅಡಚಣೆಯಿಂದ ಪೂರೈಕೆ ಮತ್ತು ಬೇಡಿಕೆಯ ಮೇಲೂ ಪರಿಣಾಮ ಬೀರಲಿದೆ ಎಂದು ಹೇಳಿದೆ.

ಭಾರತವು ತನ್ನ ಕಚ್ಚಾ ತೈಲ ಅಗತ್ಯದ ಪೈಕಿ ಶೇ 90ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ನೈಸರ್ಗಿಕ ಅನಿಲ, ರಸಗೊಬ್ಬರಕ್ಕೂ ಹೆಚ್ಚಾಗಿ ಆಮದನ್ನೇ ಅವಲಂಬಿಸಿದೆ. ಪಶ್ಚಿಮ ಏಷ್ಯಾದ ಸಂಘರ್ಷದಿಂದ ಜಾಗತಿಕವಾಗಿ ಕಚ್ಚಾ ತೈಲ ಮತ್ತು ಇಂಧನ ಮಾರುಕಟ್ಟೆಯಲ್ಲಿ ಅಡಚಣೆ ಉಂಟಾಗಿದೆ. ಇದು ಪೂರೈಕೆ, ದಾಸ್ತಾನು, ಸಾರಿಗೆ ಮತ್ತು ಬೆಲೆಯ ಮೇಲೆ ಪರಿಣಾಮ ಬೀರಲಿದೆ. ಶೀಘ್ರದಲ್ಲಿ ಸಂಘರ್ಷ ಕೊನೆಗೊಂಡರೂ, ಸಾಮಾನ್ಯ ಸ್ಥಿತಿಗೆ ಮರಳಲು ದೀರ್ಘ ಸಮಯ ತೆಗೆದುಕೊಳ್ಳಬಹುದು ಎಂದು ಹೇಳಿದೆ.

ಕೇಂದ್ರ ಸರ್ಕಾರವು ಈ ಪರಿಸ್ಥಿತಿ ನಿಭಾಯಿಸಲು ಅಗತ್ಯ ನಿಯಮಾವಳಿಗಳನ್ನು ರೂಪಿಸಬೇಕಿದೆ. ಹೆಚ್ಚು ಕೈಗಾರಿಕೆಗಳನ್ನು ಹೊಂದಿರುವ ರಾಜ್ಯಗಳಿಗೆ ಸಹಕಾರ ನೀಡಬೇಕಿದೆ. ಆರ್ಥಿಕ ಸ್ಥಿರತೆಗಾಗಿ ನಿಧಿಯೊಂದರ ಕ್ರಮಗಳ ಅಗತ್ಯವಿದೆ ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ.

ಫೆಬ್ರುವರಿ 28ರಂದು ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾಗಿದ್ದು, ಅಂದಿನಿಂದ ಇಲ್ಲಿಯವರೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಶೇ 50ರವರೆಗೆ ಏರಿಕೆಯಾಗಿದೆ. ಪಶ್ಚಿಮ ಏಷ್ಯಾದ ಬಿಕ್ಕಟ್ಟನ್ನು ಎದುರಿಸಲು ಕೇಂದ್ರ ಸರ್ಕಾರವು ಈಗಾಗಲೇ ₹1 ಲಕ್ಷ ಕೋಟಿ ಮೊತ್ತದ ಆರ್ಥಿಕ ಸ್ಥಿರೀಕರಣ ನಿಧಿಯನ್ನು ಸ್ಥಾಪಿಸಿದೆ.

ಶೇ 6.5ಕ್ಕೆ ಪ್ರಗತಿ ಇಳಿಕೆ: ಐಸಿಆರ್‌ಎ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷದಿಂದ 2026–27ರ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ನಿಧಾನವಾಗಲಿದ್ದು, ಶೇ 6.5ರಷ್ಟಾಗಬಹುದು ಎಂದು ಐಸಿಆರ್‌ಎ ಅಂದಾಜಿಸಿದೆ.

ಈ ಮೊದಲು ಐಸಿಆರ್‌ಎ ಶೇ 7.5ರಷ್ಟು ಜಿಡಿಪಿ ದರವನ್ನು ಅಂದಾಜಿಸಿತ್ತು. ಪಶ್ಚಿಮ ಏಷ್ಯಾದ ಸಂಘರ್ಷದಿಂದ ಇಂಧನ ಬೆಲೆಯಲ್ಲಿ ಏರಿಕೆಯಾಗಿದ್ದು, ಇಂಧನ ಲಭ್ಯತೆಯಲ್ಲಿ ಆತಂಕ ಹೆಚ್ಚಿಸಿದೆ. ಇದು ಜಿಡಿಪಿಯ ಬೆಳವಣಿಗೆಯ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದೆ.

ಬ್ರೆಂಟ್ ಕಚ್ಚಾ ತೈಲದ ದರವು 2026–27ರಲ್ಲಿ ಪ್ರತಿ ಬ್ಯಾರಲ್‌ಗೆ ಸರಾಸರಿ 85 ಡಾಲರ್ ಆಗಬಹುದು. ಇದರಿಂದ ದೇಶದ ಚಾಲ್ತಿ ಖಾತೆ ಕೊರತೆಯು ಶೇ 1.7ರಷ್ಟಾಗಬಹುದು. ಸಂಘರ್ಷದಿಂದ ಹಣದುಬ್ಬರ ಹೆಚ್ಚಳವಾಗುವ ನಿರೀಕ್ಷೆಯಿದ್ದು, ಹೆಚ್ಚಿನ ಅನಿಶ್ಚಿತತೆಯು ಗ್ರಾಹಕರ ಮೇಲೆ ಪರಿಣಾಮ ಬೀರಬಹುದು ಎಂದು ಹೇಳಿದೆ.

ಸುದ್ದಿ 2 ನಿಮಿಷ

2.7 ಲಕ್ಷ ಹೊಸ ಪಿಎನ್‌ಜಿ ಸಂಪರ್ಕ

ನವದೆಹಲಿ (ಪಿಟಿಐ): ಮಾರ್ಚ್ ತಿಂಗಳಲ್ಲಿ ಹೊಸದಾಗಿ 2.7 ಲಕ್ಷಕ್ಕೂ ಅಧಿಕ ಪಿಎನ್‌ಜಿ ಸಂಪರ್ಕ ಕಲ್ಪಿಸಲಾಗಿದೆ. ಇವುಗಳಿಗೆ ಅನಿಲ ಪೂರೈಕೆ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಕೇಂದ್ರ ತೈಲ ಸಚಿವಾಲಯ ತಿಳಿಸಿದೆ.

ಈ ಮೊದಲೇ ಅರ್ಜಿ ಸಲ್ಲಿಸಿದ್ದ ಗೃಹಬಳಕೆ, ವಾಣಿಜ್ಯ, ವಸತಿ ನಿಲಯಗಳು, ಕ್ಯಾಂಟೀನ್‌ಗಳಿಗೆ ಮಾರ್ಚ್‌ನಲ್ಲಿ 3.1 ಲಕ್ಷ ಪಿಎನ್‌ಜಿ ಸಂಪರ್ಕ ನೀಡಲಾಗಿದ್ದು, ಅನಿಲ ಪೂರೈಕೆ ಆರಂಭಿಸಲಾಗಿದೆ. ಫೆಬ್ರುವರಿಯಲ್ಲಿ ಕೊಳವೆ ಮೂಲಕ ನೈಸರ್ಗಿಕ ಅನಿಲದ (ಪಿಎನ್‌ಜಿ) 2.7 ಲಕ್ಷಕ್ಕೂ ಹೆಚ್ಚು ಹೊಸ ಸಂಪರ್ಕ ನೀಡಲಾಗಿದೆ ಎಂದು ತಿಳಿಸಿದೆ.



ಫೆಬ್ರುವರಿ ಅಂತ್ಯದ ವೇಳೆಗೆ ದೇಶದಲ್ಲಿ 1.64 ಕೋಟಿ ಗೃಹಬಳಕೆ ಉದ್ದೇಶದ ಪಿಎನ್‌ಜಿ ಸಂಪರ್ಕಗಳಿವೆ. 48,568 ವಾಣಿಜ್ಯ ಮತ್ತು 21,512 ಕೈಗಾರಿಕಾ ಪಿಎನ್‌ಜಿ ಸಂಪರ್ಕಗಳಿವೆ.

ಪಶ್ಚಿಮ ಏಷ್ಯಾದ ಸಂಘರ್ಷವು ಎಲ್‌ಪಿಜಿ ಸರಬರಾಜಿಗೆ ಅಡ್ಡಿಪಡಿಸುತ್ತಿರುವುದರಿಂದ, ಪಿಎನ್‌ಜಿ ಸಂಪರ್ಕ ಪಡೆದುಕೊಳ್ಳುವಂತೆ ನಾಗರಿಕರಿಗೆ ಸರ್ಕಾರ ತಿಳಿಸಿದೆ.

₹51 ಲಕ್ಷ ಕೋಟಿ ಕರಗಿದ ಸಂಪತ್ತು

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷ ಆರಂಭವಾದ ಬಳಿಕ (ಫೆ.28) ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಇಲ್ಲಿಯವರೆಗೆ 9,339 ಅಂಶ (ಶೇ 11.48ರಷ್ಟು) ಕುಸಿದಿದೆ.

ಸೂಚ್ಯಂಕ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ₹51 ಲಕ್ಷ ಕೋಟಿ ಕರಗಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ ₹412 ಲಕ್ಷ ಕೋಟಿಗೆ ಇಳಿದಿದೆ. ಕಚ್ಚಾ ತೈಲದ ಬೆಲೆ ಏರಿಕೆ ಮತ್ತು ವಿದೇಶಿ ಬಂಡವಾಳದ ಹೊರಹರಿವು ಸೂಚ್ಯಂಕ ಇಳಿಕೆಗೆ ಕಾರಣವಾಗಿವೆ.

ಸೆನ್ಸೆಕ್ಸ್ ಇಲ್ಲಿಯವರೆಗೆ 86,159 ಅಂಶ ಏರಿಕೆ ಕಂಡಿತ್ತು. ಇದು ಸೆನ್ಸೆಕ್ಸ್‌ನ ಗರಿಷ್ಠ ಜಿಗಿತವಾಗಿತ್ತು. ಸೋಮವಾರದ ವಹಿವಾಟಿನಲ್ಲಿ 71,947 ಅಂಶಕ್ಕೆ ಇಳಿದಿದ್ದು, ಇಲ್ಲಿಯವರೆಗೆ 14,211 ಅಂಶ (ಶೇ 16.49ರಷ್ಟು) ಕುಸಿದಿದೆ.

₹10 ಲಕ್ಷದ ಗರಿಷ್ಠ ಮೌಲ್ಯದ ಮಿತಿ ತೆಗೆದುಹಾಕಿದ ಸಿಬಿಐಸಿ

ಇ–ಕಾಮರ್ಸ್ ರಫ್ತು: ಸುಧಾರಣಾ ಕ್ರಮ ಜಾರಿಗೆ

ನವದೆಹಲಿ (ಪಿಟಿಐ): ಇ–ಕಾಮರ್ಸ್ ರಫ್ತು ಮತ್ತು ಕೊರಿಯರ್ ಮೂಲಕ ನಡೆಯುವ ಆಮದು-ರಫ್ತು ಪ್ರಕ್ರಿಯೆಗಳನ್ನು ಬಲಪಡಿಸಲು ಹಾಗೂ ಸರಳಗೊಳಿಸಲು ಪರೋಕ್ಷ ತೆರಿಗೆಗಳು ಮತ್ತು ಸುಂಕಗಳ ಕೇಂದ್ರೀಯ ಮಂಡಳಿಯು (ಸಿಬಿಐಸಿ) ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಸಮಗ್ರ ಸುಧಾರಣಾ ಕ್ರಮಗಳನ್ನು ಜಾರಿಗೆ ತಂದಿದೆ.

ರಫ್ತು ಮಾಡುವ ಪ್ರತಿ ರವಾನೆಯ ಮೇಲೆ ಇದ್ದ ₹10 ಲಕ್ಷದ ಗರಿಷ್ಠ ಮೌಲ್ಯದ ಮಿತಿಯನ್ನು ಸಂಪೂರ್ಣವಾಗಿ ತೆಗೆದುಹಾಕುವುದು, ವಿದೇಶಕ್ಕೆ ಕಳುಹಿಸಿದ ನಂತರ ವಾಪಸ್ ಬರುವ ಅಥವಾ ತಿರಸ್ಕರಿಸಲ್ಪಟ್ಟ ಪಾರ್ಸೆಲ್‌ಗಳನ್ನು ನಿರ್ವಹಿಸಲು ಸರಳವಾದ ಹೊಸ ಚೌಕಟ್ಟು ರೂಪಿಸುವುದು, ಕ್ಲಿಯರ್ ಆಗದ ಪಾರ್ಸೆಲ್‌ಗಳನ್ನು ಮರಳಿ ಮೂಲ ಸ್ಥಾನಕ್ಕೆ ಕಳುಹಿಸಲು ಕಾನೂನುಬದ್ಧ ಬೆಂಬಲವಿರುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ ಎಂದು ಹಣಕಾಸು ಸಚಿವಾಲಯ ಮಂಗಳವಾರ ತಿಳಿಸಿದೆ.



ಇದು ಸರಕು ಸಾಗಣೆಯ ಅಡಚಣೆಗಳನ್ನು ಕಡಿಮೆ ಮಾಡುತ್ತದೆ. ಭಾರತದ ರಫ್ತು ಸಾಮರ್ಥ್ಯವನ್ನು ಜಾಗತಿಕ ಮಟ್ಟದಲ್ಲಿ ಬಲಪಡಿಸುತ್ತದೆ. ವಿಶೇಷವಾಗಿ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು, ಕುಶಲಕರ್ಮಿಗಳು ಮತ್ತು ನವೋದ್ಯಮಗಳಿಗೆ ಇದು ಸಹಕಾರಿಯಾಗಲಿದೆ. ಈ ಸುಧಾರಣೆಗಳ ಭಾಗವಾಗಿ, ಕೊರಿಯರ್ ಮೂಲಕ ಕಳುಹಿಸುವ ರಫ್ತು ಸರಕುಗಳ ಮೇಲಿದ್ದ ₹10 ಲಕ್ಷದ ಮಿತಿಯನ್ನು ಈಗ ತೆಗೆದುಹಾಕಲಾಗಿದೆ ಎಂದು ಹೇಳಿದೆ.

ಈ ಕ್ರಮವು ರಫ್ತು ಪ್ರಮಾಣವನ್ನು ಗಮನಾರ್ಹವಾಗಿ ಹೆಚ್ಚಿಸುವ ನಿರೀಕ್ಷೆಯಿದೆ. ವಿಶೇಷವಾಗಿ ಇ–ಕಾಮರ್ಸ್ ರಫ್ತುದಾರರಿಗೆ ಇದು ಹೆಚ್ಚು ಸಹಕಾರಿಯಾಗಲಿದೆ. ಸರಕುಗಳ ಸಾಗಣೆಯ ಮೌಲ್ಯದ ವಿಚಾರದಲ್ಲಿ ಹೆಚ್ಚಿನ ಹೊಂದಾಣಿಕೆಗೆ ಅವಕಾಶ ನೀಡುತ್ತದೆ. ಕೊರಿಯರ್ ಮೂಲಕವೇ ಸುಲಭವಾಗಿ ರಫ್ತು ಮಾಡಲು ಅನುವು ಮಾಡಿಕೊಡುತ್ತದೆ. ಇದರಿಂದ, ಮೌಲ್ಯದ ಮಿತಿಗಳ ಕಾರಣಕ್ಕಾಗಿ ಇಂತಹ ಸಾಗಣೆಗಳನ್ನು ಸಾಂಪ್ರದಾಯಿಕ ವಿಮಾನ ಅಥವಾ ಸಮುದ್ರದ ಮೂಲಕ ಸರಕು ಸಾಗಣೆಗೆ ಬದಲಾಯಿಸುವ ಅಗತ್ಯವಿರುವುದಿಲ್ಲ ಎಂದು ತಿಳಿಸಿದೆ.

ಕಳೆದ ತಿಂಗಳು ಮಂಡಿಸಿದ್ದ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಈ ಸುಧಾರಣಾ ಕ್ರಮಗಳನ್ನು ಘೋಷಿಸಲಾಗಿತ್ತು.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹17000-20000
ದಾವಣಗೆರೆ	₹11400-14000
ಪುತ್ತೂರು	₹5000-16500

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1765 (1770)
ಸೋಯಾ (ರಿಫೈನ್ಡ್)	₹1560 (1560)
ಸೂರ್ಯಕಾಂತಿ (ರಿಫೈನ್ಡ್)	₹1710 (1710)
ಪಾಮೋಲಿನ್	₹1450 (1450)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹455
	12 ಕ್ಕೆ	₹72
ಮೈಸೂರು:	100 ಕ್ಕೆ	₹460

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹435-769
ದ್ವಿತಳಿ (ಬಿ.ವಿ)	₹425-808

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹218
ಆರ್‌ಎಸ್‌ಎಸ್-5	₹212
ಗುಡ್ ಲಾಟ್	₹192

ಐಟಿಆರ್ ನಮೂನೆ ಪ್ರಕಟ



ನವದೆಹಲಿ (ಪಿಟಿಐ): 2026–27ರ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ರಿಟರ್ನ್ಸ್‌ನ (ಐಟಿಆರ್) ಎಲ್ಲ 7 ನಮೂನೆಗಳನ್ನು ಆದಾಯ ತೆರಿಗೆ ಇಲಾಖೆಯು ಪ್ರಕಟಿಸಿದೆ.

ಐಟಿಆರ್ ನಮೂನೆಗಳು (1–4) ಸಣ್ಣ ಮತ್ತು ಮಧ್ಯಮ ತೆರಿಗೆ ಪಾವತಿದಾರರಿಗೆ ಸಂಬಂಧಿಸಿವೆ. ಈ ನಮೂನೆಗಳನ್ನು ಸೋಮವಾರ ಬಿಡುಗಡೆ ಮಾಡಲಾಗಿದೆ. 2,3,5,6 ಮತ್ತು 7 ನಮೂನೆಗಳನ್ನು ಮಂಗಳವಾರ ಬಿಡುಗಡೆ ಮಾಡಲಾಗಿದೆ.

2025–26ರ ಆರ್ಥಿಕ ವರ್ಷದಲ್ಲಿ ಗಳಿಸಿದ ವರಮಾನಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳು, ವ್ಯವಹಾರ ಮತ್ತು ಇತರೆ ಸಂಸ್ಥೆಗಳು ಆದಾಯ ತೆರಿಗೆ ವಿವರ ಸಲ್ಲಿಸುವುದನ್ನು (ಐ.ಟಿ ರಿಟರ್ನ್ಸ್) ಆರಂಭಿಸಬಹುದಾಗಿದೆ. ಐಟಿಆರ್ ಸಲ್ಲಿಕೆಗೆ ಜುಲೈ 31 ಕೊನೆಯ ದಿನವಾಗಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ಹಣಕಾಸು ಕಾಯ್ದೆ: ಅಧಿಸೂಚನೆ ಪ್ರಕಟ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ಹಣಕಾಸು ಕಾಯ್ದೆ–2026ರ ಅಧಿಸೂಚನೆಯನ್ನು ಹೊರಡಿಸಿದೆ. ಈ ಕಾಯ್ದೆಯು ತೆರಿಗೆ ನಿಬಂಧನೆಗಳಲ್ಲಿ ಬದಲಾವಣೆಗಳನ್ನು ತರಲು ಅವಕಾಶ ಮಾಡಿಕೊಡುತ್ತದೆ.

ಈ ಕಾಯ್ದೆಯು ಮಾರ್ಚ್ 30ರಂದು ರಾಷ್ಟ್ರಪತಿ ಒಪ್ಪಿಗೆ ಪಡೆದುಕೊಂಡಿದ್ದು, 2026-27ನೇ ಸಾಲಿಗೆ ಕೇಂದ್ರ ಸರ್ಕಾರದ ಹಣಕಾಸು ಪ್ರಸ್ತಾವಗಳನ್ನು ಜಾರಿಗೆ ತರುತ್ತದೆ ಎಂದು ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯ ಅಧಿಸೂಚನೆಯಲ್ಲಿ ತಿಳಿಸಿದೆ.

2026–27ರ ಆರ್ಥಿಕ ವರ್ಷದಲ್ಲಿ ಕೇಂದ್ರದ ಬಜೆಟ್ ಗಾತ್ರ ₹53.47 ಲಕ್ಷ ಕೋಟಿಯಾಗಿದೆ. ಇದು 2025–26ರ ಬಜೆಟ್‌ಗೆ ಹೋಲಿಸಿದರೆ ಶೇ 7.7ರಷ್ಟು ಅಧಿಕ. ಬಂಡವಾಳ ವೆಚ್ಚ ₹12.2 ಲಕ್ಷ ಕೋಟಿಯಾಗಿದೆ. ತೆರಿಗೆ ಸಂಗ್ರಹದ ಮೂಲಕ ₹44.04 ಲಕ್ಷ ಕೋಟಿ ಮತ್ತು ಸಾಲದ ಮೂಲಕ ₹17.2 ಲಕ್ಷ ಕೋಟಿ ಪಡೆಯಲಿದೆ. ಶೇ 4.3ರ ವಿತ್ತೀಯ ಕೊರತೆಯ ಗುರಿ ಹೊಂದಿದೆ.

ಅಡಿಕೆ ಧಾರಣೆ

ಪುತ್ತೂರು					
ಕೋಕ	20000-33500	ಬೆಟ್ಟೆ	37619-38089	ಚಾಲಿ	37627-37627
ಹಳತು	26000-47500	ಕೆಂಪುಗೋಟು	31609-32010	ಕೋಕ	19427-19427
		ರಾಶಿ	54339-54779	**ಶಿವಮೊಗ್ಗ**	
ಚಿತ್ರದುರ್ಗ		**ಸಾಗರ**		ರಾಶಿ	45000-52109
ಆಪಿ	54829-55269	ಬಿಳಿಗೋಟು	20157-20157	ಗೊರಬಲು	20009-25006

ಮುಂಬೈ ಧಾರಣೆ (ಶೇಂಗಾ)

31-03-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1775 (1780)
ಒಂದು ವಾರದ ಡೆಲಿವರಿ	1770 (1775)
ಪಾಮ್ ವಾರದ ಡೆಲಿವರಿ	1448 (1448)
ಸೂರ್ಯಕಾಂತಿ ಎಣ್ಣೆ ಕಚ್ಚಾ	1610 (1610)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,46,400 (1,46,000)
ಬೆಳ್ಳಿ ಕೆ.ಜಿಗೆ	2,35,000 (2,29,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಇಂಡಿಗೊ: ಸಿಇಒ ನೇಮಕ



ವಿಲಿಯಂ ವಾಲ್ಷ್

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ವಿಮಾನಯಾನ ಕಂಪನಿ ಇಂಡಿಗೊ, ವಿಲಿಯಂ ವಾಲ್ಷ್ ಅವರನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ (ಸಿಇಒ) ನೇಮಿಸಿದೆ.

ಇಂಟರ್‌ಗ್ಲೋಬ್ ಏವಿಯೇಷನ್ ಆಡಳಿತ ಮಂಡಳಿಯು ವಾಲ್ಷ್ ಅವರ ನೇಮಕಕ್ಕೆ ಅನುಮೋದನೆ ನೀಡಿದೆ.

ಪೈಲಟ್ ಕೂಡ ಆಗಿರುವ ವಾಲ್ಷ್ ಅವರು ಪ್ರಸ್ತುತ ಅಂತರರಾಷ್ಟ್ರೀಯ ವಾಯುಸಾರಿಗೆ ಒಕ್ಕೂಟದ (ಐಎಟಿಎ) ಮುಖ್ಯಸ್ಥರಾಗಿದ್ದಾರೆ. ಐಎಟಿಎಯಲ್ಲಿ ಅವರ ಅಧಿಕಾರಾವಧಿ ಜುಲೈ 31ರಂದು ಮುಕ್ತಾಯಗೊಳ್ಳಲಿದ್ದು, ಆಗಸ್ಟ್ 3ರ ನಂತರ ಕಂಪನಿಗೆ ಸೇರುವ ನಿರೀಕ್ಷೆಯಿದೆ ಎಂದು ಇಂಡಿಗೊ ಪ್ರಕಟಣೆಯಲ್ಲಿ ತಿಳಿಸಿದೆ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ಕಂಪನಿಯ ವಿಮಾನಗಳ ಕಾರ್ಯಾಚರಣೆಯಲ್ಲಿ ಭಾರಿ ಅಡಚಣೆ ಉಂಟಾಗಿತ್ತು. ಆ ಬಳಿಕ ಇಂಡಿಗೊ ಸಿಇಒ ಆಗಿದ್ದ ಪೀಟರ್ ಎಲ್‌ಬರ್ಟ್ ರಾಜೀನಾಮೆ ನೀಡಿದ್ದರು.

ಯುದ್ಧ: ಪುಟಿನ್–ಅಬ್ದುಲ್ ಮಾತುಕತೆ

ಮಾಸ್ಕೊ (ರಾಯಿಟರ್ಸ್): ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಈಜಿಪ್ಟ್ ಅಧ್ಯಕ್ಷ ಅಬ್ದುಲ್ ಫತ್ತಾಹ್ ಅಲ್–ಸಿಸಿ ಮಂಗಳವಾರ ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕುರಿತು ದೂರವಾಣಿ ಮೂಲಕ ಚರ್ಚಿಸಿದ್ದಾರೆ ಎಂದು ರಷ್ಯಾದ ಸರ್ಕಾರಿ ಸುದ್ದಿ ಸಂಸ್ಥೆ ವರದಿ ಮಾಡಿದೆ. ಉಭಯ ನಾಯಕರು ಇಂಧನ ಮತ್ತು ಉದ್ಯಮದಲ್ಲಿ ದೊಡ್ಡ ಪ್ರಮಾಣದ ಹೂಡಿಕೆ ಯೋಜನೆಗಳ ಬಗ್ಗೆ ಮಾತನಾಡಿದರು ಎಂದು ಹೇಳಿದೆ.

ಇರಾನ್ ಮೇಲೆ ಬಂಕರ್ ಬಾಂಬ್

ಒಂದನೇ ಪುಟದಿಂದ...

'ಹೊರ್ಮುಜ್ ಜಲಸಂಧಿಯನ್ನು ತಕ್ಷಣವೇ ವ್ಯವಹಾರಕ್ಕೆ ತೆರೆಯದಿದ್ದರೆ, ನಾವು ಇರಾನ್‌ಗೆ ತಕ್ಕ ಉತ್ತರ ನೀಡಲಿದ್ದೇವೆ. ಅಲ್ಲಿನ ವಿದ್ಯುತ್ ಉತ್ಪಾದನಾ ಘಟಕ, ಖಾರ್ಗ್ ದ್ವೀಪದಲ್ಲಿರುವ ತೈಲ ಘಟಕಗಳನ್ನು (ಸಾಧ್ಯವಾದರೆ ಎಲ್ಲ ನೀರು ನಿರ್ಲವಣೀಕರಣ ಘಟಕಗಳನ್ನು) ಸ್ಫೋಟಿಸಲಿದ್ದೇವೆ' ಎಂದು ಡೊನಾಲ್ಡ್ ಟ್ರಂಪ್ ಸೋಮವಾರವಷ್ಟೇ ಎಚ್ಚರಿಕೆ ನೀಡಿದ್ದರು. ಇದಾದ ಮರುದಿನವೇ ಈ ದಾಳಿ ನಡೆದಿದೆ.

'ಈ ಪರಮಾಣು ಸಂಸ್ಕರಣಾ ಘಟಕಕ್ಕಾಗಿ ಇರಾನ್ 18 ಕಂಟೇನರ್‌ಗಳಲ್ಲಿ ಸಂಸ್ಕರಿಸಿದ ಯುರೇನಿಯಂ ಅನ್ನು ರವಾನಿಸಿದ್ದ ದೃಶ್ಯವನ್ನು ಅಮೆರಿಕದ ಉಪಗ್ರಹಗಳು ಸೆರೆಹಿಡಿದಿದ್ದವು. ಶೇಕಡಾ 60ರಷ್ಟು ಶುದ್ಧತೆ ಹೊಂದಿದ್ದ ಈ ಯುರೇನಿಯಂನಿಂದ, ಭಾರಿ ಪ್ರಮಾಣದ ಶಸ್ತ್ರಾಸ್ತ್ರ ತಯಾರಿಸಲು ಇರಾನ್ ಯೋಜನೆ ರೂಪಿಸಿತ್ತು' ಎಂದು ತಜ್ಞರು ಅಂದಾಜಿಸಿದ್ದಾರೆ.

'ಇಸ್ಫಹಾನ್‌ನಲ್ಲಿದ್ದ ಸೇನಾ ನೆಲೆಗಳನ್ನೂ ಗುರಿಯಾಗಿರಿಸಿ ದಾಳಿ ನಡೆದಿದೆ' ಎಂದು ಇಲ್ಲಿನ ಗವರ್ನರ್ ಕಚೇರಿಯ ಭದ್ರತಾ ಅಧಿಕಾರಿ ಅಕ್ಬರ್ ಸಲೇಹಿ ಕೂಡ ಖಚಿತಪಡಿಸಿದ್ದಾರೆ. ಹಾನಿಯ ವಿವರ ಹಾಗೂ ಸಾವು–ನೋವಿನ ಕುರಿತು ಯಾವುದೇ ಮಾಹಿತಿ ನೀಡಿಲ್ಲ.

ಇಸ್ಫಹಾನ್ ಪ್ರಾಂತ್ಯವು ಇರಾನ್‌ನ ಪ್ರಮುಖ ರಕ್ಷಣಾ ಕೈಗಾರಿಕೆಗಳನ್ನು ಹೊಂದಿದ್ದು, ನತಾಂಜ್ ಅಣು ಸ್ಥಾವರದ ಬಳಿಕ ದೇಶದ ಪ್ರಮುಖ ಅಣುಸ್ಥಾವರವಾಗಿದೆ. ಇರಾನ್‌ನ ಅತಿ ದೊಡ್ಡ ಉಕ್ಕು ಕಾರ್ಖಾನೆ ಹೊಂದಿದ್ದ ಮೊಬಾರಕ್ ಘಟಕವು ಬಾಂಬ್ ದಾಳಿಯಿಂದಾಗಿ ತೀವ್ರ ಹಾನಿಗೊಳಗಾಗಿದೆ.

ದಾಳಿಯಿಂದ ಇರಾನ್‌ನ ಬದ್ರ್ ವಾಯುನೆಲೆ, 8ನೇ ಶಿಕಾರಿ ವಾಯುನೆಲೆ, ವಾಯುಪಡೆಯ 4ನೇ ವಾಯುನೆಲೆ, ಇಸ್ಫಹಾನ್ ತಾಂತ್ರಿಕ ವಿಶ್ವವಿದ್ಯಾಲಯ ಕಟ್ಟಡಕ್ಕೂ ಹಾನಿಯಾಗಿದೆ. ಯುನೆಸ್ಕೊ ವಿಶ್ವ ಪಾರಂಪರಿಕ ತಾಣವಾದ ನಕ್ಶ್–ಎ–ಜಹಾ ವೃತ್ತ, ಸಫಾವಿದ್ ಶಕೆಗೆ ಸೇರಿದ ಅಬ್ಬಾಸಿ ಜಾಮ್–ಎ ಮಸೀದಿ, ಅಲಿ ಕಾಪು ಅರಮನೆ ಕಟ್ಟಡಕ್ಕೆ ಹಾನಿ ಉಂಟಾಗಿದೆ.

ಕೆಶ್ಮ್ ದ್ವೀಪದ ಮೇಲೂ ದಾಳಿ: 'ಕೆಶ್ಮ್ ದ್ವೀಪದಲ್ಲಿದ್ದ ನಿರ್ಲವಣೀಕರಣ ಘಟಕದ ಮೇಲೂ ವಾಯುದಾಳಿ ನಡೆದಿದೆ. ಇದರಿಂದ ಇಡೀ ಘಟಕ ಹಾನಿಗೆ ಒಳಗಾಗಿದೆ. ಅದನ್ನು ತಕ್ಷಣಕ್ಕೆ ದುರಸ್ತಿ ಮಾಡಲು ಸಾಧ್ಯವಿಲ್ಲ' ಎಂದು ಆರೋಗ್ಯ ಇಲಾಖೆಯ ಅಧಿಕಾರಿ ಮೊಹ್ಸೆನ್ ಫರ್ಹಾದಿ ಹೇಳಿಕೆ ಉಲ್ಲೇಖಿಸಿ 'ಐಎಸ್‌ಎನ್‌ಎ' ಸುದ್ದಿಸಂಸ್ಥೆ ವರದಿ ಮಾಡಿದೆ.

ಕೆಶ್ಮ್ ಇರಾನ್ ಕೊಲ್ಲಿಯಲ್ಲಿರುವ ಅತಿ ದೊಡ್ಡ ದ್ವೀಪವಾಗಿದ್ದು, ಹೊರ್ಮುಜ್ ಜಲಸಂಧಿಯಾದ್ಯಂತ ನೂರಾರು ಕಿಲೋಮೀಟರ್ ಹರಡಿಕೊಂಡಿದೆ.

ತೈಲ ಟ್ಯಾಂಕರ್ ಮೇಲೆ ಇರಾನ್ ದಾಳಿ: ದುಬೈ ಕಡಲತೀರದಲ್ಲಿದ್ದ ಕುವೈತ್ ದೇಶಕ್ಕೆ ಸೇರಿದ ಕಚ್ಚಾತೈಲ ಹಡಗಿನ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದೆ. ಈ ವೇಳೆ ದಟ್ಟವಾದ ಬೆಂಕಿ ಹಾಗೂ ಹೊಗೆ ಕಾಣಿಸಿಕೊಂಡಿತು. ಆದರೆ, ಯಾವುದೇ ತೈಲ ಸೋರಿಕೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ಮೇಲೆ ನಡೆದ ಮತ್ತೊಂದು ಡ್ರೋನ್ ದಾಳಿಯಲ್ಲಿ ನಾಲ್ಕು ಮಂದಿ ಗಾಯಗೊಂಡಿದ್ದಾರೆ.

ಬಹರೇನ್ ನಗರದಲ್ಲಿ ಕೂಡ ಮಂಗಳವಾರ ಬೆಳಿಗ್ಗೆಯಿಂದಲೇ ಸೈರನ್‌ಗಳು ಮೊಳಗಿದವು. ಸೌದಿ ಅರೇಬಿಯಾದ ರಾಜಧಾನಿ ರಿಯಾದ್ ನಗರವನ್ನು ಗುರಿಯಾಗಿರಿಸಿ ಇರಾನ್ ಮೂರು ಖಂಡಾಂತರ ಕ್ಷಿಪಣಿ ದಾಳಿ ನಡೆಸಿದ್ದು, ಅವುಗಳನ್ನು ಮಾರ್ಗ ಮಧ್ಯೆ ಹೊಡೆದುರುಳಿಸಲಾಗಿದೆ. ಇರಾನ್ ನಡೆಸಿದ ದಾಳಿಯಲ್ಲಿ ಇಸ್ರೇಲ್‌ನ ಹಲವು ನಗರಗಳಲ್ಲಿ ಭಾರಿ ಸ್ಫೋಟಗಳು ಉಂಟಾದವು.

'ನಮ್ಮ ನಾಯಕರನ್ನು ಕೊಂದರೆ, ಅಮೆರಿಕ ಕಂಪನಿಗಳೇ ಗುರಿ'

ಟೆಹರಾನ್ (ಎಎಫ್‌ಪಿ): 'ಇರಾನ್‌ನ ಹೆಚ್ಚು ನಾಯಕರ ಹತ್ಯೆ ಆದರೆ, ಅಮೆರಿಕದ ತಂತ್ರಜ್ಞಾನ ಸಂಸ್ಥೆಗಳಾದ ಆ್ಯಪಲ್, ಗೂಗಲ್, ಮೆಟಾ ಸಂಸ್ಥೆ ಗಳ ಕೊಲ್ಲಿ ರಾಷ್ಟ್ರಗಳಲ್ಲಿರುವ ಅವುಗಳ ಕೇಂದ್ರಗಳ ಮೇಲೆ ದಾಳಿ ನಡೆಸಲಾಗುವುದು' ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ (ಐಆರ್‌ಜಿಸಿ) ಎಚ್ಚರಿಕೆ ನೀಡಿದೆ.

'ಇರಾನ್‌ನ ಪ್ರತಿಯೊಂದು ಹತ್ಯೆಗೆ ಪ್ರತಿಯಾಗಿ ಟೆಹರಾನ್‌ನ ಸ್ಥಳೀಯ ಕಾಲಮಾನ ಬುಧವಾರ (ಏ.1) ಬೆಳಿಗ್ಗೆ 8 ಗಂಟೆಯಿಂದ ಅಮೆರಿಕದ ಕಂಪನಿಗಳ ಮೇಲೆ ದಾಳಿ ನಡೆಸಲಾಗುವುದು. ತಮ್ಮ ಜೀವ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಈ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರು ಕೂಡಲೇ ಅಲ್ಲಿಂದ ತೆರಳಬೇಕು' ಎಂದು ಐಆರ್‌ಜಿಸಿ ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

'ಇರಾನ್‌ನ ಅತ್ಯುನ್ನತ ನಾಯಕರನ್ನು ಗುರಿಯಾಗಿರಿಸಿ ದಾಳಿ ನಡೆಸದಂತೆ ಅಮೆರಿಕ ಸರ್ಕಾರ, ಅಲ್ಲಿನ ತಂತ್ರಜ್ಞಾನ ಸಂಸ್ಥೆಗಳಿಗೆ ಈ ಹಿಂದೆ ನೀಡಿದ್ದ ಎಚ್ಚರಿಕೆಯನ್ನು ನಿರ್ಲಕ್ಷಿಸಲಾಗಿದೆ. ಈ ಸಂಸ್ಥೆಗಳೇ ನಮ್ಮ ನಾಯಕರ ಹತ್ಯೆಯ ಗುರಿಯನ್ನು ವಿನ್ಯಾಸಗೊಳಿಸಿ, ಪತ್ತೆಹಚ್ಚುವಲ್ಲಿ ಮುಖ್ಯ ಕೆಲಸ ಮಾಡುತ್ತಿವೆ. ಹೀಗಾಗಿ, ಇಂತಹ ಸಂಸ್ಥೆಗಳಿಗೆ ತಕ್ಕ ಪಾಠ ಕಲಿಸಲಾಗುವುದು' ಎಂದು ತಿಳಿಸಿದೆ.

ಯಾವ ಕಂಪನಿಗಳು ಟಾರ್ಗೆಟ್: ಗೂಗಲ್, ಡೆಲ್ ಟೆಕ್ನಾಲಜೀಸ್, ಮೈಕ್ರೊಸಾಫ್ಟ್, ಎಚ್‌ಪಿ, ಸಿಸ್ಕೊ, ಇಂಟೆಲ್, ಒರಾಕಲ್, ಆ್ಯಪಲ್, ಮೆಟಾ ಪ್ಲಾಟ್‌ಫಾರ್ಮ್‌ಗಳು (ಫೇಸ್‌ಬುಕ್, ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಮ್), ಐಬಿಎಂ, ಜೆ.ಪಿ. ಮಾರ್ಗನ್, ಟೆಸ್ಲಾ, ಜನರಲ್ ಎಲೆಕ್ಟ್ರಿಕ್, ಬೋಯಿಂಗ್.

'ಯುದ್ಧ ಅಂತ್ಯಕ್ಕೆ ಉತ್ಸುಕ'

ಒಂದನೇ ಪುಟದಿಂದ...

ಹೀಗಾಗಿ, ಜಾಗತಿಕ ತೈಲ ಸರಬರಾಜಿನ ಪ್ರಮುಖ ಮಾರ್ಗವನ್ನು ತೆರೆಯುವ ಪ್ರಯತ್ನ ಮುಂದೂಡಿಕೆಯಾಗುವ ಸಾಧ್ಯತೆ ಇದೆ ಎಂದು 'ವಾಲ್‌ಸ್ಟ್ರೀಟ್ ಜರ್ನಲ್' ವರದಿಯಲ್ಲಿ ತಿಳಿಸಿದೆ.

ಅಮೆರಿಕವು ಯುದ್ಧ ವಿರಾಮಕ್ಕೆ ರಾಜತಾಂತ್ರಿಕ ಮಾರ್ಗ ಹಿಡಿಯುವ ಮೊದಲು ಇರಾನ್‌ನ ನೌಕಾ ಸಾಮರ್ಥ್ಯ ಮತ್ತು ಕ್ಷಿಪಣಿ ದಾಸ್ತಾನುಗಳನ್ನು ದುರ್ಬಲಗೊಳಿಸುವ ಕಾರ್ಯಾಚರಣೆಗೆ ಆದ್ಯತೆ ನೀಡುತ್ತಿದೆ. ರಾಜತಾಂತ್ರಿಕ ಪ್ರಯತ್ನಗಳು ವಿಫಲವಾದರೆ, ಯುರೋಪ್ ಮತ್ತು ಕೊಲ್ಲಿಯಲ್ಲಿರುವ ಮಿತ್ರರಾಷ್ಟ್ರಗಳು ಜಲಸಂಧಿಯನ್ನು ಮತ್ತೆ ತೆರೆಯುವಲ್ಲಿ ಮುಂದಾಳತ್ವ ವಹಿಸುವಂತೆ ಅಮೆರಿಕ ಒತ್ತಾಯಿಸುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳ ಹೇಳಿಕೆಯನ್ನು ಉಲ್ಲೇಖಿಸಿ ವರದಿ ಮಾಡಿದೆ.

ಎಶಾಫಿ ಹತ್ಯೆ

ಒಂದನೇ ಪುಟದಿಂದ...

ಎಶಾಫಿ ಜೊತೆಗೆ ಅವರ ಕುಟುಂಬದ ಹಲವು ಸದಸ್ಯರು ಮೃತಪಟ್ಟಿದ್ದಾರೆ ಎಂದು ಇರಾನ್‌ನ ಮಾಧ್ಯಮಗಳಿಗೆ ಕಳುಹಿಸಿದ ಪ್ರಕಟಣೆಯಲ್ಲಿ ತಿಳಿಸಿದೆ. ಈ ಕುರಿತಂತೆ ಹೆಚ್ಚಿನ ಮಾಹಿತಿ ನೀಡಲು ನಿರಾಕರಿಸಿದೆ.

ಕಚ್ಚಾ ತೈಲ ದರ ಏರಿಕೆ

ಹೊರ್ಮುಜ್ ಜಲಸಂಧಿಯಲ್ಲಿ ಇರಾನ್ ತನ್ನ ಬಲವಾದ ಹಿಡಿತ ಮುಂದುವರಿಸಿದ್ದು, ಜಾಗತಿಕ ತೈಲ ಮಾರುಕಟ್ಟೆ ಮೇಲೆ ತೀವ್ರ ಪರಿಣಾಮ ಬೀರಿದೆ. ಶಾಂತಿ ಸಂದರ್ಭದಲ್ಲಿ ಜಾಗತಿಕವಾಗಿ ಐದನೇ ಒಂದರಷ್ಟು ಕಚ್ಚಾ ತೈಲ ಈ ಮಾರ್ಗದಿಂದಲೇ ಪೂರೈಕೆಯಾಗುತ್ತಿತ್ತು. ಇದೀಗ ಅಮೆರಿಕ ಹಾಗೂ ಯುರೋಪ್‌ನ ಹಲವು ಮಿತ್ರರಾಷ್ಟ್ರಗಳ ತೈಲ ಹಡಗುಗಳ ಸಂಚಾರಕ್ಕೆ ಇರಾನ್ ತಡೆಯೊಡ್ಡಿದೆ. ಇದರಿಂದ, ವಿಶ್ವದ ಷೇರು ಮಾರುಕಟ್ಟೆ ತೀವ್ರ ಕುಸಿತ ದಾಖಲಿಸಿದ್ದು, ನಿತ್ಯ ಬಳಕೆಯ ಸರಕುಗಳು ತುಟ್ಟಿಯಾಗಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರವು ಪ್ರತಿ ಬ್ಯಾರಲ್‌ಗೆ ಮಂಗಳವಾರ 106 ಡಾಲರ್ ಇತ್ತು. ಫೆಬ್ರುವರಿ 28ರಂದು ಯುದ್ಧ ಆರಂಭಗೊಂಡ ನಂತರ ಕಚ್ಚಾತೈಲ ದರದಲ್ಲಿ ಶೇಕಡ 45ರಷ್ಟು ಏರಿಕೆ ಆಗಿದೆ.

ದಿನದ ಪ್ರಮುಖ ಬೆಳವಣಿಗೆಗಳು

- ಕೆಶ್ಮ್ ದ್ವೀಪದಲ್ಲಿದ್ದ ನಿರ್ಲವಣೀಕರಣ ಘಟಕದ ಮೇಲೆ ವಾಯುದಾಳಿ
- ದಕ್ಷಿಣ ದುಬೈನ ಮನೆಗಳ ಮೇಲೆ ಕ್ಷಿಪಣಿ ದಾಳಿ; 4 ಮಂದಿಗೆ ಗಾಯ
- ಇಸ್ರೇಲ್‌ನ ಟೆಲ್ ಅವೀವ್‌ನ ಆಸ್ಪತ್ರೆ ಮೇಲೆ ಇರಾನ್ ದಾಳಿ; 8 ಮಂದಿಗೆ ಗಾಯ
- ಸೌದಿಯ ಅಲ್ ಖರ್ಜ್ ಮೇಲೆ ಡ್ರೋನ್ ದಾಳಿ– ಇಬ್ಬರಿಗೆ ಗಾಯ
- ಇರಾಕ್‌ನ ಎರ್ಬಿಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾರಿ ಸ್ಫೋಟ
- ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಬಂಡುಕೋರರ ವಿರುದ್ಧದ ಹೋರಾಟದಲ್ಲಿ ನಾಲ್ವರು ಸೈನಿಕರ ಸಾವು–ಇಸ್ರೇಲ್ ಹೇಳಿಕೆ
- ಇಸ್ರೇಲ್ ದಾಳಿಯಲ್ಲಿ ಶಾಂತಿಪಾಲನಾ ಪಡೆಗೆ ಸೇರಿದ ಇಂಡೋನೇಷ್ಯಾದ ಮೂವರು ಯೋಧರು ಬಲಿ

'ಇಂಧನ: ನೀವೇ ವ್ಯವಸ್ಥೆ ಮಾಡಿಕೊಳ್ಳಿ'

ದುಬೈ(ಎಪಿ): 'ಪಶ್ಚಿಮ ಏಷ್ಯಾ ಯುದ್ಧದಿಂದಾಗಿ ಇಂಧನ ಬೆಲೆಗಳಲ್ಲಿ ಏರಿಕೆ ಆಗಿರುವ ಬಗ್ಗೆ ಅಸಮಾಧಾನಗೊಂಡಿರುವ ದೇಶಗಳು, ತಮಗೆ ಅಗತ್ಯವಿರುವ ಇಂಧನದ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳಬೇಕು' ಎಂದು ಮಂಗಳವಾರ ಹೇಳಿದ್ದಾರೆ.

ತೈಲ ಸಾಗಣೆಯ ಪ್ರಮುಖ ಮಾರ್ಗವಾಗಿರುವ ಹೊರ್ಮುಜ್ ಜಲಸಂಧಿ ಮೂಲಕ ಹಡಗುಗಳು ಸಾಗಲು ಇರಾನ್ ಅವಕಾಶ ನೀಡದ ಕಾರಣ, ಇಂಧನ ಬೆಲೆಗಳು ಹೆಚ್ಚಿವೆ.

ತೈಲ ಹೊತ್ತ ಹಡಗುಗಳ ಸಂಚಾರಕ್ಕೆ ಹೊರ್ಮುಜ್ ಜಲಸಂಧಿಯನ್ನು ಮತ್ತೆ ಮುಕ್ತಗೊಳಿಸುವ ಪ್ರಯತ್ನಗಳಿಗೆ ನೆರವು ನೀಡುವಂತೆ ಟ್ರಂಪ್ ಮಾಡಿದ್ದ ಮನವಿಗೆ ಅಮೆರಿಕದ ಮಿತ್ರ ರಾಷ್ಟ್ರಗಳು ಸ್ಪಂದಿಸಿಲ್ಲ. ಈ ಕಾರಣಕ್ಕೆ ಅವುಗಳನ್ನು ಉದ್ದೇಶಿಸಿ ಟ್ರಂಪ್ ಈ ಮಾತು ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮ 'ಟ್ರೂತ್ ಸೋಷಿಯಲ್'ನಲ್ಲಿ ಬರೆದುಕೊಂಡಿರುವ ಅವರು,'ನಿಮಗೆ ಬೇಕಿರುವ ತೈಲದ ವ್ಯವಸ್ಥೆಯನ್ನು ನೀವೇ ಮಾಡಿಕೊಳ್ಳಿ. ಇಲ್ಲವೇ ಸಾಕಷ್ಟು ಸಂಗ್ರಹ ಹೊಂದಿರುವ ಅಮೆರಿಕದಿಂದಲೇ ತೈಲ ಖರೀದಿಸಿ' ಎಂದು ಮಿತ್ರ ರಾಷ್ಟ್ರಗಳಿಗೆ ಹೇಳಿದ್ದಾರೆ.

ಕ್ಯೂಬಾ ತಲುಪಿದ ರಷ್ಯಾ ತೈಲ ಹಡಗು

ಹವಾನ (ಎಪಿ): ತೈಲ ತುಂಬಿದ್ದ ರಷ್ಯಾದ ಹಡಗು 'ಅನಾತೊಲಿ ಕೊಲೊದ್ಕಿನ್' ಕ್ಯೂಬಾದ ಮಟಾಂಜಸ್ ಬಂದರನ್ನು ಮಂಗಳವಾರ ತಲುಪಿದೆ.

ಈ ಹಡಗು 7,30,000 ಬ್ಯಾರೆಲ್ ತೈಲವನ್ನು ಹೊತ್ತು ತಂದಿದೆ. ಮೂರು ತಿಂಗಳ ಬಳಿಕ ಇದೇ ಮೊದಲ ಬಾರಿಗೆ ತೈಲ ಟ್ಯಾಂಕರ್‌ವೊಂದು ಕ್ಯೂಬಾ ತಲುಪಿದೆ.

ಕ್ಯೂಬಾಕ್ಕೆ ಇಂಧನವನ್ನು ಪೂರೈಸದಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇತರ ದೇಶಗಳಿಗೆ ಆದೇಶಿಸಿದ್ದರು. ಆದರೂ ಈಗ ರಷ್ಯಾದ ಈ ಹಡಗು ಕ್ಯೂಬಾ ತಲುಪಲು ಅನುಮತಿ ನೀಡಿದ್ದಾರೆ.

ಪೆಟ್ರೋಲಿಯಂ ಕೊರತೆಯಿಂದ ಕ್ಯೂಬಾದಲ್ಲಿ ಆರ್ಥಿಕ ಬಿಕ್ಕಟ್ಟು ಮತ್ತು ಆಹಾರ, ಔಷಧಗಳಿಗೆ ತೀವ್ರ ಕೊರತೆ ಉಂಟಾಗಿತ್ತು.

ಗ್ಯಾಂಗ್‌ಸ್ಟರ್ಸ್ ಜೊತೆ ಪೂರ್ಣಹಾಸ್ಯ!

• ಅಭಿಲಾಷ್ ಪಿ.ಎಸ್.


‘ಆರ್ಕೆಸ್ಟ್ರಾ ಮೈಸೂರು’, ‘ಬಡವ ರಾಸ್ಕಲ್’, ‘ಮರ್ಯಾದೆ ಪ್ರಶ್ನೆ’, ‘ಎಕ್ಕ’ ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ನಟಿಸಿರುವ ಪೂರ್ಣಚಂದ್ರ ಮೈಸೂರು ಸದ್ಯ ತಾವು ನಟಿಸಿರುವ ‘ಹೆಗ್ಗಣ ಮುದ್ದು’ ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಇದರ ಜೊತೆಗೆ ಸದ್ದಿಲ್ಲದೇ ಒಂದು ಸಿನಿಮಾವನ್ನು ನಿರ್ದೇಶಿಸಿದ್ದಾರೆ.

ಪೂರ್ಣ ನಿರ್ದೇಶನದ ಮೊದಲ ಚಿತ್ರವನ್ನು ಧನಂಜಯ ತಮ್ಮ ‘ಡಾಲಿ ಪಿಕ್ಚರ್ಸ್’ನಡಿ ನಿರ್ಮಾಣ ಮಾಡಿದ್ದಾರೆ. ಜೊತೆಗೆ ಅದರೊಳಗಿನ ಪಾತ್ರವೊಂದಕ್ಕೂ ಬಣ್ಣಹಚ್ಚಿದ್ದಾರೆ. ಸಿನಿಮಾ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಮುಂದಿನ ಹಬ್ಬದ ದಿನಗಳಲ್ಲಿ ಬಿಡುಗಡೆ ಮಾಡುವ ಯೋಜನೆ ಹಾಕಿಕೊಂಡು ಚಿತ್ರತಂಡ ಕೆಲಸ ಮಾಡುತ್ತಿದೆ. ಒಂದೆರಡು ದಿನಗಳಲ್ಲಿ ಶೀರ್ಷಿಕೆಯನ್ನೂ ಘೋಷಣೆ ಮಾಡಲಿದೆ ಚಿತ್ರತಂಡ. ಸಿನಿಮಾ ಕುರಿತು ಪೂರ್ಣ ಮಾಹಿತಿ ಹಂಚಿಕೊಂಡಿದ್ದಾರೆ.



> ಸಿನಿಮಾದಲ್ಲಿ ಇವತ್ತಿನ ಬೆಂಗಳೂರನ್ನು ಅರ್ಥಪೂರ್ಣವಾಗಿ ಕಟ್ಟಿಕೊಡಲಾಗಿದೆ. ಮಹಾನಗರಗಳ ಪಡಿಪಾಟಲುಗಳನ್ನು ನಗಿಸುತ್ತಾ ಮನ ಮುಟ್ಟುವ ಹಾಗೆ ಪೂರ್ಣ ಬರೆದಿದ್ದಾರೆ.
> **ಧನಂಜಯ,** ನಟ

‘ನನಗೆ ಕ್ರೈಮ್ ಥ್ರಿಲ್ಲರ್ ಹಾಸ್ಯ ಪ್ರಧಾನ ಕಥೆಗಳನ್ನು ಬರೆಯುವ ಆಸೆ ಇತ್ತು. ಹಲವು ಐಡಿಯಾಗಳು ಇದ್ದವು. ಕಳೆದ ವರ್ಷ ಮೂರು ತಿಂಗಳು ನಟನೆಯಿಂದ ಬಿಡುವು ಸಿಕ್ಕಿತ್ತು. ಈ ಸಂದರ್ಭದಲ್ಲಿ ಈ ಸಿನಿಮಾದ ಒಂದು ಸಾಲು ಬರೆದು, ಸ್ನೇಹಿತರ ಜೊತೆ ಚರ್ಚಿಸಿದೆ. ಈ ಸಾಲನ್ನು ಸವಾಲಾಗಿ ಸ್ವೀಕರಿಸಿ ಕಥೆ ಬರೆದೆ. ಈ ಸಿನಿಮಾದ ಕಥೆ ಬಹಳ ಕಠಿಣವಾಗಿದ್ದು, ಚಿತ್ರಕಥೆ ಜಟಿಲವಾಗಿದೆ. ಕಥೆಯನ್ನು ಓದಲು ಧನಂಜಯ ಅವರಿಗೆ ನೀಡಿದ್ದೆ. ಅವರು ಆರು ತಿಂಗಳು ಸಮಯ ತೆಗೆದುಕೊಂಡರು. ಕಥೆ ಓದಿದ ಕೂಡಲೇ ನಿರ್ಮಾಣಕ್ಕೆ, ನಟನೆಗೆ ಒಪ್ಪಿಕೊಂಡರು. ಈಗಿನ ಸಮಯದಲ್ಲಿ ಒಂದು ಸಿನಿಮಾ ಮಾಡಲು ಕನಿಷ್ಠ ₹2–₹3 ಕೋಟಿ ಬೇಕು. ಗೆಳೆಯನಾಗಿ ನಾನೇ ನಿರ್ಮಾಣ ಮಾಡುತ್ತೇನೆ ಎಂದು ಧನಂಜಯ ಅವರು ಹೇಳಿದಾಗ ನನ್ನ ಮೇಲಿನ ಜವಾಬ್ದಾರಿಯೂ ಹೆಚ್ಚಿತು’ ಎನ್ನುತ್ತಾರೆ ಪೂರ್ಣ.



ಪೂರ್ಣಚಂದ್ರ

‘ಈ ಸಿನಿಮಾಗೆ ನಾನೇ ಕಥೆ, ಸಂಭಾಷಣೆ ಬರೆದಿದ್ದೇನೆ. ಚಿತ್ರಕಥೆಗೆ ಮಹಾದೇವ್ ಪ್ರಸಾದ್ ಹಾಗೂ ಧಾರವಾಡದ ಅರುಣ ಅವರು ಜೊತೆಯಾಗಿದ್ದಾರೆ. ಅರುಣ ಸಿನಿಮಾದಲ್ಲಿ ಬಣ್ಣ-ಹಚ್ಚಿದ್ದಾರೆ. ಸಿನಿಮಾದೊಳಗೆ ರಾಜ್ಯದ ಹಲವು ಭಾಗಗಳ ಕನ್ನಡದ ಸ್ಲ್ಯಾಂಗ್‌ಗಳು ಇವೆ. ಹಲವು ಹೊಸ ಪ್ರತಿಭೆಗಳು ಕಾಣಿಸಿಕೊಳ್ಳಲಿದ್ದಾರೆ. ಈಗಿನ ಜೆನ್‌ಜಿ ಹುಡುಗರನ್ನು ಸೇರಿಸಿಕೊಂಡು ಪೂರ್ಣ ಪ್ರಮಾಣದ ಮನರಂಜನಾ ಸಿನಿಮಾ ಕಟ್ಟಿದ್ದೇವೆ. ಈ ಹೋರಾಟದ ಪಯಣದಲ್ಲಿ ನಿರ್ದೇಶಕ ಶಶಾಂಕ್ ಸೋಗಾಲ್ ಜೊತೆಗೇ ಇದ್ದರು’ ಎಂದರು ಪೂರ್ಣ.

ಗ್ಯಾಂಗ್‌ಸ್ಟರ್ ಕಾಮಿಡಿ ಜಾನರ್

‘ಧನಂಜಯ ಯಾವ ರೀತಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎನ್ನುವುದು ಸರ್ಪ್ರೈಸ್. ನಾನು ಧನಂಜಯ ಅವರನ್ನು ಸೂಪರ್‌ಹ್ಯೂಮನ್ ರೀತಿ ಕಂಡಿದ್ದೇನೆ. ಅವರ ಒಳ್ಳೆಯ ಗುಣಗಳನ್ನು ನೋಡಿಕೊಂಡು ಬೆಳೆದಿದ್ದೇನೆ. ಎಲ್ಲರೂ ಮೆಚ್ಚಿಕೊಳ್ಳುವಂತ ಒಂದು ಪಾತ್ರವನ್ನು ಅವರು ಮಾಡಿದ್ದಾರೆ. ತಮ್ಮ ಸಿನಿಮಾಗಳ ನಡುವೆ ಒಂದೇ ಉಸಿರಿನಲ್ಲಿ ಈ ಸಿನಿಮಾವನ್ನು ಧನಂಜಯ ಮುಗಿಸಿದ್ದರು’ ಎಂದರು.

‘ನಾನು ನಟಿಸುತ್ತಿರುವ ‘ಹೆಗ್ಗಣ ಮುದ್ದು’ ಹಾಗೂ ನನ್ನ ನಿರ್ದೇಶನದ ಸಿನಿಮಾದ ಮಾದರಿ ಬೇರೆ ಬೇರೆಯಾಗಿದೆ. ನನ್ನ ನಿರ್ದೇಶನದ ಸಿನಿಮಾ ‘ಗ್ಯಾಂಗ್‌ಸ್ಟರ್ ಕಾಮಿಡಿ’ ಜಾನರ್‌ನಲ್ಲಿದೆ. ಎರಡೂ ಸಿನಿಮಾಗಳ ಕಥೆಯ ಕಾಲಘಟ್ಟಕ್ಕೆ ಕನಿಷ್ಠ 20 ವರ್ಷದ ಅಂತರವಿದೆ. ಸಿನಿಮಾ ರಿಲೀಸ್ ಯಾವಾಗ ಎನ್ನುವುದನ್ನು ಧನಂಜಯ ಅವರೇ ನಿರ್ಧರಿಸಲಿದ್ದಾರೆ’ ಎನ್ನುತ್ತಾ ಮಾತಿಗೆ ವಿರಾಮವಿತ್ತರು.

4ನೇ ಆವೃತ್ತಿ



ಸಿನಿ ಸಮ್ಮಾನಕ್ಕೆ ಸಿನಿಮಾಗಳ ಆಹ್ವಾನ



‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’- ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ ವೇದಿಕೆ ಇದೀಗ ನಾಲ್ಕನೇ ಆವೃತ್ತಿಯನ್ನು ಆಯೋಜಿಸಲು ಸಜ್ಜಾಗುತ್ತಿದೆ.

ಅಸಾಧಾರಣ ಪ್ರತಿಭೆಗಳನ್ನು ಪ್ರಶಂಸಿಸಿ, ಕನ್ನಡ ಚಿತ್ರರಂಗದ ಬೆಳವಣಿಗೆಗೆ ಉತ್ತೇಜನ ನೀಡುವುದು ಈ ಪ್ರಶಸ್ತಿಯ ಉದ್ದೇಶ. ಕಳೆದ ಮೂರು ಆವೃತ್ತಿಗಳಲ್ಲಿ ಎಲ್ಲರೂ ಮೆಚ್ಚುವಂತಹ ವರ್ಣರಂಜಿತ, ಅದ್ದೂರಿ, ಅರ್ಥಗರ್ಭಿತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗುವುದು. ಇಲ್ಲಿ ನೀಡಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಚಿತ್ರತಂಡಗಳು ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ನೋಂದಣಿಗೆ ಏಪ್ರಿಲ್ 10 ಕೊನೆಯ ದಿನ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

ಅಲ್ಲು ಅರ್ಜುನ್‌ಗೆ ಬಾಸಿಲ್ ನಿರ್ದೇಶನ?

ಮಲಯಾಳ ನಟ, ನಿರ್ದೇಶನಕ ಬಾಸಿಲ್ ಜೋಸೆಫ್ ತೆಲುಗಿನ ಜನಪ್ರಿಯ ನಟ ಅಲ್ಲು ಅರ್ಜುನ್ ಅವರ 25ನೇ ಸಿನಿಮಾಕ್ಕೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎಂಬ ಸುದ್ದಿ ದಟ್ಟವಾಗಿದೆ.




ಬಾಸಿಲ್ ಜೋಸೆಫ್

ನಟನಾಗಿ ಹೆಚ್ಚು ಗುರುತಿಸಿಕೊಂಡಿರುವ ಬಾಸಿಲ್, 2021ರಲ್ಲಿ ತೆರೆಕಂಡು ಯಶಸ್ವಿಯಾದ ‘ಮಿನ್ನಲ್ ಮುರಳಿ’ ಚಿತ್ರದ ಬಳಿಕ ಬೇರೆ ಯಾವುದೇ ಚಿತ್ರ ಕೈಗೆತ್ತಿಕೊಂಡಿರಲಿಲ್ಲ. ‘ಜಯ ಜಯ ಜಯ ಹೇ’ ಚಿತ್ರದ ಯಶಸ್ಸಿನ ಬಳಿಕ ನಾಯಕನಾಗಿ ಬಾಸಿಲ್ ಒಂದರ ಹಿಂದೊಂದು ಉತ್ತಮ ಚಿತ್ರಗಳನ್ನು ನೀಡುತ್ತಿದ್ದಾರೆ. ‘ಸೂಕ್ಷ್ಮ ದರ್ಶಿನಿ’, ‘ಗುರುವಾಯೂರು ಅಂಬಲನಡಾಯಿಲ್’, ‘ಪೊನ್‌ಮ್ಯಾನ್’ ಚಿತ್ರಗಳು ಅವರಿಗೆ ನಟನಾಗಿ ಇನ್ನಷ್ಟು ಜನಪ್ರಿಯತೆ ತಂದುಕೊಟ್ಟಿವೆ. ಹೀಗಾಗಿ ನಟನೆಯತ್ತಲೇ ಹೆಚ್ಚು ಒಲವು ತೋರಿರುವ ಬಾಸಿಲ್ ಈ ಸಲ ಮತ್ತೊಂದು ಹಾಸ್ಯಭರಿತ ಕಥೆಯೊಂದಿಗೆ ಅಲ್ಲು ಅರ್ಜುನ್ ಅವರನ್ನು ಸಂಪರ್ಕಿಸಿದ್ದಾರೆ ಎನ್ನಲಾಗಿದೆ.

ಅಲ್ಲು ಅರ್ಜುನ್ ಈಗಾಗಲೇ ತಮಿಳಿನ ಜನಪ್ರಿಯ ನಿರ್ದೇಶಕರಾದ ಅಟ್ಲಿ ಮತ್ತು ಲೋಕೇಶ್ ಕನಗರಾಜ್ ಜತೆ ಸಿನಿಮಾವನ್ನು ಘೋಷಿಸಿದ್ದಾರೆ. ಅಟ್ಲಿ ಜತೆಗಿನ ಸಿನಿಮಾದ ಶೀರ್ಷಿಕೆ ಸದ್ಯದಲ್ಲೇ ಬಿಡುಗಡೆಗೊಳ್ಳಲಿದೆ ಎಂದು ಅಂದಾಜಿಸಲಾಗಿದೆ. ಈ ಎರಡು ಸಿನಿಮಾಗಳು ಮುಗಿದ ಬಳಿಕವೇ ಅಲ್ಲು ಅರ್ಜುನ್ ಮುಂದಿನ ಸಿನಿಮಾದತ್ತ ಯೋಚಿಸುವುದು. ಹೀಗಾಗಿ ಬಾಸಿಲ್ ಜತೆಗಿನ ಸಿನಿಮಾ ಮಾತುಕತೆ ಹಂತದಲ್ಲಿರಬಹುದಷ್ಟೆ, ತಕ್ಷಣಕ್ಕೆ ಸೆಟ್ಟೇರುವುದು ಕಷ್ಟ ಎಂದು ಮೂಲಗಳನ್ನು ಉಲ್ಲೇಖಿಸಿ ತೆಲುಗು ಮಾಧ್ಯಮಗಳು ವರದಿ ಮಾಡಿವೆ.

ಮೂರು ಸಿನಿಮಾಗಳನ್ನು ನಿರ್ದೇಶಿಸಿ, 50ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುವ ಬಾಸಿಲ್ ಹಾಸ್ಯಮಯ ಪಾತ್ರ ಮತ್ತು ಬರವಣಿಗೆಯಿಂದ ಜನಪ್ರಿಯ. ‘ಪುಷ್ಪ’ದಂಥ ಮಾಸ್ ಸಿನಿಮಾಗಳಲ್ಲಿ ಕಾಣಿಸಿಕೊಂಡಿರುವ ಅಲ್ಲು ಅರ್ಜುನ್, ಬಾಸಿಲ್ ಜತೆಗೆ ಕೈಜೋಡಿಸುವುದು ಹೊಸ ಬಗೆಯ ನಿರೀಕ್ಷೆಯನ್ನು ಹುಟ್ಟುಹಾಕುವುದಂತೂ ಸುಳ್ಳಲ್ಲ.



ಅಲ್ಲು ಅರ್ಜುನ್

ವಿಪಕ್ಷಗಳಿಂದ ಸುಳ್ಳು ಮಾಹಿತಿ: ರಿಜಿಜು

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತರುವ ಉದ್ದೇಶದ ಮಸೂದೆ

ನವದೆಹಲಿ(ಪಿಟಿಐ): ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ(ಎಫ್‌ಸಿಆರ್‌ಎ) ತಿದ್ದುಪಡಿ ತರುವ ಉದ್ದೇಶದ ಮಸೂದೆ ಕುರಿತಂತೆ ಕಾಂಗ್ರೆಸ್ ಹಾಗೂ ಎಡಪಕ್ಷಗಳು ತಪ್ಪು ಹಾಗೂ ಸುಳ್ಳು ಮಾಹಿತಿ ಹಬ್ಬಿಸುತ್ತಿವೆ ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಮಂಗಳವಾರ ಟೀಕಿಸಿದರು.



ಕಿರಣ್ ರಿಜಿಜು

ಬಿಜೆಪಿ ಕೇಂದ್ರ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,‘ಈ ತಿದ್ದುಪಡಿ ಮಸೂದೆ ಕುರಿತು ವಿರೋಧ ಪಕ್ಷಗಳು ನೀಡುತ್ತಿರುವ ಹೇಳಿಕೆಗಳು ಸಂಪೂರ್ಣ ಸುಳ್ಳು ಹಾಗೂ ದಾರಿ ತಪ್ಪಿಸುವಂಥವು’ ಎಂದರು.

‘ವಿದೇಶಗಳಿಂದ ಪಡೆಯುವ ದೇಣಿಗೆಯನ್ನು ರಾಷ್ಟ್ರದ ಭದ್ರತೆ ಹಾಗೂ ಹಿತಾಸಕ್ತಿಗಳಿಗೆ ವಿರುದ್ಧದ ಕಾರ್ಯಕ್ಕೆ ಬಳಸುವುದನ್ನು ತಡೆಗಟ್ಟುವ ಸಲುವಾಗಿ ಈ ತಿದ್ದುಪಡಿ ಮಸೂದೆ ಮಂಡಿಸಲಾಗುತ್ತಿದೆಯೇ ಹೊರತು ಯಾವುದೇ ಧಾರ್ಮಿಕ ಸಂಘಟನೆಯನ್ನು ಗುರಿಯಾಗಿಸಿ ಅಲ್ಲ’ ಎಂದು ರಿಜಿಜು ಹೇಳಿದರು.

‘ವಿವಿಧ ಧಾರ್ಮಿಕ ಸಂಘಟನೆಗಳು ನಡೆಸುತ್ತಿರುವ ಚಟುವಟಿಕೆಗಳನ್ನು ನಿಲ್ಲಿಸುವುದಕ್ಕಾಗಿ ಕೇಂದ್ರ ಸರ್ಕಾರ ಎಫ್‌ಸಿಆರ್‌ಎ ತಿದ್ದುಪಡಿ ಮಸೂದೆ ಮಂಡಿಸುತ್ತಿದೆ ಎಂಬುದಾಗಿ ಕಾಂಗ್ರೆಸ್ ಹಾಗೂ ಎಡ ಪಕ್ಷಗಳು ಕೇರಳದಲ್ಲಿ ವದಂತಿ ಹಬ್ಬಿಸುತ್ತಿವೆ. ಆದರೆ, ವಿದೇಶಿ ದೇಣಿಗೆಗಳ ನಿಯಂತ್ರಣ ಹಾಗೂ ದುರ್ಬಳಕೆ ತಡೆಯುವುದೇ ಈ ಮಸೂದೆಯ ಉದ್ದೇಶ’ ಎಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಈ ತಿದ್ದುಪಡಿ ಮಸೂದೆಯನ್ನು ಟೀಕಿಸಿದ್ದ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ‘ಸಮಾಜದ ಕೆಲ ವರ್ಗಗಳ ಜನರಲ್ಲಿ ಈ ತಿದ್ದುಪಡಿ ಮಸೂದೆ ಅಸುರಕ್ಷತಾ ಭಾವನೆ ಮೂಡಿಸಿದೆ’ ಎಂದಿದ್ದರು.

‘ಈ ತಿದ್ದುಪಡಿ ಮಸೂದೆ ಪ್ರಕಾರ ಆರ್‌ಎಸ್‌ಎಸ್ ಮಾತ್ರ ವಿದೇಶಿ ದೇಣಿಗೆ ಪಡೆಯಬಹುದಾಗಿದ್ದು, ಇತರ ಸಂಘಟನೆಗಳ ಮೇಲೆ ನಿರ್ಬಂಧ ಹೇರಲಾಗುತ್ತದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೂ ಆರೋಪಿಸಿದ್ದರು.

ತಿದ್ದುಪಡಿಯಿಂದ ಅಭದ್ರತೆ: ಪಿಣರಾಯಿ ವಿಜಯನ್ ಟೀಕೆ

ತಿರುವನಂತಪುರಂ(ಪಿಟಿಐ): ಸಂಸತ್ತಿನಲ್ಲಿ ಮಂಡನೆಯಾಗಿರುವ ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ಮಸೂದೆ–2026 (ಎಫ್‌ಸಿಆರ್‌ಎ) ಸಮಾಜದ ಒಂದು ವರ್ಗದ ಜನರಲ್ಲಿ ಅಭದ್ರತೆಯನ್ನು ಸೃಷ್ಟಿಸುತ್ತಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದರು.



ಪಿಣರಾಯಿ ವಿಜಯನ್

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಮಸೂದೆಯು ದೇಶದಾದ್ಯಂತ ಅಲ್ಪಸಂಖ್ಯಾತರಲ್ಲಿ ಅಭದ್ರತೆಯ ಭಾವವನ್ನು ಸೃಷ್ಟಿಸಿದೆ. ಅವರ ಆತಂಕವನ್ನು ನಿವಾರಿಸುವ ಪ್ರಯತ್ನ ಕೇಂದ್ರ ಸರ್ಕಾರದ ಕಡೆಯಿಂದ ಆಗಬೇಕಿತ್ತು. ಆದರೆ, ಅಂತಹ ಪ್ರಯತ್ನ ಆಗುತ್ತಿಲ್ಲ’ ಎಂದು ದೂರಿದರು.

ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ಮಸೂದೆ ವಿಷಯದಲ್ಲಿ ಮಧ್ಯಪ್ರವೇಶ ಮಾಡುವಂತೆ ಒತ್ತಾಯಿಸಿ ವಿಜಯನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೋಮವಾರ ಪತ್ರ ಬರೆದಿದ್ದರು. ಮರುದಿನವೇ ಈ ಕುರಿತು ಪ್ರತಿಕ್ರಿಯಿಸಿರುವ ಅವರು, ಕೇಂದ್ರ ಸರ್ಕಾರದ ನಿಲುವನ್ನು ಟೀಕಿಸಿದ್ದಾರೆ.

ಕೇಂದ್ರ ಸರ್ಕಾರದ ಇಂತಹ ಕ್ರಮಗಳು ದೇಶದ ಒಂದು ವರ್ಗದ ಜನರಲ್ಲಿ ಆತಂಕ, ಅಭದ್ರತೆಯನ್ನು ಸೃಷ್ಟಿಸುತ್ತವೆ. ಇದರಿಂದ ದೇಶಕ್ಕೆ ಯಾವ ರೀತಿಯಲ್ಲೂ ಒಳಿತಾಗುವುದಿಲ್ಲ ಎಂದು ಹೇಳಿದ್ದಾರೆ.

‘ಕಾಂಗ್ರೆಸ್ ಪಕ್ಷವು ಈ ವಿಷಯದಲ್ಲಿ ಸರಿಯಾದ ನಿಲುವು ತಳೆದಿಲ್ಲ. ಮಸೂದೆಗೆ ಸಂಬಂಧಿಸಿದಂತೆ ತನ್ನ ನಿಲುವು ಏನು ಎಂಬುದನ್ನು ಈ ಹಳೆಯ (ಕಾಂಗ್ರೆಸ್) ಪಕ್ಷ ಬಹಿರಂಗಪಡಿಸಿಲ್ಲ. ಅದು ಮೃದು ಹಿಂದುತ್ವವನ್ನು ಅಪ್ಪಿಕೊಂಡಿದೆ’ ಎಂದು ಟೀಕಿಸಿದ್ದಾರೆ.

ಎಫ್‌ಸಿಆರ್‌ಎ ತಿದ್ದುಪಡಿ: ಬಿಷಪ್‌ಗಳ ಸಂಘಟನೆ ಕಳವಳ

ನವದೆಹಲಿ(ಪಿಟಿಐ): ಪ್ರಸ್ತಾವಿತ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ) ತಿದ್ದುಪಡಿ ಮಸೂದೆ ಕುರಿತಂತೆ ತೀವ್ರ ಕಳವಳ ವ್ಯಕ್ತಪಡಿಸಿರುವ ಕೆಥೋಲಿಕ್ ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯಾ(ಸಿಬಿಸಿಐ), ಈ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದೆ.

‘ಎಫ್‌ಸಿಆರ್‌ಎ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ನಾಗರಿಕ ಸಂಘಟನೆಗಳ ಮೇಲೆ ಸರ್ಕಾರದ ನಿಯಂತ್ರಣ ಹೆಚ್ಚು ಮಾಡುವ ಉದ್ದೇಶವಿದೆ. ಸಂಘಟನೆಗಳ ಹಿತಾಸಕ್ತಿ ರಕ್ಷಣೆಗಾಗಿ ಮಸೂದೆ ಕುರಿತಂತೆ ವ್ಯಾಪಕ ಸಮಾಲೋಚನೆ ನಡೆಸಬೇಕು’ ಎಂದು ಸಿಬಿಸಿಐ ಪತ್ರದ ಮೂಲಕ ಒತ್ತಾಯಿಸಿದೆ.

ತಮ್ಮ ಆತಂಕಗಳ ಕುರಿತು ಸಂಸದರಿಗೂ ಸಿಬಿಸಿಐ ಪ್ರತ್ಯೇಕ ಪತ್ರ ಬರೆದಿದೆ. ‘ಕೇಂದ್ರದ ಇಂತಹ ನಡೆಯು ಸಾಂವಿಧಾನಿಕ ತತ್ವಗಳಿಗೆ ವಿರುದ್ಧವಾಗಿರಲಿದೆ. ನಾಗರಿಕ ಸಂಘಟನೆಗಳ ಸ್ವಾತಂತ್ರ್ಯಕ್ಕೆ ಹಾಗೂ ದೇಶದಲ್ಲಿ ಸಮಾಜ ಸೇವಾ ಕಾರ್ಯಗಳಿಗೆ ಭವಿಷ್ಯದಲ್ಲಿ ಧಕ್ಕೆ ಉಂಟಾಗಲಿದೆ’ ಎಂದು ಪತ್ರದಲ್ಲಿ ವಿವರಿಸಿದೆ.

ಬೆಂಕಿ: ಮಗು, 4 ಮಹಿಳೆಯರು ಸಾವು

ಸೂರತ್ (ಪಿಟಿಐ): ಗುಜರಾತ್‌ನ ಸೂರತ್ ನಗರದ ಮಿಟ ಖಾದಿ ಪ್ರದೇಶದಲ್ಲಿರುವ ಮೂರು ಅಂತಸ್ತಿನ ಮನೆಯೊಂದರಲ್ಲಿ ಮಂಗಳವಾರ ಬೆಳಿಗ್ಗೆ ಅಗ್ನಿ ಅವಘಡ ಸಂಭವಿಸಿದೆ. ಘಟನೆಯಲ್ಲಿ ಮಗು ಸೇರಿ ನಾಲ್ವರು ಮಹಿಳೆಯರು ಮೃತಪಟ್ಟಿದ್ದಾರೆ.

ಮೃತರನ್ನು ಶೆಹನಾಜ್ ಬೇಗಂ ಅನ್ಸಾರಿ (65), ಹುಸಾ ಬೇಗಂ ಅನ್ಸಾರಿ (18), ಶಬೀನಾ ಅನ್ಸಾರಿ (28), ಪರ್ವೀನ್ ಅಬ್ದುಲ್ ಅನ್ಸಾರಿ (19) ಹಾಗೂ ಶುಭಾನ್ ಅಲಿ ಅನ್ಸಾರಿ (4) ಎಂದು ಗುರುತಿಸಲಾಗಿದೆ.

ಶಾರ್ಟ್‌ಸರ್ಕೀಟ್‌ನಿಂದ ಅವಘಡ ಸಂಭವಿಸಿದೆ ಎಂದು ಪೊಲೀಸರು ಹೇಳಿದ್ದಾರೆ.

ಅವಘಡಕ್ಕೀಡಾದ ಮನೆಯಲ್ಲಿ ಸೀರೆಗಳನ್ನು ಪ್ಯಾಕಿಂಗ್ ಮಾಡುವ ಕೆಲಸ ನಡೆಯುತ್ತಿತ್ತು. ಮಂಗಳವಾರ ರಜಾ ದಿನವಾಗಿದ್ದ ಕಾರಣ ಪ್ಯಾಕಿಂಗ್‌ಗಾಗಿ ಹೆಚ್ಚುವರಿ ಸೀರೆಗಳನ್ನು ತರಿಸಿ ಮನೆಯಲ್ಲಿ ಟ್ಟಿದ್ದರು. ಸ್ವಿಚ್ ಬೋರ್ಡ್‌ನ ಸಮೀಪವೇ ಫೋಮ್ ಶೀಟ್ ಇಟ್ಟಿದ್ದರಿಂದ ಬೆಂಕಿ ಮನೆಯನ್ನು ಆವರಿಸಿದೆ. ಫೋಮ್‌ನಿಂದ ಹಬ್ಬಿದ ವಿಷಕಾರಿ ಹೊಗೆಯಿಂದ ನಿವಾಸಿಗಳು ಉಸಿರುಗಟ್ಟಿದ್ದರು ಎಂದೂ ಪೊಲೀಸರು ತಿಳಿಸಿದ್ದಾರೆ.

ಆಸ್ಪತ್ರೆಯಿಂದ ಮನೆಗೆ ಮರಳಿದ ಸೋನಿಯಾ

ನವದೆಹಲಿ (ಪಿಟಿಐ): ರಕ್ತದ ಸೋಂಕಿನಿಂದ ಬಳಲುತ್ತಿದ್ದ ಕಾಂಗ್ರೆಸ್‌ನ ಹಿರಿಯ ನಾಯಕಿ ಸೋನಿಯಾ ಗಾಂಧಿ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದು, ಅವರು ಶ್ರೀ ಗಂಗಾರಾಮ್ ಆಸ್ಪತ್ರೆಯಿಂದ ಮಂಗಳವಾರ ಮನೆಗೆ ಮರಳಿದ್ದಾರೆ.

ಬಿಹಾರ: ಕಾಲ್ತುಳಿತ– ಒಂಬತ್ತು ಮಂದಿ ಸಾವು

ಒಂದನೇ ಪುಟದಿಂದ...

ಜಿಲ್ಲಾಡಳಿತದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದು, ಮೃತರ ಗುರುತು ಪತ್ತೆ ಹಚ್ಚಲು ಅಧಿಕಾರಿಗಳು ಯತ್ನಿಸುತ್ತಿದ್ದಾರೆ ಎಂದು ಬಿಹಾರ ಶರೀಫ್ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನೂರುಲ್ ಹಕ್ ತಿಳಿಸಿದ್ದಾರೆ.

‘ಪ್ರತಿ ಮಂಗಳವಾರವೂ ಶೀತಲಾ ದೇವಿಯ ದರ್ಶನಕ್ಕಾಗಿ ಅಸಂಖ್ಯಾತ ಭಕ್ತರು ಭೇಟಿ ನೀಡುತ್ತಾರೆ. ಚೈತ್ರ ಮಾಸದ ಕೊನೆಯ ಮಂಗಳವಾರದಂದು ಹೆಚ್ಚು ಜನರು ದೇಗುಲಕ್ಕೆ ಬಂದಿದ್ದರು. ಜನದಟ್ಟಣೆ ಹೆಚ್ಚಿದ್ದರೂ, ಸ್ಥಳೀಯ ಆಡಳಿತ ಯಾವುದೇ ಸುರಕ್ಷತಾ ಕ್ರಮ ಕೈಗೊಂಡಿರಲಿಲ್ಲ. ದೇವಿ ದರ್ಶನದ ವೇಳೆ ನೂಕುನುಗ್ಗಲು ಉಂಟಾಯಿತು. ಕೆಲ ಕ್ಷಣಗಳಲ್ಲೇ ಕಾಲ್ತುಳಿತದ ದುರಂತ ಸಂಭವಿಸಿತು’ ಎಂದು ಪಟ್ನಾದಿಂದ ಬಂದಿದ್ದ ಭಕ್ತರಾದ ಮಮತಾ ದೇವಿ ತಿಳಿಸಿದರು.

ನಳಂದಾ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕಾರ್ಯಕ್ರಮವು ಆಯೋಜನೆಗೊಂಡಿದ್ದರಿಂದ, ಬಿಗಿಭದ್ರತೆಗಾಗಿ ಹೆಚ್ಚಿನ ಪೊಲೀಸರನ್ನು ಅಲ್ಲಿಗೆ ನಿಯೋಜಿಸಲಾಗಿತ್ತು. ದೇವಸ್ಥಾನದ ಬಳಿ ಪೊಲೀಸರನ್ನು ಬಂದೋಬಸ್ತ್‌ಗಾಗಿ ನಿಯೋಜಿಸಿರಲಿಲ್ಲ ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ.



ಮಗಧಾ ಗ್ರಾಮದ ಶೀತಲಾ ಮಾತಾ ದೇಗುಲದಲ್ಲಿ ಮಂಗಳವಾರ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟ ಕುಟುಂಬದವರ ಆಕ್ರಂದನ

ಪಿಟಿಐ ಚಿತ್ರ

ಠಾಣಾಧಿಕಾರಿ ಅಮಾನತು: ದೇಗುಲವು ದೀಪ್ ನಗರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ್ದು, ಕರ್ತವ್ಯಲೋಪ ಎಸಗಿದ್ದಕ್ಕಾಗಿ ಠಾಣಾಧಿಕಾರಿಯನ್ನು (ಎಸ್‌ಎಚ್‌ಒ) ಅಮಾನತು ಮಾಡಲಾಗಿದೆ ಎಂದು ನಳಂದಾ ಪೊಲೀಸ್ ವರಿಷ್ಠಾಧಿಕಾರಿ ಭರತ್ ಸೋನಿ ತಿಳಿಸಿದ್ದಾರೆ.

ಘಟನೆಯ ನಿಖರ ಕಾರಣ ಪತ್ತೆಹಚ್ಚಲು ಎಸ್‌ಐಟಿ (ವಿಶೇಷ ತನಿಖಾ ತಂಡ) ತನಿಖೆಗೆ ಆದೇಶಿಸಲಾಗಿದೆ. ದೇಗುಲದಲ್ಲಿ ಅಳವಡಿಸಿರುವ ಸಿ.ಸಿ. ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ತನಿಖಾಧಿಕಾರಿಗಳಿಗೆ ಸಹಾಯ ಮಾಡಲು ವಿಧಿವಿಜ್ಞಾನ ತಜ್ಞರನ್ನು ಸಹ ನಿಯೋಜಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಹೃದಯ ವಿದ್ರಾವಕ: ‘ದೇಗುಲದಲ್ಲಿ ಹೃದಯ ವಿದ್ರಾವಕ ಘಟನೆ ನಡೆದಿದೆ. ಸಂತ್ರಸ್ತರ ಕುಟುಂಬಗಳಿಗೆ ಸರ್ಕಾರ ಎಲ್ಲ ರೀತಿಯ ನೆರವು ನೀಡಲಿದೆ. ಪರಿಹಾರವನ್ನೂ ಕೊಡಲಿದೆ. ಗಾಯಾಳುಗಳಿಗೆ ಚಿಕಿತ್ಸೆ ನೀಡಲು ಸೂಕ್ತ ವ್ಯವಸ್ಥೆ ಮಾಡಲಾಗಿದೆ’ ಎಂದು ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ‘ಎಕ್ಸ್’ನಲ್ಲಿ ಉಲ್ಲೇಖಿಸಿದ್ದಾರೆ.

‘ಭಕ್ತರ ಸಾವಿನಿಂದ ನೋವಾಗಿದೆ. ಗಾಯಾಳುಗಳಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸಿ. ಮೃತರ ಕುಟುಂಬಗಳಿಗೆ ತಕ್ಷಣದ ನೆರವು ನೀಡಿ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್ ಆಗ್ರಹಿಸಿದ್ದಾರೆ.

ಬಿಹಾರ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ದುರಂತಕ್ಕೆ ಕಂಬನಿ ಮಿಡಿದಿದ್ದು, ಆಘಾತ ವ್ಯಕ್ತಪಡಿಸಿದ್ದಾರೆ.

ಮೃತರ ಕುಟುಂಬಕ್ಕೆ ತಲಾ ₹8 ಲಕ್ಷ ಪರಿಹಾರ

ಕಾಲ್ತುಳಿತದಲ್ಲಿ ಮೃತಪಟ್ಟ ಭಕ್ತರ ಕುಟುಂಬಕ್ಕೆ ತಲಾ ₹8 ಲಕ್ಷ ಪರಿಹಾರ ಹಾಗೂ ಗಾಯಾಳುಗಳಿಗೂ ತಲಾ ₹50 ಸಾವಿರ ಪರಿಹಾರ ಘೋಷಿಸಲಾಗಿದೆ.

ದುರಂತದಲ್ಲಿ ಮೃತಪಟ್ಟ ಭಕ್ತರ ಕುಟುಂಬಕ್ಕೆ ತಲಾ ₹6 ಲಕ್ಷ ಪರಿಹಾರ ನೀಡಲಾಗುವುದು. ಗಾಯಗೊಂಡವರಿಗೆ ಉತ್ತಮ ಚಿಕಿತ್ಸೆ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸೂಚಿಸಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತರ ಕುಟುಂಬಕ್ಕೆ ತಲಾ ₹2ಲಕ್ಷ ಹಾಗೂ ಗಾಯಾಳುಗಳಿಗೆ ತಲಾ ₹50 ಸಾವಿರ ರೂಪಾಯಿ ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ್ದಾರೆ.

ನೂಕುನುಗ್ಗಲು...

ಒಂದನೇ ಪುಟದಿಂದ...

ದುರಂತ ನಡೆದ ತಕ್ಷಣವೇ ಮಾಹಿತಿ ನೀಡಿದರೂ, ಮೊದಲ ಆಂಬುಲೆನ್ಸ್ 40 ನಿಮಿಷದ ಬಳಿಕ ದೇವಸ್ಥಾನದ ಸಮೀಪಕ್ಕೆ ಬಂದಿತು. ಆ ಹೊತ್ತಿಗಾಗಲೇ ಎಂಟು ಮಹಿಳೆಯರು ಮೃತಪಟ್ಟಿದ್ದರು ಎಂದು ಅವರು ಹೇಳಿದರು.

ಕಿಡ್ನಿ ಕಸಿ ಜಾಲ ಪತ್ತೆ: ಆರು ಮಂದಿ ಬಂಧನ



ಕಾನ್ಪುರ (ಪಿಟಿಐ): ಹಲವು ಖಾಸಗಿ ಆಸ್ಪತ್ರೆಗಳ ಮೂಲಕ ಅಕ್ರಮವಾಗಿ ಮೂತ್ರಪಿಂಡ ಕಸಿ ಮಾಡುತ್ತಿದ್ದ ಜಾಲವನ್ನು ಉತ್ತರ ಪ್ರದೇಶ ಪೊಲೀಸರು ಮಂಗಳವಾರ ಪತ್ತೆ ಮಾಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ವೈದ್ಯರು ಮತ್ತು ಇನ್ನೊಬ್ಬ ಪ್ರಮುಖ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಗ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ಮೆಡ್ ಲೈಫ್ ಆಸ್ಪತ್ರೆ, ಅಹುಜಾ ಆಸ್ಪತ್ರೆ, ಪ್ರಿಯಾ ಆಸ್ಪತ್ರೆಗಳಲ್ಲಿ ಶೋಧ ನಡೆಸಿದ ಬಳಿಕ ಜಾಲ ಪತ್ತೆಯಾಗಿದೆ. ಆರರಿಂದ ಏಳು ಆಸ್ಪತ್ರೆಗಳು ದಂಧೆಯಲ್ಲಿ ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದೆ ಎಂದಿದ್ದಾರೆ.

ಜಾಲದ ಪ್ರಮುಖ ಆರೋಪಿಯನ್ನು ಶಿವಂ ಅಗರ್‌ವಾಲ್ ಎಂದು ಗುರುತಿಸಲಾಗಿದೆ. ಎಂಬಿಎ ವಿದ್ಯಾರ್ಥಿಯಿಂದ ₹10 ಲಕ್ಷಕ್ಕೆ ಮೂತ್ರಪಿಂಡವನ್ನು ಪಡೆದು ರೋಗಿಯೊಬ್ಬರಿಗೆ ₹60 ಲಕ್ಷಕ್ಕೆ ಮಾರಾಟ ಮಾಡಲಾಗಿದೆ ಎಂದು ತನಿಖೆ ವೇಳೆ ಪತ್ತೆಯಾಗಿದೆ ಎಂದಿದ್ದಾರೆ.

ಶಿವಂ ಅಗರ್‌ವಾಲ್ ತನ್ನನ್ನು ವೈದ್ಯನಂತೆ ಬಿಂಬಿಸಿಕೊಂಡಿದ್ದ ಮತ್ತು ಟೆಲಿಗ್ರಾಮ್ ಆ್ಯಪ್‌ನಲ್ಲಿ ಗ್ರೂಪ್ ಮೂಲಕ ಮೂತ್ರಪಿಂಡ ದಾನಿಗಳನ್ನು ಸೆಳೆಯುತ್ತಿದ್ದ. ಡಯಾಲಿಸಿಸ್ ರೋಗಿಗಳನ್ನು ಗುರಿಯಾಗಿಸಿ ದಂಧೆ ನಡೆಸಲಾಗುತ್ತಿತ್ತು ಎಂದು ತಿಳಿದುಬಂದಿದೆ ಎಂದು ಪೊಲೀಸ್ ಕಮಿಷನರ್ ರಘುಬೀರ್ ಲಾಲ್ ತಿಳಿಸಿದ್ದಾರೆ.

ತರಬೇತಿ ಮುಂದೂಡಲು ಮನವಿ

ಜನಗಣತಿ

ಬೆಂಗಳೂರು: ಏ.6ರವರೆಗೆ ಪರೀಕ್ಷೆ, ಮೌಲ್ಯಮಾಪನ ಹಾಗೂ 8ರಂದು ಸಮುದಾಯದತ್ತ ಶಾಲೆ ಕಾರ್ಯಕ್ರಮ ಇರುವುದರಿಂದ ಜನಗಣತಿಗೆ ಸಂಬಂಧಿಸಿದ ತರಬೇತಿಯನ್ನು ಮುಂದೂಡಬೇಕು ಎಂದು ಶಿಕ್ಷಕರು ಮನವಿ ಮಾಡಿದ್ದಾರೆ.

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿ.ರಶ್ಮಿ ಅವರಿಗೆ ಈ ಬಗ್ಗೆ ಮನವಿ ಸಲ್ಲಿಸಿರುವ ಶಿಕ್ಷಕರು, ಏಪ್ರಿಲ್ 16 ರಿಂದ ಜನಗಣತಿ ಶುರುವಾಗಲಿದ್ದು, ಏಪ್ರಿಲ್ 8ರ ಬಳಿಕ ತರಬೇತಿ ನಡೆಸುವಂತೆ ಕೋರಿದ್ದಾರೆ.

ಏ.8ರಂದು ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಫಲಿತಾಂಶ ಪ್ರಕಟಿಸಬೇಕಾಗಿದೆ. ಅದೇ ದಿನ ಸಮುದಾಯದತ್ತ ಶಾಲೆ ಕಾರ್ಯಕ್ರಮ ಇರುವುದರಿಂದ ಶಿಕ್ಷಕರೇ ಇಲ್ಲದೆ ಇದ್ದರೆ ಹೇಗೆ? ಪೋಷಕರು ಈಗಲೇ ದೂರು ಹೇಳುತ್ತಿದ್ದಾರೆ. ಈ ಎಲ್ಲ ಅಂಶಗಳನ್ನು ಮನಗಂಡು ತರಬೇತಿ ದಿನಾಂಕವನ್ನು ಮರು ನಿಗದಿ ಮಾಡುವಂತೆ ಸಂಬಂಧಪಟ್ಟವರಿಗೆ ಸೂಚಿಸಬೇಕು ಎಂದು ಶಿಕ್ಷಕರು ಕೋರಿದ್ದಾರೆ.



ಕನೊಲಿ ಆಟಕ್ಕೆ ಒಲಿದ ಗೆಲುವು

ಸ್ಪಿನ್ನರ್ ಚಾಹಲ್‌ಗೆ 2, ವೇಗಿ ವೈಶಾಖಿಗೆ 3 ವಿಕೆಟ್ • ಪಂಜಾಬ್ ಕಿಂಗ್ಸ್ ಶುಭಾರಂಭ

ಮುಲ್ಲನಪುರ (ಪಿಟಿಐ): ಕೊನೆಯ ಓವರ್ ವರೆಗೆ ಸಾಗಿದ ಪಂದ್ಯದಲ್ಲಿ ಜವಾಬ್ದಾರಿಯುತವಾಗಿ ಆಡಿದ ಕೂಪರ್ ಕನೊಲಿ (ಔಟಾಗದೇ 72; 44ಎ, 4x5, 6x5) ಅವರು ಪಂಜಾಬ್ ಕಿಂಗ್ಸ್ ತಂಡಕ್ಕೆ 3 ವಿಕೆಟ್‌ಗಳ ರೋಚಕ ಗೆಲುವು ತಂದುಕೊಟ್ಟರು. ಅದರೊಂದಿಗೆ, ಆಸ್ಟ್ರೇಲಿಯಾದ 22 ವರ್ಷ ವಯಸ್ಸಿನ ಬ್ಯಾಟರ್ ತಮ್ಮ ಐಪಿಎಲ್ ಪದಾರ್ಪಣೆಯನ್ನು ಸ್ಮರಣೀಯವಾಗಿಸಿಕೊಂಡರು.

ಮಂಗಳವಾರ ಇಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಟಾಸ್ ಗೆದ್ದ ಪಂಜಾಬ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಅವರು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಲೆಗ್‌ಸ್ಪಿನ್ನರ್ ಯಜುರ್ವೇಂದ್ರ ಚಾಹಲ್ (28ಕ್ಕೆ2) ಮತ್ತು ಕನ್ನಡಿಗ ವೈಶಾಖ ವಿಜಯಕುಮಾರ್ (34ಕ್ಕೆ3) ಮಿಂಚಿದರು. ಈ ಜೋಡಿಯ ಪರಿಣಾಮಕಾರಿ ಬೌಲಿಂಗ್ ಎದುರು ಗುಜರಾತ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿತು.

ಸಾಧಾರಣ ಗುರಿ ಬೆನ್ನಟ್ಟಿದ ಪಂಜಾಬ್ ತಂಡದ ಆರಂಭವೇನು ಉತ್ತಮವಾಗಿರಲಿಲ್ಲ. ಎಡಗೈ ಬ್ಯಾಟರ್ ಪ್ರಿಯಾಂಶ್ ಆರ್ಯ ಅವರು 7 ರನ್ ಗಳಿಸಿ ನಿರ್ಗಮಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿದ ಕನೊಲಿ ಅವರು ವಿಕೆಟ್‌ಕೀಪರ್–ಬ್ಯಾಟರ್ ಪ್ರಭಸಿಮ್ರನ್ ಸಿಂಗ್ ಜೊತೆಗೂಡಿ 47 ಎಸೆತಗಳಲ್ಲಿ 76 ರನ್ ಸೂರೆ ಮಾಡಿದರು.

ಅರ್ಧಶತಕದತ್ತ ಮುನ್ನುಗ್ಗುತ್ತಿದ್ದ ಪ್ರಭಸಿಮ್ರನ್ (37; 24ಎ) ಅವರು ರಶೀದ್ ಖಾನ್ ಎಸೆತದಲ್ಲಿ ಪ್ರಸಿದ್ಧಕೃಷ್ಣಗೆ ಕ್ಯಾಚ್ ನೀಡಿದರು. ನಾಯಕ ಶ್ರೇಯಸ್ 11 ಎಸೆತಗಳಲ್ಲಿ 2 ಸಿಕ್ಸರ್ ಸಹಿತ 18 ರನ್ ಗಳಿಸಿ, ಪ್ರಸಿದ್ಧ ಎಸೆದ 13ನೇ ಓವರಿನಲ್ಲಿ ಔಟಾದರು. ಕನ್ನಡಿಗ ಪ್ರಸಿದ್ಧ, 15ನೇ ಓವರ್‌ನಲ್ಲಿ ಶಶಾಂಕ್ ಸಿಂಗ್ ಹಾಗೂ ಮಾರ್ಕಸ್ ಸ್ಟೊಯಿನಿಸ್ ಅವರ ವಿಕೆಟ್ ಪಡೆದು, ಪಂದ್ಯಕ್ಕೆ ತಿರುವು ನೀಡಿದರು.

ಆದರೆ, ಮತ್ತೊಂದು ಬದಿಯಲ್ಲಿ ನೆಲೆಯೂರಿ ಆಡಿದ ಕನೊಲಿ ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು. ಶ್ರೇಯಸ್ ಪಡೆಯು 19.1 ಓವರ್‌ಗಳಲ್ಲಿ 7 ವಿಕೆಟ್‌ಗೆ 165 ರನ್ ಗಳಿಸಿ, ಜಯ ಸಾಧಿಸಿತು.

ಇದಕ್ಕೆ ಮೊದಲು, ಬ್ಯಾಟಿಂಗ್ ಮಾಡಲು ಉತ್ತಮವಾಗಿದ್ದ ಪಿಚ್‌ನಲ್ಲಿ ಟೈಟನ್ಸ್ ನಾಯಕ ಶುಭಮನ್ ಗಿಲ್ (39; 27ಎಸೆತ) ಮತ್ತು ಜೋಸ್ ಬಟ್ಲರ್ (38; 33ಎ) ಅವರಿಬ್ಬರು ಮಾತ್ರ ಹೆಚ್ಚು ರನ್ ಗಳಿಸಿದ ಬ್ಯಾಟರ್‌ಗಳಾದರು. ಇನಿಂಗ್ಸ್‌ನ ಮೊದಲ ಮೂರು ಓವರ್‌ಗಳಲ್ಲಿ 35 ರನ್‌ಗಳು ಸೇರಲು ಗಿಲ್ ಅಬ್ಬರದ ಬ್ಯಾಟಿಂಗ್ ಕಾರಣವಾಯಿತು. ಗ್ಯಾಪ್‌ಗಳನ್ನು ಗುರುತಿಸಿ ಬೌಂಡರಿ ಗಳಿಸುತ್ತಿದ್ದ ಅವರ ಕಲಾತ್ಮಕ ಬ್ಯಾಟಿಂಗ್ ಗಮನ ಸೆಳೆಯಿತು.

ಎಂಟನೇ ಓವರ್‌ನಲ್ಲಿ ಬೌಲಿಂಗ್ ಆರಂಭಿಸಿದ ಚಾಹಲ್ ಅವರು ಗಿಲ್ ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು. ಅವರ ನಿಧಾನಗತಿಯ ಎಸೆತವನ್ನು ಬೌಂಡರಿಗೆರೆ ದಾಟಿಸುವ ಧಾವಂತದಲ್ಲಿ ಗಿಲ್ ಅವರು ಕೂಪರ್ ಕಾನೊಲಿಗೆ ಕ್ಯಾಚ್ ಆದರು.

17 ಎಸೆತಗಳಲ್ಲಿ 25 ರನ್ ಗಳಿಸಿ, ಅಪಾಯಕಾರಿಯಾಗುವಂತೆ ಕಂಡುಬಂದ ಗ್ಲೆನ್ ಫಿಲಿಪ್ಸ್ ಅವರ ವಿಕೆಟ್ ಗಳಿಸುವಲ್ಲಿ ವೈಶಾಖ ಯಶಸ್ವಿಯಾದರು. ವಾಷಿಂಗ್ಟನ್ ಸುಂದರ್ (18 ರನ್) ಅವರ ವಿಕೆಟ್ ಕೂಡ ವೈಶಾಖ ಪಾಲಾಯಿತು. ಶಾರೂಖ್ ಖಾನ್ 4 ರನ್ ಹೊಡೆದರು. ಆದರೆ ಅವರಿಗೂ ವೈಶಾಖ ಕಡಿವಾಣ ಹಾಕಿದರು.

ಸರಣಿ ವೈಡ್: ಮೊದಲ ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಅರ್ಷದೀಪ್ ಸಿಂಗ್ ಒಟ್ಟು 11 ಎಸೆತ ಹಾಕಿದರು. ಇದರಲ್ಲಿ ಅವರು 4 ವೈಡ್ ಮತ್ತು 1 ನೋಬಾಲ್ ಹಾಕಿದರು. ಈ ಓವರ್‌ನಲ್ಲಿ ರಾಹುಲ್ ತೆವಾಟಿಯಾ ಒಂದು ಬೌಂಡರಿ ಗಳಿಸಿದರು. ಇದರಿಂದಾಗಿ ಒಟ್ಟು 12 ರನ್‌ಗಳು ಸೇರಿದವು.


ಅರ್ಧಶತಕ ಗಳಿಸಿದ ಕೂಪರ್ ಕನೊಲಿ ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್: 6ಕ್ಕೆ162 (20 ಓವರ್‌ಗಳಲ್ಲಿ)
ಸಾಯಿ ಸಿ ಶ್ರೇಯಸ್ ಬಿ ಮಾರ್ಕೊ 13 (11ಎ, 4x2)
ಗಿಲ್ ಸಿ ಕೂಪರ್ ಬಿ ಚಾಹಲ್ 39 (27ಎ, 4x6)
ಬಟ್ಲರ್ ಸಿ ಬಾರ್ಟಲೆಟ್ ಬಿ ಚಾಹಲ್ 38 (33ಎ, 4x3, 6x2)
ಫಿಲಿಪ್ಸ್ ಸಿ ಮಾರ್ಕೊ ಬಿ ವೈಶಾಖ 25 (17ಎ, 4x1, 6x1)
ವಾಷಿಂಗ್ಟನ್ ಸಿ ಅರ್ಷದೀಪ್ ಬಿ ವೈಶಾಖ 18 (16ಎ, 4x2)
ಖಾನ್ ಸಿ ಅರ್ಷದೀಪ್ ಬಿ ವೈಶಾಖ 4 (6ಎ)
ರಾಹುಲ್ ತೆವಾಟಿಯಾ ಔಟಾಗದೇ 11 (10ಎ, 4x1)
ರಶೀದ್ ಖಾನ್ ಔಟಾಗದೇ 0 (1ಎ)
ಇತರೆ: 14 (ಲೆಗ್‌ಬೈ 2, ವೈಡ್ 11, ನೋಬಾಲ್ 1)
ವಿಕೆಟ್ ಪತನ: 1–37 (ಸಾಯಿ ಸುದರ್ಶನ್; 3.4), 2–83 (ಶುಭಮನ್ ಗಿಲ್; 9.3), 3–119 (ಗ್ಲೆನ್ ಫಿಲಿಪ್ಸ್;13.6), 4–129 (ಜೋಸ್ ಬಟ್ಲರ್;15.4), 5–144 (ವಾಷಿಂಗ್ಟನ್ ಸುಂದರ್; 18.1), 6–150 (ಶಾರೂಕ್ ಖಾನ್;18.6)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–42–0, ಝೇವಿಯರ್ ಬಾರ್ಟಲೆಟ್ 4–0–36–0, ಮಾರ್ಕೊ ಯಾನ್ಸೆನ್ 4–0–20–1, ವೈಶಾಖ ವಿಜಯಕುಮಾರ್ 4–0–34–3, ಯಜುವೇಂದ್ರ ಚಾಹಲ್ 4–0–28–2

ಪಂಜಾಬ್ ಕಿಂಗ್ಸ್: 7 ವಿಕೆಟ್‌ಗೆ 165 (19.1 ಓವರ್‌ಗಳಲ್ಲಿ)
ಪ್ರಿಯಾಂಶ್ ಸಿ ಅಶೋಕ್ ಬಿ ರಬಾಡ 7 (8ಎ, 6x1)
ಪ್ರಭಸಿಮ್ರನ್ ಸಿ ಪ್ರಸಿದ್ಧ ಬಿ ರಶೀದ್ 37 (24ಎ, 4x1, 6x4)
ಕೂಪರ್ ಕನೊಲಿ ಔಟಾಗದೇ ಔಟಾಗದೇ 72 (44ಎ, 4x5, 6x5)
ಶ್ರೇಯಸ್ ಸಿ ಸುಂದರ್ ಬಿ ಪ್ರಸಿದ್ಧ 18 (11ಎ, 6x2)
ವಧೇರಾ ಸಿ ಗಿಲ್ ಬಿ ಸುಂದರ್ 3 (6ಎ)
ಶಶಾಂಕ್ ಸಿ ಬಟ್ಲರ್ ಬಿ ಪ್ರಸಿದ್ಧ 4 (5ಎ)
ಸ್ಟೊಯಿನಿಸ್ ಸಿ ರಶೀದ್ ಬಿ ಪ್ರಸಿದ್ಧ 0 (2ಎ)
ಯಾನ್ಸೆನ್ ಸಿ ಗಿಲ್ ಬಿ ಅಶೋಕ್ 9 (10ಎ, 6x1)
ಝೇವಿಯರ್ ಬಾರ್ಟಲೆಟ್ ಔಟಾಗದೇ 11 (5ಎ, 6x1)
ಇತರೆ: 4 (ವೈಡ್ 4)
ವಿಕೆಟ್ ಪತನ: 1–7 (ಪ್ರಿಯಾಂಶ್ ಆರ್ಯ; 1.2), 2–83 (ಪ್ರಭಸಿಮ್ರನ್ ಸಿಂಗ್; 9.3), 3–110 (ಶ್ರೇಯಸ್ ಅಯ್ಯರ್; 12.1), 4–113 (ನೇಹಲ್ ವಧೇರಾ; 13.1), 5–118 (ಶಶಾಂಕ್ ಸಿಂಗ್; 14.2), 6–118 (ಮಾರ್ಕಸ್ ಸ್ಟೊಯಿನಿಸ್; 14.4), 7–144 (ಮಾರ್ಕೊ ಯಾನ್ಸೆನ್; 17.4)
ಬೌಲಿಂಗ್: ಮೊಹಮ್ಮದ್ ಸಿರಾಜ್ 2–0–15–0, ಕಗಿಸೊ ರಬಾಡ 3–0–34–1, ಅಶೋಕ್ ಶರ್ಮಾ 3–0–31–1, ರಶೀದ್ ಖಾನ್ 4–0–29–1, ವಾಷಿಂಗ್ಟನ್ ಸುಂದರ್ 3.1–0–27–1, ಪ್ರಸಿದ್ಧ ಕೃಷ್ಣ 4–0–29–3.
ಪಂದ್ಯದ ಆಟಗಾರ: ಕೂಪರ್ ಕನೊಲಿ

ಲಖನೌ ಸೂಪರ್ ಜೈಂಟ್ಸ್–ಡೆಲ್ಲಿ ಕ್ಯಾಪಿಟಲ್ಸ್ ಪಂದ್ಯ ಇಂದು

ಪಂತ್, ರಾಹುಲ್ ಆಟದತ್ತ ಚಿತ್ತ

ಲಖನೌ (ಪಿಟಿಐ): ಲಖನೌ ಸೂಪರ್‌ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಮೇಲೆ ಈಗ ಎಲ್ಲರ ಚಿತ್ತ ಇದೆ.

ಉತ್ತಮ ಸಮತೋಲನ ಹೊಂದಿರುವ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಬುಧವಾರ ರಿಷಭ್ ಬಳಗವು ಕಣಕ್ಕಿಳಿಯಲಿದೆ. ಡೆಲ್ಲಿ ತಂಡವು ಉತ್ತಮ ಆಟಗಾರರಿಂದ ಸಮತೋಲನವಾಗಿದೆ.

ಇಂದಿನ ಪಂದ್ಯ
ಲಖನೌ ಸೂಪರ್ ಜೈಂಟ್ಸ್ V/s ಡೆಲ್ಲಿ ಕ್ಯಾಪಿಟಲ್ಸ್
ತಾಣ: ಲಖನೌ,
ಆರಂಭ ರಾತ್ರಿ 7.30 ರಿಂದ
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಹೋದ ವರ್ಷ ದುಬಾರಿ ಮೌಲ್ಯ ಪಡೆದು ಲಖನೌ ತಂಡವನ್ನು ಸೇರಿದ್ದ ಪಂತ್ ಅವರು ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದರು. ಅಲ್ಲದೇ ನಾಯಕತ್ವದಲ್ಲಿಯೂ ಅವರು ಯಶಸ್ವಿಯಾಗಿರಲಿಲ್ಲ. ಹೋದ ಸಲ ಗಾಯದಿಂದಾಗಿ ಪ್ರಮುಖ ಬೌಲರ್‌ಗಳ ಗೈರುಹಾಜರಿಯೂ ಅವರ ತಂಡವನ್ನು ಕಾಡಿತ್ತು.

ಪಂತ್ ಅವರ ಈ ಸಲ ಪೂರ್ಣಪ್ರಮಾಣದಲ್ಲಿ ಫಿಟ್ ಆಗಿದ್ದಾರೆ. ಅಲ್ಲದೇ ಅವರ ಬಳಗಕ್ಕೆ ಈಗ ಅನುಭವಿ ಮೊಹಮ್ಮದ್ ಶಮಿ ಮತ್ತು ಎನ್ರಿಚ್ ನಾಕಿಯಾ ಅವರು ಸೇರ್ಪಡೆಯಾಗಿದ್ದಾರೆ. ಆದ್ದರಿಂದ ಬೌಲಿಂಗ್ ವಿಭಾಗ ಬಲಿಷ್ಠವಾಗಿದೆ. ಗಾಯದಿಂದಾಗಿ ಸುಮಾರು ಒಂದು ವರ್ಷದಿಂದ ಆಟದಂಗಳದಿಂದ ದೂರವಿದ್ದ ಮಯಂಕ್ ಯಾದವ್ ಅವರು ಚೇತರಿಸಿಕೊಂಡಿದ್ದಾರೆ. ಕಣಕ್ಕಿಳಿಯಲು ಬಹಳಷ್ಟು ಶ್ರಮಪಟ್ಟು ಅಭ್ಯಾಸ ನಡೆಸುತ್ತಿದ್ದಾರೆ. ಮೊಹಸೀನ್ ಖಾನ್ ಕೂಡ ಗಾಯದಿಂದ ಚೇತರಿಸಿಕೊಂಡ ನಂತರ ಕಣಕ್ಕೆ ಮರಳುತ್ತಿದ್ದಾರೆ. ತಂಡದ 'ಸ್ಪಿನ್ ಮೋಡಿಗಾರ' ದಿಗ್ವೇಶ್ ಸಿಂಗ್ ರಾಠಿ ಹೋದ ಆವೃತ್ತಿಯ ಟೂರ್ನಿಯಲ್ಲಿ ಪದಾರ್ಪಣೆ ಮಾಡಿದ್ದರು. 12 ತಿಂಗಳುಗಳ ನಂತರ ಮತ್ತೆ ಗಮನ ಸೆಳೆಯಲು ಸನ್ನದ್ಧರಾಗಿದ್ದಾರೆ.

ಲಖನೌ ತಂಡದ ಬ್ಯಾಟಿಂಗ್ ವಿಭಾಗವು ಉತ್ತಮವಾಗಿದೆ. ಮಿಚೆಲ್ ಮಾರ್ಷ್ ಮತ್ತು ಏಡನ್ ಮರ್ಕರಂ ಅವರಂತಹ ಸ್ಫೋಟಕ ಶೈಲಿಯ ಬ್ಯಾಟರ್‌ಗಳ ಬಲ ತಂಡಕ್ಕೆ ಇದೆ. ಅವರಿಬ್ಬರೂ ಇನಿಂಗ್ಸ್ ಆರಂಭಿಸಲಿದ್ದಾರೆ. ಹೋದ ವರ್ಷ ಬಹುತೇಕ ಪಂದ್ಯಗಳಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಪಂತ್ ಆಡಿದ್ದರು. ಆದರೆ ಕೊನೆಯ ಪಂದ್ಯದಲ್ಲಿ ಮೂರನೇ ಕ್ರಮಾಂಕದಲ್ಲಿ ಆಡಿ ನೂರು ರನ್ ಗಳಿಸಿದ್ದರು. ಆದ್ದರಿಂದ ಅವರು ಈ ಸಲ ಮೂರನೇ ಕ್ರಮಾಂಕದಲ್ಲಿ ಆಡುವುದು ಬಹುತೇಕ ಖಚಿತ. ನಾಲ್ಕನೇ ಕ್ರಮಾಂಕದಲ್ಲಿ ನಿಕೊಲಸ್ ಪೂರನ್ ಇದ್ದಾರೆ. ಜೋಶ್ ಇಂಗ್ಲಿಸ್, ಆಲ್‌ರೌಂಡರ್ ಅಬ್ದುಲ್ ಸಮದ್, ಆಯುಷ್ ಬದೋನಿ ಅವರೂ ಸರದಿ ಸಾಲಿನಲ್ಲಿದ್ದಾರೆ.

ಚಾಣಾಕ್ಷ ಸ್ಪಿನ್ನರ್ ಮತ್ತು ನಾಯಕ ಅಕ್ಷರ್ ಪಟೇಲ್ ನೇತೃತ್ವದ ಡೆಲ್ಲಿ ತಂಡಕ್ಕೆ ಕನ್ನಡಿಗ ಕೆ.ಎಲ್. ರಾಹುಲ್ ಅವರ ಬಲ ಇದೆ. ಡೇವಿಡ್ ಮಿಲ್ಲರ್, ಪೃಥ್ವಿ ಶಾ, ಸಮೀರ್ ರಿಜ್ವಿ, ಟ್ರಿಸ್ಟನ್ ಸ್ಟಬ್ಸ್, ಕರ್ನಾಟಕದ ಕರುಣ್ ನಾಯರ್ ಅವರು ಈ ಬಳಗದಲ್ಲಿದ್ದಾರೆ.

ರಣಜಿ ಟ್ರೋಫಿ ವಿಜೇತ ಜಮ್ಮು–ಕಾಶ್ಮೀರ ತಂಡದ 'ಹೀರೊ' ವೇಗದ ಬೌಲರ್ ಅಕೀಬ್ ನಬಿ ದಾರ್ ಅವರ ಮೇಲೆ ತಂಡವು ಅಪಾರ ನಿರೀಕ್ಷೆ ಇಟ್ಟುಕೊಂಡಿದೆ. ಕೈಲ್ ಜೆಮಿಸನ್, ಟಿ. ನಟರಾಜ್, ಮುಕೇಶ್ ಕುಮಾರ್ ಮತ್ತು ಕುಲದೀಪ್ ಯಾದವ್ ಅವರೂ ತಂಡಕ್ಕೆ ಗೆಲುವಿನ ಕಾಣಿಕೆ ನೀಡಬಲ್ಲ ಆಟಗಾರರು.


ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಅಕ್ಷರ್ ಪಟೇಲ್ (ಎಡ) ಹಾಗೂ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ 'ಎಕ್ಸ್' ಚಿತ್ರಗಳು


ಕೆ.ಎಲ್. ರಾಹುಲ್

ವೈಭವ್ ಸೂರ್ಯವಂಶಿ ಮಿಂಚಿನ ಬ್ಯಾಟಿಂಗ್

15 ಎಸೆತಗಳಲ್ಲಿ ಅರ್ಧಶತಕ: ಜನ್ಮದಿನದ ಪುಳಕ

ಗುವಾಹಟಿ (ಪಿಟಿಐ): ' ಮೂರು ದಿನಗಳ ಹಿಂದೆ ನನ್ನ ಜನ್ಮದಿನ ಇತ್ತು. ಆದರೆ ಎಲ್ಲರೂ ನನ್ನ ಮುಖಕ್ಕೆ ಕೇಕ್ ಬಳಿಯುವುದನ್ನು ತಪ್ಪಿಸಿಕೊಳ್ಳಲು ಅಂದು ಬೇಗ ಮಲಗಿಬಿಟ್ಟೆ. ಕೇಕ್ ಕತ್ತರಿಸಿರಲಿಲ್ಲ'–

ರಾಜಸ್ಥಾನ ರಾಯಲ್ಸ್ ತಂಡದ 'ಚಿನಕುರುಳಿ' ವೈಭವ್ ಸೂರ್ಯವಂಶಿ ಸೋಮವಾರ ಐಪಿಎಲ್ ಪಂದ್ಯದ ನಂತರ ತಮ್ಮ ಸಂದರ್ಶನದಲ್ಲಿ ಹೇಳಿದ್ದ ಮಾತುಗಳಿವು. ಮಾರ್ಚ್ 27ರಂದು ಅವರು ಹದಿನೈದನೇ ವಸಂತ ಪೂರೈಸಿದರು. ಮೂರು ದಿನಗಳ ನಂತರ ಬರ್ಸಾಪರ ಕ್ರೀಡಾಂಗಣದಲ್ಲಿ 15 ಎಸೆತಗಳಲ್ಲಿ ಅರ್ಧಶತಕ ಹೊಡೆಯುವ ಮೂಲಕ ಜನ್ಮದಿನವನ್ನು ತಡವಾಗಿಯಾದರೂ ಭರ್ಜರಿಯಾಗಿ ಆಚರಿಸಿಕೊಂಡರು.

ಚೆನ್ನೈ ಸೂಪರ್ ಕಿಂಗ್ಸ್ ತಂಡವು ಒಡ್ಡಿದ್ದ 128 ರನ್‌ಗಳ ಅಲ್ಪಮೊತ್ತದ ಗುರಿ ಬೆನ್ನಟ್ಟಿದ್ದ ರಾಜಸ್ಥಾನ ತಂಡವು ಕೇವಲ 12.1 ಓವರ್‌ಗಳಲ್ಲಿ ಜಯಭೇರಿ ಬಾರಿಸಿತು. ಯಾವುದೇ ಧಾವಂತದ ಆಟದ ಅಗತ್ಯವಿರಲಿಲ್ಲ. ರಾಯಲ್ಸ್ ತಂಡದ ಬ್ಯಾಟಿಂಗ್ ಪಡೆಗೆ ಇದು ಸುಲಭವದ ಮೊತ್ತವೂ ಆಗಿತ್ತು. ಆದರೂ ವೈಭವ್ ಮಾತ್ರ ತಮ್ಮ ಎಂದಿನ ಸಹಜ ಶೈಲಿಯಲ್ಲಿಯೇ ಬೀಸಾಟವಾಡಿದರು.

'ಪವರ್‌ಪ್ಲೇನಲ್ಲಿ ಸಾಧ್ಯವಾದಷ್ಟೂ ರನ್‌ಗಳನ್ನು ಗಳಿಸುವುದು ನಮ್ಮ ಯೋಜನೆಯಾಗಿತ್ತು. ಅದನ್ನು ಅಚ್ಚುಕಟ್ಟಾಗಿ ನಿರ್ವಹಿಸಿದೆವು. ಆರಂಭದಲ್ಲಿ ಪಿಚ್ ಸ್ವಲ್ಪ ಮಟ್ಟಿಗೆ ಜಿಗುಟುತನ ತೋರಿತ್ತು. ಆದರೆ ಚೆಂಡು ಹಳತಾದಂತೆ ಬ್ಯಾಟಿಂಗ್ ಸುಲಭವಾಯಿತು' ಎಂದು ವೈಭವ್ ವಿವರಿಸಿದರು.

'ರಕ್ಷಣಾತ್ಮಕವಾಗಿ ಆಡಬೇಕೆಂಬ ಯೋಚನೆ ನನಗಿತ್ತು. ಆದರೆ, ಅಲ್ಪಮೊತ್ತದ ಗುರಿಯನ್ನು ಬೆನ್ನಟ್ಟುವಾಗ ಪವರ್‌ಪ್ಲೇ-ನಲ್ಲಿ ಉತ್ತಮವಾಗಿ ಆಡುವುದು ಮುಖ್ಯವಾಗುತ್ತದೆ. ಆ ಹಂತದಲ್ಲಿ ಹೆಚ್ಚು ರನ್‌ಗಳ ಅಡಿಪಾಯ ಹಾಕಿದರೆ ಮುಂದೆ ಸುಲಭ. ಆ ಹಂತದಲ್ಲಿ ಬೌಲರ್‌ಗಳು ಮೇಲುಗೈ ಸಾಧಿಸಿದರೆ ಬ್ಯಾಟಿಂಗ್ ಬಳಗಕ್ಕೆ ಕಷ್ಟವಾಗುತ್ತದೆ' ಎಂದು ಬಿಹಾರದ ವೈಭವ್ ವಿಶ್ಲೇಷಿಸಿದರು.

'ಆರಂಭಿಕ ಜೊತೆಗಾರ (ಯಶಸ್ವಿ ಜೈಸ್ವಾಲ್) ಪ್ರತಿಯೊಂದು ಎಸೆತದ ನಂತರವೂ ನನ್ನೊಂದಿಗೆ ಮಾತನಾಡುತ್ತಿದ್ದರು. ಯಾವಾಗ ಸಿಂಗಲ್ಸ್ ತೆಗೆದುಕೊಳ್ಳಬೇಕು ಎಂಬುದನ್ನು ಹೇಳುತ್ತಿದ್ದರು. ಅದರಿಂದಾಗಿ ಅವರು ನನಗೆ ಬ್ಯಾಟಿಂಗ್ ಮಾಡಲು ಅವಕಾಶಗಳನ್ನು ಕೊಡುತ್ತಿದ್ದರು. ಉತ್ತಮ ಹೊಡೆತಗಳ ಆಯ್ಕೆ ಮಾಡಿಕೊಳ್ಳಲು ಹುರಿದುಂಬಿಸುತ್ತಿದ್ದರು' ಎಂದರು.

ರಾಜಸ್ಥಾನ ರಾಯಲ್ಸ್ ತಂಡವು ಈ ಪಂದ್ಯದಲ್ಲಿ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಂದ್ರೆ ಬರ್ಗರ್ (26ಕ್ಕೆ2) ಅವರ ಪರಿಣಾಮಕಾರಿ ದಾಳಿಯಿಂದಾಗಿ ಚೆನ್ನೈ ತಂಡವು 19.4 ಓವರ್‌ಗಳಲ್ಲಿ 127 ರನ್‌ಗಳಿಗೆ ಆಲೌಟ್ ಆಯಿತು.


ವೈಭವ್ ಸೂರ್ಯವಂಶಿ ಪಿಟಿಐ ಚಿತ್ರ

ಭಾರತಕ್ಕೆ ಭೂತಾನ್ ಸವಾಲು

ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಸೆಮಿಫೈನಲ್ ಇಂದು

ಮಾಲೆ (ಮಾಲ್ಡೀವ್ಸ್), (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು, ಬುಧವಾರ ಇಲ್ಲಿನ ನ್ಯಾಷನಲ್ ಕ್ರೀಡಾಂಗಣದಲ್ಲಿ ನಡೆಯುವ ಸ್ಯಾಫ್ 20 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪಂದ್ಯದಲ್ಲಿ ಭೂತಾನ್ ವಿರುದ್ಧ ಆಡಲಿದ್ದು, ತನ್ನ ಆಟದ ಮಟ್ಟವನ್ನು ಸುಧಾರಿಸುವ ವಿಶ್ವಾಸದಲ್ಲಿದೆ.

ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ನೇಪಾಳ ತಂಡವು ಮತ್ತು ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

'ಬಿ' ಗುಂಪಿನ ಕೊನೆಯ ಲೀಗ್ ಪಂದ್ಯ ಆಡಿದ ಮೂರು ದಿನಗಳ ಬಿಡುವಿನ ನಂತರ ಭಾರತವು ಈ ಪಂದ್ಯಕ್ಕೆ ಇಳಿಯುತ್ತಿದೆ. ದೈಹಿಕವಾಗಿ ಸುಧಾರಿಸಿಕೊಳ್ಳಲು ಮತ್ತು ಮಾನಸಿಕವಾಗಿ ಸಜ್ಜಾಗಲು ಈ ಅವಧಿ ತಂಡಕ್ಕೆ ನೆರವಾಗಲಿದೆ. ಲೀಗ್ ಪಂದ್ಯಗಳಲ್ಲಿ ಭಾರತವು 3–0 ಯಿಂದ ಪಾಕಿಸ್ತಾನ ವಿರುದ್ಧ ಗೆಲುವು ಸಾಧಿಸಿತ್ತು. ಬಾಂಗ್ಲಾದೇಶ ಎದುರು 1–1 ಡ್ರಾ ಸಾಧಿಸಿತ್ತು.

ಭಾರತದ ಕಡೆ ವಿಶಾಲ್ ಯಾದವ್ ಮತ್ತು ಒಮಾಂಗ್ ದೊಡುಮ್ ತಲಾ ಎರಡು ಗೋಲು ಗಳಿಸಿದ್ದಾರೆ.

ಭೂತಾನ್ ತಂಡವು 'ಎ' ಗುಂಪಿನಿಂದ ಸೆಮಿಫೈನಲ್ ಪ್ರವೇಶಿಸಿದೆ. ತಂಡವು ನೇಪಾಳ ಎದುರು ಸೋಲನುಭವಿಸಿದರೂ, ಆತಿಥೇಯ ಮಾಲ್ಡೀವ್ಸ್ ಎದುರು ಗೋಲಿಲ್ಲದೇ ಡ್ರಾ ಸಾಧಿಸಿತ್ತು. ನಂತರ ಶ್ರೀಲಂಕಾ ವಿರುದ್ಧ ಇಂಜುರಿ ಅವಧಿಯ ಗೋಲು ತಂಡವನ್ನು (ಫಲಿತಾಂಶ 1–0) ಸೆಮಿಫೈನಲ್‌ಗೆ ತಲುಪಿಸಿತ್ತು. ಭೂತಾನ್ ತಂಡದ ಧೆಂಡುಪ್ ಗ್ಯೆಲ್ಡ್‌ಶೆನ್ ಎರಡು ಗೋಲು ಗಳಿಸಿದ್ದು, ಅವರನ್ನು ನಿಯಂತ್ರಿಸುವುದು ಭಾರತದ ಪಾಲಿಗೆ ನಿರ್ಣಾಯಕವಾಗಲಿದೆ.

ಪಂದ್ಯದಲ್ಲಿ ಹೆಚ್ಚುವರಿ ಅವಧಿಯ ಆಟ ಇರುವುದಿಲ್ಲ. ಹೀಗಾಗಿ ಪಂದ್ಯ ಮುಗಿದ ನಂತರ ನೇರವಾಗಿ ಪೆನಾಲ್ಟಿ ಶೂಟೌಟ್ ನಡೆಯಲಿದೆ.


ಭಾರತ 20 ವರ್ಷದೊಳಗಿನವರ ಫುಟ್‌ಬಾಲ್ ತಂಡದ ಆಟಗಾರರ ತಾಲೀಮು

ಕೆಲವೇ ಟೂರ್ನಿಗಳಲ್ಲಿ ಆಡಲು ನಿರ್ಧರಿಸಿದ ಡಿ. ಗುಕೇಶ್

ಚೆನ್ನೈ (ಪಿಟಿಐ): ಈ ಋತುವಿನ ಟೂರ್ನಿಗಳಲ್ಲಿ ನಿರಾಶೆ ಅನುಭವಿಸಿರುವ ಕಾರಣ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಈ ವರ್ಷ ಆಡಲಿರುವ ಟೂರ್ನಿಗಳನ್ನು ಕಡಿತಗೊಳಿಸಿದ್ದಾರೆ. ಗ್ರ್ಯಾಂಡ್ ಚೆಸ್ ಟೂರ್‌ನ ಎರಡು ಟೂರ್ನಿಗಳಲ್ಲಿ ಮಾತ್ರ ಆಡಿ, ವಿಶ್ವ ಚಾಂಪಿಯನ್‌ಷಿಪ್ ಪಟ್ಟ ಉಳಿಸಿಕೊಳ್ಳುವತ್ತ ಸಿದ್ಧತೆ ನಡೆಸಲು ಅವರು ಮಂಗಳವಾರ ನಿರ್ಧರಿಸಿದ್ದಾರೆ.

2025ರ ನವೆಂಬರ್‌ನಲ್ಲಿ ತವರಿನಲ್ಲಿ (ಗೋವಾ) ನಡೆದ ಚೆಸ್ ವಿಶ್ವಕಪ್‌ನಲ್ಲಿ ಅವರು ಅಗ್ರ ಶ್ರೇಯಾಂಕ ಗಳಿಸಿದ್ದರೂ ಬೇಗನೇ ಹೊರಬಿದ್ದಿದ್ದರು. ಡಿಸೆಂಬರ್‌ನಲ್ಲಿ ವಿಶ್ವ ರ‍್ಯಾಪಿಡ್ ಮತ್ತು ಬ್ಲಿಟ್ಝ್ ಚಾಂಪಿಯನ್‌ಷಿಪ್‌ಗಳಲ್ಲಿ ಅಷ್ಟೇನೂ ಉತ್ತಮ ಪ್ರದರ್ಶನ ನೀಡಿರಲಿಲ್ಲ. ಟಾಟಾ ಸ್ಟೀಲ್ ಚೆಸ್ ಟೂರ್ನಿಯಲ್ಲಿ ಟೈಬ್ರೇಕ್ ನಂತರ ಹತ್ತನೇ ಸ್ಥಾನ ಗಳಿಸಿದ್ದರು. ಇತ್ತೀಚೆಗೆ ಪ್ರೇಗ್ ಚೆಸ್ ಉತ್ಸವದಲ್ಲಿ 9ನೇ ಸ್ಥಾನ ಪಡೆದಿದ್ದರು.

'ಕಳೆದ ಕೆಲವು ಟೂರ್ನಿಗಳಲ್ಲಿ ನನ್ನ ಆಟ ನಿರಾಶಾದಾಯಕವಾಗಿದೆ. ನನಗಷ್ಟೇ ಅಲ್ಲ, ನನ್ನನ್ನು ಬೆಂಬಲಿಸಿದವರಿಗೂ ಸಹ' ಎಂದು ಗುಕೇಶ್ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

'ತವರಿನಿಂದ ಆಚೆ ದೀರ್ಘಾವಧಿಯ ಟೂರ್ನಿಗಳಲ್ಲಿ ಈ ವರ್ಷ ಆಡದಿರಲು ನಿರ್ಧರಿಸಿದ್ದೇನೆ' ಎನ್ನುವ ಮೂಲಕ ವಿಶ್ವ ಚಾಂಪಿಯನ್‌ಷಿಪ್ ಸಿದ್ಧತೆ ನಡೆಸುವುದಕ್ಕೆ ತಮ್ಮ ಆದ್ಯತೆ ಎಂಬುದನ್ನು ಸೂಚಿಸಿದ್ದಾರೆ.

ಎರಡನೇ ಸುತ್ತಿಗೆ ಹರ್ಷಿಣಿ ನಾಗರಾಜ್

ಛತ್ರಪತಿ ಸಂಭಾಜಿನಗರ (ಪಿಟಿಐ): ಕರ್ನಾಟಕದ ಹರ್ಷಿಣಿ ಎನ್.ನಾಗರಾಜ್ ಅವರು ಛತ್ರಪತಿ ಸಂಭಾಜಿನಗರ ಓಪನ್ ಎಂಡ್ಯುರೆನ್ಸ್ ಮಹಿಳಾ ಐಟಿಎಫ್ ಟೆನಿಸ್ ಟೂರ್ನಿಯ ಎರಡನೇ ಸುತ್ತನ್ನು ತಲುಪಿದರು.

1 ಗಂಟೆ 21 ನಿಮಿಷ ನಡೆದ ಮೊದಲ ಸುತ್ತಿನಲ್ಲಿ ಹರ್ಷಿಣಿ 6–4, 6–1 ರಿಂದ ಆತಿಥೇಯ ಮಹಾರಾಷ್ಟ್ರದ ಆಕೃತಿ ಸೋನಕುಸಾರೆ ಅವರನ್ನು ಸೋಲಿಸಿದರು. ಆದರೆ ಕರ್ನಾಟಕದ ಇನ್ನೊಬ್ಬ ಆಟಗಾರ್ತಿ ಸೋಹಾ ಸಾದಿಕ್ ಮೊದಲ ಸುತ್ತಿನಲ್ಲಿ ನಿರ್ಗಮಿಸಿದರು. ಮಹಾರಾಷ್ಟ್ರದ ಸಂದೀಪ್ತಿ ಸಿಂಗ್ ರಾವ್ 6–4, 6–3 ರಿಂದ ಸೋಹಾ ಅವರನ್ನು ಸೋಲಿಸಿದರು.

ಐಪಿಎಲ್ ಪಂದ್ಯಕ್ಕೆ ಶಾಸಕರಿಗೆ ಮಾತ್ರ ಮೂರು ಉಚಿತ ಟಿಕೆಟ್ ಕೊಡಿಸುವ ಸರ್ಕಾರದ ಕ್ರಮ ಸರಿಯೇ?
• ಸರಿ • ತಪ್ಪು • ಗೊತ್ತಿಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸಿಂದರೋವ್‌ಗೆ ಮಣಿದ ಪ್ರಜ್ಞಾನಂದ

ಪಾಫೋಸ್ (ಸೈಪ್ರಸ್), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಸೋಲಿನ ಆಘಾತ ಅನುಭವಿಸಿದರು. ಮಂಗಳವಾರ ನಡೆದ ಮೂರನೇ ಸುತ್ತಿನ ಪಂದ್ಯದಲ್ಲಿ ವಿಶ್ವಕಪ್ ಚಾಂಪಿಯನ್ ಜಾವೊಖಿರ್ ಸಿಂದರೋವ್ ಅವರು ಭಾರತದ ಆಟಗಾರನನ್ನು ಸೋಲಿಸಿದರು.

ನೆದರ್ಲೆಂಡ್ಸ್‌ನ ಅನಿಶ್ ಗಿರಿ ವಿರುದ್ಧ ಗೆಲುವಿನೊಡನೆ ಅಭಿಯಾನ ಆರಂಭಿಸಿದ್ದ ಪ್ರಜ್ಞಾನಂದ ಅವರು ಈಗ 1.5 ಪಾಯಿಂಟ್ಸ್ ಹೊಂದಿದ್ದಾರೆ. ಚೆನ್ನೈನ ಆಟಗಾರ 40 ನಡೆಗಳಲ್ಲಿ ಸೋತರು.

ಉಜ್ಬೇಕಿಸ್ತಾನದ ಸಿಂದರೋವ್ ಜೊತೆಗೆ, ಪ್ರಶಸ್ತಿಗೆ ಫೇವರಿಟ್ ಆಗಿರುವ ಅಮೆರಿಕದ ಫ್ಯಾಬಿಯಾನೊ ಕರುವಾನ ಕೂಡ ಗೆಲುವು ಪಡೆದರು. ಅವರು ಕೇವಲ 19 ನಡೆಗಳಲ್ಲಿ ಚೀನಾದ ವೀ ಯಿ (0.5) ಅವರನ್ನು ಸೋಲಿಸಿದರು. ಸಿಂದರೋವ್ ಮತ್ತು ಕರುವಾನ ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿ, ಎಂಟು ಆಟಗಾರರ ಟೂರ್ನಿಯಲ್ಲಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಪ್ರಜ್ಞಾನಂದ ಎರಡನೇ ಸ್ಥಾನದಲ್ಲಿದ್ದಾರೆ. ದಿನದ ಇತರ ಎರಡು ಆಟಗಳು ಡ್ರಾ ಆದವು. ಜರ್ಮನಿಯ ಮಥಾಯಸ್ ಬ್ಲೂಬಾಮ್ (1) ಮತ್ತು ಆ್ಯಂಡ್ರಿ ಇಸಿಪೆಂಕೊ (1) ಅವರು ಡ್ರಾ ಮಾಡಿಕೊಂಡರೆ, ಅನಿಶ್ ಗಿರಿ (1) ಮತ್ತು ಹಿಕಾರು ನಕಾಮುರ (1) ಕೂಡ ಪಾಯಿಂಟ್ ಹಂಚಿಕೊಂಡರು.

ಮಹಿಳಾ ವಿಭಾಗದಲ್ಲಿ ಮೊದಲ ಎರಡು ದಿನ ಎಲ್ಲ ಪಂದ್ಯಗಳು ಡ್ರಾ ಆಗಿದ್ದವು. ಮೂರನೇ ದಿನ ಎರಡರಲ್ಲಿ ಸೋಲು ಗೆಲುವು ನಿರ್ಧಾರವಾಯಿತು. ಕಜಾಕಸ್ತಾನದ ಬಿಬಿಸಾರ ಅಸುಬ್ಬಯೇವ (2) ಅವರು ಚೀನಾದ ಝು ಜಿನೆರ್ (1) ವಿರುದ್ಧ, ರಷ್ಯಾದ ಕ್ಯಾತರಿನಾ ಲಾಗ್ನೊ (2) ಅವರು ಚೀನಾದ ತಾನ್ ಝೊಂಗ್‌ಯಿ (1) ವಿರುದ್ಧ ಜಯಗಳಿಸಿದರು.

ವಿಶ್ವಕಪ್ ಚಾಂಪಿಯನ್ ದಿವ್ಯಾ ದೇಶಮುಖ್ (1.5) ಅವರು ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (1.5) ಜೊತೆ, ಆರ್.ವೈಶಾಲಿ (1.5) ಅವರು ಉಕ್ರೇನ್‌ನ ಅನ್ನಾ ಮುಝಿಚುಕ್ (1.5) ಸಂಗಡ ಡ್ರಾ ಮಾಡಿಕೊಂಡರು.


ಜಾವೊಖಿರ್ ಸಿಂದರೋವ್

ಪಂಕಜ್‌ಗೆ ಕಿರೀಟ



ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಪಿಎಸ್‌ಪಿಬಿ) ಅನ್ನು ಪ್ರತಿನಿಧಿಸಿದ ದಿಗ್ಗಜ ಆಟಗಾರ ಪಂಕಜ್ ಅಡ್ವಾನಿ ಅವರು ಮಂಗಳವಾರ ನಡೆದ ಫೈನಲ್‌ನಲ್ಲಿ 11–6ರಿಂದ ಚಂಡೀಗಢದ ನಿತಿನ್ ಶರ್ಮಾ ಅವರನ್ನು ಸೋಲಿಸಿ, ಚೊಚ್ಚಲ ರಾಷ್ಟ್ರೀಯ ನೈನ್ ಬಾಲ್ ಪೂಲ್ ಸ್ನೂಕರ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು

ಪದಾರ್ಪಣೆ ಪಂದ್ಯದಲ್ಲಿ ಗೋಲು ಹೊಡೆದ ರಯಾನ್

ಭಾರತಕ್ಕೆ ಮಣಿದ ಹಾಂಗ್‌ಕಾಂಗ್

ಕೊಚ್ಚಿ (ಪಿಟಿಐ): ಆಸ್ಟ್ರೇಲಿಯಾ ಸಂಜಾತ ರಯಾನ್ ವಿಲಿಯಮ್ಸ್ ಅವರು ಗೋಲು ಹೊಡೆಯುವ ಮೂಲಕ ಭಾರತ ತಂಡಕ್ಕೆ ತಮ್ಮ ಪದಾರ್ಪಣೆ ಪಂದ್ಯವನ್ನು ಸ್ಮರಣೀಯವನ್ನಾಗಿಸಿದರು. ಮಂಗಳವಾರ ನಡೆದ ಏಷ್ಯನ್ ಕಪ್ ಅರ್ಹತಾ ಸುತ್ತಿನ ಪಂದ್ಯದಲ್ಲಿ ಭಾರತ 2–1 ಗೋಲುಗಳಿಂದ ಹಾಂಗ್‌ಕಾಂಗ್ ತಂಡವನ್ನು ಸೋಲಿಸಿತು.

'ಸಿ' ಗುಂಪಿನಲ್ಲಿದ್ದ ಈ ಎರಡೂ ತಂಡಗಳು ಈ ಮೊದಲೇ ಎಎಫ್‌ಸಿ ಏಷ್ಯನ್ ಕಪ್ ರೇಸ್‌ನಿಂದ ಹೊರಬಿದ್ದಿದ್ದ ಕಾರಣ ಪಂದ್ಯ ಅಷ್ಟೇನೂ ಮಹತ್ವ ಪಡೆದಿರಲಿಲ್ಲ.

ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಹೊನಲು ಬೆಳಕಿನಡಿ ನಡೆದ ಹಣಾಹಣಿಯಲ್ಲಿ ರಯಾನ್ ವಿಲಿಯಮ್ಸ್ ನಾಲ್ಕನೇ ನಿಮಿಷವೇ ಗೋಲು ಗಳಿಸಿದರು. ಭಾರತ ತಂಡದ ಆಟಗಾರನೊಬ್ಬ ಪದಾರ್ಪಣೆ ಪಂದ್ಯದಲ್ಲಿ ಇಷ್ಟು ಬೇಗ ಗೋಲು ಗಳಿಸಿದ್ದು ಇದೇ ಮೊದಲು. ಆಕಾಶ್ ಮಿಶ್ರಾ 50ನೇ ನಿಮಿಷ ಆತಿಥೇಯ ತಂಡದ ಎರಡನೇ ಗೋಲನ್ನು ಗಳಿಸಿದರು. ಇದು ಅಂತರರಾಷ್ಟ್ರೀಯ ಪಂದ್ಯದಲ್ಲಿ ಅವರು ಗಳಿಸಿದ ಮೊದಲ ಗೋಲು ಸಹ.

ಹಾಂಗ್‌ಕಾಂಗ್ ತಂಡದ ಪರ ಎವರ್ಟನ್ ಕಮಾರ್ಗೊ 65ನೇ ನಿಮಿಷ ಗೋಲು ಗಳಿಸಿ ಸೋಲಿನ ಅಂತರ ತಗ್ಗಿಸಿದರು.

ಮೂರನೇ ಸುತ್ತಿನ ಕ್ವಾಲಿಫೈಯರ್ಸ್‌ನಲ್ಲಿ ಖಾಲಿದ್ ಜಮೀಲ್ ಪಡೆಗೆ ಇದು ಮೊದಲ ಜಯ. ಒಂದು ಗೆಲುವು, ಎರಡು ಡ್ರಾಗಳೊಂದಿಗೆ ಭಾರತ ತಂಡ ಐದು ಪಾಯಿಂಟ್‌ಗಳೊಡನೆ ಕೊನೆಯ ಸ್ಥಾನ ಗಳಿಸಿತು.

2025ರ ಜೂನ್ 10ರಂದು ಕೌಲೂನ್‌ನಲ್ಲಿ ನಡೆದ ಪಂದ್ಯದಲ್ಲಿ ಭಾರತ 0–1 ರಿಂದ ಹಾಂಗ್‌ಕಾಂಗ್‌ಗೆ ಸೋತಿತ್ತು.

ಸಿಂಗಪುರ ತಂಡವು ಮಂಗಳವಾರ ತವರಿನಲ್ಲಿ ನಡೆದ ಪಂದ್ಯದಲ್ಲಿ 1–0 ಗೋಲಿನಿಂದ ಬಾಂಗ್ಲಾದೇಶ ತಂಡವನ್ನು ಸೋಲಿಸಿ 'ಸಿ' ಗುಂಪಿನಲ್ಲಿ ಅಗ್ರಸ್ಥಾನ (6 ಪಂದ್ಯಗಳಿಂದ 14 ಪಾಯಿಂಟ್ಸ್) ಗಳಿಸಿತು. ಈ ಆಧಾರದಲ್ಲಿ ಮುಂದಿನ ವರ್ಷದ ಏಷ್ಯನ್ ಕಪ್‌ಗೆ ಅರ್ಹತೆ ಸಂಪಾದಿಸಿಕೊಂಡಿತು.

ಮನವೀರ್ ಸಿಂಗ್ ಅವರು ಪೂರೈಸಿದ ಕೆಳಮಟ್ಟದ ಪಾಸ್‌ನಲ್ಲಿ ವಿಲಿಯಮ್ಸ್ ಅವರು ಚೆಂಡನ್ನು ಬಲಗಾಲಿನಲ್ಲಿ ಒದ್ದು ಗುರಿತಲುಪಿಸಿದ ತಕ್ಷಣ ಕಿಕ್ಕಿರಿದಿದ್ದ ಪ್ರೇಕ್ಷಕರ ಸಂಭ್ರಮಕ್ಕೆ ಮೇರೆಯಿರಲಿಲ್ಲ.

ಭಾರತ ತಂಡಕ್ಕೆ ಆಡಲು 31 ವರ್ಷದ ವಿಲಿಯಮ್ಸ್ ಅವರಿಗೆ ಇತ್ತೀಚೆಗಷ್ಟೇ ಫಿಫಾದಿಂದ ಅನುಮತಿ ದೊರಕಿತ್ತು. ಅವರು ಬಾಂಗ್ಲಾದೇಶ ವಿರುದ್ಧ ಪಂದ್ಯಕ್ಕೆ ಮೊದಲೇ ಭಾರತ ತಂಡದ ಶಿಬಿರ ಸೇರಿಕೊಂಡಿದ್ದರು. ಆದರೆ ಆಗ ಫಿಫಾದಿಂದ ಅನುಮತಿ ಪ್ರಕ್ರಿಯೆ ಪೂರ್ಣಗೊಂಡಿರಲಿಲ್ಲ.

ಅವರು ಆಸ್ಟ್ರೇಲಿಯಾ ಸೀನಿಯರ್ ತಂಡಕ್ಕೆ ಅಧಿಕೃತವಾಗಿ ಆಡದ ಕಾರಣ ಇದು ಅವರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಾರ್ಪಣೆ ಪಂದ್ಯ ಎನಿಸಿತು. ಈ ಹಿಂದೆ ಅವರು 19 ವರ್ಷದೊಳಗಿನವರ ಎಎಫ್‌ಸಿ ಚಾಂಪಿಯನ್‌ಷಿಪ್‌ನಲ್ಲಿ ಮತ್ತು ಫಿಫಾ 20 ವರ್ಷದೊಳಗಿನವರ ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ ತಂಡಕ್ಕೆ ಆಡಿದ್ದರು.

ಸಮರ್ಥ ಆಕ್ರಮಣಕಾರಿ ಆಟಗಾರನಾಗಿರುವ ವಿಲಿಯಮ್ಸ್, ಇಂಡಿಯನ್ ಸೂಪರ್ ಲೀಗ್‌ನಲ್ಲಿ (ಐಎಸ್‌ಎಲ್) ಬೆಂಗಳೂರು ಎಫ್‌ಸಿಗೆ ಆಡುತ್ತಿದ್ದಾರೆ. ಭಾರತವನ್ನು ಪ್ರತಿನಿಧಿಸುವ ಉದ್ದೇಶದಿಂದ ಅವರು ಕಳೆದ ವರ್ಷದ ಕೊನೆಯಲ್ಲಿ ಆಸ್ಟ್ರೇಲಿಯಾ ಪಾಸ್‌ಪೋರ್ಟ್ ಮರಳಿಸಿದ್ದರು.


ರಯಾನ್ ವಿಲಿಯಮ್ಸ್ ಚಿತ್ರ: ಎಐಎಫ್‌ಎಫ್

400 ಮೀ. ಓಟ: ರಾಜ್ಯದ ರಾಮುಗೆ ರಜತ

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು: ಕರ್ನಾಟಕದ ರಾಮು ಅವರು ರಾಯಪುರದಲ್ಲಿ ನಡೆಯುತ್ತಿರುವ ಚೊಚ್ಚಲ 'ಖೇಲೊ ಇಂಡಿಯಾ' ಆದಿವಾಸಿ ಕ್ರೀಡಾಕೂಟದ ಪುರುಷರ 400 ಮೀ. ಓಟದಲ್ಲಿ ಮಂಗಳವಾರ ಕಂಚಿನ ಪದಕ ಜಯಿಸಿದರು. ಇದು, ಕೂಟದ ಏಳನೇ ದಿನ ರಾಜ್ಯಕ್ಕೆ ಸಿಕ್ಕ ಏಕೈಕ ಪದಕ.

ರಾಮು ಅವರು ಫೈನಲ್ ಸುತ್ತಿನಲ್ಲಿ 49.60 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಗುಜರಾತ್‌ನ ಸಂತೋಷ್‌ಭಾಯಿ ಗಾನ್ವಿತ್ (49.332 ಸೆ.) ಸ್ವರ್ಣ ಜಯಿಸಿದರೆ, ಒಡಿಶಾದ ನೋಬಲ್‌ಕುಮಾರ್ ಕಿಸಾನ್ (49.335 ಸೆ.) ಬೆಳ್ಳಿ ಪದಕಕ್ಕೆ ಸಮಾಧಾನಪಡಬೇಕಾಯಿತು.

19 ಚಿನ್ನ, 7 ಬೆಳ್ಳಿ ಮತ್ತು 7 ಕಂಚು ಸೇರಿ ಒಟ್ಟು 33 ಪದಕಗಳನ್ನು ಗೆದ್ದಿರುವ ಕರ್ನಾಟಕವು ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಒಡಿಶಾ (13 ಸ್ವರ್ಣ, 8 ರಜತ ಮತ್ತು 15 ಕಂಚು) ಎರಡನೇ ಸ್ಥಾನದಲ್ಲಿದ್ದರೆ, ಜಾರ್ಖಂಡ್ (7 ಚಿನ್ನ, 2 ಬೆಳ್ಳಿ ಹಾಗೂ 5 ಕಂಚು) ನಂತರದ ಸ್ಥಾನದಲ್ಲಿದೆ.

ಜಾರ್ಖಂಡ್‌ನ ಶಿವಕುಮಾರ್ ಸೊರೇನ್ ಹಾಗೂ ಪೃಥ್ವಿ ಒರೋಣ್ (12.73 ಸೆ.) ಅವರು ಕ್ರಮವಾಗಿ ಕೂಟದ ಪುರುಷರ ಮತ್ತು ಮಹಿಳೆಯರ ವಿಭಾಗದ ವೇಗದ ಓಟಗಾರ/ಓಟಗಾರ್ತಿ ಎನಿಸಿದರು. ಪುರುಷರ 100 ಮೀ. ಓಟದಲ್ಲಿ ಶಿವಕುಮಾರ್ (10.58 ಸೆ.) ಸ್ವರ್ಣ ಪದಕ ಜಯಿಸಿದರೆ, ಆತಿಥೇಯ ಛತ್ತೀಸಗಢದ ತಿಲಕ್ ಬಾರ್ಸೆಲ್ (10.87 ಸೆ.) ರಜತ ಪದಕ ಗೆದ್ದುಕೊಂಡರು. ಒಡಿಶಾದ ಅತೀಶ್ ಕಿಂದೊ (10.91 ಸೆ.) ಕಂಚಿನ ಪದಕ ತಮ್ಮದಾಗಿಸಿಕೊಂಡರು.


ಮಹಿಳೆಯರ 100 ಮೀ. ಓಟದಲ್ಲಿ 16 ವರ್ಷ ವಯಸ್ಸಿನ ಪೃಥ್ವಿ ವೈಯಕ್ತಿಕ ಶ್ರೇಷ್ಠ ಪ್ರದರ್ಶನದೊಂದಿಗೆ (12.73 ಸೆ.) ಚಿನ್ನಕ್ಕೆ ಕೊರಳೊಡ್ಡಿದರು. ನಾಗಾಲ್ಯಾಂಡ್‌ನ ರುದುಒಲ್‌ಹೂನೊ ಬೆಲಹೊ (12.90 ಸೆ.) ಮತ್ತು ಜಾರ್ಖಂಡ್‌ನ ಪುಟುಲ್ ಬಕ್ಷಿ (13.03 ಸೆ.) ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಜಯಿಸಿದರು.

ಗೋವಾದ ಮಾನಸಿ ಕುನಕಲ್ಕ ಅವರು ಮಹಿಳೆಯರ ಶಾಟ್‌ಪಟ್‌ನಲ್ಲಿ ಸ್ವರ್ಣ ಜಯಿಸಿದರು. ಅದರೊಂದಿಗೆ, ತಮ್ಮ ರಾಜ್ಯದ ಪರ ಚಿನ್ನದ ಪದಕದ ಖಾತೆ ತೆರೆದರು.

ಪಾಕ್ ಕ್ರಿಕೆಟಿಗ ನಸೀಮ್‌ಗೆ ಭಾರಿ ದಂಡ

ಕರಾಚಿ (ಪಿಟಿಐ/ ಎಎಫ್‌ಪಿ): ವ್ಯಂಗ್ಯವಾದ ಟ್ವೀಟ್‌ಗಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ವೇಗದ ಬೌಲರ್ ನಸೀಮ್ ಶಾ ಅವರಿಗೆ ಎರಡು ಕೋಟಿ ರೂಪಾಯಿ ಮೊತ್ತದ ದಂಡ ವಿಧಿಸಿದೆ. ಇದು ಪಾಕ್ ಕ್ರಿಕೆಟ್ ಇತಿಹಾಸಲ್ಲೇ ಅತ್ಯಧಿಕ ಮೊತ್ತದ ದಂಡವಾಗಿದೆ.

ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿ ಮರಿಯಮ್ ನವಾಜ್ ವಿರುದ್ಧ ನಸೀಮ್ ಆಕ್ಷೇಪಾರ್ಹ ಟ್ವೀಟ್ ಮಾಡಿದ್ದರು. ಅವರು (ನಸೀಮ್) ಗುತ್ತಿಗೆ ಒಪ್ಪಂದದ ವಿಧಿಯನ್ನು ಉಲ್ಲಂಘಿಸಿದ್ದಾರೆ. ಟ್ವೀಟ್‌ಗಳನ್ನು ಪೋಸ್ಟ್ ಮಾಡುವಾಗ ಬೇಜವಾಬ್ದಾರಿಯಿಂದ ವರ್ತಿಸಿದ್ದಾರೆ ಎಂದು ಪಿಸಿಬಿ ಪ್ರಕಟಿಸಿದೆ.



ಅವರಿಗೆ ಮಾರ್ಚ್ 27ರಂದು ಶೋಕಾಸ್ ನೋಟಿಸ್ ನೀಡಲಾಗಿತ್ತು. ನೋಟಿಸ್‌ಗೆ ಉತ್ತರಿಸಿದ ನಸೀಮ್ ಬೇಷರತ್ ಕ್ಷಮೆ ಯಾಚಿಸಿದ್ದರು. ತಮ್ಮ ಟ್ವೀಟ್ ಎಲ್ಲೆಡೆ ಹರಿದಾಡುತ್ತಿದ್ದಂತೆ ಅವರು ಅದನ್ನು ಅಳಿಸಿಹಾಕಿದ್ದರು.

ಪಾಕಿಸ್ತಾನ ಸೂಪರ್ ಲೀಗ್‌ನ ಉದ್ಘಾಟನಾ ಪಂದ್ಯಕ್ಕೆ ಮರಿಯಮ್ ನವಾಝ್ ಮುಖ್ಯ ಅತಿಥಿಯಾಗಿದ್ದರು. ಇದಾಗಿ ಕೆಲವೇ ನಿಮಿಷಗಳ ನಂತರ 'ಲಾರ್ಡ್ಸ್‌ನ ರಾಣಿಯಂತೆ ಅವರನ್ನು ಯಾಕೆ ಆಧರಿಸುತ್ತೀರಿ?' ಎಂದು ಮರಿಯಮ್ ಬಗ್ಗೆ ಟೀಟ್ ಮಾಡಿದ್ದರು. ಮರಿಯಮ್ ಅವರು ಮಾಜಿ ಪ್ರಧಾನಿ ನವಾಜ್ ಶರೀಫ್ ಪುತ್ರಿ.